ಶುಕ್ರವಾರ, ಜನವರಿ 31, 2025 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ನೃತ್ಯ ವೈಭವ**

ಬೆಂಗಳೂರಿನಲ್ಲಿ ಗುರುವಾರ ನಡೆದ ಎಚ್.ಎನ್. ಕಲಾಕ್ಷೇತ್ರಕ್ಕೆ ರಂಗ ಸ್ವಾಗತ ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು



ಡಬಲ್ ಡೆಕರ್ ಯೋಜನೆ ಸೇರ್ಪಡೆಯಿಂದ ಹೆಚ್ಚಳವಾಗಲಿರುವ ಭೂಸ್ವಾಧೀನ • ನಾಲ್ಕು ಪ್ಯಾಕೇಜ್‌ಗಳಲ್ಲಿ ಕಾಮಗಾರಿ

# ಮೆಟ್ರೊ ಕಿತ್ತಳೆ ಮಾರ್ಗ: ಮರು ಸರ್ವೆ ಆರಂಭ

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** 'ನಮ್ಮ ಮೆಟ್ರೊ' ಮೂರನೇ ಹಂತದ (ಕಿತ್ತಳೆ ಮಾರ್ಗ) ವಿಸ್ತೃತ ಯೋಜನಾ ವರದಿಯಲ್ಲಿ ಡಬಲ್ ಡೆಕರ್ ಸೇರ್ಪಡೆ ಆಗಿರಲಿಲ್ಲ. ಈಗ ಡಬಲ್ ಡೆಕರ್‌ಗೆ ಅಗತ್ಯವಾದ ಜಮೀನು ಸೇರಿಸಿ ಭೂ ಸರ್ವೆಯನ್ನು ಬಿಎಂಆರ್‌ಸಿಎಲ್ ಆರಂಭಿಸಿದೆ.

ಕಿತ್ತಳೆ ಮಾರ್ಗವು 2 ಕಾರಿಡಾರ್ ಹೊಂದಿದ್ದು, 4 ಪ್ಯಾಕೇಜ್‌ಗಳಲ್ಲಿ ಕಾಮಗಾರಿ ನಡೆಯಲಿದೆ. ಕಾರಿಡಾರ್–1 ಜೆ.ಪಿ.ನಗರ 4ನೇ ಹಂತದಿಂದ ಮೈಸೂರು ರಸ್ತೆ, ಅಲ್ಲಿಂದ ಕಂಠೀರವ ಸ್ಟೇಡಿಯಂ, ಮುಂದೆ ಕೆಂಪಾಪುರದವರೆಗೆ ಮೂರು ಪ್ಯಾಕೇಜ್‌ಗಳಲ್ಲಿ, ಹೊಸಹಳ್ಳಿಯಿಂದ ಕಡಬಗೆರೆವರೆಗೆ ಕಾರಿಡಾರ್–2ರ ಕಾಮಗಾರಿ ಒಂದೇ ಪ್ಯಾಕೇಜ್‌ನಲ್ಲಿ ನಡೆಯಲಿದೆ.

ಕಾರಿಡಾರ್–1ಕ್ಕೆ ಸಂಬಂಧಿಸಿದಂತೆ 37,703 ಚದರ ಮೀಟರ್ ಭೂಸ್ವಾಧೀನಪಡಿಸಲು ಸಮೀಕ್ಷೆಗೆ ವಿಸ್ತೃತ ಯೋಜನಾ ವರದಿ ನೀಡಲಾಗಿತ್ತು. ಭೂಸ್ವಾಧೀನಕ್ಕೆ ಅಧಿಸೂಚನೆ ಕೂಡ ಹೊರಡಿಸಲಾಗಿತ್ತು. ಹೊಸ ಮೆಟ್ರೊ ಮಾರ್ಗಗಳಲ್ಲಿ ಡಬಲ್ ಡೆಕರ್ ನಿರ್ಮಿಸಿ ವಾಹನ ದಟ್ಟಣೆ ತಪ್ಪಿಸಬೇಕು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದ್ದರಿಂದ ಮೆಟ್ರೊ ಮೂರನೇ ಹಂತಕ್ಕೂ ಡಬಲ್ ಡೆಕರ್ ಸೇರ್ಪಡೆ ಮಾಡಲಾಯಿತು.


'ಮೆಟ್ರೊ ಹಳಿಯ ಕೆಳಗೆ ಎರಡೂ ಕಡೆ ಎತ್ತರಿಸಿದ ರಸ್ತೆ ಮಾಡಬೇಕಿರುವುದರಿಂದ ಹೆಚ್ಚುವರಿ ಜಮೀನು ಬೇಕು. ಅದಕ್ಕಾಗಿ ಸರ್ವೆ ಆರಂಭಿಸಲಾಗಿದೆ. 'ಲ್ಯಾಂಡ್ ಪ್ಲಾನ್ ಸರ್ವೆ' ಪೂರ್ಣಗೊಂಡ ಬಳಿಕ ಎಷ್ಟು ಜಮೀನು ಬೇಕು ಎಂಬುದು ಗೊತ್ತಾಗಲಿದೆ' ಎಂದು ಹಂತ–3, 1ನೇ ಕಾರಿಡಾರ್ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕಿ ಪೂರ್ಣಿಮಾ ತಿಳಿಸಿದರು.

ಕಾರಿಡಾರ್–1ರ ಸಮೀಕ್ಷೆ ನಡೆಯುತ್ತಿದೆ. ಒಂದು ತಿಂಗಳಲ್ಲಿ ಕಾರಿಡಾರ್–2ರ ಸಮೀಕ್ಷೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹಂತ–3, 2ನೇ ಕಾರಿಡಾರ್ ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಯತೀಶ್ ಉಲ್ಲಾಳ್ ಮಾಹಿತಿ ನೀಡಿದರು.

**ಏಕವ್ಯಕ್ತಿ ಸಮಿತಿಯಿಂದ ಪರಿಹಾರ ನಿರ್ಧಾರ:** ಜಮೀನಿಗೆ ಮತ್ತು ಈ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ನೀಡಬೇಕಾದ ಪರಿಹಾರವನ್ನು ಏಕವ್ಯಕ್ತಿ ಸಮಿತಿ ನಿರ್ಧಾರ ಮಾಡಲಿದೆ.

ಎಲ್ಲ ಕಡೆಗಳಲ್ಲಿ ಭೂಮಿ ಬೆಲೆ ಒಂದೇ ರೀತಿ ಇರುವುದಿಲ್ಲ. ಅದಕ್ಕಾಗಿ ಉಪನೋಂದಣಿ ಅಧಿಕಾರಿ ಕಚೇರಿಯಿಂದ ಕಳೆದ ಮೂರು ವರ್ಷಗಳಲ್ಲಿ ಆಗಿರುವ ಜಮೀನು ಮಾರಾಟ–ಖರೀದಿ ದರದ ವಿವರಗಳನ್ನು ಪಡೆಯಲಾಗುತ್ತದೆ. ಬಿಡಿಎ ಮೌಲ್ಯಮಾಪನ ಸಹಿತ ಎಲ್ಲ ರೀತಿಯ ಮೌಲ್ಯಗಳನ್ನು ಪರಿಗಣಿಸಿ ದರ ನಿರ್ಧರಿಸಲಾಗುತ್ತದೆ. ಕೆಐಎಡಿಬಿಗೆ ಭೂಸ್ವಾಧೀನ ಪ್ಯಾಕೇಜ್ ಕೊಡಲಾಗುತ್ತದೆ. ಅವರು ಪರಿಹಾರ ನೀಡುತ್ತಾರೆ ಎಂದು ಪೂರ್ಣಿಮಾ ತಿಳಿಸಿದರು.

ಬಿಎಂಆರ್‌ಸಿಎಲ್ ಇಲ್ಲಿವರೆಗೆ ಅತ್ಯುತ್ತಮ ಪರಿಹಾರ ನೀಡಿದೆ. ಮೂರನೇ ಹಂತದಲ್ಲಿಯೂ ಉತ್ತಮ ಪರಿಹಾರ ಸಿಗಲಿದೆ ಎಂದು ಯತೀಶ್ ಉಲ್ಲಾಳ್ ವಿಶ್ವಾಸ ವ್ಯಕ್ತಪಡಿಸಿದರು.



ನಮ್ಮ ಮೆಟ್ರೊ ಮೂರನೇ ಹಂತದ (ಕಿತ್ತಳೆ ಮಾರ್ಗ) ಎರಡು ಕಾರಿಡಾರ್‌ಗಳು

**ಕಾರಿಡಾರ್ –1**

| **10.88** ಕಿ.ಮೀ. | **10.60** ಕಿ.ಮೀ. | **10.67** ಕಿ.ಮೀ. |
|---|---|---|
| ಮೊದಲ ಪ್ಯಾಕೇಜ್ | ಎರಡನೇ ಪ್ಯಾಕೇಜ್ | ಮೂರನೇ ಪ್ಯಾಕೇಜ್ |

**37,703** ಚ.ಮೀ. ಸ್ವಾಧೀನಪಡಿಸಲು ಸದ್ಯ ಗುರುತಿಸಲಾಗಿರುವ ಭೂಮಿ

**₹15,611** ಕೋಟಿ ಮೆಟ್ರೊ 3ನೇ ಹಂತದ ಒಟ್ಟು ಅಂದಾಜು ವೆಚ್ಚ

**ಕಾರಿಡಾರ್–2**

**12.5** ಕಿ.ಮೀ. ನಾಲ್ಕನೇ ಪ್ಯಾಕೇಜ್


ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ಡಬಲ್ ಡೆಕರ್ ರಸ್ತೆ (ಸಾಂದರ್ಭಿಕ ಚಿತ್ರ)

## ಸುದ್ದಿ 2 ನಿಮಿಷ

### 'ಉದ್ಯೋಗ ಪೋರ್ಟಲ್ ಸರ್ಕಾರವೇ ರೂಪಿಸಲಿ'

**ಬೆಂಗಳೂರು:** 'ಕನ್ನಡಿಗ ಉದ್ಯೋಗಾಂಕ್ಷಿಗಳ ಅನುಕೂಲಕ್ಕಾಗಿ ಸರ್ಕಾರದಿಂದಲೇ ಪೋರ್ಟಲ್ ಅಭಿವೃದ್ಧಿಪಡಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಸರ್ಕಾರ ಬಜೆಟ್‌ನಲ್ಲಿಯೇ ಈ ಕುರಿತು ಘೋಷಿಸಬೇಕು ಎಂದು ಒತ್ತಾಯಿಸಿರುವ ಅವರು, 'ಕುಶಲ ಕನ್ನಡಿಗ ಯೋಜನೆಯಡಿ ಪ್ರತಿಭಾವಂತ ನಿರುದ್ಯೋಗಿ ಕನ್ನಡಿಗರು ಸ್ವ ವಿವರಗಳನ್ನು ದಾಖಲಿಸಲು ಪೋರ್ಟಲ್ ಅಭಿವೃದ್ಧಿಗೆ ಮುಂದಾದಲ್ಲಿ, ಉದ್ಯೋಗದಾತ ಸಂಸ್ಥೆಗಳು ಅರ್ಹ ಅಭ್ಯರ್ಥಿಗಳನ್ನು ನೇರವಾಗಿ ಸಂಪರ್ಕಿಸಲು ಅನುಕೂಲವಾಗಲಿದೆ. ಈ ಕ್ರಮದಿಂದ ಉದ್ದಿಮೆಗಳಲ್ಲಿ ಕನ್ನಡಿಗರ ಪ್ರಾತಿನಿಧ್ಯ ಹೆಚ್ಚಲಿದೆ' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿನ ಬಹುಪಾಲು ಸರ್ಕಾರಿ ಶಾಲೆಗಳ ಆಸ್ತಿಗಳು ಆಯಾ ಶಾಲೆಗಳ ಹೆಸರಿನಲ್ಲಿ ಇಲ್ಲದ ಕಾರಣ, ಪಟ್ಟಭದ್ರರಿಂದ ಒತ್ತುವರಿ ಆಗುತ್ತಿದೆ. ಸರ್ಕಾರಿ ಶಾಲೆ ಆಸ್ತಿಗಳ ಗಡಿಯನ್ನು ಗುರುತಿಸಿ, ಒತ್ತುವರಿ ತೆರವಿಗೆ ವಿಶೇಷ ಅಭಿಯಾನ ರೂಪಿಸುವ ಯೋಜನೆಯನ್ನೂ ಬಜೆಟ್‌ನಲ್ಲಿ ಘೋಷಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಶತಮಾನ ಕಂಡ ಸರ್ಕಾರಿ ಶಾಲೆಗಳನ್ನು ಉಳಿಸಬೇಕು. ಇಲ್ಲಿನ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಬೇಕು. ಅಲ್ಲದೇ, ಉತ್ತಮ ಮೂಲಸೌಕರ್ಯಗಳನ್ನು ಕಲ್ಪಿಸುವ ಯೋಜನೆ ರೂಪಿಸಬೇಕು. ಅವುಗಳನ್ನು ಮಾದರಿ ಶಾಲೆಗಳಾಗಿ ಅಭಿವೃದ್ಧಿಗೊಳಿಸಬೇಕು' ಎಂದು ಹೇಳಿಕೆಯಲ್ಲಿ ಸಲಹೆ ಮಾಡಿದ್ದಾರೆ.



### ದೇವಿಕಾರಾಣಿ–ರೋರಿಕ್ ಎಸ್ಟೇಟ್ ರಕ್ಷಣೆಗೆ ಮನವಿ

**ಬೆಂಗಳೂರು:** ನಗರದ ತಾತಗುಣಿ ಪ್ರದೇಶದ ದೇವಿಕಾರಾಣಿ–ರೋರಿಕ್ ಎಸ್ಟೇಟ್‌ನಲ್ಲಿ ₹100 ಕೋಟಿ ವೆಚ್ಚದಲ್ಲಿ ಅನುಷ್ಠಾನಕ್ಕೆ ತರಲು ಹೊರಟಿರುವ ಪ್ರವಾಸೋದ್ಯಮ ಯೋಜನೆಯನ್ನು ಕೈಬಿಡಬೇಕು' ಎಂದು ವೃಕ್ಷಲಕ್ಷ ಆಂದೋಲನ ಕರ್ನಾಟಕ ಸಂಸ್ಥೆ ಒತ್ತಾಯಿಸಿದೆ. ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರು ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಪತ್ರ ಬರೆದಿದ್ದಾರೆ.

'ಈ ಎಸ್ಟೇಟ್ ಬೆಂಗಳೂರಿನ ಆಮ್ಲಜನಕದ ಮೂಲಗಳಲ್ಲಿ ಒಂದಾಗಿದೆ. ಪ್ರವಾಸೋದ್ಯಮ ಯೋಜನೆಯಿಂದ ಅದರ ವಿನಾಶವಾಗಲಿದೆ. ಇದನ್ನು 'ರಾಜ್ಯ ಪಾರಂಪರಿಕ ಜೀವವೈವಿಧ್ಯ ತಾಣ' ಎಂದು ಘೋಷಿಸುವಂತೆ ಜೀವವೈವಿಧ್ಯ ಮಂಡಳಿ ಸಭೆ ಹಿಂದೆ ನಿರ್ಣಯಿಸಿತ್ತು. ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಡೀಮ್ಡ್ ಅರಣ್ಯದ ಪಟ್ಟಿಯಲ್ಲಿ ತಾತಗುಣಿಯ 467 ಎಕರೆ ಭೂಮಿ ಸೇರಿದೆ. ಈ ಎಲ್ಲವನ್ನೂ ಪರಿಗಣಿಸಿ, ಯೋಜನೆ ಕೈಬಿಡಬೇಕು' ಎಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

ಪರಿಸರ ಮತ್ತು ಜೀವವೈವಿಧ್ಯ ತಜ್ಞರಾದ ಬಿ.ಎಂ. ಕುಮಾರಸ್ವಾಮಿ, ಟಿ.ವಿ.ರಾಮಚಂದ್ರ, ವೈ.ಬಿ.ರಾಮಕೃಷ್ಣ, ಬಾಲಚಂದ್ರ ಸಾಯಿಮನೆ, ಕೇಶವ್ ಎಚ್ ಕೊರ್ಸೆ, ಪ್ರಕಾಶ್ ಮೇಸ್ತ ಮತ್ತು ಕೆ.ವೆಂಕಟೇಶ್ ಅವರು ಪತ್ರಕ್ಕೆ ಸಹಿ ಮಾಡಿದ್ದಾರೆ.

## ತೆರಿಗೆ ಬಾಕಿ: 60 ಆಸ್ತಿಗಳ ಹರಾಜು

**ಬೆಂಗಳೂರು:** ಮಹದೇವಪುರ ವಲಯದಲ್ಲಿ 60 ಆಸ್ತಿಗಳಿಂದ ದೀರ್ಘಕಾಲದ ಬಾಕಿ ಉಳಿದಿರುವ ತೆರಿಗೆ ವಸೂಲಿಗಾಗಿ ಸ್ಥಿರ ಆಸ್ತಿಗಳ ಹರಾಜು ಮಾಡಲಾಗುತ್ತಿದೆ ಎಂದು ವಲಯ ಜಂಟಿ ಆಯುಕ್ತರಾದ ದಾಕ್ಷಾಯಿಣಿ ತಿಳಿಸಿದ್ದಾರೆ.

ಹರಾಜು ಪ್ರಕ್ರಿಯೆಯನ್ನು ಬಿಬಿಎಂಪಿ ಕಾಯ್ದೆ 2020ರ ಸೆಕ್ಷನ್ 156 ಉಪಪ್ರಕರಣ 5ರ ಅಡಿಯಲ್ಲಿ ಮಾಡಲಾಗುತ್ತದೆ. ಹರಾಜಿನಲ್ಲಿ ಬರುವ ಹೆಚ್ಚುವರಿ ಹಣವನ್ನು ಮಾಲೀಕರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು ಎಂದರು.

ಮಹದೇವಪುರ ವಲಯದ ಹೊರಮಾವು, ಎಚ್.ಎ.ಎಲ್, ಕೆ.ಆರ್. ಪುರ, ಮಾರತ್‌ಹಳ್ಳಿ, ಹೂಡಿ ಹಾಗೂ ವೈಟ್ ಫೀಲ್ಡ್ ಉಪವಿಭಾಗ ಸೇರಿದಂತೆ ಪ್ರತಿ ಉಪ ವಿಭಾಗದಲ್ಲಿಯೂ ದೀರ್ಘಕಾಲದ ಆಸ್ತಿ ತೆರಿಗೆ ಬಾಕಿ ವಸೂಲಿಗಾಗಿ ತಲಾ 10 ಆಸ್ತಿಗಳಂತೆ ಒಟ್ಟು 60 ಆಸ್ತಿಗಳನ್ನು ಫೆಬ್ರುವರಿ 13ರಂದು ಹರಾಜು ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

# ₹35 ಕೋಟಿ ಮೌಲ್ಯದ ಸಿ.ಎ ಜಾಗ ವಶ

ಬನಶಂಕರಿ 2ನೇ ಹಂತದಲ್ಲಿ ಬಿಡಿಎ ಕಾರ್ಯಾಚರಣೆ; ಜೆಸಿಬಿ ಬಳಸಿ ತೆರವು ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಗುರುವಾರ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿ ಬನಶಂಕರಿ 2ನೇ ಹಂತದ ಬಡಾವಣೆಯಲ್ಲಿ ₹ 35 ಕೋಟಿ ಮೌಲ್ಯದ, ಸಾರ್ವಜನಿಕ ಬಳಕೆಗೆ ಮೀಸಲಿರಿಸಿದ ಜಾಗವನ್ನು (ಸಿಎ) ವಶಪಡಿಸಿಕೊಂಡಿದೆ.

ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕತ್ರಿಗುಪ್ಪೆ ಗ್ರಾಮದ (ಬನಶಂಕರಿ 2ನೇ ಹಂತ) ಸರ್ವೆ ನಂ. 15/1ರಲ್ಲಿನ 19 ಗುಂಟೆ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳು, ಗ್ಯಾರೇಜ್, ಗುಜರಿ ಅಂಗಡಿ, ದೇವಸ್ಥಾನವನ್ನು ಜೆಸಿಬಿ ಬಳಸಿ ತೆರವು ಮಾಡಲಾಯಿತು.

'ಈ ಜಾಗದ ಸಂಬಂಧ ಭೂಮಿ ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ಇತ್ತೀಚೆಗೆ ಬಿಡಿಎ ಪರವಾಗಿ ಆದೇಶ ಬಂದಿದ್ದು, ಒತ್ತುವರಿ ತೆರವಿಗೆ ನೋಟಿಸ್ ನೀಡಲಾಗಿತ್ತು. ಕಾರ್ಯಾಚರಣೆ ನಡೆಸಿ, ಶೆಡ್, ಗ್ಯಾರೇಜ್, ಗುಜರಿ ಅಂಗಡಿ ನೆಲಸಮಗೊಳಿಸಲಾಯಿತು. ಗುಜರಿಗೆ ಸೇರಿದ 22 ವಾಹನಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಯಿತು' ಎಂದು ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಕೃಷ್ಣಕುಮಾರ್ ತಿಳಿಸಿದರು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಎಸ್‌ಪಿ, ದಕ್ಷಿಣ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಿಬ್ಬಂದಿ ಹಾಗೂ ಸ್ಥಳೀಯ ಠಾಣೆಯ ಪೊಲೀಸ್ ಸಿಬ್ಬಂದಿ ಪಾಲ್ಗೊಂಡಿದ್ದರು.


ಬನಶಂಕರಿ 2ನೇ ಹಂತದ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿತು

### ಬಿಡಿಎ: 167 ಬದಲಿ ನಿವೇಶನ ಹಂಚಿಕೆ

**ಬೆಂಗಳೂರು:** ಅರ್ಕಾವತಿ ಬಡಾವಣೆಯ ನಿವೇಶನ ಹಂಚಿಕೆದಾರರಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 167 ಬದಲಿ ನಿವೇಶನವನ್ನು ಗುರುವಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಂಚಿಕೆ ಮಾಡಿದೆ.

ಗಣಕೀಕೃತ ಹಂಚಿಕೆ (ಕಂಪ್ಯೂಟರ್ ರ‍್ಯಾಂಡಮೈಸೇಷನ್) ಮೂಲಕ ಸಾರ್ವಜನಿಕರ ಸಮ್ಮುಖದಲ್ಲಿ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಅವರು ನಿವೇಶನಗಳ ಹಂಚಿಕೆ ಮಾಡಿದರು.

6x9 ಮೀಟರ್ ಅಳತೆಯ 18 ನಿವೇಶನಗಳು, 9x12 ಮೀಟರ್ ಅಳತೆಯ 133 ನಿವೇಶನಗಳು, 12x18 ಮೀಟರ್ ಅಳತೆಯ 11 ನಿವೇಶನಗಳು ಹಾಗೂ 15x24 ಮೀಟರ್ ಅಳತೆಯ 5 ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

'ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆಯಾಗಿ ಸ್ವಾಧೀನ ಪಡೆಯದವರು, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನ ಪಡೆಯಲು ಅವಕಾಶ ಇದೆ. ಸಾರ್ವಜನಿಕರು ಈ ಸೌಲಭ್ಯ ಬಳಸಿಕೊಳ್ಳಬಹುದು' ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಆಯುಕ್ತ ಎನ್. ಜಯರಾಮ್, ಕಾರ್ಯದರ್ಶಿ ವೈ.ಬಿ. ಶಾಂತರಾಜು, ಹೆಚ್ಚುವರಿ ಕಾರ್ಯದರ್ಶಿ ಎನ್. ಮಂಜುನಾಥ್ ಅವರು ಉಪಸ್ಥಿತರಿದ್ದರು.

## 'ಸಮರ್ಪಕವಾಗಿ ಜಾತಿಗಣತಿ ನಡೆಸದೆ ಒಳ ಮೀಸಲಾತಿ ಬೇಡ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಾತಿವಾರು ಜನಗಣತಿ ಸಮರ್ಪಕವಾಗಿ ನಡೆಸದೆ ಒಳಮೀಸಲಾತಿ ಜಾರಿ ಮಾಡಬಾರದು ಎಂದು ಲಂಬಾಣಿ ಸಮುದಾಯದ ಮುಖಂಡರ ನಿಯೋಗ, ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದ ಏಕ ಸದಸ್ಯ ವಿಚಾರಣೆ ಆಯೋಗಕ್ಕೆ ಕೋರಿದೆ.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ, ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ಬಿ.ಸಿ. ದ್ಯಾನಾಯಕ್ ಅವರು ನಿಯೋಗದ ನೇತೃತ್ವ ವಹಿಸಿದ್ದರು.

'ಒಳಮೀಸಲಾತಿ ಕಲ್ಪಿಸಲು ವೈಜ್ಞಾನಿಕ ದತ್ತಾಂಶ ಇಲ್ಲ. ವೈಜ್ಞಾನಿಕ ದತ್ತಾಂಶ ಸಂಗ್ರಹ ವರೆಗೂ ಈ ಕುರಿತು ತೀರ್ಮಾನಿಸಬಾರದು. ಸ್ವಾತಂತ್ರ್ಯಪೂರ್ವದಿಂದ ಬಹುಸಂಖ್ಯಾತರಾಗಿ ಅಲೆಮಾರಿ ಬುಡಕಟ್ಟು ಹಿನ್ನೆಲೆಯ, ಬಂಜಾರ, ಲಂಬಾಣಿ, ಸುಗಾಲಿ ಸಮುದಾಯದ ಜನರು ಪರಿಶಿಷ್ಟ ಜಾತಿ ಮೀಸಲಾತಿ ಸೌಲಭ್ಯ ಹಾಗೂ ಅಭಿವೃದ್ಧಿವಾರು ಯೋಜನೆಗಳ ಸೌಲಭ್ಯದಿಂದ ವಂಚಿತರಾಗಿದ್ದಾರೆ' ಎಂದು ಎ.ಆರ್.ಗೋವಿಂದಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

'ತಳ ಮಟ್ಟದಿಂದಲೇ ಎಲ್ಲ ರೀತಿಯ ವಾಸ್ತವ ದತ್ತಾಂಶ ಸಂಗ್ರಹಿಸುವವರೆಗೂ, ಬಂಜಾರ ಸಮುದಾಯದ ಜಾತಿವಾರು ಜನ ಗಣತಿಯ ದತ್ತಾಂಶ ಸಿಗುವವರೆಗೂ ಆಯೋಗ ಒಳ ಮೀಸಲಾತಿ ಸಂಬಂಧಿಸಿದ ನಿರ್ಧಾರ ಕೈಗೊಳ್ಳಬಾರದು' ಎಂದು ಮನವಿ ಮಾಡಿದ್ದಾರೆ.

ಬಂಜಾರ ಮಹಿಳಾ ಸಂಘದ ಅಧ್ಯಕ್ಷೆ ಲಲಿತಮ್ಮ, ಮುಖಂಡರಾದ ಡಿ. ಪರಮೇಶ್ ನಾಯಕ್, ಧರ್ಮರಾಜ್ ಉಪಸ್ಥಿತರಿದ್ದರು.

ಎಸ್ಸಿ–ಎಸ್ಟಿ ದೌರ್ಜನ್ಯ ಆರೋಪ: ಜಾಮೀನು ಅರ್ಜಿ ವಿಚಾರಣೆ ವೇಳೆ ವಕೀಲರಿಂದ ಉಲ್ಲೇಖ

# 'ಮುನಿರತ್ನ ಚರಿತ್ರೆಯಲ್ಲಿ ಘಾತುಕ ಅಧ್ಯಾಯಗಳು...'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜರಾಜೇಶ್ವರಿ ನಗರ ಕ್ಷೇತ್ರದ ಶಾಸಕ ಮುನಿರತ್ನ ಅವರ ಚರಿತ್ರೆಯ ತುಂಬಾ ಘಾತುಕ ಅಧ್ಯಾಯಗಳಿವೆ. ನಿಸ್ಸಂಶಯವಾಗಿ ಅವರೊಬ್ಬ ಕುಖ್ಯಾತ. ಅವರ ತಮ್ಮ ಕೊರಂಗು ಅಲಿಯಾಸ್ ಕೃಷ್ಣ ಮತ್ತು ಐವರು ಪೊಲೀಸ್ ಅಧಿಕಾರಿಗಳ ನಡುವಿನ ಮಾರಾಮಾರಿ ಪ್ರಕರಣದಲ್ಲಿ ನಾನು ಪೊಲೀಸರ ಪರ ವಾದ ಮಂಡಿಸಿದವನು. ಮುನಿರತ್ನ ಎಷ್ಟು ಉತ್ತಮರು ಎಂಬುದನ್ನು ಇದೊಂದೇ ಕೇಸಿನಲ್ಲಿ ಎಲ್ಲಾ ಬಿಡಿಸಿ ಹೇಳಲು ಆಗುವುದಿಲ್ಲ...'



ಮಾದಿಗ ಸಮುದಾಯದ 20 ವರ್ಷದ ಮಹಿಳೆ ಮೇಲೆ ದೌರ್ಜನ್ಯ ನಡೆಸಿದ್ದಾರೆ ಎಂಬ ಆರೋಪಿಸಿದ ಪ್ರಕರಣದಲ್ಲಿ ಮುನಿರತ್ನ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಕೋರ್ಟ್‌ನ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಗುರುವಾರ ವಿಚಾರಣೆ ನಡೆಸಿದರು.

**ಮುಖ್ಯಾಂಶಗಳು**

- ಆದೇಶ ಕಾಯ್ದಿರಿಸಿದ ಸೆಷನ್ಸ್ ನ್ಯಾಯಾಧೀಶರು
- 'ಬಲವಂತದ ಕ್ರಮ ಬೇಡ' ಆದೇಶ ವಿಸ್ತರಣೆ

ಸಂತ್ರಸ್ತೆ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, 'ಮುನಿರತ್ನ ಅವರ ಕರಾಳ ಇತಿಹಾಸವನ್ನು ತೆರೆದಿಡಬಲ್ಲೆ. ಅದರಲ್ಲಿ ಇದೊಂದು ಝಲಕ್' ಎಂದು ಮೇಲಿನಂತೆ ವಿವರಿಸಿದರು.

'ಪೀಣ್ಯದ ಅಕ್ಕಮಹಾದೇವಿ ಕೊಳೆಗೇರಿ ಪ್ರದೇಶವನ್ನು ಮುನಿರತ್ನ ಮತ್ತು ಅವರ ಬೆಂಬಲಿಗರು ಬಲವಂತದಿಂದ ತೆರವುಗೊಳಿಸಿ ಪುನರ್ವಸತಿ ಕೇಳಿದವರ ವಿರುದ್ಧ ಅಮಾನವೀಯವಾಗಿ ವರ್ತಿಸಿದ್ದಾರೆ. ಬಡವರನ್ನು, ಹೆಣ್ಣು ಮಕ್ಕಳನ್ನು ಗುಡಿಸಲುಗಳಿಂದ ರಾತ್ರೋರಾತ್ರಿ ಹೊರ ಹಾಕಿದ್ದಾರೆ. ಇಂತಹ ಕುಕೃತ್ಯಗಳನ್ನು ಮುನಿರತ್ನ ಅನೂಚಾನಾವಾಗಿ ಮಾಡಿಕೊಂಡೇ ಬಂದವರು. ತಮ್ಮ ಮೇಲೆ ಆಪಾದನೆ ಬಂದಾಗಲೆಲ್ಲಾ ಅವುಗಳಿಂದ ಹೊರ ಬರುವುದು ಹೇಗೆಂಬುದು ಅವರಿಗೆ ಚೆನ್ನಾಗಿ ಕರಗತವಾಗಿದೆ. ಪ್ರತಿ ಘಟನೆಯಲ್ಲೂ ಹಿಂದಿನ ಅನುಭವಗಳ ಆಧಾರದಲ್ಲಿ ತುಂಬಾ ಹುಷಾರಾಗಿ ವರ್ತಿಸುತ್ತಾರೆ' ಎಂದು ದೂರಿದರು.

ಮುನಿರತ್ನ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ, 'ಇದರಲ್ಲಿ ಮುನಿರತ್ನ ಪಾತ್ರವೇ ಇಲ್ಲ. ಇದೆಲ್ಲಾ ಬಿಬಿಎಂಪಿ ಕಾನೂನುಬದ್ಧವಾಗಿ ನಡೆಸಿರುವ ಕಾರ್ಯಾಚರಣೆ. ಇದಕ್ಕೆ ಪತ್ರಿಕಾ ವರದಿಗಳೇ ಸಾಕ್ಷಿ. ಸದ್ಯ ಪಾಲಿಕೆಯಲ್ಲಿ ಅಧಿಕಾರಿಗಳೇ ಎಲ್ಲ ನೋಡಿಕೊಳ್ಳುತ್ತಿದ್ದಾರೆ. ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಮುನಿರತ್ನ ವಿರುದ್ಧ ರೂಪಿಸಿರುವ ರಾಜಕೀಯ ಪ್ರೇರಿತ ದೂರಿದು. ಆದ್ದರಿಂದ, ನಿರೀಕ್ಷಣಾ ಜಾಮೀನು ನೀಡಬೇಕು' ಎಂದು ಕೋರಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಆದೇಶ ಕಾಯ್ದಿರಿಸಿ 'ಮುನಿರತ್ನ ವಿರುದ್ಧ ಪೊಲೀಸರು ಬಲವಂತದ ಕ್ರಮ ಕೈಗೊಳ್ಳಬಾರದು' ಎಂಬ ಆದೇಶವನ್ನು ವಿಸ್ತರಿಸಿದರು. ಸಿಐಡಿ ಪರ ಪ್ರಾಸಿಕ್ಯೂಟರ್ ಝೈದಾ ಬಾನು ಖಾಜಿ ಹಾಜರಿದ್ದು ಆಕ್ಷೇಪಣೆ ಸಲ್ಲಿಸಿದರು.

**ಪ್ರಕರಣವೇನು?:** 'ಪೀಣ್ಯ ಪ್ರಥಮ ದರ್ಜೆ ಕಾಲೇಜು ಪಕ್ಕದ ಅಕ್ಕಮಹಾದೇವಿ ಕೊಳೆಗೇರಿಯ 100 ಮೀಟರ್ ಪ್ರದೇಶದಲ್ಲಿ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದ 60ರಿಂದ 70ರಷ್ಟು ದಲಿತ ಕುಟುಂಬಗಳನ್ನು ಇದೇ 20ರಂದು ಮುನಿರತ್ನ ಮತ್ತು ಬೆಂಬಲಿಗರು ಕಾನೂನು ಬಾಹಿರವಾಗಿ ಜೆಸಿಬಿ ತಂದು ತೆರವುಗೊಳಿಸಿದ್ದಾರೆ. ಜಾತಿನಿಂದನೆ ಮಾಡಿ ಅಲ್ಲಿದ್ದ ಕೆಲ ಹೆಣ್ಣು ಮಕ್ಕಳ ಮೈ–ಕೈ ಮುಟ್ಟಿ ಎಳೆದಾಡಿ ಅವರ ಎದೆಗೆ ಮುನಿರತ್ನ ಒದ್ದಿದ್ದಾರೆ.' ಎಂದು ಗೀತಾ (20) ಆರ್.ಎಂ.ಸಿ ಯಾರ್ಡ್ ಠಾಣೆಯಲ್ಲಿನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಾಗಿತ್ತು.

**ಜಡ್ಜ್–ಪೊಲೀಸರು ನನ್ನ ಜೇಬಲ್ಲಿದ್ದಾರೆ...!**

'ಮಾದಿಗ ...ರಾ ಎಲ್ಲಾರೂ ಜಾಗ ಬಿಟ್ಟು ನಿಮ್ಮ ಉತ್ತರ ಕರ್ನಾಟಕಕ್ಕೆ ಹೋಗಿ. ನೀವು ಯಾರೂ ನನ್ನ ಏನೂ ಮಾಡಲಿಕ್ಕೆ ಆಗೋಲ್ಲ. ಈಗಾಗಲೇ ನನ್ನ ಮೇಲೆ ಯಾರೋ ... ಮಕ್ಕಳು ಅಟ್ರಾಸಿಟಿ ಕೇಸು ಕೊಟ್ರು. ನನ್ನ.... .... ಆಗಿಲ್ಲ. ಜಡ್ಜ್‌ಗಳು, ಪೊಲೀಸರು ನನ್ನ ಜೇಬಲ್ಲಿ ಇದ್ದಾರೆ...'

ದೂರುದಾರ ಮಹಿಳೆ ನ್ಯಾಯಾಲಯಕ್ಕೆ ಸಲ್ಲಿಸಿರುವ ತಮ್ಮ ಆಕ್ಷೇಪಣೆಯಲ್ಲಿ ಮುನಿರತ್ನ ಆಡಿದ್ದಾರೆ ಎನ್ನಲಾದ ಮಾತುಗಳ ತುಣುಕು ಇದು.

## ಇಂದಿನಿಂದ ಹೊನಲು ಬೆಳಕಿನ ಕಬಡ್ಡಿ ಪಂದ್ಯ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆಯ ಸಹಯೋಗದೊಂದಿಗೆ ಹೂಡಿ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಶುಕ್ರವಾರದಿಂದ (ಜ.31) ಮೂರು ದಿನಗಳು ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ನಡೆಯಲಿದೆ.

ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರ 58ನೇ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿರುವ ಕಬಡ್ಡಿ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ಪ್ರತಿದಿನ ಸಂಜೆ 5 ರಿಂದ 10 ಗಂಟೆಯವರೆಗೆ ಪಂದ್ಯಗಳು ನಡೆಯಲಿವೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಬೆಳಗಾವಿ, ಮಂಡ್ಯ ಇತರ ಜಿಲ್ಲೆಯ ಹದಿನಾರಕ್ಕೂ ಹೆಚ್ಚು ತಂಡಗಳು ಭಾಗವಹಿಸಲಿವೆ ಎಂದು ಮಹದೇವಪುರ ಕ್ಷೇತ್ರದ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಹೆಚ್.ಎಸ್.ಪಿಳ್ಳಪ್ಪ ತಿಳಿಸಿದರು.

**ಸಂಕ್ಷಿಪ್ತ ಸುದ್ದಿ**

## ಇ-ಖಾತಾ ಮೇಳಕ್ಕೆ ಅವಕಾಶ

**ಬೆಂಗಳೂರು:** ನಾಗರಿಕರ ಅನುಕೂಲಕ್ಕಾಗಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು/ ನಾಗರಿಕ ಗುಂಪುಗಳಲ್ಲಿ ಇ-ಖಾತಾ ಮೇಳಗಳನ್ನು ಆಯೋಜಿಸಲು ಬಿಬಿಎಂಪಿ ಅವಕಾಶ ಕಲ್ಪಿಸಿದೆ.

ಇ-ಖಾತಾ ವಿತರಣೆಯನ್ನು ಮತ್ತಷ್ಟು ಸರಳೀಕರಣಗೊಳಿಸುವ ಉದ್ದೇಶದಿಂದ ಪಾಲಿಕೆ ವತಿಯಿಂದ ಹಾಗೂ ಯಾವುದೇ ಉತ್ಸುಕ/ ಆಸಕ್ತ ನಾಗರಿಕ ಗುಂಪುಗಳು ಅಥವಾ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ತಮ್ಮ ಹತ್ತಿರದ ಪ್ರದೇಶಗಳಲ್ಲಿ ಇ-ಖಾತಾ ಮೇಳವನ್ನು ಆಯೋಜಿಸಬಹುದು. ಬಿಬಿಎಂಪಿ ಇದಕ್ಕೆ ಸಹಕಾರ ನೀಡಲಿದೆ ಎಂದು ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂತಿಮ ಇ–ಖಾತಾ ಪಡೆಯಲು ಆಸ್ತಿಯ ಋಣಭಾರ ಪ್ರಮಾಣಪತ್ರ (ಇ.ಸಿ.) ಅಗತ್ಯವಿಲ್ಲ. ಆಸ್ತಿಯನ್ನು ಮಾರಾಟ ಮಾಡುವ ಸಲುವಾಗಿ ಇ–ಖಾತಾ ಪಡೆಯುತ್ತಿದ್ದರೆ ಇಸಿ ನೀಡಬೇಕಾಗುತ್ತದೆ ಎಂದಿದ್ದಾರೆ.

## ಏಟ್ರಿಯಾ: ಹಳೆಯ ವಿದ್ಯಾರ್ಥಿಗಳ ಸಮ್ಮಿಲನ

**ಯಲಹಂಕ:** ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಹಾಗೂ ರಜತ ಮಹೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿತ್ತು.

2000ನೇ ಇಸವಿಯಿಂದ 2024ರವರೆಗಿನ ವಿದ್ಯಾರ್ಥಿಗಳ ತಂಡವನ್ನು ಒಟ್ಟುಗೂಡಿಸಿ, ಆಯೋಜಿಸಿದ್ದ ಈ ಸಭೆಯಲ್ಲಿ 400ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾಲೇಜಿನೊಂದಿಗಿನ ತಮ್ಮ ಒಡನಾಟ ಹಾಗೂ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಈ ವೇಳೆ ಮಾತನಾಡಿದ ಏಟ್ರಿಯಾ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಸುಂದರ್‌ರಾಜು, 'ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ಹಳೆಯ ವಿದ್ಯಾರ್ಥಿಗಳು ಸಾಧಕರಾಗಿದ್ದಾರೆ, ಸಮಾಜದಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಇದು ಹೆಮ್ಮೆಯ ಸಂಗತಿ' ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗೆ ನೀಡಿದ ಕೊಡುಗೆಯನ್ನು ಸ್ಮರಿಸಿ, ಹಳೆಯ ವಿದ್ಯಾರ್ಥಿ ವಿಕಾಸ್.ಬಿ.ಒ ಅವರನ್ನು ಸನ್ಮಾನಿಸಲಾಯಿತು.

ಟ್ರಸ್ಟಿ ಕೆ.ನಾಗರಾಜು, ನಿರ್ದೇಶಕರಾದ ಕೌಶಿಕ್.ಎಸ್.ರಾಜು, ಮಯೂರ್.ಎನ್.ರಾಜು, ಪ್ರಾಂಶುಪಾಲ ಡಾ.ರಾಜೇಶ್.ಎಸ್, ಉಪಪ್ರಾಂಶುಪಾಲರಾದ ಡಾ.ನಳಿನಾಕ್ಷಿ.ಎನ್ ಮತ್ತಿತರರು ಉಪಸ್ಥಿತರಿದ್ದರು.

## 'ಮನಮ್' ಕೋರ್ಸ್ ಆರಂಭ

**ಯಲಹಂಕ:** ವಿದ್ಯಾರ್ಥಿಗಳ ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ನೋಡಿಕೊಳ್ಳಲು 'ಮನಮ್' ಎಂಬ ವಿನೂತನ ಕೋರ್ಸ್ ಅನ್ನು ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಆರಂಭಿಸಲಾಯಿತು.

ಈ ಕೋರ್ಸ್‌ನ ಮೂಲಕ ವಿದ್ಯಾರ್ಥಿಗಳ ಭಾವನಾತ್ಮಕ ಬುದ್ಧಿಮತ್ತೆಯನ್ನು ಹೆಚ್ಚಿಸುವ ಕಾರ್ಯ ನಡೆಯಲಿದೆ. ಇದರಿಂದ ವಿದ್ಯಾರ್ಥಿಗಳು ಪ್ರಸ್ತುತ ಉದ್ಯೋಗದ ವಾತಾವರಣಕ್ಕೆ ಅಣಿಗೊಳಿಸಲಾಗುತ್ತದೆ.

ಇದೊಂದು ಐಚ್ಛಿಕ, ಶ್ರೇಣಿರಹಿತ ಕೋರ್ಸ್. ವಿದ್ಯಾರ್ಥಿಗಳಿಗೆ ಇದರಿಂದ ಶ್ರೇಣಿ ಅಥವಾ ಶೈಕ್ಷಣಿಕ ಪ್ರಶಂಸೆ ದೊರೆಯುವುದಿಲ್ಲ. ಆದರೆ ಮಾನಸಿಕ ಸ್ವಾಸ್ಥ್ಯವನ್ನು ಹೆಚ್ಚಿಸಬಹುದಾಗಿದೆ. ತರಬೇತಿ ಪೂರ್ಣಗೊಳಿಸಿದ ಬಳಿಕ ಪ್ರಮಾಣಪತ್ರ ನೀಡಲಾಗುತ್ತದೆ. ಈ ತರಬೇತಿಗೆ ಯಾವುದೇ ಶುಲ್ಕ ಇರುವುದಿಲ್ಲ. ಪ್ರತಿ ಉದ್ಯೋಗದಾತರೂ ಇತ್ತೀಚೆಗೆ ಉದ್ಯೋಗಿಗಳ ಭಾವನಾತ್ಮಕ ಬುದ್ಧಿಮತ್ತೆಯನ್ನು ಮೌಲ್ಯಮಾಪನ ಮಾಡುವುದರಿಂದ ಈ ವಿಷಯವು ಬಹಳ ಮಹತ್ವ ಪಡೆದಿದೆ.

ಶಿಕ್ಷಣಸಂಸ್ಥೆಯ ಸಹ ಉಪಕುಲಪತಿ ಪ್ರೊ.ಮಧು ವೀರರಾಘವನ್ ಮಾತನಾಡಿದರು. ಸಂಸ್ಥೆಯ ಉಪಕುಲಸಚಿವ ಡಾ.ರಾಘವೇಂದ್ರಪ್ರಭು ಉಪಸ್ಥಿತರಿದ್ದರು.

ಮನಮ್‌ನ ಆರಂಭಿಕ ಬ್ಯಾಚ್ ಜನವರಿ 31ರಂದು ಪ್ರಾರಂಭವಾಗಲಿದ್ದು, ಈ ಕೋರ್ಸ್‌ನ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು https://manam.manipal.edu/ ಜಾಲತಾಣಕ್ಕೆ ಭೇಟಿ ನೀಡಬಹುದು.

### ಕಾವೇರಿ: ಹೊಸ ಕೊಳವೆಗಳ ಅಳವಡಿಕೆಗೆ ಚಾಲನೆ


ಕಾವೇರಿ ನೀರು ಪೂರೈಕೆ ಹೊಸ ಕೊಳವೆಗಳ ಅಳವಡಿಕೆಗೆ ಚಾಲನೆ ನೀಡಿದರು

**ರಾಜರಾಜೇಶ್ವರಿನಗರ:** 'ತುಂಬಾ ಹಳೆಯದಾಗಿದ್ದ (ಸಣ್ಣ ಕೊಳವೆ) ಕಾವೇರಿ ನೀರು ಪೂರೈಸುವ ಕೊಳವೆಗಳನ್ನು ಬದಲಿಸಿ ಹೊಸ ಕೊಳವೆಗಳನ್ನು ಎಲ್ಲ ಬಡಾವಣೆಗಳಲ್ಲಿ ಅಳವಡಿಸಲಾಗುತ್ತಿದೆ' ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅವರು ಹೇಳಿದರು

ಉಲ್ಲಾಳು ವಾರ್ಡ್‌ನ ಕರ್ನಾಟಕ ಲೋಕಸೇವಾ ಆಯೋಗದ ಬಡಾವಣೆಯ ಎಲ್ಲ ಮುಖ್ಯ, ಅಡ್ಡ ರಸ್ತೆಗಳಿಗೆ ನೀರು ಪೂರೈಕೆಯ ಕೊಳವೆಗಳ ಅಳವಡಿಕೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರು ಜಲಮಂಡಳಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ದೀಪಕ್, ಸಹಾಯಕ ಎಂಜಿನಿಯರ್ ನಾಗರತ್ನ, ನಾಗದೇವನಹಳ್ಳಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಎಸ್.ಟಿ.ಪ್ರಕಾಶ್‌ಗೌಡ, ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ನಾಗರಾಜು, ರಮೇಶ್ ಗೌಡ ಇದ್ದರು.

# ರಾಷ್ಟ್ರೀಯ ತೋಟಗಾರಿಕಾ ಮೇಳ ಫೆ. 27ರಿಂದ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಫೆಬ್ರುವರಿ 27ರಿಂದ ಮಾರ್ಚ್ 1ರವರೆಗೆ ರಾಷ್ಟ್ರೀಯ ತೋಟಗಾರಿಕೆ ಮೇಳ ಆಯೋಜಿಸಲಾಗಿದೆ.

'ವಿಕಸಿತ ಭಾರತಕ್ಕಾಗಿ ತೋಟಗಾರಿಕೆ ಎಂಬ ಘೋಷ ವಾಕ್ಯದಡಿಯಲ್ಲಿ ತೋಟಗಾರಿಕಾ ಮೇಳ ನಡೆಯಲಿದೆ. ಐಐಎಚ್‌ಆರ್ ಬೆಳೆ ಉತ್ಪಾದನೆ, ಬೆಳೆ ಸಂರಕ್ಷಣೆ, ಮೌಲ್ಯವರ್ಧನೆ, ಯಂತ್ರೋಪಕರಣಗಳು ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಅಭಿವೃದ್ಧಿಪಡಿಸಿದ 250ಕ್ಕೂ ಹೆಚ್ಚು ಪ್ರಭೇದಗಳು ಮತ್ತು ತಂತ್ರಜ್ಞಾನಗಳ ಪ್ರದರ್ಶನ ಮಾಡಲಾಗುತ್ತದೆ' ಎಂದು ಐಐಎಚ್‌ಆರ್ ನಿರ್ದೇಶಕ ತುಷಾರ್ ಕಾಂತಿ ಬೆಹೆರಾ ತಿಳಿಸಿದ್ದಾರೆ.

'ಮೇಳದಲ್ಲಿ 250ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ವಿವಿಧ ತೋಟಗಾರಿಕೆ ಬೆಳೆಗಳಲ್ಲಿನ ಕ್ಷೇತ್ರ ಆಧಾರಿತ ಸಮಸ್ಯೆಗಳ ಕುರಿತು ರೈತರು ವಿಜ್ಞಾನಿಗಳೊಂದಿಗೆ ಸಮಾಲೋಚನೆ ಮಾಡಬಹುದು. ವಿವಿಧ ತರಕಾರಿ, ಔಷಧ ಬೆಳೆಗಳ ಹಾಗೂ ಹೊಸ ಪ್ರಭೇದಗಳ ಮತ್ತು ಮಿಶ್ರತಳಿ ಬೀಜಗಳು, ಉಪಕರಣಗಳು ಮತ್ತು ಯಂತ್ರೋಪಕರಣಗಳ ಮಾರಾಟವೂ ಇರಲಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳಿಗೆಗಳನ್ನು ಕಾಯ್ದಿರಿಸಲು: 94230 57269 ಸಂಪರ್ಕಿಸಿ.

830 ಆಸನಗಳ ಸಭಾಂಗಣ ನಿರ್ಮಿಸುವುದಾಗಿ ವೆಂಕಟಶಿವಾ ರೆಡ್ಡಿ ಮಾಹಿತಿ

# 'ಎಚ್.ಎನ್.ಕಲಾಕ್ಷೇತ್ರದ ಜಾಗದಲ್ಲಿ 5 ಮಹಡಿ ಕಟ್ಟಡ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಎಂಜಿನಿಯರಿಂಗ್ ಸೇರಿ ವಿವಿಧ ಕೋರ್ಸ್‌ಗಳಿಗೆ ತರಗತಿ ಕೊಠಡಿಗಳು ಅಗತ್ಯವಿದ್ದು, ಎಚ್.ಎನ್. ಕಲಾಕ್ಷೇತ್ರದ ಕಟ್ಟಡ ಕೆಡವಿ, 5 ಮಹಡಿ ಕಟ್ಟಡ ನಿರ್ಮಿಸಲಿದ್ದು ಇಲ್ಲಿ 830 ಆಸನಗಳ ಸಭಾಂಗಣವೂ ಬರಲಿದೆ' ಎಂದು ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಕಾರ್ಯದರ್ಶಿ ವೆಂಕಟಶಿವಾ ರೆಡ್ಡಿ ತಿಳಿಸಿದರು.

ನಟರಂಗ–50 ಮತ್ತು ಎಚ್.ಎನ್. ಅಭಿಮಾನಿ ಬೆಂಗಳೂರು ರಂಗ ತಂಡಗಳು ಆಯೋಜಿಸಿದ್ದ 'ಎಚ್.ಎನ್. ಕಲಾಕ್ಷೇತ್ರಕ್ಕೆ ರಂಗ ಸ್ವಾಗತ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪದವಿಪೂರ್ವ, ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜು ನಡೆಸುತ್ತಿದ್ದೇವೆ. ಈಗ ಇಂಟಿಗ್ರೇಟೆಡ್ ಕಾಲೇಜು ಪ್ರಾರಂಭಿಸಲಾಗುತ್ತಿದೆ. ಹೀಗಾಗಿ, ಬಹುಮಹಡಿ ಕಟ್ಟಡ ನಿರ್ಮಾಣದ ಅಗತ್ಯತೆ ಇದೆ. ಕಟ್ಟಡ ನಿರ್ಮಾಣಕ್ಕೆ ಬಿಬಿಎಂಪಿ ಅನುಮತಿ ದೊರೆತಿದೆ.' ಎಂದರು.

'ಜಯನಗರದ ನ್ಯಾಷನಲ್ ಕಾಲೇಜಿನಲ್ಲಿರುವ ಎಚ್.ಎನ್.ಕಲಾಕ್ಷೇತ್ರದಲ್ಲಿ ಶನಿವಾರ, ಭಾನುವಾರ ಕಲಾವಿದರಿಗೆ ಪ್ರದರ್ಶನ ನಡೆಸಲು ಅವಕಾಶ ನೀಡಲಾಗುತ್ತಿತ್ತು. ಕಟ್ಟಡ ನಿರ್ಮಾಣ ಆಗುವವರೆಗೆ ಬೇರೆಡೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ' ಎಂದರು.

**ರಂಗಗೌರವ:** ರಂಗಕರ್ಮಿ ಸಿ.ಬಸವಲಿಂಗಯ್ಯ ಹಾಗೂ ಕಲಾವಿದೆ ಗಿರಿಜಾಲೋಕೇಶ್‌ಅವರಿಗೆರಂಗಗೌರವ ಸಲ್ಲಿಸಲಾಯಿತು. ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ರಂಗಗೀತೆಗಳು, ನಾಟಕವನ್ನು ಕಲಾವಿದರು ಪ್ರಸ್ತುತಪಡಿಸಿದರು. ಶಿಕ್ಷಣ ತಜ್ಞ ಎಚ್.ನರಸಿಂಹಯ್ಯ ಹಾಗೂ ಎಚ್.ಎನ್. ಕಲಾಕ್ಷೇತ್ರದ ಒಡನಾಟ ಸ್ಮರಿಸಲಾಯಿತು.


ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ವಿದ್ಯಾರ್ಥಿಗಳು 'ಆನಂದಮಯಿ' ನೃತ್ಯ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಶುಕ್ರವಾರ, ಜನವರಿ 31, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 31 | ಪುಟ 14
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ನೋಡಿದವರು ಏನಂತಾರೆ' ಎನ್ನುತ್ತಾ ಬರುತ್ತಿದ್ದಾರೆ ನಟ ನವೀನ್ ಶಂಕರ್



ಆಳ–ಅಗಲ
ಡೀಪ್‌ಸೀಕ್ ಎಐ ಸಂಚಲನ ದತ್ತಾಂಶ ಎಷ್ಟು ಸುರಕ್ಷಿತ?
'ಪಾಯಿಂಟ್ ನೆಮೊ' ದಾಟಿದ ನೌಕಾಪಡೆ ಮಹಿಳಾ ಅಧಿಕಾರಿಗಳು 7
ರವಿ ವಿರುದ್ಧದ ಪ್ರಕರಣಕ್ಕೆ ತಡೆ 7

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 76,759 | 23,249 | ₹85,490 (ಬೆಂಗಳೂರು) | ₹97,400 (ಬೆಂಗಳೂರು) | 86.62 |

ಮಹಾಕುಂಭ: ವ್ಯವಸ್ಥೆಯಲ್ಲಿ ಭಾರಿ ಬದಲಾವಣೆ • ದುರಂತದ ಹೆಚ್ಚಿನ ವಿವರ ಹಂಚಿಕೊಳ್ಳದ ಆಡಳಿತ

# 'ಅಮೃತ ಸ್ನಾನ'ಕ್ಕೆ ಇನ್ನು ಸರ್ಪಗಾವಲು

ಪ್ರಜಾವಾಣಿ ವಾರ್ತೆ/ಪಿಟಿಐ

**ಲಖನೌ:** ಮಹಾ ಕುಂಭಮೇಳದಲ್ಲಿ 'ಮೌನಿ ಅಮಾವಾಸ್ಯೆ'ಯಂದು ಕಾಲ್ತುಳಿತ ಘಟನೆ ಸಂಭವಿಸಿದ ನಂತರ, ಉತ್ತರ ಪ್ರದೇಶ ಸರ್ಕಾರವು ಮೇಳದ ವಲಯದ ವ್ಯವಸ್ಥೆಯಲ್ಲಿ ಗುರುವಾರ ಹಲವು ಪ್ರಮುಖ ಬದಲಾವಣೆಗಳನ್ನು ಮಾಡಿದೆ.

ದಟ್ಟಣೆ ನಿರ್ವಹಣೆ ಹಾಗೂ ಭಕ್ತರ ಸುರಕ್ಷತೆ ಖಾತ್ರಿಪಡಿಸುವ ಉದ್ದೇಶದಿಂದ ಹಲವಾರು ಕ್ರಮಗಳನ್ನು ಸರ್ಕಾರ ಪ್ರಕಟಿಸಿದೆ.

ಬುಧವಾರ ಸಂಭವಿಸಿದ ಕಾಲ್ತುಳಿತದಲ್ಲಿ 30 ಜನ ಮೃತಪಟ್ಟಿದ್ದರು ಎಂಬ ಮಾಹಿತಿಯನ್ನಷ್ಟೆ ನೀಡಿರುವ ಸರ್ಕಾರ, ಅವಘಡಕ್ಕೆ ಸಂಬಂಧಿಸಿ ಯಾವುದೇ ಹೆಚ್ಚಿನ ಮಾಹಿತಿಯನ್ನು ಹಂಚಿಕೊಂಡಿಲ್ಲ.

ಮೇಳಕ್ಕೆ ಬರುವ ಗಣ್ಯರಿಗೆ ನೀಡಲಾಗುತ್ತಿದ್ದ 'ವಿಐಪಿ ಪಾಸ್'ಗಳನ್ನು ರದ್ದುಪಡಿಸಲಾಗಿದೆ. ಮೇಳ ನಡೆಯುವ ಪ್ರದೇಶವನ್ನು 'ವಾಹನಮುಕ್ತ' ವಲಯ ಎಂಬುದಾಗಿ ಆಡಳಿತ ಘೋಷಿಸಿದೆ. ಆಂಬುಲೆನ್ಸ್ ಹೊರತಾಗಿ ಇತರ ವಾಹನಗಳ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

11ನೇ ಪುಟ ನೋಡಿ

## ಬೆಳಗಾವಿ ತಲುಪಿದ ಮೃತದೇಹಗಳು

**ಬೆಳಗಾವಿ:** ಪ್ರಯಾಗ್‌ರಾಜ್‌ನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಬೆಳಗಾವಿಯ ಮಹಾದೇವಿ ಬಾವನೂರ (48) ಹಾಗೂ ಶೆಟ್ಟಿಗಲ್ಲಿಯ ಅರುಣ ಕೋಪರ್ಡೆ (61) ಅವರ ಮೃತದೇಹಗಳನ್ನು ನವದೆಹಲಿಯಿಂದ ಬೆಳಗಾವಿಗೆ ಗುರುವಾರ 'ಏರ್‌ಲಿಫ್ಟ್' ಮಾಡಲಾಯಿತು. 'ಕಾಲ್ತುಳಿತದಲ್ಲಿ ಮೃತಪಟ್ಟ ವಡಗಾವಿಯ ಜ್ಯೋತಿ ಹತ್ತರವಾಟ (44) ಹಾಗೂ ಅವರ ಪುತ್ರಿ ಮೇಘಾ (24) ಅವರ ಶವಗಳನ್ನು ದೆಹಲಿಯಿಂದ ಗೋವಾಗೆ ಏರ್‌ಲಿಫ್ಟ್ ಮಾಡಲಾಗಿದೆ. ಗೋವಾದಿಂದ ಬೆಳಗಾವಿಗೆ ಆಂಬುಲೆನ್ಸ್ ಮೂಲಕ ತರಲಾಗುವುದು' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

11



'ಕುಂಭ ಮೇಳ'ದಲ್ಲಿ ಪಾಲ್ಗೊಂಡು ಗುರುವಾರ ತಮ್ಮ ಊರುಗಳತ್ತ ಮರಳಿದ ಭಕ್ತರ ದಂಡು –ಪಿಟಿಐ ಚಿತ್ರ

## ವ್ಯವಸ್ಥೆಯಲ್ಲಿ ಮಾಡಿರುವ ಮುಖ್ಯ ಬದಲಾವಣೆಗಳು

- ಮೇಳ ವಲಯದಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ. ಪ್ರವೇಶ ಹಾಗೂ ನಿರ್ಗಮನಕ್ಕೆ ಪ್ರತ್ಯೇಕ ಮಾರ್ಗಗಳ ವ್ಯವಸ್ಥೆ
- ಪ್ರಯಾಗ್‌ರಾಜ್‌ಗೆ ಬರುವ ವಾಹನಗಳ ನಿಲುಗಡೆಗೆ ನಗರದ ಗಡಿಯಲ್ಲಿ ವ್ಯವಸ್ಥೆ
- ಮೇಳದ ಆಡಳಿತಕ್ಕೆ ನೆರವಾಗಲು ವಿಶೇಷ ಕಾರ್ಯದರ್ಶಿ ಶ್ರೇಣಿಯ ಐವರು ಹಿರಿಯ ಅಧಿಕಾರಿಗಳ ನಿಯೋಜನೆ
- ವಿವಿಧ ರಾಜ್ಯಗಳಿಗೆ ಭಕ್ತರನ್ನು ಕರೆದೊಯ್ಯಲು ರಾಜ್ಯ ಸಾರಿಗೆ ಸಂಸ್ಥೆಯಿಂದ ಹೆಚ್ಚುವರಿ ಬಸ್
- ಅಯೋಧ್ಯೆಯಲ್ಲಿ ಹೆಚ್ಚುವರಿ ಭದ್ರತಾ ಸಿಬ್ಬಂದಿ ನಿಯೋಜನೆ
- ಭಕ್ತರು ರಾತ್ರಿ ತಂಗಲು ವಾರಾಣಸಿ ರೈಲು ನಿಲ್ದಾಣ ಬಳಿ ತಾತ್ಕಾಲಿಕ ಟೆಂಟ್‌ಗಳ ನಿರ್ಮಾಣ
- ವಾಹನಗಳು ಚಿತ್ರಕೂಟ ಪ್ರವೇಶಿಸುವುದಕ್ಕೂ ನಿಷೇಧ



**ಪ್ರಾತ್ಯಕ್ಷಿಕೆ** ಮೈಸೂರಿನಲ್ಲಿ ಹುತಾತ್ಮರ ದಿನದ ಅಂಗವಾಗಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜನಾಂದೋಲನ ಮಹಾಮೈತ್ರಿ, ಗಾಂಧಿ ವಿಚಾರ ಪರಿಷತ್ತು ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಚರಕದ ಮೂಲಕ ನೂಲು ತೆಗೆಯುವ ಪ್ರಾತ್ಯಕ್ಷಿಕೆ ನಡೆಸಿಕೊಡಲಾಯಿತು ಚಿತ್ರ:ಅನೂಪ್ ರಾಘ.ಟಿ

ಸಾಲಗಾರರಿಗೆ ಕಿರುಕುಳ ತಡೆ: ಸಿ.ಎಂ ಅಧ್ಯಕ್ಷತೆಯಲ್ಲಿ ಸಭೆ

# ಸುಗ್ರೀವಾಜ್ಞೆ: ಅಧಿಕಾರಿಗಳಿಗೆ ಹೊಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಲಗಾರರಿಗೆ ಮೈಕ್ರೊ ಫೈನಾನ್ಸ್ ಕಂಪನಿಗಳು ನೀಡುತ್ತಿರುವ ಕಿರುಕುಳ ತಪ್ಪಿಸಲು ಮತ್ತು ಬಲವಂತದ ವಸೂಲಿಯನ್ನು ನಿಯಂತ್ರಿಸುವ ಉದ್ದೇಶದಿಂದ ಸಿದ್ಧಪಡಿಸಿರುವ ಸುಗ್ರೀವಾಜ್ಞೆಯಲ್ಲಿರುವ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅಂತಿಮಗೊಳಿಸುವ ಹೊಣೆಯನ್ನು ಕಾನೂನು, ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ತಂಡಕ್ಕೆ ವಹಿಸಲಾಗಿದೆ.

ಸುಗ್ರೀವಾಜ್ಞೆ ಹೊರಡಿಸುವ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಸಂಜೆ ಉನ್ನತ ಮಟ್ಟದ ಸಭೆ ನಡೆಯಿತು. ಆದಷ್ಟು ಬೇಗ ಬಲಿಷ್ಠ ಕಾಯ್ದೆ ಜಾರಿಗೊಳಿಸಲು ಸಭೆ ತೀರ್ಮಾನಿಸಿದೆ.

ಕಾಯ್ದೆ ಸಂಪೂರ್ಣ ಸಂವಿಧಾನಬದ್ಧವಾಗಿದ್ದು, ಯಾವುದೇ ಲೋಪದೋಷ ಇರಬಾರದು. ಕಾಯ್ದೆಯಲ್ಲಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ಸಿಗಲಿದೆ. ಅಲ್ಲದೆ, ಒಂಬುಡ್ಸ್‌ಮನ್ ನೇಮಕಕ್ಕೆ ಅವಕಾಶ ಆಗಲಿದೆ. ಅಮಾನವೀಯವಾಗಿ, ಬಲವಂತದ ಸಾಲ ವಸೂಲಾತಿ ಮಾಡುವವರಿಗೆ ಜಾಮೀನುರಹಿತ ಪ್ರಕರಣ ದಾಖಲು ಸೇರಿದಂತೆ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸಲು ಕೂಡಾ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗುತ್ತಿದೆ.

ನೋಂದಣಿಯಾಗದ ಲೇವಾದೇವಿಗಾರರ ನಿಯಂತ್ರಣ ಈ ಕಾಯ್ದೆ ಜಾರಿ ಮೂಲಕ ಸಾಧ್ಯವಾಗಲಿದೆ. ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳ ತಪ್ಪಿಸಲು ಸದ್ಯ ಜಾರಿಯಲ್ಲಿರುವ ಕಾನೂನಿನಲ್ಲಿ ಹಲವು ಅವಕಾಶಗಳಿದ್ದರೂ ಸಮರ್ಪಕವಾಗಿ ಅನುಷ್ಠಾನ ಆಗುತ್ತಿಲ್ಲ. ಸಾಲಗಾರರು ದೂರು ದಾಖಲು ಮಾಡುವವರೆಗೆ ಕಾಯದೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಬೇಕು ಎಂದು ಸಭೆಯಲ್ಲಿ ಸೂಚನೆ ನೀಡಲಾಗಿದೆ.

ಸಭೆ ಬಳಿಕ ಮಾತನಾಡಿದ ಕಾನೂನು ಸಚಿವ ಎಚ್‌.ಕೆ. ಪಾಟೀಲ, 'ಕರಡು ಮಸೂದೆಯಲ್ಲಿರುವ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಅಂಶಗಳನ್ನು ಸೇರಿಸಲು ಕೂಡಾ ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳ ತಂಡ ಕೆಲಸ ಆರಂಭಿಸಿದೆ' ಎಂದರು.

6ನೇ ಪುಟ ನೋಡಿ

## ಆಸ್ತಿ ನಗದೀಕರಣದತ್ತ ಸರ್ಕಾರದ ನಡೆ

ಖಾಸಗಿ ಬಂಡವಾಳ ಆಕರ್ಷಿಸುವ ಮೂಲಕ ಮೂಲಸೌಕರ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 'ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಕಾರ್ಯನೀತಿ-2025' ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ನೀತಿಯಲ್ಲಿ, ಆಸ್ತಿ ನಗದೀಕರಣದ ಪ್ರಸ್ತಾವವೂ ಇದೆ.

ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗುತ್ತದೆ ಅಥವಾ ಭಾಗಶಃ ವರ್ಗಾವಣೆ ಮಾಡಲಾಗುತ್ತದೆ.

ವರದಿ 7

ಚಿನಕುರುಳಿ

ಪ್ರಕಾಶ್ ಶೆಟ್ಟಿ




# 'ಅಪ್ಪ–ಮಕ್ಕಳಿಂದ ಉಸ್ತುವಾರಿಗಳಿಗೆ ಲಾಭ'


ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಜಿಲ್ಲಾ ಘಟಕಗಳ ಅಧ್ಯಕ್ಷರ ಆಯ್ಕೆಯ ನಂತರ ವಿಜಯೇಂದ್ರ ಅವರ ನಿಜ ಬಣ್ಣ ಬಯಲಾಗಿದೆ. ಅವರ ಬೆಂಬಲಕ್ಕೆ ನಿಂತ ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ್‌ವಾಲ್ ನಡೆಯೂ ಚರ್ಚಾಸ್ಪದವಾಗಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಸಂಸದ ಡಾ.ಕೆ. ಸುಧಾಕರ್ ಆಕ್ರೋಶ ವ್ಯಕ್ತಪಡಿಸಿದ್ದರು. ಸುಧಾಕರ್ ಹೇಳಿಕೆಯನ್ನು ಸ್ವಾಗತಿಸಿ ಮಾತನಾಡಿದ ಯತ್ನಾಳ, 'ಹಿಂದೆ ಇದ್ದ ರಾಜ್ಯ ಉಸ್ತುವಾರಿಯಾಗಿದ್ದ ಅರುಣ್ ಸಿಂಗ್ ಅವರು ಅಪ್ಪ–ಮಕ್ಕಳ ಮೂಲಕ ಲಾಭ ಮಾಡಿಕೊಂಡು ಹೋಗಿದ್ದರು. ಈಗ ಇವರೂ ಅದೇ ಹಾದಿಯಲ್ಲಿ ಸಾಗುತ್ತಿದ್ದಾರೆ. ಎಲ್ಲರೂ ಸೇರಿ ನಮ್ಮನ್ನು ಪಕ್ಷದಿಂದ ಹೊರ ಹಾಕುತ್ತೀರಾ? ನಾವೂ ಸಿದ್ಧರಿದ್ದೇವೆ. ಹಾಕಿ ನೋಡೋಣ' ಎಂದು ಸವಾಲು ಹಾಕಿದರು.

6ನೇ ಪುಟ ನೋಡಿ

## ಹೇಳಿಕೆ ಶೋಭೆ ತರದು: ವಿಜಯೇಂದ್ರ



'ನನ್ನ ಮೇಲೆ ಯುದ್ಧ ಸಾರುವುದಾಗಿ ಸಂಸದ ಕೆ. ಸುಧಾಕರ್ ನೀಡಿದ ಹೇಳಿಕೆ ಅವರಿಗೆ ಶೋಭೆ ತರುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಕೇಂದ್ರ ನೇಮಿಸಿದ ವೀಕ್ಷಕರ ಸಮ್ಮುಖದಲ್ಲಿ, ಚುನಾವಣಾಧಿ ಕಾರಿಗಳ ಮೂಲಕ ಜಿಲ್ಲಾ ಘಟಕಗಳ ಅಧ್ಯಕ್ಷರ ಆಯ್ಕೆ ನಡೆದಿದೆ. ಅದರಲ್ಲಿ ನನ್ನ ಪಾತ್ರವಿಲ್ಲ. ಆಯ್ಕೆಗಳು ಪಾರದರ್ಶಕವಾಗಿ ನಡೆದಿವೆ. ಮಾಹಿತಿ ಪಡೆಯದೇ, ಹೇಳಿಕೆ ನೀಡುವುದು ಅವರಿಗೆ ಶೋಭೆ ತರುವುದಿಲ್ಲ' ಎಂದರು.

6ನೇ ಪುಟ ನೋಡಿ

## 'ಸುಧಾಕರ್ ಮರಳಿ ಕಾಂಗ್ರೆಸ್ ಸೇರಲಿ'



ಕೆ. ಸುಧಾಕರ್ ಅವರು ಬಿಜೆಪಿ ಆಂತರಿಕ ವಿಚಾರಗಳ ಬಗ್ಗೆ ಬಹಿರಂಗವಾಗಿ ಮಾತನಾಡುವ ಬದಲು ಪಕ್ಷಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರಬಹುದು ಎಂದು ಯಲಹಂಕ ಶಾಸಕ ಎಸ್‌.ಆರ್‌. ವಿಶ್ವನಾಥ್ ಸಲಹೆ ನೀಡಿದರು.

6ನೇ ಪುಟ ನೋಡಿ



**ವಾದ್ಯ ಉತ್ಸವ** ಜೈಪುರದಲ್ಲಿ ನಡೆಯುತ್ತಿರುವ 'ಜೈಪುರ ಸಾಹಿತ್ಯ ಉತ್ಸವ'ದಲ್ಲಿ ಜಾನಪದ ಕಲಾವಿದರೊಬ್ಬರು ಗುರುವಾರ ವಾದ್ಯ ನುಡಿಸಿದರು –ಪಿಟಿಐ ಚಿತ್ರ

## ಚೆಕ್ ಬೌನ್ಸ್ ಸ್ನೇಹಮಯಿ ಕೃಷ್ಣಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

**ಮೈಸೂರು:** ಚೆಕ್ ಬೌನ್ಸ್ ಪ್ರಕರಣದಲ್ಲಿ ಆರೋಪಿ ಸ್ನೇಹಮಯಿ ಕೃಷ್ಣಗೆ ಇಲ್ಲಿನ ಮೂರನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್ ನ್ಯಾಯಾಲಯವು ಶಿಕ್ಷೆ ಪ್ರಕಟಿಸಿ ಗುರುವಾರ ಆದೇಶಿಸಿತು.

ಕೃಷ್ಣ 2015ರಲ್ಲಿ ಲಲಿತಾದ್ರಿಪುರದ ಕುಮಾರ್ ಎಂಬವರಿಂದ ಸಾಲ ಪಡೆದಿದ್ದರು. ಅದಕ್ಕೆ ಪ್ರತಿಯಾಗಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಚೆಕ್ ನೀಡಿದ್ದರು. ಕುಮಾರ್ ಅದನ್ನು ತಮ್ಮ ಬ್ಯಾಂಕ್ ಖಾತೆಗೆ ಹಾಕಿದಾಗ ಬೌನ್ಸ್ ಆಗಿತ್ತು. ನಂತರ ಅವರು ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು, ಆರೋಪ ಸಾಬೀತಾಗಿದ್ದರಿಂದ ಶಿಕ್ಷೆ ಪ್ರಕಟಿಸಿದೆ. ಆದರೆ ಶಿಕ್ಷೆಯ ಪ್ರಮಾಣ ಪ್ರಕಟಿಸಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಸ್ನೇಹಮಯಿ ಕೃಷ್ಣ, ಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದರು.

ಜನದಟ್ಟಣೆ ಕಡಿಮೆ ಮಾಡಲು 'ಗ್ರೇಟರ್ ಬೆಂಗಳೂರು' ಯೋಜನೆಗೆ ಹೊಸರೂಪ

# ಆರು ಉಪನಗರಗಳಿಗೆ ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಜನದಟ್ಟಣೆಯನ್ನು ಕಡಿಮೆ ಮಾಡಲು, ನಗರದ ಸುತ್ತ ಆರು ಉಪನಗರಗಳನ್ನು ಅಭಿವೃದ್ಧಿಪಡಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'ದಡಿ 'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ'ಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1970ರ ಸೆಕ್ಷನ್ 15(1)(ಬಿ)ಯಂತೆ ಸಮ್ಮತಿ ನೀಡಲಾಗಿದೆ.


'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ'ಯ ಮೊದಲ ಹಂತದಲ್ಲಿ ರಾಮನಗರ ಜಿಲ್ಲೆಯ 'ಬಿಡದಿ ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ' ಅನುಷ್ಠಾನಕ್ಕೆ ಪ್ರಾಥಮಿಕ ಪ್ರಕ್ರಿಯೆಗಳನ್ನು ಆರಂಭಿಸಲು ಸರ್ಕಾರ ತಾತ್ವಿಕ ಅನುಮೋದನೆ ನೀಡಿದೆ.

ಬಿಡದಿ ಹೋಬಳಿಯ 9 ಗ್ರಾಮಗಳು ಹಾಗೂ ಹಾರೋಹಳ್ಳಿ ಹೋಬಳಿಯ ಒಂದು ಗ್ರಾಮದಲ್ಲಿ 'ಬಿಡದಿ ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ'ಗೆ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲು ಸಮ್ಮತಿಸಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿಯಮಗಳು–2009ರಂತೆ ಸ್ವಾಧೀನಪಡಿಸಿಕೊಂಡ ಭೂಮಿಗೆ ಬದಲು ಶೇ 35ರಿಂದ ಶೇ 50ರಷ್ಟು ಅಭಿವೃದ್ಧಿ ಹೊಂದಿದ ಭೂಮಿಯನ್ನು ಪರಿಹಾರವಾಗಿ ನೀಡಲೂ ಒಪ್ಪಿಗೆ ನೀಡಲಾಗಿದೆ.

8,943 ಎಕರೆ ಪ್ರದೇಶದಲ್ಲಿ 910 ಎಕರೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಭೂಸ್ವಾಧೀನಪಡಿಸಿಕೊಂಡಿದೆ. ಅದನ್ನು ಹೊರತುಪಡಿಸಿದ 8,032 ಎಕರೆ ಪ್ರದೇಶದಲ್ಲಿ ಬಿಡದಿ ಸಮಗ್ರ ಉಪನಗರಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಬೇಕು. ಇದರಲ್ಲಿ ಸೆಟಲ್ಮೆಂಟ್, ಶಾಲೆ–ಕಾಲೇಜು, ಕೆರೆ, ಸ್ಮಶಾನ ಮತ್ತು ಸಾರ್ವಜನಿಕ ಉದ್ದೇಶದ ಜಾಗಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಸಮಗ್ರ ಉಪನಗರಗಳ ಯೋಜನೆಯ ಅನುಷ್ಠಾನಕ್ಕೆ ಸಕ್ಷಮ ಪ್ರಾಧಿಕಾರ, ಇಲಾಖೆ ಮತ್ತು ಸಂಸ್ಥೆಗಳನ್ನೊಳಗೊಂಡ ಸಮಿತಿಯನ್ನು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ರಚಿಸಬೇಕು. ಜಾಗತಿಕ ಟೆಂಡರ್ ಮೂಲಕ ಅಂತರರಾಷ್ಟ್ರೀಯ ಮಾನದಂಡಗಳ ಪ್ರಕಾರ, ವರ್ಕ್–ಲಿವ್–ಪ್ಲೇ (ಕೆಲಸ–ಜೀವನ–ಆಟ) ಪರಿಕಲ್ಪನೆಯಲ್ಲಿ ರಸ್ತೆ, ರೈಲು ಸಂಪರ್ಕ ಒಳಗೊಂಡ ಉಪನಗರಗಳನ್ನು ವಿನ್ಯಾಸಗೊಳಿಸಬೇಕು. ಇದನ್ನು ಯೋಜಿಸಲು ಅರ್ಹ ಸಂಸ್ಥೆಗಳನ್ನು ನೇಮಿಸಿಕೊಳ್ಳಬಹುದು ಎಂದು ಸಚಿವ ಸಂಪುಟ ಅನುಮೋದಿಸಿದೆ.

## ಬಿಡದಿ ಸಮಗ್ರ ಉಪನಗರದ ವ್ಯಾಪ್ತಿ




ಬಿಡದಿ ಹೋಬಳಿ:
1. ಬೈರಮಂಗಲ
2. ಬನ್ನಿಗೆರೆ
3. ಹೊಸೂರು
4. ಕೆ.ಜಿ. ಗೊಲ್ಲರಪಾಳ್ಯ
5. ಕಂಚುಗಾರನಹಳ್ಳಿ
6. ಅರಳಾಳುಸಂದ್ರ
7. ಕೆಂಪಯ್ಯನಪಾಳ್ಯ
8. ಕಂಚುಗಾರನಹಳ್ಳಿ ಕಾವಲು
9. ಮಂಡಲಹಳ್ಳಿ

ಹಾರೋಹಳ್ಳಿ ಹೋಬಳಿ:
10. ವಡೇರಹಳ್ಳಿ

**8,943** ಎಕರೆ **35** ಗುಂಟೆ
ಬಿಡದಿ ಸಮಗ್ರ ಉಪನಗರದ ವಿಸ್ತೀರ್ಣ

**101** ಎಕರೆ **12** ಗುಂಟೆ
ಎ ಖರಾಬು ವಿಸ್ತೀರ್ಣ

**6,023** ಎಕರೆ **24** ಗುಂಟೆ
ಗ್ರಾಮಗಳ ಸಾಗುವಳಿ ಪ್ರದೇಶ

**2,818** ಎಕರೆ **39** ಗುಂಟೆ
ಬಿ ಖರಾಬು ಪ್ರದೇಶ




## ಎಲ್ಲೆಲ್ಲಿ ಉಪನಗರ?

1. ದೇವನಹಳ್ಳಿ
2. ನೆಲಮಂಗಲ
3. ಹೊಸಕೋಟೆ
4. ದೊಡ್ಡಬಳ್ಳಾಪುರ
5. ಮಾಗಡಿ
6. ಬಿಡದಿ

**ಉದ್ದೇಶ**

ಸುಸ್ಥಿರ ಮೂಲಸೌಕರ್ಯದೊಂದಿಗೆ ಆಕರ್ಷಕ ನಗರಗಳನ್ನು ಅಭಿವೃದ್ಧಿಗೊಳಿಸಿ, ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು. ಅಂತರರಾಷ್ಟ್ರೀಯ ಮಾನದಂಡಗಳಂತೆ 'ವರ್ಕ್–ಲಿವ್–ಪ್ಲೇ' ಪರಿಕಲ್ಪನೆ

ಮುಡಾ: ಸಚಿವರ ಸಂಬಂಧಿ ನವೀನ್ ಬೋಸ್‌ಗೆ ಅಕ್ರಮ ನಿವೇಶನ

# ಇ.ಡಿ ವರದಿಯಲ್ಲಿ ಮಹದೇವಪ್ಪ ಹೆಸರು

ಪ್ರಜಾವಾಣಿ ವಾರ್ತೆ



**ಬೆಂಗಳೂರು:** 'ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅವರ ಹತ್ತಿರದ ಸಂಬಂಧಿ ನವೀನ್ ಬೋಸ್ ಅವರು ಮುಡಾದಿಂದ ನಿವೇಶನವನ್ನು ಅಕ್ರಮವಾಗಿ ಪಡೆದಿದ್ದು, ಹಣ ಅಕ್ರಮ ವರ್ಗಾವಣೆ ಕೃತ್ಯ ಎಸಗಿದ್ದಾರೆ' ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಹೇಳಿದೆ.

ಮುಡಾವು 50:50ರ ಅನುಪಾತದಲ್ಲಿ ಪರಿಹಾರವಾಗಿ ಹಂಚಿಕೆ ಮಾಡಲಾದ 160 ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಜನವರಿ 17ರಂದು ಇ.ಡಿ ಹೊರಡಿಸಿದ ಆದೇಶದಲ್ಲಿ ಸಚಿವ ಮಹದೇವಪ್ಪ ಮತ್ತು ಅವರ ಅಣ್ಣನ ಮಗ ನವೀನ್ ಬೋಸ್ ಅವರ ಹೆಸರನ್ನು ಉಲ್ಲೇಖಿಸಿದೆ.

'ಬೆಂಗಳೂರಿನ ಜೆ.ಪಿ.ನಗರ ನಿವಾಸಿಯಾದ ರಿಯಲ್ ಎಸ್ಟೇಟ್ ಉದ್ಯಮಿ ಎನ್.ಮಂಜುನಾಥ್ ಅವರು ಮುಡಾದಿಂದ ಅಕ್ರಮವಾಗಿ 31 ನಿವೇಶನಗಳನ್ನು ಪಡೆದುಕೊಂಡಿದ್ದು, ಅವುಗಳಲ್ಲಿ ಒಂದನ್ನು (ವಿಜಯನಗರ 2ನೇ ಘಟ್ಟ, 4ನೇ ಹಂತದ ನಿವೇಶನ ಸಂಖ್ಯೆ 118/2) ನವೀನ್ ಬೋಸ್ ಅವರ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ' ಎಂದಿದೆ.

'2023ರ ಜೂನ್ 7ರಂದು ನಿವೇಶನ ಹಂಚಿಕೆಯಾಗಿದ್ದು, ಅದಕ್ಕೆ ಬದಲಾಗಿ ಹಣ ಪಾವತಿ ಮಾಡಿದ ಯಾವ ಉಲ್ಲೇಖವೂ ದಾಖಲೆಯಲ್ಲಿ ಇಲ್ಲ. ಇದಕ್ಕಾಗಿ 2024ರ ಮಾರ್ಚ್ 18ರಂದು ಪೂರಕ ದಾಖಲೆ ಸೃಷ್ಟಿಸಲಾಗಿದೆ. '2014–15ರಲ್ಲಿ ನವೀನ್ ಬೋಸ್ ಅವರು ಮಂಜುನಾಥ್ ಅವರ ಕಂಪನಿಯಲ್ಲಿ ₹25 ಲಕ್ಷ ಹೂಡಿಕೆ ಮಾಡಿದ್ದರು. ಆ ಹಣವನ್ನು 2022–23ರಲ್ಲಿ ವಾಪಸ್ ಕೇಳಿದರು. ಅದಕ್ಕೆ ಪ್ರತಿಯಾಗಿ ನಿವೇಶನ ವರ್ಗಾವಣೆ ಮಾಡಲಾಗಿದೆ' ಎಂದು ಪೂರಕ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ' ಎಂದು ವಿವರಿಸಿದೆ.

'ಆದರೆ, 2014–15ರಲ್ಲಿ ನವೀನ್ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದು, ₹25 ಲಕ್ಷ ಹೇಗೆ ಹೂಡಿಕೆ ಮಾಡಿದರು ಎಂಬುದಕ್ಕೆ ದಾಖಲೆ ಸಲ್ಲಿಸಿಲ್ಲ. ಮಂಜುನಾಥ್ ಸಹ ಪುರಾವೆ ಒದಗಿಸಿಲ್ಲ. ಇಬ್ಬರೂ ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ. ಇಲ್ಲಿ ಹಣ ಮತ್ತು ಸ್ವತ್ತಿನ ಮೂಲ ಮುಚ್ಚಿಡಲು ನಕಲಿ ವರ್ಗಾವಣೆಯನ್ನು ಸೃಷ್ಟಿಸಿದ್ದಾರೆ. ಇಲ್ಲಿ ನಿವೇಶನ ವರ್ಗಾವಣೆ ನೆಪದಲ್ಲಿ ಹಣ ಅಕ್ರಮ ವರ್ಗಾವಣೆ ನಡೆದಿದೆ. ಹೀಗಾಗಿ ಆ ನಿವೇಶನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ' ಎಂದಿದೆ.

## 64 ಮಂದಿಯಿಂದ ಅಕ್ರಮ

'ಮುಡಾ ಆಯುಕ್ತರಾಗಿದ್ದ ಜಿ.ಟಿ.ದಿನೇಶ್ ಕುಮಾರ್ ಅವರು ನಿವೇಶನಗಳ ಅಕ್ರಮ ಹಂಚಿಕೆಯಲ್ಲಿ ನೇರವಾಗಿ ಭಾಗಿಯಾಗಿದ್ದಾರೆ. ಅವರ ಆಣತಿಯಂತೆ ರಿಯಲ್ ಎಸ್ಟೇಟ್ ಉದ್ಯಮಿಗಳಾದ ಎನ್.ಮಂಜುನಾಥ್, ಎಂ.ಬಸವರಾಜು, ಜಯರಾಮು ಅವರು ಭೂಮಾಲೀಕರಿಂದ ಜಮೀನನ್ನು ಜಿಪಿಎ ಮಾಡಿಸಿಕೊಂಡಿದ್ದಾರೆ' ಎಂದು ಇ.ಡಿ ಹೇಳಿದೆ.

'ಜಿಪಿಎ ಅನ್ನು ಆಧಾರವಾಗಿ ಇರಿಸಿಕೊಂಡು, ಮುಡಾ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಅವುಗಳನ್ನು ಮಾರಾಟ ಮಾಡಿ, ಕಳ್ಳ ಹಣವನ್ನು ಸಕ್ರಮ ಮಾಡಿಕೊಂಡಿದ್ದಾರೆ. ಪ್ರತಿಯಾಗಿ ಜಿ.ಟಿ.ದಿನೇಶ್ ಕುಮಾರ್ ಅವರ ಕುಟುಂಬದವರು, ಸಂಬಂಧಿಗಳು ಮತ್ತು ಆಪ್ತರಿಗೆ ಹಣ ವರ್ಗಾಯಿಸಿದ್ದಾರೆ' ಎಂದಿದೆ.

**160 ಅಕ್ರಮ ನಿವೇಶನಗಳು**

| ಅಕ್ರಮದಲ್ಲಿ ಭಾಗಿಯಾದವರು | ಒಟ್ಟು ಆರೋಪಿಗಳು | ನಿವೇಶನಗಳ ಸಂಖ್ಯೆ |
|---|---|---|
| ಎನ್.ರವಿಕುಮಾರ್ ಮತ್ತು ಇತರರು | 12 | 31 |
| ಅಬ್ದುಲ್ ವಾಹಿದ್ | 1 | 41 |
| ಕ್ಯಾಥೆಡ್ರಲ್ ಸೊಸೈಟಿ | 2 | 40 |
| ಚಾಮುಂಡೇಶ್ವರಿ ನಗರ ಸರ್ವೋದಯ ಸಂಘ | 48 | 48 |

## ಸಿ.ಎಂ ಪತ್ನಿಗೆ ಸೈಟ್ ಅಕ್ರಮಕ್ಕೆ ಯತ್ನ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ 14 ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಗೆ ಯತ್ನ ನಡೆದಿದೆ' ಎಂದು ಇ.ಡಿ ಹೇಳಿದೆ.

'ಸಿದ್ದರಾಮಯ್ಯ, ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ, ಜೆ.ದೇವರಾಜು ಮತ್ತು ಇತರರು ಅಕ್ರಮ ಸಂಪಾದನೆಯನ್ನು ಸಕ್ರಮ ಎಂದು ತೋರಿಸುವ ಯತ್ನ ನಡೆಸಿದ್ದಾರೆ. ಈ ಮೂಲಕ ಹಣ ಅಕ್ರಮ ವರ್ಗಾವಣೆಗೆ ಯತ್ನಿಸಿದ್ದಾರೆ' ಎಂದು ಉಲ್ಲೇಖಿಸಿದೆ. ತನಿಖೆ ಆರಂಭಿಸಿದ್ದ ಇ.ಡಿ, ಪಾರ್ವತಿಯವರ ನಿವೇಶನ ಹಂಚಿಕೆ ಪ್ರಕರಣದಲ್ಲಿ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ಹೇಳಿತ್ತು. ಈಗ, 'ಯತ್ನ' ಎಂದು ಉಲ್ಲೇಖಿಸಿದೆ.

# ಎಚ್‌ಡಿಕೆ ಭೂ ಒತ್ತುವರಿ ಫೆ. 21ರಂದು ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಚ್‌.ಡಿ. ಕುಮಾರಸ್ವಾಮಿ ಕುಟುಂಬ ಕೇತಗಾನಹಳ್ಳಿ ಬಳಿಯ ಸರ್ಕಾರದ ಜಮೀನು ಒತ್ತುವರಿ ಮಾಡಿರುವ ಆರೋಪ ಕುರಿತು ಹೈಕೋರ್ಟ್ ಸೂಚನೆಯಂತೆ ತನಿಖೆಗೆ ನಡೆಸಲು ಉನ್ನತ ಅಧಿಕಾರಿಗಳ ತಂಡ ರಚಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ಕೃಷ್ಣ ಬೈರೇಗೌಡ

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ತನಿಖೆ ನಡೆಸಿ, ವರದಿ ನೀಡಲು ಮೂರು ತಿಂಗಳ ಅವಧಿ ನೀಡುವಂತೆ ಕೋರಿದ್ದೆವು. ಆದರೆ, ಕೋರ್ಟ್ ಸಮಯ ಕೊಡಲಿಲ್ಲ. ಹಾಗಾಗಿ, ತನಿಖೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಫೆ. 21ರ ಒಳಗೆ ಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು' ಎಂದರು.

'ಎಚ್‌.ಡಿ.ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಶಾಸಕ ಡಿ.ಸಿ. ತಮ್ಮಣ್ಣ ಮತ್ತಿತರರು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಎಸ್‌.ಆರ್‌. ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತ್ತು.

ವಿಚಾರಣೆ ವೇಳೆ, ಭೂ ಒತ್ತುವರಿ ತೆರವಿಗೆ ಕ್ರಮ ವಹಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿದ್ದೀರಿ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ ಅವರನ್ನು ತರಾಟೆಗೆ ತೆಗೆದುಕೊಂಡಿದ್ದ ನ್ಯಾಯಮೂರ್ತಿಯವರು, 'ಕುಮಾರಸ್ವಾಮಿ ಉನ್ನತ ಹುದ್ದೆಯಲ್ಲಿದ್ದಾರೆ ಎಂದು ನೀವು ಏನೂ ಮಾಡಿಲ್ಲ ತಾನೆ? ನಿಮ್ಮನ್ನು ಹದಿನೈದು ದಿನ ಜೈಲಿಗೆ ಕಳುಹಿಸಿದರೆ ಎಲ್ಲವೂ ಸರಿ ಹೋಗುತ್ತದೆ' ಎಂದು ಎಚ್ಚರಿಸಿದ್ದರು.

# ಇಂದಿನಿಂದ ಬಜೆಟ್ ಅಧಿವೇಶನ

**ನವದೆಹಲಿ (ಪಿಟಿಐ):** ಸಂಸತ್ತಿನ ಬಜೆಟ್ ಅಧಿವೇಶನ ಶುಕ್ರವಾರದಿಂದ ಆರಂಭವಾಗಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಭಯ ಸದನಗಳನ್ನು (ಲೋಕಸಭೆ, ರಾಜ್ಯಸಭೆ) ಉದ್ದೇಶಿಸಿ ಬೆಳಿಗ್ಗೆ 11 ಗಂಟೆಗೆ ಭಾಷಣ ಮಾಡಲಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು (ಶನಿವಾರ) ಬಜೆಟ್ ಮಂಡಿಸಲಿದ್ದಾರೆ.

ಬಜೆಟ್ ಅಧಿವೇಶನವು ಜನವರಿ 31ರಿಂದ ಏಪ್ರಿಲ್ 4ರವರೆಗೆ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತವು ಫೆಬ್ರುವರಿ 13ಕ್ಕೆ ಕೊನೆಗೊಳ್ಳಲಿದ್ದು, ಎರಡನೇ ಹಂತ ಮಾರ್ಚ್ 10ರಿಂದ ಆರಂಭವಾಗಲಿದೆ.

**16 ಮಸೂದೆ ಮಂಡನೆಗೆ ಯೋಜನೆ:** ಕೇಂದ್ರ ಸರ್ಕಾರವು ಒಟ್ಟು 16 ಮಸೂದೆಗಳನ್ನು ಈ ಅಧಿವೇಶನದಲ್ಲಿ ಮಂಡಿಸಲು ಯೋಜಿಸಿದೆ. ಅವುಗಳಲ್ಲಿ ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಮಸೂದೆ– 2024, ವಲಸೆ ಮತ್ತು ವಿದೇಶಿಯರ ಮಸೂದೆ–2025 ಸಹ ಸೇರಿದೆ.

## ‘ಪುಸ್ತಕ ರವಾನೆ: ರಿಯಾಯಿತಿ ಮರುಪರಿಶೀಲಿಸಿ’

ಬೆಂಗಳೂರು: ಪುಸ್ತಕ ರವಾನೆ ಮೇಲಿನ ರಿಯಾಯಿತಿ ರದ್ದತಿಯನ್ನು ಮರುಪರಿಶೀಲಿಸಿ, ಮತ್ತೆ ರಿಯಾಯಿತಿ ಒದಗಿಸಲು ಕ್ರಮಕೈಗೊಳ್ಳುವಂತೆ ಭಾರತೀಯ ಪ್ರಕಾಶಕರ ಒಕ್ಕೂಟವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಒಕ್ಕೂಟದ ಪದಾಧಿಕಾರಿಗಳು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರಿಗೆ ಈ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಈ ಬಗ್ಗೆ ಮರುಪರಿಶೀಲಿಸುವುದಾಗಿ ಜ್ಯೋತಿರಾದಿತ್ಯ ಸಿಂಧಿಯಾ ಭರವಸೆ ನೀಡಿದ್ದಾರೆ ಎಂದು ಕರ್ನಾಟಕ ಪ್ರಕಾಶಕರ ಸಂಘ ತಿಳಿಸಿದೆ.



# ‘ನಾಮಫಲಕಗಳಲ್ಲಿ ಕನ್ನಡ ಸಮರ್ಪಕ ಜಾರಿ’

## ಶೇ 60ರಷ್ಟು ಕನ್ನಡ ಭಾಷೆ ಬಳಕೆ ಕಡ್ಡಾಯ: ಸಚಿವ ಶಿವರಾಜ ತಂಗಡಗಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಲ್ಲ ವ್ಯಾಪಾರ ಉದ್ದಿಮೆ, ಶಿಕ್ಷಣ ಸಂಸ್ಥೆ, ಅಂಗಡಿಗಳ ನಾಮ ಫಲಕದಲ್ಲಿ ಶೇ 60 ರಷ್ಟು ಕನ್ನಡ ಭಾಷೆ ಬಳಕೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಗುರುವಾರ ಇಲ್ಲಿ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೈಗಾರಿಕೆ ಇಲಾಖೆ, ಗೃಹ ಇಲಾಖೆ ಹಾಗೂ ಕಾನೂನು, ಶಾಲಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಜತೆ ನಡೆಸಿದ ಸಭೆಯಲ್ಲಿ ಈ ಸೂಚನೆ ನೀಡಿದರು.

‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬೇಕು. ಕೆಲವೆಡೆ ಇನ್ನೂ ನಾಮ ಫಲಕದಲ್ಲಿ ಶೇ 60ರಷ್ಟು ಕನ್ನಡ ಬಳಕೆಯಾಗಿಲ್ಲ’ ಎಂದು ಸಚಿವರು ಹೇಳಿದರು.

‘ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಭಾಷೆ ಬಳಕೆ ಕುರಿತು ಸ್ಥಳೀಯ ಅಧಿಕಾರಿಗಳು, ಪೊಲೀಸರು ಇರುವ ಕಾರ್ಯಪಡೆ ರಚಿಸಬೇಕು. ಬಿಬಿಎಂಪಿ ವಲಯಗಳಲ್ಲಿ ವಾಹನಗಳ ಮೂಲಕ ಸಾರ್ವಜನಿಕರಲ್ಲಿಯೂ ಅರಿವು ಮೂಡಿಸಬೇಕು’ ಎಂದು ಸೂಚನೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ನಿರ್ದೇಶಕಿ ಕೆ.ಧರಣಿದೇವಿ ಮಾಲಗತ್ತಿ, ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಕಾನೂನು, ಕೈಗಾರಿಕೆ, ಕಾರ್ಮಿಕ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.



ಶಿವರಾಜ ತಂಗಡಗಿ ಅವರು ಅಧಿಕಾರಿಗಳ ಜತೆಗೆ ಸಭೆ ನಡೆಸಿದರು. ಪುರುಷೋತ್ತಮ ಬಿಳಿಮಲೆ ಮತ್ತು ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು

### ಮುಖ್ಯಾಂಶಗಳು

- ಕನ್ನಡ ನಾಮಫಲಕ ಕಾನೂನು ಅನುಷ್ಠಾನ ಅಪೂರ್ಣ
- ಅಧಿಕಾರಿಗಳು, ಪೊಲೀಸರಿರುವ ಕಾರ್ಯಪಡೆ ರಚಿಸಲು ಸೂಚನೆ
- ಸಾರ್ವಜನಿಕವಾಗಿಯೂ ಜಾಗೃತಿ ಮೂಡಿಸಲು ಸಲಹೆ









ಕುಷ್ಠ ರೋಗದ ಬಗ್ಗೆ ಜಾಗೃತಿ ಮೂಡಿಸಲು ವೈದ್ಯಕೀಯ ವಿದ್ಯಾರ್ಥಿಗಳು ಕಿರು ನಾಟಕ ಪ್ರದರ್ಶಿಸಿದರು

# ಕುಷ್ಠ ರೋಗದ ಬಗ್ಗೆ ಜಾಗೃತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕುಷ್ಠ ರೋಗ ನಿರ್ಮೂಲನಾ ದಿನದ ಅಂಗವಾಗಿ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಕುಷ್ಠ ರೋಗದ ಬಗ್ಗೆ ನಗರದಲ್ಲಿ ಗುರುವಾರ ಜಾಗೃತಿ ಮೂಡಿಸಿದರು.

ವೈದ್ಯಕೀಯ ವಿದ್ಯಾರ್ಥಿಗಳು ಕಿರು ನಾಟಕ ಪ್ರದರ್ಶಿಸಿ, ರೋಗದ ಬಗ್ಗೆ ಅರಿವು ಮೂಡಿಸಿದರು. ಇದೇ ವೇಳೆ ಜಾಗೃತಿ ಜಾಥಾ ನಡೆಯಿತು. ‘ಕುಷ್ಠ ರೋಗ ಕುರಿತ ತಪ್ಪುಕಲ್ಪನೆ ನಿವಾರಿಸೋಣ. ರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ’ ಎಂದು ಸಂದೇಶ ಸಾರಿದರು.

ಆಸ್ಪತ್ರೆಯ ಡೀನ್ ಡಾ. ಸಂಧ್ಯಾ ಆರ್., ವೈದ್ಯಕೀಯ ಅಧೀಕ್ಷಕ ಡಾ.ಯೋಗಾನಂದನ್ ಕೆ.ಎಸ್., ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ.ಗಿರೀಶ್ ಎಂ.ಎಸ್., ಡಾ ಬಿಂದುಶ್ರೀ, ಡಾ. ಚೇತನ್, ಡಾ. ವಿಜಯಲಕ್ಷ್ಮಿ, ಡಾ. ವಿದ್ಯಾಶ್ರೀ, ಡಾ. ಮನೋಜ್ ಹಾಗೂ ಸಮುದಾಯದ ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ. ಸುರೇಶ್ ಕುಂಬಾರ್ ಉಪಸ್ಥಿತರಿದ್ದರು.

# ಫೆ. 2ಕ್ಕೆ 108 ಅಗ್ನಿಹೋತ್ರ, ಸೂರ್ಯ ನಮಸ್ಕಾರ



ಬೆಂಗಳೂರು: ರಥಸಪ್ತಮಿ ಪ್ರಯುಕ್ತ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ಶ್ರೀ ಪತಂಜಲಿ ಯೋಗ ಶಿಕ್ಷಣ ವಿಶ್ವಸ್ಥ ಮಂಡಳಿಯು 108 ಅಗ್ನಿ ಹೋತ್ರ ಮತ್ತು 108 ಸೂರ್ಯ ನಮಸ್ಕಾರವನ್ನು ಫೆ.2ರಂದು ಬೆಳಿಗ್ಗೆ 5.30ರಿಂದ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದೆ.

ವೇದಿಕೆ ಕಾರ್ಯಕ್ರಮ ಬೆಳಿಗ್ಗೆ 7 ಗಂಟೆಯಿಂದ ನಡೆಯಲಿದ್ದು, ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಾಚಾರ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುತ್ತಾರೆ. ಪತಂಜಲಿ ಯೋಗ ಶಿಕ್ಷಣ ಸಮಿತಿಯ ಪ್ರಾಂತ ಸಂಸ್ಕಾರ ಪ್ರಮುಖ ರಾಮಶೇಷಯ್ಯ ಅಧ್ಯಕ್ಷತೆ ವಹಿಸುವರು. ರಾಮನಗರ ಡಿವೈಎಸ್‌ಪಿ ರಮೇಶ್ ಕೆ. ಪ್ರಾಸ್ತಾವಿಕ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

# ಶ್ರೀಕಾಳಿದಾಸ ಸಹಕಾರ ಬ್ಯಾಂಕ್‌ಗೆ ನಿರ್ದೇಶಕರ ಅವಿರೋಧ ಆಯ್ಕೆ

ಬೆಂಗಳೂರು: ನಗರದ ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಯ ಮುಂದಿನ ಐದು ವರ್ಷ ಅವಧಿಗೆ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ಸಿ.ಕೃಷ್ಣಪ್ಪ, ಸಿ.ಎನ್. ಗೋವಿಂದಪ್ಪ, ಬಿ.ಡಿ.ರಾಜು, ಎಂ.ಸಿ. ಮುದ್ದಯ್ಯ, ಆರ್. ರಾಮಕೃಷ್ಣಪ್ಪ ಗುಂಜೂರಪಾಳ್ಯ, ಎಂ.ಗಂಗಾಧರ್, ಆರ್.ಲಿಂಗಣ್ಣ, ವೈ.ಸರೋಜಮ್ಮ, ಎಂ.ಹೆಚ್.ಪ್ರೇಮಲತಾ, ಎಂ.ಕೆ. ಗುರುಮೂರ್ತಿ, ಎಸ್.ಚಂದ್ರಣ್ಣ, ಡಾ.ಎ.ಪದ್ಮ ಪ್ರಕಾಶ್, ಬಿ.ಎಲ್. ಸುರೇಶ್ ಆಯ್ಕೆಯಾದರು ಎಂದು ಚುನಾವಣಾ ಅಧಿಕಾರಿ ಹರೀಶ್ ಕುಮಾರ್.ಬಿ.ವಿ. ತಿಳಿಸಿದರು.





# ಲಗ್ಗೆರೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಲಗ್ಗೆರೆಯ ವೇದಾಂತ ಸ್ಕೂಲ್‌ನ ಆವರಣದಲ್ಲಿ ಗುರುವಾರ ಅರ್ಪಿತಾ ಸೇವಾ ಟ್ರಸ್ಟ್‌ನಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತ ರಾಯಪ್ಪ ಉದ್ಘಾಟಿಸಿದರು. ಶಿಬಿರದಲ್ಲಿ ಮಾತನಾಡಿದ ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ, ‘ಬಡವರು, ಆರ್ಥಿಕವಾಗಿ ಹಿಂದುಳಿದವರಿಗೆ ಇಂಥ ಶಿಬಿರಗಳು ಸಹಕಾರಿ. ಅರ್ಪಿತಾ ಸೇವಾ ಟ್ರಸ್ಟ್‌ನ ಈ ಸೇವೆ ಶ್ಲಾಘನೀಯ’ ಎಂದು ಹೇಳಿದರು.


ಸಪ್ತಗಿರಿ ಆಸ್ಪತ್ರೆ, ಪೂರ್ಣ ಸುಧಾ ಕ್ಯಾನ್ಸರ್ ಫೌಂಡೇಷನ್, ಕೆಂಪೇಗೌಡ ಆಸ್ಪತ್ರೆ ಮತ್ತು ಡಾ.ಚಂದ್ರಶೇಖರ್ ಆಸ್ಪತ್ರೆಗಳ ತಜ್ಞ ವೈದ್ಯರು ತಪಾಸಣೆ ನಡೆಸಿದ್ದು, ಅಗತ್ಯವಿದ್ದವರಿಗೆ ಚಿಕಿತ್ಸೆ ನೀಡಿದರು.

ಸ್ತ್ರೀ ಆರೋಗ್ಯ, ಪ್ರಸೂತಿ, ಮೂಳೆ-ಕೀಲು, ಮಹಿಳೆಯರಿಗೆ ಕ್ಯಾನ್ಸರ್ ಸ್ಕ್ಯಾನಿಂಗ್, ಕಿವಿ, ಮೂಗು, ಗಂಟಲು ತಪಾಸಣೆ, ಥೈರಾಯ್ಡ್, ಮೂಲವ್ಯಾಧಿ, ಹರ್ನಿಯಾ, ಪಿತ್ತಕೋಶದಲ್ಲಿ ಕಲ್ಲು ಸೇರಿದಂತೆ ವಿವಿಧ ಕಾಯಿಲೆಗಳ ತಪಾಸಣೆ ನಡೆಯಿತು.

ಶಿಬಿರದ ರೂವಾರಿ ನಾರಾಯಣ ಸ್ವಾಮಿ, ಪಾಲಿಕೆ ವಿರೋಧ ಪಕ್ಷದ ಮಾಜಿ ನಾಯಕ ಬಿ.ಆರ್.ನಂಜುಂಡಪ್ಪ ಮಾತನಾಡಿದರು. ಕಾರ್ಯಕ್ರಮದ ರೂವಾರಿ ಲಗ್ಗೆರೆ ನಾರಾಯಣಸ್ವಾಮಿ ಹಾಜರಿದ್ದರು.

### ನಿಧನ ವಾರ್ತೆ

## ಹನುಮಂತರಾಜು



ಬೆಂಗಳೂರು: ಎಪಿಸಿ ಲೇಔಟ್ ನಿವಾಸಿ, ಪತ್ರಿಕಾ ವಿತರಕ ಹನುಮಂತರಾಜು (59) ಅವರು ಹೃದಯಾಘಾತದಿಂದ ಗುರುವಾರ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಸಂಜೆ ಹೆಬ್ಬಾಳದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಹನುಮಂತ ರಾಜು ಅವರು ಹಲವು ವರ್ಷಗಳಿಂದ ಕೊಡಿಗೇಹಳ್ಳಿ ಡ್ರಾಪ್ ಪಾಯಿಂಟ್‌ನಲ್ಲಿ ಪತ್ರಿಕೆಗಳನ್ನು ಮಾರಾಟ ಮಾಡುತ್ತಿದ್ದರು.

## ಅಗ್ನಿ ಅವಘಡ ಬ್ಯಾಟರಿ ಸ್ಫೋಟ ಶಂಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಸಿಲಿನ ತಾಪದಿಂದ ವಾಹನವೊಂದರ ಬ್ಯಾಟರಿ ಸ್ಫೋಟಿಸಿ ಉಂಟಾದ ಕಿಡಿಯಿಂದ ಜಕ್ಕರಾಯನಕೆರೆ ಮೈದಾನದಲ್ಲಿ ಅಗ್ನಿಅವಗಢ ಸಂಭವಿಸಿದೆ ಎಂಬುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ.

ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ್ದ ವಾಹನಗಳನ್ನು ಶ್ರೀರಾಮ ಪುರದ ಜಕ್ಕರಾಯನ ಕೆರೆ ಮೈದಾನದಲ್ಲಿ ನಿಲ್ಲಿಸಲಾಗಿತ್ತು. ಬುಧವಾರ ಅಗ್ನಿ ದುರಂತದಲ್ಲಿ 148 ವಾಹನ ಭಸ್ಮವಾಗಿದ್ದವು. ಶ್ರೀರಾಮಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘಟನಾ ಸ್ಥಳದಿಂದ ಕೆಲವು ವಸ್ತುಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದ್ದು, ವರದಿ ಬಂದ ನಂತರ ಘಟನೆಗೆ ನಿಖರ ಕಾರಣ ಗೊತ್ತಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೈದಾನದ ಮಧ್ಯಭಾಗದಿಂದ ಬೆಂಕಿ ಹೊತ್ತಿಕೊಂಡ ಪರಿಣಾಮ ಕ್ಷಣಾರ್ಧದಲ್ಲಿ ಅಕ್ಕಪಕ್ಕದ ವಾಹನಗಳಿಗೂ ತಾಗಿದೆ. ವಾಹನಗಳಲ್ಲಿದ್ದ ಪೆಟ್ರೋಲ್‌ನಿಂದಾಗಿಯೂ ಬೆಂಕಿ ಜ್ವಾಲೆ ಆವರಿಸಿ ಭಾಗಿ ಅಗ್ನಿ ದುರಂತ ಸಂಭವಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

### ಸೌಹಾರ್ದ ಸಂಕಲ್ಪ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದ

# ‘ದ್ವೇಷ ಉತ್ಪಾದನೆಯ ಕಾಲ ಇದು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಧರ್ಮಗಳ ನಡುವೆ ದ್ವೇಷ ಹರಡಿ ದೇಶ ನಾಶ ಮಾಡಲಾಗುತ್ತಿದೆ. ಇದು ದ್ವೇಷೋತ್ಪಾದನೆಯ ಕಾಲ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ಗಾಂಧೀಜಿ ಹುತಾತ್ಮರಾದ ದಿನದ ನಿಮಿತ್ತ ಸೌಹಾರ್ದ ಕರ್ನಾಟಕ ಗುರುವಾರ ಏರ್ಪಡಿಸಿದ್ದ ‘ಸೌಹಾರ್ದ ಸಂಕಲ್ಪ–ಪ್ರತಿಜ್ಞೆ ಸ್ವೀಕಾರ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನಮ್ಮ ನೇತಾರರು ಪ್ರಜಾಸತ್ತಾತ್ಮಕ ಭಾಷೆಯನ್ನೇ ಮರೆತುಬಿಟ್ಟಿದ್ದಾರೆ. ಭಾಷೆಯ ಹಿಂಸೆ, ಮಾನಸಿಕ ಹಿಂಸೆ, ದೈಹಿಕ ಹಿಂಸೆ ನಿರಂತರವಾಗಿದೆ. ನಮ್ಮ ಸಾಮಾಜಿಕ ಸಂರಚನೆಯಲ್ಲಿಯೇ ಹಿಂಸೆ, ಅಸಹಿಷ್ಣುತೆ ಇದೆ’ ಎಂದು ಪ್ರತಿಪಾದಿಸಿದರು.

‘ಸಹಿಷ್ಣುತೆ, ಸೌಹಾರ್ದ, ಸಂವಾದದ ಪ್ರತೀಕವಾಗಿದ್ದ ಗಾಂಧೀಜಿಯವರು ಹಿಂದೂ ಧರ್ಮದ ಒಳವಿಮರ್ಶಕರಾಗಿದ್ದರು. ಅದೇ ಧರ್ಮದ ಗೋಡ್ಸೆ ಗಾಂಧೀಜಿ ಅವರನ್ನು ಕೊಂದದ್ದನ್ನು ವೈಕ್ತಿಗತವಾಗಿ ನೋಡಲಾಗದು. ಆ ಮನೋಧರ್ಮವೇ ಕೊಲೆ ಮಾಡಿರುವುದು’ ಎಂದರು.

**ಮುಖ್ಯಾಂಶಗಳು**

- ಪ್ರಜಾಸತ್ತಾತ್ಮಕ ಭಾಷೆಯನ್ನು ಮರೆತಿರುವ ನೇತಾರರು
- ಗಾಂಧೀಜಿ ಹಿಂದೂ ಧರ್ಮದ ಒಳವಿಮರ್ಶಕರಾಗಿದ್ದರು
- ಏಕಕಾಲಕ್ಕೆ ಗಾಂಧೀಜಿ, ಗೋಡ್ಸೆ ಆರಾಧಿಸುವ ವಿಚಿತ್ರ ನಾಯಕರು

‘ವಿಶ್ವದ ಹೃದಯ ಗಾಯಗೊಂಡಿದೆ. ಸೌಹಾರ್ದ ಮತ್ತು ಸಮಾನತೆಯಿಂದ ಈ ಗಾಯವನ್ನು ಮಾಯಿಸುವ ಕೆಲಸ ಮಾಡಬೇಕು. ಅದಕ್ಕಾಗಿ ಬೇರೆ ಬೇರೆ ಪ್ರಗತಿಪರ ವಿಚಾರಧಾರೆಯ ಸಂಘಟನೆಗಳು ಒಂದಾಗಬೇಕು’ ಎಂದು ಅಭಿಪ್ರಾಯಪಟ್ಟರು.

ಬರಹಗಾರ ಕೆ.ಮರುಳಸಿದ್ಧಪ್ಪ ಮಾತನಾಡಿ, ‘ಗಾಂಧೀಜಿ ರಾಮಭಕ್ತರಾಗಿದ್ದರು. ರಾಮ ಮತ್ತು ರಹೀಮ ಒಂದೇ ದೇವರ ಎರಡು ಹೆಸರು ಎಂದು ನಂಬಿದ್ದರು. ಗೋಡ್ಸೆ ಕಳ್ಳಭಕ್ತ. ಗೋಡ್ಸೆಯ ಗುರು ಸಾವರ್ಕರ್ ನಾಸ್ತಿಕ. ಗಾಂಧೀಜಿ ದೇಶಭಕ್ತರಾಗಿದ್ದರೆ, ಗೋಡ್ಸೆ ದ್ವೇಷಭಕ್ತ’ ಎಂದು ಹೇಳಿದರು.



ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ನಡೆದ ‘ಸೌಹಾರ್ದ ಸಂಕಲ್ಪ’ ದಿನ ಕಾರ್ಯಕ್ರಮದಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು ಪ್ರಜಾವಾಣಿ ಚಿತ್ರ

ಹೋರಾಟಗಾರ ಮಾವಳ್ಳಿ ಶಂಕರ್ ಅವರು, ‘ಗಾಂಧೀಜಿ ಬಗ್ಗೆ ಅಂಬೇಡ್ಕರ್‌ಗೆ ಭಿನ್ನಾಭಿಪ್ರಾಯ ಇದ್ದವು. ಗಾಂಧೀಜಿ ಬದುಕಿದ್ದಾಗಲೇ ಅದನ್ನು ದಾಖಲಿಸಿದ್ದರು. ಆದರೆ, ಅಂಬೇಡ್ಕರ್ ದ್ವೇಷದ ಪರ ಇದ್ದವರಲ್ಲ. ಇಂದು ಗಾಂಧೀಜಿ ಮತ್ತು ಗೋಡ್ಸೆಯನ್ನು ಏಕಕಾಲಕ್ಕೆ ಆರಾಧಿಸುವ ವಿಚಿತ್ರ ನಾಯಕರು ಭಾರತದಲ್ಲಿರುವುದು ವಿಪರ್ಯಾಸ’ ಎಂದು ಹೇಳಿದರು.

ಹೋರಾಟಗಾರರಾದ ಜಿ.ರಾಮಕೃಷ್ಣ, ಬಿ.ಟಿ.ಲಲಿತಾ ನಾಯಕ್, ಮಲ್ಲಿಗೆ ಸಿರಿಮನೆ, ಮೀನಾಕ್ಷಿ ಬಾಳಿ ಮಾತನಾಡಿದರು. ಎಸ್. ವೈ. ಗುರುಶಾಂತ್, ಬಿ. ರಾಜಶೇಖರ ಮೂರ್ತಿ, ಎಂ. ಪ್ರಕಾಶ್‌ಮೂರ್ತಿ ಭಾಗವಹಿಸಿದ್ದರು.

## ‘ಗಾಂಧೀಜಿ ಬರಹ, ಬದುಕು ಕುರಿತು ಅಧ್ಯಯನ ಮಾಡಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಮಹಾತ್ಮ ಗಾಂಧೀಜಿಯವರ ಬದುಕು ಮತ್ತು ಬರಹಗಳ ಕುರಿತು ಇನ್ನಷ್ಟು ವಿಸ್ತೃತವಾಗಿ ಅಧ್ಯಯನ ನಡೆಸಬೇಕು’ ಎಂದು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ನೂತನ ಶೈಕ್ಷಣಿಕ ವಿಭಾಗದಲ್ಲಿ ಸ್ಥಾಪಿಸಿರುವ ‘ಮಹಾತ್ಮ ಗಾಂಧಿ ಅಧ್ಯಯನ’ ಕೇಂದ್ರವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಗಾಂಧೀಜಿಯವರ ತತ್ವಾದರ್ಶಗಳು ಮತ್ತು ಮೌಲ್ಯಗಳನ್ನು ಪುನರ್ ಸ್ಥಾಪಿಸಲು ಯುವ ಸಮೂಹ ಮುಂದಾಗಬೇಕು’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿ, ‘ಅಸಹನೆ, ದ್ವೇಷ, ಸಾಮರಸ್ಯದ ಕೊರತೆ ಕಾಡುತ್ತಿರುವ ಈ ಸಂದರ್ಭದಲ್ಲಿ ಗಾಂಧೀಜಿಯವರ ಜೀವನಾದರ್ಶಗಳು ಅತ್ಯಂತ ಮಹತ್ವದ್ದಾಗಿವೆ’ ಎಂದು ಪ್ರತಿಪಾದಿಸಿದರು.

ಗೂಗಲ್ ಯುಗದಲ್ಲೂ ಪ್ರಪಂಚದಾದ್ಯಂತ ಗಾಂಧೀಜಿಯವರ ಸಿದ್ಧಾಂತ-ಮೌಲ್ಯಗಳ ಬಗ್ಗೆ ಅಪಾರ ಆಸಕ್ತಿ ವ್ಯಕ್ತವಾಗುತ್ತಿದೆ. ವಿದ್ಯಾರ್ಥಿಗಳು ಈ ಅಧ್ಯಯನ ಕೇಂದ್ರದ ಸಂಪೂರ್ಣ ಪ್ರಯೋಜನ ಪಡೆಯಬೇಕು ಎಂದು ಸಲಹೆ ನೀಡಿದರು.

ಸರ್ವೋದಯ ಟ್ರಸ್ಟ್‌ನ ಮುಖ್ಯಸ್ಥ ಜೀವನ ಕುಮಾರ್ ಅವರು ಅಧ್ಯಯನ ಕೇಂದ್ರಕ್ಕೆ ಪುಸ್ತಕಗಳ ಕಾಣಿಕೆ ನೀಡಿ ಶುಭ ಹಾರೈಸಿದರು. ಗಾಂಧಿ ಭವನದ ಗ್ರಂಥಾಲಯದ ಪುಸ್ತಕಗಳ ಡಿಜಿಟಲ್ ಸಂಗ್ರಹವನ್ನು ಓಂಶಿವಪ್ರಕಾಶರ್ ಅವರು ಅಧ್ಯಯನ ಕೇಂದ್ರಕ್ಕೆ ಹಸ್ತಾಂತರಿಸಿದರು.

ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ವೆಂಕಟೇಶ್ ಮಾತನಾಡಿದರು. ಬಿಸಿಯು ಕುಲಸಚಿವ ಟಿ.ಜವರೇಗೌಡ, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ ಉಪಸ್ಥಿತರಿದ್ದರು.




ಬೆಂಗಳೂರು ನಗರ ವಿಶ್ವವಿದ್ಯಾಲಯದ ನೂತನ ಶೈಕ್ಷಣಿಕ ವಿಭಾಗದಲ್ಲಿ ಸ್ಥಾಪಿಸಿರುವ ‘ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರ’ವನ್ನು ವೂಡೇ ಪಿ.ಕೃಷ್ಣ ಉದ್ಘಾಟಿಸಿದರು(ಬಲದಿಂದ ಮೊದಲನೆಯವರು)

# ಅರಮನೆ ಮೈದಾನ ಸುಪರ್ದಿಗೆ ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅರಮನೆ ಮೈದಾನ ಪ್ರದೇಶದ ಬಳಕೆ ಮತ್ತು ನಿಯಂತ್ರಣದ ಅಧಿಕಾರವನ್ನು ರಾಜ್ಯ ಸರ್ಕಾರದ ಬಳಿಯೇ ಇಟ್ಟುಕೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಬುಧವಾರ ಸುಗ್ರೀವಾಜ್ಞೆ ಹೊರಡಿಸಿದೆ.

ಬೆಂಗಳೂರು ಅರಮನೆ (ಸ್ವಾಧೀನ ಮತ್ತು ವರ್ಗಾವಣೆ) ಸುಗ್ರೀವಾಜ್ಞೆ–2025ಕ್ಕೆ ಸಂಬಂಧಿಸಿದಂತೆ ಬುಧವಾರ ಗೆಜೆಟ್ ಅಧಿಸೂಚನೆ ಹೊರಡಿಸಿದ್ದು, ಸುಗ್ರೀವಾಜ್ಞೆ ಇದೇ 27ರ ಸೋಮವಾರದಿಂದ ಅನ್ವಯವಾಗಲಿದೆ.

ರಸ್ತೆ ವಿಸ್ತರಣೆಯ ಉದ್ದೇಶಕ್ಕಾಗಿ ಬಳಕೆಯಾಗುವ ಅರಮನೆ ಮೈದಾನದ 15 ಎಕರೆ 36 ಗುಂಟೆ ಭೂಮಿಗೆ ಪರಿಹಾರವಾಗಿ ಟಿಡಿಆರ್ (ಅಭಿವೃದ್ಧಿ ಹಕ್ಕು ವರ್ಗಾವಣೆ) ₹3,014 ಕೋಟಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸರ್ಕಾರ ಸುಗ್ರೀವಾಜ್ಞೆ ಜಾರಿಗೆ ತಂದಿದೆ.

ಈ ಪ್ರಕಾರ, ಅಗತ್ಯವಿರುವಷ್ಟು ಜಾಗವನ್ನು ಬಳಸಿಕೊಳ್ಳಲು ಮತ್ತು ಉದ್ದೇಶಿತ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರಕ್ಕೆ ಅಧಿಕಾರ ದೊರೆಯುತ್ತದೆ. ಯಾವುದೇ ನ್ಯಾಯಾಲಯದ ತೀರ್ಪು ಅಥವಾ ಸರ್ಕಾರವು ಈ ಹಿಂದೆ ಕೈಗೊಂಡ ತೀರ್ಮಾನದಂತೆ ಯಾವುದೇ ಮೂಲಸೌಕರ್ಯ ಯೋಜನೆಯಿಂದ ಭಾಗಶಃ ಅಥವಾ ಸಂಪೂರ್ಣವಾಗಿ ಹಿಂದೆ ಸರಿಯಬಹುದಾಗಿದೆ.

ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಉದ್ದೇಶದಿಂದ ಗುರುತಿಸಲಾದ ಅಥವಾ ಸ್ವಾಧೀನ ಪಡಿಸಿಕೊಂಡಿದ್ದರೂ, ಬಳಕೆ ಮಾಡಿಕೊಳ್ಳದ ಭೂಮಿಯನ್ನು ಕೈಬಿಡಬಹುದು. ಒಂದೊಮ್ಮೆ ಅರಮನೆ ಮೈದಾನದ ಜಮೀನನ್ನು ಬಳಕೆ ಮಾಡಿಕೊಂಡಿದ್ದಲ್ಲಿ, ಸರ್ಕಾರವು ವಾರಸುದಾರರಿಗೆ ಪರಿಹಾರ ನೀಡಬೇಕಾಗುತ್ತದೆ. ಆದರೆ ಪರಿಹಾರದ ಮೊತ್ತವು 1996ರಲ್ಲಿ ನಿಗದಿ ಮಾಡಲಾದ ಮಾರ್ಗಸೂಚಿ ಮೌಲ್ಯವನ್ನು ಆಧರಿಸಿರುತ್ತದೆ ಎಂದು ಸುಗ್ರೀವಾಜ್ಞೆ ವಿವರಿಸಿದೆ. ಈ ಮೂಲಕ, ಅರಮನೆ ಮೈದಾನದ 15 ಎಕರೆ 36 ಗುಂಟೆ ಭೂಮಿಗೆ ₹3,014 ಕೋಟಿ ಪರಿಹಾರ ನೀಡಬೇಕಾದ ಹೊರೆಯನ್ನು ಸರ್ಕಾರ ಇಳಿಸಿಕೊಂಡಿದೆ.

**1996ರ ಕಾಯ್ದೆಯಂತೆ ಪರಿಹಾರ**

- ಬೆಂಗಳೂರು ಅರಮನೆ ಮೈದಾನ (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ–1996ರಲ್ಲಿ ಗೊತ್ತುಪಡಿಸಿದ ದಿನಾಂಕದಲ್ಲಿ ನಿರ್ಧರಿಸಲಾದ ಪರಿಹಾರ ಕೊಡಬಹುದಾಗಿದೆ. ಬೇರೆ ಯಾವುದೇ ಕಾನೂನುಗಳು, ನ್ಯಾಯಾಲಯದ ತೀರ್ಪು ಅನ್ವಯವಾಗುವುದಿಲ್ಲ
- 1996ರ ನವೆಂಬರ್ 21ರಂದು ಅಂದಿನ ಮಾರ್ಗಸೂಚಿ ಮೌಲ್ಯವನ್ನು ಆಧರಿಸಿ ಪರಿಹಾರ ಮೊತ್ತ ನಿಗದಿ ಮಾಡಲಾಗಿತ್ತು. ಸುಗ್ರೀವಾಜ್ಞೆ ಪ್ರಕಾರ ಈಗಲೂ ಅದೇ ಮೊತ್ತದ ಪರಿಹಾರ ಅನ್ವಯವಾಗಲಿದೆ
- ಪರಿಹಾರದ ಮೊತ್ತದ ಬಗ್ಗೆ ವಾರಸುದಾರರು ತಕರಾರು ದಾಖಲಿಸಿದರೆ, ರಾಜ್ಯ ಸರ್ಕಾರವು ಪರಿಹಾರದ ಮೊತ್ತವನ್ನು ಸಂಬಂಧಿತ ಆಯುಕ್ತರ ಬಳಿ ಠೇವಣಿ ಇರಿಸಬೇಕು
- ಈ ಸುಗ್ರೀವಾಜ್ಞೆ ಅಡಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯ ಕೈಗೊಂಡ ಸರ್ಕಾರದ ಯಾವುದೇ ಅಧಿಕಾರಿ ಮತ್ತು ಸರ್ಕಾರಿ ಸಂಸ್ಥೆ (ಬಿಬಿಎಂಪಿ, ಬಿಡಿಎ) ವಿರುದ್ಧ ಯಾವುದೇ ರೀತಿಯ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸುವಂತಿಲ್ಲ. ಶಿಕ್ಷೆಗೆ ಗುರಿ ಪಡಿಸುವಂತಿಲ್ಲ

## ಕ್ಯಾಬ್‌ನಲ್ಲಿ ಯುವತಿಗೆ ಕಿರುಕುಳ: ಇಬ್ಬರ ವಿರುದ್ಧ ಎಫ್‌ಐಆರ್

**ಬೆಂಗಳೂರು:** ಕ್ಯಾಬ್ ನಲ್ಲಿ ಯುವತಿಗೆ ಕಿರುಕುಳ ನೀಡಿದ್ದ ಆರೋಪದಡಿ ಇಬ್ಬರು ಆರೋಪಿಗಳ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯುವತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ.

‘ಜ.27ರ ಮುಂಜಾನೆ ಬುಕ್ ಮಾಡಿದ್ದ ಕ್ಯಾಬ್ ಹತ್ತಿದ್ದೆ. ಅದೇ ವೇಳೆ ಇಬ್ಬರು ಅಪರಿಚಿತರು ಕಾರು ಹತ್ತಿದ್ದಾರೆ. ಗಾಬರಿಗೊಂಡು ಇಳಿದು ಓಡಿಹೋಗಲು ಪ್ರಯತ್ನಿಸಿದಾಗ, ಒಬ್ಬ ಕುತ್ತಿಗೆ ಹಿಡಿದು ನೆಲಕ್ಕೆ ಬೀಳಿಸಿದ. ಮತ್ತೊಬ್ಬ ಬಟ್ಟೆಗೆ ಕೈ ಹಾಕಿದ್ದ. ಆತಂಕಗೊಂಡು ರಕ್ಷಣೆಗಾಗಿ ಜೋರಾಗಿ ಕೂಗಿಕೊಂಡಾಗ, ಸಾರ್ವಜನಿಕರು ನೆರವಿಗೆ ಬಂದರು. ಅಷ್ಟರಲ್ಲಿ ಆರೋಪಿಗಳು ಪರಾರಿಯಾದರು’ ಎಂದು ದೂರಿನಲ್ಲಿ ಸಂತ್ರಸ್ತೆ ಆರೋಪಿಸಿದ್ದಾರೆ. ಆರೋಪಿಗಳ ಪತ್ತೆಗೆ ಘಟನೆ ನಡೆದ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

**ಬೆಂಗಳೂರು ರೇಸ್**

## ಫ್ಲೆಮಿಂಗ್ ಸ್ವೋರ್ಡ್ ಗೆಲ್ಲುವ ನಿರೀಕ್ಷೆ

ನರಸಿಂಹರಾಜ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫ್ಲೆಮಿಂಗ್ ಸ್ವೋರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸದರ್ನ್‌ಅರಿಸ್ಟೊಕ್ರಾಟ್ 1, ಸೂಪರ್‌ಹೀರೊ 7, ಜಾಯ್‌ಫುಲ್ ಸ್ಪಿರಿಟ್ 2
2ನೇ ರೇಸ್: ವ್ಯಾಲೆನ್ಸಿಯಾ 9, ಥುಟ್‌ಮಸ್ 1, ಯಾನ್ನಿಕ್ 2
3ನೇ ರೇಸ್: ಆಲ್ ಅಟ್ರ್ಯಾಕ್ಶನ್ 1, ದೆವಿಸ್ಟರ್‌ಕ್ವೈಯ್‌ಟ್ಲಿ 4, ಮೈ ವಿಷನ್ 3
4ನೇ ರೇಸ್: ನಾಟಿ ಬ್ಲಶ್ 5, ಡೆಲ್ ಅವಿಜ್ 3, ಟ್ರೂ ಪಂಚ್ 7
5ನೇ ರೇಸ್: ಫ್ಲೆಮಿಂಗ್ ಸ್ವೋರ್ಡ್ 2, ಎಲ್ ರೇ 1, ಜಿವಾ 10
6ನೇ ರೇಸ್: ಸೆಕ್‌ಮೆಟ್ 6, ಓನ್ ಲೆಗಸಿ 8, ಸಸ್ಸಿ 4
7ನೇ ರೇಸ್: ಸೂಪರ್‌ಚಾರ್ಜ್ 10, ಮಾರ್ಟಿನೊ 3, ರಾಯಲ್ ಡೆಕ್ಕನ್ 5

**ಉತ್ತಮ ಬೆಟ್: ವ್ಯಾಲೆನ್ಸಿಯಾ**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

## ಮದ್ಯದ ಅಮಲಲ್ಲಿ ಕಟ್ಟಡದಿಂದ ಬಿದ್ದು ಯುವಕ ಸಾವು

**ಬೆಂಗಳೂರು:** ಮಹದೇವಪುರ ಠಾಣಾ ವ್ಯಾಪ್ತಿಯ ದೊಡ್ಡನೆಕ್ಕುಂದಿ ಮುಖ್ಯ ರಸ್ತೆಯಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಪಾರ್ಟಿ ನಡೆಸುತ್ತಿದ್ದ ವೇಳೆ ಬುಧವಾರ ರಾತ್ರಿ 7.30ರ ವೇಳೆಗೆ ಯುವಕ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದಾರೆ. ಪ್ರಕಾಶ್ (19) ಮೃತಪಟ್ಟವರು.



ಪ್ರಕಾಶ್

ಮೂಲತಃ ರಾಯಚೂರಿನ ನಿವಾಸಿ ಪ್ರಕಾಶ್ ಅವರು ಸ್ವಿಗ್ಗಿ ಡೆಲಿವರಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಇವರ ತಂದೆ ಲಕ್ಷ್ಮಪ್ಪ ಅವರು ಚಾಲಕರಾಗಿದ್ದು, ತಾಯಿ ಮನೆಕೆಲಸ ಮಾಡುತ್ತಾರೆ. ಸ್ನೇಹಿತರ ಜೊತೆಗೂಡಿ ಪಾರ್ಟಿ ಮಾಡುವಾಗ ಮದ್ಯದ ನಶೆಯಲ್ಲಿ ಆಯತಪ್ಪಿ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರ’ ಎಂದು ಮೂಲಗಳು ತಿಳಿಸಿವೆ. ಮೃತನ ತಂದೆ ನೀಡಿದ ದೂರು ಆಧರಿಸಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

### ಕಂಪನಿಯ ಹಣ ಬೆಟ್ಟಿಂಗ್ ಆ್ಯಪ್‌ನಲ್ಲಿ ಹೂಡಿಕೆ ಮಾಡಿದ್ದ ಆರೋಪ

# ₹7 ಕೋಟಿ ಹಣ ದುರ್ಬಳಕೆ: ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆನ್‌ಲೈನ್ ಬೆಟ್ಟಿಂಗ್‌ಗಾಗಿ ಕಂಪನಿಗೆ ಸೇರಿದ್ದ ₹7 ಕೋಟಿ ಹಣ ದುರ್ಬಳಕೆ ಮಾಡಿಕೊಂಡ ಆರೋಪದಡಿ ವ್ಯಕ್ತಿಯನ್ನು ಅಶೋಕ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲ್ಯಾಂಗ್ ಫೋರ್ಡ್ ರಸ್ತೆಯಲ್ಲಿರುವ ಅರ್ನಸ್ಟ್ ಆ್ಯಂಡ್ ಯಂಗ್ ಎಲ್‌ಎಲ್‌ಪಿ ಕಂಪನಿ ಉದ್ಯೋಗಿ, ಮಾವಳ್ಳಿ ನಿವಾಸಿ ಶ್ರೀಕಾಂತ್ (23) ಬಂಧಿತರು. ಕಂಪನಿಯ ಅಧಿಕಾರಿ ಶೌರಿ ರಾಜನ್ ಈ ಬಗ್ಗೆ ದೂರು ನೀಡಿದ್ದರು.

‘ಕಂಪನಿಯು ಕಾಡುಬೀಸನಹಳ್ಳಿ ಯಲ್ಲಿರುವ ಸ್ವಿಗ್ಗಿ ಫುಡ್ ಡೆಲಿವರಿ ಕಂಪನಿಗೂ ಲೆಕ್ಕಪತ್ರ ನಿರ್ವಹಣೆ ಸೇವೆ ಒದಗಿಸುತ್ತಿದೆ. ಸಹಾಯಕ ಲೆಕ್ಕಾಧಿಕಾರಿ ಆಗಿದ್ದ ಶ್ರೀಕಾಂತ್‌ಗೆ ಆಲ್ ಇಂಡಿಯಾ ಸ್ವಿಗ್ಗಿ ಕಂಪನಿಯ ವಿದ್ಯುತ್ ಬಿಲ್ ಪಾವತಿಸುವ ಜವಾಬ್ದಾರಿ ವಹಿಸಲಾಗಿತ್ತು. ಸ್ವಿಗ್ಗಿ ಕಂಪನಿಯು ಇದಕ್ಕಾಗಿ ಪ್ರತಿ ತಿಂಗಳು ಕಂಪನಿಗೆ ಹಣ ಪಾವತಿಸುತ್ತಿತ್ತು. ಶ್ರೀಕಾಂತ್ ಈ ಹಣವನ್ನು ಬೆಟ್ಟಿಂಗ್‌ಗೆ ಬಳಸಿ ಕಂಪನಿಗೆ ವಂಚಿಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

**ಅಪರಾಧ ಸುದ್ದಿ**

‘ಲೆಕ್ಕಪರಿಶೋಧನೆ ವೇಳೆ ಏಳು ಕೋಟಿ ರೂಪಾಯಿ ವಂಚನೆಯಾಗಿರುವ ಬಗ್ಗೆ ಫುಡ್ ಡೆಲಿವರಿ ಕಂಪನಿ ಪತ್ತೆ ಹಚ್ಚಿತ್ತು. ಇದರಂತೆ ಪರಿಶೀಲಿಸಿದಾಗ ಕಳೆದ ಜೂನ್‌ನಿಂದ ಡಿಸೆಂಬರ್‌ವರೆಗೂ ಸುಮಾರು ₹7 ಕೋಟಿ ಹಣವನ್ನು ಶ್ರೀಕಾಂತ್, ಬೆಟ್ಟಿಂಗ್ ಆ್ಯಪ್ ನಲ್ಲಿ ಹೂಡಿಕೆ ಮಾಡಿ ಕಳೆದುಕೊಂಡಿರುವ ಬಗ್ಗೆ ಮಾಹಿತಿ ಲಭ್ಯವಾಗಿದ್ದು, ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಟೆಕ್ಕಣ್ಣನವರ್, ‘ಆರೋಪಿ ಕಂಪನಿಗೆ ಸೇರಿದ್ದ ಸುಮಾರು ₹7 ಕೋಟಿ ಹಣವನ್ನು ಬೆಟ್ಟಿಂಗ್ ಆ್ಯಪ್‌ನಲ್ಲಿ ಹೂಡಿಕೆ ಮಾಡಿದ್ದ. ಲಾಭಾಂಶ ನೀಡುವುದಾಗಿ ಆಮಿಷವೊಡ್ಡಿ ಬೆಟ್ಟಿಂಗ್ ಕಂಪನಿಯೂ ವಂಚಿಸಿರುವ ಬಗ್ಗೆ ಪ್ರಾಥಮಿಕ ಮಾಹಿತಿ ಲಭ್ಯವಾಗಿದ್ದು, ಈ ಬಗ್ಗೆಯೂ ತನಿಖೆ ಮುಂದುವರೆದಿದೆ' ಎಂದು ತಿಳಿಸಿದ್ದಾರೆ.

**ಯುವ ಉದ್ಯಮಿ ಆತ್ಮಹತ್ಯೆ**



ಅರುಣ್

**ಬೆಂಗಳೂರು:** ಸಾಲ ನೀಡಿದ್ದವರ ಕಿರುಕುಳ ತಾಳಲಾರದೆ ಪ್ರಕಾಶ್‌ನಗರದ ನಿವಾಸಿ, ಉದ್ಯಮಿ ಅರುಣ್ (38) ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೃತರ ತಂದೆ ದೇವರಾಜ್ ದೂರು ನೀಡಿದ್ದು, ಸಾಲ ನೀಡಿದ್ದ ದಿನೇಶ್ ವಿರುದ್ಧ ರಾಜಾಜಿನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ವ್ಯವಹಾರದ ಸಲುವಾಗಿ ಅರುಣ್, ಪೂಜಾ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಫೈನಾನ್ಸ್ ನಡೆಸುತ್ತಿದ್ದ ದಿನೇಶ್ ಅವರಿಂದ ₹ 6 ಲಕ್ಷ ಸಾಲ ಪಡೆದುಕೊಂಡಿದ್ದ. ಖಾತರಿಯಾಗಿ ತನ್ನ ಕಾರು ಸಹ ಒಪ್ಪಿಸಿದ್ದ. ವಾಯಿದೆಯಂತೆ ₹6 ಲಕ್ಷ ಹಣ ಹೊಂದಿಸಲು ಸಾಧ್ಯವಾಗದೆ ₹1.50 ಲಕ್ಷ ಹಣವನ್ನು ಅರುಣ್ ನೀಡಲು ಮುಂದಾದಾಗ ಬೆದರಿಕೆ ಹಾಕಲಾಗಿದೆ’ ಎಂದು ದಿನೇಶ್ ವಿರುದ್ಧ ಮೃತನ ತಂದೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

‘ಅರುಣ್‌ನನ್ನು ಅಂಗಡಿಗೆ ಕರೆಯಿಸಿಕೊಂಡು ದಿನೇಶ್ ಹಲ್ಲೆ ಮಾಡಿದ್ದ. ಹಣ ವಾಪಸ್ ನೀಡಲು ಆಗದಿದ್ದರೆ ಸಾಯುವಂತೆ ಹೀಯಾಳಿಸಿದ್ದ. ಪತ್ನಿ, ಮಕ್ಕಳನ್ನು ಸಹೋದರನ ಮನೆಯಲ್ಲಿರಿಸಿ ಜನವರಿ 23ರ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾನೆ. ದಿನೇಶ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಮನವಿ ಮಾಡಲಾಗಿದೆ.

## ಅಕ್ರಮ ಖಾತೆ 12 ಮಂದಿಗೆ ಶಿಕ್ಷೆ

**ಕೆಜಿಎಫ್:** ಅಕ್ರಮವಾಗಿ ಸರ್ಕಾರಿ ಜಮೀನು ಖಾತೆ ಮಾಡಿದ್ದ ಘಟ್ಟ ಕಾಮಧೇನಹಳ್ಳಿಯ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ, ಉಪಾಧ್ಯಕ್ಷ, ಪಿಡಿಒ ಸೇರಿದಂತೆ ಒಟ್ಟು 12 ಮಂದಿಗೆ ಇಲ್ಲಿನ ನ್ಯಾಯಾಲಯ ಒಂದು ವರ್ಷ ಶಿಕ್ಷೆ ಮತ್ತು ದಂಡ ವಿಧಿಸಿದೆ.

ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಎಂ. ಮಂಜು ಅವರು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ.



# ವಿದ್ಯಾರ್ಥಿನಿ ಕೊಂದ ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಿಸ್ತೂಲ್‌ನಿಂದ ಗುಂಡು ಹಾರಿಸಿ ವಿದ್ಯಾರ್ಥಿನಿ ಕೊಲೆ ಮಾಡಿ, ಮತ್ತೊಬ್ಬ ವಿದ್ಯಾರ್ಥಿನಿಯನ್ನು ಗಾಯಗೊಳಿಸಿದ್ದ ಅಪರಾಧಿಗೆ ಇಲ್ಲಿನ ಪ್ರಧಾನ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಮಹೇಶ್ ಶಿಕ್ಷೆಗೆ ಒಳಗಾದ ಅಪರಾಧಿ. ನ್ಯಾಯಾಧೀಶೆ ಕೆ.ಬಿ.ಗೀತಾ ಅವರು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಕಾಡುಗೋಡಿ ಠಾಣಾ ವ್ಯಾಪ್ತಿಯಲ್ಲಿ 2015ರ ಮಾರ್ಚ್ 31ರಂದು ಘಟನೆ ನಡೆದಿದ್ದು, ಪೊಲೀಸರು ಮಹೇಶ್‌ನನ್ನು ಬಂಧಿಸಿದ್ದರು.

ಅಪರಾಧಿಗೆ ₹3.50 ಲಕ್ಷ ದಂಡ ವಿಧಿಸಿದ್ದಾರೆ. ಇದರಲ್ಲಿ, ಹತ್ಯೆಯಾದ ವಿದ್ಯಾರ್ಥಿನಿ ಗೌತಮಿ ಕುಟುಂಬಕ್ಕೆ ₹2 ಲಕ್ಷ ಹಾಗೂ ಗಾಯಗೊಂಡಿದ್ದ ವಿದ್ಯಾರ್ಥಿನಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ₹2 ಲಕ್ಷ ಪರಿಹಾರ ನೀಡುವಂತೆಯೂ ನ್ಯಾಯಾಲಯವು ಆದೇಶಿಸಿದೆ.

ಠಾಣಾ ವ್ಯಾಪ್ತಿಯ ಪ್ರಗತಿ ಕಾಲೇಜಿನಲ್ಲಿ ಗೌತಮಿ ದ್ವಿತೀಯ ಪಿಯುಸಿ ಹಾಗೂ ಶಿರಿಷಾ ಪ್ರಥಮ ಪಿಯು ಓದುತ್ತಿದ್ದರು. ಅದೇ ಕಾಲೇಜಿನಲ್ಲಿ ಮಹೇಶ್ ಅಟೆಂಡರ್ ಆಗಿ, ವಿದ್ಯಾರ್ಥಿನಿಯರ ವಸತಿನಿಲಯದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. 2015ರ ಮಾರ್ಚ್ 31ರ ರಾತ್ರಿ 10 ಗಂಟೆ ಸುಮಾರಿಗೆ ಹಾಸ್ಟೆಲ್‌ಗೆ ನುಗ್ಗಿದ ಮಹೇಶ್, ಪಿಸ್ತೂಲ್‌ನಿಂದ ಗೌತಮಿ ತಲೆಗೆ ಹಾಗೂ ಶಿರಿಷಾ ಮುಖದ ಮೇಲೆ ಗುಂಡು ಹಾರಿಸಿ ಪರಾರಿಯಾಗಿದ್ದ. ಗೌತಮಿ ಸ್ಥಳದಲ್ಲೇ ಮೃತಪಟ್ಟಿದ್ದರು. ಶಿರಿಷಾ ಗಾಯಗೊಂಡಿದ್ದರು. ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿದ್ಯಾರ್ಥಿನಿಯರ ಕೊಠಡಿ ಬಳಿ ಮಹೇಶ್ ಓಡಾಡುತ್ತಿದ್ದ. ಇದಕ್ಕೆ ಗೌತಮಿ ಆಕ್ಷೇಪಿಸಿದ್ದರು. ಅಲ್ಲದೇ, ಸಿಇಟಿ ಪರೀಕ್ಷೆಗಾಗಿ ಕಾಲೇಜು ಆವರಣದಲ್ಲಿ ಅರ್ಜಿ ಭರ್ತಿ ಮಾಡಿಕೊಡುವುದಾಗಿ ಅಪರಾಧಿ ಗೌತಮಿಗೆ ಹೇಳಿದ್ದ. ‘ನೀನು ಕಾಲೇಜು ಅಟೆಂಡರ್, ನೀನೇನು ಅರ್ಜಿ ಭರ್ತಿ ಮಾಡಿಕೊಡುತ್ತೀಯಾ?’ ಎಂದು ಬೈದು ಕಳುಹಿಸಿದ್ದರು. ಇದೇ ವಿಚಾರಕ್ಕೆ ದ್ವೇಷ ಬೆಳೆಸಿಕೊಂಡಿದ್ದ ಅಪರಾಧಿ, ಹಾಸ್ಟೆಲ್ ಕೊಠಡಿಗೆ ಅಕ್ರಮವಾಗಿ ನುಗ್ಗಿ ಗುಂಡು ಹಾರಿಸಿದ್ದ.

ದ್ವಿತೀಯ ಪಿಯುಸಿವರೆಗೆ ಓದಿದ್ದ ಮಹೇಶ್, ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಬಂದಿದ್ದ ಪಿಸ್ತೂಲ್ ಅಕ್ರಮ ಮಾರಾಟ ಜಾಲ ಕುರಿತ ವರದಿ ಓದಿದ್ದ. ನಂತರ, ಬಿಹಾರಕ್ಕೆ ತೆರಳಿ ಅಕ್ರಮ ಮಾರಾಟಗಾರರನ್ನು ಸಂಪರ್ಕಿಸಿ ₹15 ಸಾವಿರ ಕೊಟ್ಟು ಪಿಸ್ತೂಲ್ ಖರೀದಿಸಿದ್ದ. ವಿದ್ಯಾರ್ಥಿನಿಯರು ಎರಡು ಬಾರಿ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಸೇಡು ತೀರಿಸಿಕೊಳ್ಳಲು ಗುಂಡು ಹಾರಿಸಿದ್ದ ಎಂದು ತನಿಖೆಯಿಂದ ಗೊತ್ತಾಗಿತ್ತು. ಸರ್ಕಾರಿ ವಕೀಲರಾಗಿ ಎಸ್.ಆರ್.ಮೀನಾಕುಮಾರಿ ವಾದ ಮಂಡಿಸಿದ್ದರು.

## ಸರಣಿ ಕಳ್ಳತನ ಐವರ ಬಂಧನ

**ಕೋಲಾರ:** ನಗರದಲ್ಲಿ ಅಂಗಡಿಗಳ ರೋಲಿಂಗ್ ಶಟರ್ ಒಡೆದು ಕಳವು ಮಾಡುತ್ತಾ ಪೊಲೀಸರ ನಿದ್ದೆಗೆಡಿಸಿದ್ದ ಹಾಗೂ ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಗಳನ್ನು ಬಂಧಿಸುವಲ್ಲಿ ಕೋಲಾರ ನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ನ್ಯೂ ತಿಪ್ಪಸಂದ್ರ ಸುಧಾಮನಗರದ ಆರ್.ವಿನೋದ್ (19), ಜ್ಯೋತಿನಗರ ರೆಡ್ಡಿಪಾಳ್ಯದ ಆಟೊ ಚಾಲಕ ಎಫ್.ರಿಯಾನ್ (19), ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸುಧಾಮನಗರದ ಎಸ್.ಪ್ರವೀಣ್‌ಕುಮಾರ್ (19) ಬಂಧಿತರು.

## ನಗರದಲ್ಲಿ ಇಂದು

**‘ತಂತ್ರಜ್ಞಾನ ಬಳಕೆಯು ನೈತಿಕ ಮತ್ತು ಸಾಮಾಜಿಕ ಜವಾಬ್ದಾರಿ ವಿಚಾರದಲ್ಲಿ ಹೇಗೆ ಪರಿಣಾಮ ಬೀರುತ್ತದೆ?’ ಉಪನ್ಯಾಸ:** ಕೆ.ಎಸ್.ಅಶ್ವತ್ಥನಾರಾಯಣ, ನೆಲ್ಸನ್, ಅಧ್ಯಕ್ಷತೆ: ಸೆಲ್ವರಾಜ್, ಆಯೋಜನೆ: ವೈಎಂಸಿಎ, ರೋಟರಿ ಬೆಂಗಳೂರು ಪೀಣ್ಯ, ಸ್ಥಳ: ಸಿಟಿ ವೈಎಂಸಿಎ, ನೃಪತುಂಗ ರಸ್ತೆ, ಬೆಳಿಗ್ಗೆ 9.30

**ಬಿ.ಕೆ.ರವಿ ಅಭಿನಂದನಾ ಸಮಾರಂಭ:** ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ಆಯೇಷಾ ಖಾನುಂ, ಎಸ್. ರವಿಕುಮಾರ್, ಶೇಖ್ ಲತೀಫ್, ಶ್ರೀನಿವಾಸ್ ಚೌಡಪ್ಪ, ಆಯೋಜನೆ: ಸಮೂಹ ಸಂವಹನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಪ್ರೊ.ಕೆ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

**‘ಲಿವಿಂಗ್ ಲೈಟ್ಸ್’ ಉದ್ಘಾಟನೆ:** ಆಯೋಜನೆ: ಸೆಂಟರ್ ಫಾರ್ ಪೆಸ್ಟೊರಾಲಿಸ್ಮ್, ಸಹಜೀವನ್, ಸ್ಥಳ: ಇಂದಿರಾ ಗಾಂಧಿ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಮಲ್ಲತ್ತಹಳ್ಳಿ, ಸಂಜೆ 4ರಿಂದ

**ಜಿ.ಸಿ.ಬಯ್ಯಾರೆಡ್ಡಿ ಅವರಿಗೆ ನುಡಿನಮನ:** ಭಾಗವಹಿಸುವವರು: ಸಿದ್ದರಾಮಯ್ಯ, ಕೆ.ಎಚ್. ಮುನಿಯಪ್ಪ, ವಿ. ಗೋಪಾಲಗೌಡ, ಎಂ.ಎ. ಬೇಬಿ, ಬರಗೂರು ರಾಮಚಂದ್ರಪ್ಪ, ಎಲ್. ಹನುಮಂತಯ್ಯ, ಆಯೋಜನೆ: ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಸ್ಥಳ: ಸಚಿವಾಲಯ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಸಂಜೆ 4



ಸಿದ್ದರಾಮಯ್ಯ

**‘ಕವಿದಿನ’ ಎಸ್.ಆರ್. ವಿಜಯಶಂಕರ ಅವರ ‘ನೆನದವರ ಮನದಲ್ಲಿ’, ವಿದ್ಯಾರ್ಥಿಗಳು ಬರೆದ ‘ನೆಟ್ಟ ಮರದ ನೆರಳು, ಅ.ನ.ಕೃ. ಸ್ಮಾರಕ’ ಪುಸ್ತಕಗಳ ಬಿಡುಗಡೆ ಮತ್ತು ಬಹುಮಾನ ವಿತರಣಾ ಸಮಾರಂಭ:** ಪುಸ್ತಕ ಬಿಡುಗಡೆ, ಕವಿ ಬೇಂದ್ರೆ ಕುರಿತು ಉಪನ್ಯಾಸ: ನರಹಳ್ಳಿ ಬಾಲಸುಬ್ರಹ್ಮಣ್ಯ, ಪುಸ್ತಕ ಪರಿಚಯ: ಡೊಮಿನಿಕ್, ಅಧ್ಯಕ್ಷತೆ: ವರ್ಗಿಸ್ ಕೆ.ಜೆ., ಆಯೋಜನೆ ಮತ್ತು ಸ್ಥಳ: ಕನ್ನಡ ಸಂಘ, ಕ್ರೈಸ್ಟ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಸಂಜೆ 4

**ದಾದಾಸಾಹೇಬ್ ಫಾಲ್ಕೆ ಸೇವಾ ರತ್ನ ಪ್ರಶಸ್ತಿ ಪ್ರದಾನ:** ಅತಿಥಿಗಳು: ದಿನೇಶ್ ಗುಂಡೂರಾವ್, ಸಿ.ಪಿ. ಯೋಗೇಶ್ವರ್, ನರಸಿಂಹಲು, ಚಂದ್ರಶೇಖರ್ ಪುಶಲ್‌ಕರ್, ಆಯೋಜನೆ: ಕಾರ್ಲ್‌ಟನ್ ಮೀಡಿಯಾ ಈವೆಂಟ್ಸ್, ಸ್ಥಳ: ರಮಣಶ್ರೀ ರಿಚ್ಮಂಡ್ ಹೋಟೆಲ್, ಸಂಪಂಗಿರಾಮನಗರ, ಸಂಜೆ 6

**ರಾಷ್ಟ್ರಕವಿ ಕುವೆಂಪು, ದ.ರಾ.ಬೇಂದ್ರೆ ಜನ್ಮದಿನ, ಪ್ರಶಸ್ತಿಗಳ ಪ್ರದಾನ:** ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ರಾಮಣ್ಣ ಕೋಡಿಹೊಸಹಳ್ಳಿ, ಉಪನ್ಯಾಸ: ಕಾ.ವೆಂ. ಶ್ರೀನಿವಾಸಮೂರ್ತಿ, ಆಶಯ ನುಡಿ: ಎ.ಎಸ್.ನಾಗರಾಜಸ್ವಾಮಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

**ವರಕವಿ ದ.ರಾ.ಬೇಂದ್ರೆ ಅವರ ಜನ್ಮದಿನ, ‘ದ.ರಾ.ಬೇಂದ್ರೆ ಸಾಹಿತ್ಯ ಸೇವಾ’ ಪ್ರಶಸ್ತಿ ಪ್ರದಾನ:** ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ಪ್ರಶಸ್ತಿ ಪುರಸ್ಕೃತರು: ನಂ.ನಂಜಪ್ಪ,ಅತಿಥಿ: ಕರೀಗೌಡ ಬೀಚನಹಳ್ಳಿ, ಅಧ್ಯಕ್ಷತೆ: ಶ್ರ.ದೇ. ಪಾರ್ಶ್ವನಾಥ್, ಆಯೋಜನೆ: ದ.ರಾ. ಬೇಂದ್ರೆ ಕಾವ್ಯಕೂಟ, ಸ್ಥಳ: ಉದಯಭಾನು ಕಲಾಸಂಘದ ಆವರಣ, ಕೆಂಪೇಗೌಡನಗರ, ಸಂಜೆ 5.30

**ಗೆಜ್ಜೆ ನಮನ:** ತನ್ವಿ ಪಿ.ರಾವ್, ಪೂರ್ವಿ ಸರ್ವೇಶ್, ಸಿಂಧೂರ್ ಎನ್. ರಾವ್, ಆಯೋಜನೆ: ಶಿವಾನುಗ್ರಹ ಲಲಿತಕಲಾ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

**ಎನ್. ರಾಮನಾಥ್ ಅವರ ‘ಮೊಗೆದಷ್ಟು ವಿನೋದ’ ಪುಸ್ತಕ ಬಿಡುಗಡೆ:** ಗಂಗಾವತಿ ಪ್ರಾಣೇಶ್, ಪುಸ್ತಕ ಪರಿಚಯ: ವೈ.ವಿ. ಗುಂಡೂರಾವ್, ಅಧ್ಯಕ್ಷತೆ: ಭುವನೇಶ್ವರಿ ಹೆಗಡೆ, ಆಯೋಜನೆ: ಶ್ರೀನಿವಾಸ ಪುಸ್ತಕ ಪ್ರಕಾಶನ, ಸ್ಥಳ: ಅಶ್ವತ್ಥ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 6

**ವರಕವಿ ಬೇಂದ್ರೆ ನುಡಿನಮನ, ನಾಡೋಜ ಬೇಂದ್ರೆ ಕೃಷ್ಣಪ್ಪ ಸ್ಮರಣೆ:** ಭಾಗವಹಿಸುವವರು: ಬಿ.ಎಸ್. ಜಯಪ್ರಕಾಶ ನಾರಾಯಣ, ಜಿ.ಬಿ. ಹರೀಶ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

# ಶೀಘ್ರದಲ್ಲೇ 'ಫುಲ್ ಮೀಲ್ಸ್' ಟ್ರೇಲರ್



ಲಿಖಿತ್ ಶೆಟ್ಟಿ, ಖುಷಿ ರವಿ

**'ಸಂಕಷ್ಟಕರ ಗಣಪತಿ'**, 'ಫ್ಯಾಮಿಲಿ ಪ್ಯಾಕ್', 'ಅಬ್ಬಬ್ಬ' ಸಿನಿಮಾ ಖ್ಯಾತಿಯ ನಟ ಲಿಖಿತ್ ಶೆಟ್ಟಿ ನಟಿಸಿರುವ 'ಫುಲ್ ಮೀಲ್ಸ್' ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದ್ದು, ಶೀಘ್ರದಲ್ಲೇ ಚಿತ್ರದ ಟ್ರೇಲರ್ ರಿಲೀಸ್ ಆಗಲಿದೆ. ತ್ರಿಕೋನ ಪ್ರೇಮಕಥೆ ಹೊಂದಿರುವ ಸಿನಿಮಾದಲ್ಲಿ ಲಿಖಿತ್ ಶೆಟ್ಟಿ ವೆಡ್ಡಿಂಗ್ ಫೋಟೊಗ್ರಾಫರ್ ಆಗಿ ಕಾಣಿಸಿಕೊಂಡಿದ್ದಾರೆ. ನಾಯಕಿಯರಾಗಿ ತೇಜಸ್ವಿನಿ ಶರ್ಮಾ ಮತ್ತು ಖುಷಿ ರವಿ ನಟಿಸಿದ್ದಾರೆ. ಚಿತ್ರದಲ್ಲಿ ಮೇಕಪ್ ಆರ್ಟಿಸ್ಟ್ ಪಾತ್ರವನ್ನು ತೇಜಸ್ವಿನಿ ಮಾಡಿದ್ದಾರೆ. ಖುಷಿ ರವಿ ಜನ್ಮದಿನದ ಪ್ರಯುಕ್ತ ಚಿತ್ರತಂಡ ಬಿಡುಗಡೆ ಮಾಡಿದ ಚಿತ್ರದ ತುಣುಕಿನಲ್ಲಿ ಟ್ರೇಲರ್ ಬಿಡುಗಡೆ ಮಾಹಿತಿಯಿದೆ. ಟ್ರೇಲರ್‌ನಲ್ಲೇ ಬಿಡುಗಡೆ ದಿನಾಂಕವನ್ನೂ ಘೋಷಿಸುವುದಾಗಿ ಚಿತ್ರತಂಡ ತಿಳಿಸಿದೆ. ಮೊದಲ ಬಾರಿಗೆ ಪೂರ್ಣ ಪ್ರಮಾಣದ ನಿರ್ಮಾಣದ ಜವಾಬ್ದಾರಿಯನ್ನೂ ಲಿಖಿತ್ ಶೆಟ್ಟಿ ವಹಿಸಿಕೊಂಡಿದ್ದಾರೆ. ಚಿತ್ರದುರ್ಗದ ಎನ್.ವಿನಾಯಕ ಚಿತ್ರದ ನಿರ್ದೇಶಕ. ಹರೀಶ್ ಗೌಡ ಸಂಭಾಷಣೆ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ಗುರುಕಿರಣ್ ಸಂಗೀತ, ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿದೆ. ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚಂಡೂರ್, ರವಿಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

'ಗುಲ್ಟು', 'ಕ್ಷೇತ್ರಪತಿ', 'ಹೊಂದಿಸಿ ಬರೆಯಿರಿ', 'ಸಲಾರ್' ಹೀಗೆ ತಮ್ಮ ಸಿನಿಬ್ಯಾಂಕ್ ಅನ್ನು ಹಿಗ್ಗಿಸಿಕೊಳ್ಳುತ್ತಿರುವ ನಟ ನವೀನ್ ಶಂಕರ್ ಪ್ರಯೋಗಕ್ಕೆ ತನ್ನನ್ನು ತಾನು ಒಡ್ಡಿಕೊಳ್ಳುವವರು. ಪಾತ್ರದೊಳಗೆ ಜೀವಿಸುವ ಸಾಮರ್ಥ್ಯ ಅವರಿಗಿದೆ. ನವೀನ್ ನಟನೆಯ, ಕುಲದೀಪ್ ಕಾರಿಯಪ್ಪ ನಿರ್ದೇಶನದ 'ನೋಡಿದವರು ಏನಂತಾರೆ' ಇಂದು(ಜ.31) ಬಿಡುಗಡೆಯಾಗುತ್ತಿದೆ. ಈ ಸಂದರ್ಭದಲ್ಲಿ ಅವರೊಂದಿಗೆ ಮಾತುಗಳ ಹೆಜ್ಜೆ...



ನವೀನ್ ಶಂಕರ್

# ಪ್ರಯೋಗಕ್ಕೆ ಸೂಕ್ತ ಕಾಲ...

**ಅಭಿಲಾಷ್ ಪಿ.ಎಸ್.**

**• ಭಿನ್ನವಾದ ಶೀರ್ಷಿಕೆಯ ಕಾರಣವೇನು?**

'ನೋಡಿದವರು ಏನಂತಾರೆ' ಎಂಬ ಶೀರ್ಷಿಕೆ ಕಥೆ ಹಾಗೂ ಅದರೊಳಗಿನ ವಿಷಯಗಳಿಗೆ ಸೂಕ್ತವಾಗಿದೆ. ನಿರ್ದೇಶಕರ ಆಲೋಚನೆಯಿದು. 'ಸಿದ್ಧಾರ್ಥ್' ಎನ್ನುವ ಪಾತ್ರವನ್ನು ನಾನು ಈ ಸಿನಿಮಾದಲ್ಲಿ ನಿಭಾಯಿಸಿದ್ದೇನೆ. 'ಸಿದ್ಧಾರ್ಥ್'ನ ಜೀವನದಲ್ಲಿ ಈ 'ನೋಡಿದವರು ಏನಂತಾರೆ' ಎನ್ನುವ ಮನಃಸ್ಥಿತಿ ಅಥವಾ ಗ್ರಹಿಕೆ ಯಾವ ರೀತಿ ಪರಿಣಾಮ ಬೀರಿತ್ತು ಎನ್ನುವುದನ್ನು ತೋರಿಸಲಾಗಿದೆ. ಅಲ್ಲಿಂದ ಹಿಡಿದು 'ನೋಡಿದವರು ಏನಾದ್ರೂ ಅಂದುಕೊಳ್ಳಲಿ' ಎನ್ನುವವರೆಗೂ ಈತನ ಕಥೆ ಸಾಗುತ್ತದೆ. ಸಾಮಾನ್ಯವಾಗಿ ಎಲ್ಲರೂ ಮನಸ್ಸಿನಲ್ಲಿ ಅಂದುಕೊಳ್ಳುವ ಪ್ರಶ್ನೆ 'ನೋಡಿದವರು ಏನಂತಾರೆ' ಎಂಬುದು. ನಾವು ಸ್ವಂತವಾಗಿ ನಿರ್ಧಾರ ಕೈಗೊಳ್ಳುವ ಹಂತದವರೆಗೂ ಬೇರೆಯವರ ಪಯಣದಲ್ಲಿ ನಾವಿರುತ್ತೇವೆ. ನಮ್ಮ ಪಯಣ ಪ್ರಾರಂಭವಾಗುವುದೇ ನಾವು ಸ್ವಂತಿಕೆಯಿಂದ ವಿಚಾರ, ನಿರ್ಧಾರ ಮಾಡಿದಾಗ. ಇದು ನಿಜವಾದ ಜೀವನದ ಪಯಣ. ಅಲ್ಲಿಯವರೆಗೂ ಇತರರು ಹೇಳಿಕೊಟ್ಟಿದ್ದು, ತೋರಿಸಿದ್ದೇ ಜೀವನದ ದಾರಿಯಾಗಿರುತ್ತದೆ.

**• ಈ ಪಯಣ ಆರಂಭವಾಗಿದ್ದು ಯಾವಾಗ?**

ಈ ಸಿನಿಮಾ ಒಪ್ಪಿಕೊಂಡಿದ್ದು 'ಹೊಂದಿಸಿ ಬರೆಯಿರಿ' ಸಿನಿಮಾ ಆದ ಬಳಿಕ. ಅಂದರೆ 2021–22 ರಲ್ಲಿ ಇದರ ಚಿತ್ರೀಕರಣ ಪೂರ್ಣಗೊಂಡಿತ್ತು. ಇದೊಂದು ಪಯಣ ಆಧಾರಿತ ಕಥೆ. ಈ ಕಾರಣದಿಂದ ಹಂತ ಹಂತದ ಚಿತ್ರೀಕರಣ ಅಗತ್ಯವಿತ್ತು. ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯಕ್ಕಾಗಿ ತೂಕ ಇಳಿಸಿಕೊಳ್ಳಬೇಕಿತ್ತು. ಆರಂಭದಲ್ಲೇ ನಾವು ಕ್ಲೈಮ್ಯಾಕ್ಸ್ ಚಿತ್ರೀಕರಣ ಮಾಡಿಕೊಂಡೆವು. ಇದಕ್ಕಾಗಿ ಸುಮಾರು 64 ಕೆ.ಜಿ.ತೂಕವಿದ್ದ ನಾನು 50 ಕೆ.ಜಿ.ಗೆ ಇಳಿದೆ. ಇದು ಸವಾಲಿನ ವಿಷಯವಾಗಿತ್ತು. ಬೆಂಗಳೂರು, ಕೊಡಗು, ಬಾದಾಮಿ, ಮುಂಬೈ ಮತ್ತು ಪಶ್ಚಿಮ ಘಟ್ಟಗಳಲ್ಲಿ ಈ ಚಿತ್ರದ ಕಥೆ ಸಾಗುತ್ತದೆ. ಎರಡು ವರ್ಷಗಳ ಮೊದಲೇ ಚಿತ್ರೀಕರಣ ಪೂರ್ಣಗೊಂಡಿದ್ದರೂ ವಿಎಫ್‌ಎಕ್ಸ್ ಕೆಲಸದ ಸಮಸ್ಯೆ, ಹಣಕಾಸಿನ ತೊಂದರೆ ಸೇರಿ ನಾನಾ ಕಾರಣಗಳಿಂದ ಚಿತ್ರ ಬಿಡುಗಡೆ ವಿಳಂಬವಾಯಿತು.

**• ಉದ್ಯೋಗ ಕ್ಷೇತ್ರದಲ್ಲಿ ಈಗಿನ ಸ್ಥಿತಿಗೆ ಸಿನಿಮಾ ಹತ್ತಿರವಾದಂತಿದೆ...**

ಹೌದು. ಈ ಸಿನಿಮಾದ ಕಥೆ ಬಹಳ ಪ್ರಸ್ತುತವಾಗಿದೆ. 'ಸಿದ್ಧಾರ್ಥ್' ಒಬ್ಬ ಟೆಕಿ ಆಗಿರಬಹುದು. ಆತನ ವ್ಯಕ್ತಿತ್ವ ಹಾಗೂ ಆತ ಎದುರಿಸುತ್ತಿರುವ ಪರಿಸ್ಥಿತಿಗಳು ಹಲವು ಉದ್ಯೋಗಿಗಳ ಪ್ರತಿಬಿಂಬ. ಎಲ್ಲರೂ ಆ ಪಾತ್ರವನ್ನು ತಾವೇ ಎಂದು ಅಂದುಕೊಳ್ಳುವಷ್ಟು ಸಾಮ್ಯತೆಗಳನ್ನು ಕಾಣಬಹುದು.

**• ಭಿನ್ನ ಪಾತ್ರಗಳ ಪ್ರಯೋಗ ಏತಕ್ಕಾಗಿ?**

ಭಿನ್ನವಾದ ಕಥೆಗಳು ಬರುತ್ತಿವೆ. ಈ ಕಥೆಗಳು ಕಮರ್ಷಿಯಲ್ ಆಗಿ ಯಶಸ್ವಿಯಾಗುವ ಅವಶ್ಯಕತೆಯೂ ಇದೆ. ಆದರೆ ಇಷ್ಟು ದೊಡ್ಡ ಚಿತ್ರೋದ್ಯಮದಲ್ಲಿ ನನ್ನದು ಆರಂಭಿಕ ಹೆಜ್ಜೆಗಳಷ್ಟೇ. ನಮಗೆ ಬರುವಂತಹ ಕಡಿಮೆ ಸಂಖ್ಯೆಗಳ ಸಿನಿಮಾಗಳಲ್ಲಿ ಭಿನ್ನತೆಯನ್ನು ಹುಡುಕಬೇಕಾಗಿದೆ, ಪ್ರಯೋಗಕ್ಕೆ ಒಡ್ಡಿಕೊಳ್ಳಬೇಕಿದೆ. ಈ ಆರಂಭಿಕ ಅವಧಿಯನ್ನೇ ಇಂತಹ ಪ್ರಯೋಗಗಳಿಗೆ ಸೂಕ್ತ ಎಂದು ನಾನು ಭಾವಿಸಿದ್ದೇನೆ. ಮುಂದೆ ಹೆಜ್ಜೆ ಇಡುತ್ತಾ, ನಮ್ಮನ್ನು ಪ್ರೀತಿಸುವವರ ಸಂಖ್ಯೆ ಹೆಚ್ಚಾದಾಗ ಅಥವಾ ಒಂದು ಸಿನಿಮಾ ಅತ್ಯದ್ಭುತವಾಗಿ ಯಶಸ್ಸು ಕಂಡಾಗ ಮುಂದಿನ ಆಯ್ಕೆಗಳು ಇನ್ನಷ್ಟು ಕಠಿಣವಾಗುತ್ತವೆ. ಇಂತಹ ಪ್ರಯೋಗಾತ್ಮಕ ಸಿನಿಮಾಗಳನ್ನು ಕೈಗೆತ್ತಿಕೊಳ್ಳಲು ಭಯ ಹೆಚ್ಚಾಗುತ್ತದೆ. ಈಗ ನಮ್ಮ ಮೇಲೆ ಒತ್ತಡವಿಲ್ಲ, ಜವಾಬ್ದಾರಿಯಷ್ಟೇ ಇದೆ. ಈ ನಿಟ್ಟಿನಲ್ಲಿ ನನ್ನ ಹೆಜ್ಜೆಗಳಿವೆ.

ಈ ಸಿನಿಮಾವನ್ನು ಜನರು ಇಷ್ಟಪಡುತ್ತಾರೆ ಎನ್ನುವ ನಂಬಿಕೆ ಇದೆ. ಪ್ರತಿಯೊಬ್ಬರೂ ಈ ಸಿನಿಮಾವನ್ನು ಸಂಭ್ರಮಿಸುತ್ತಾರೆ ಎನ್ನುವ ಕುರುಡು ನಂಬಿಕೆ ನನಗಿಲ್ಲ. ಯಾರು ಬಹಳ ಸೂಕ್ಷ್ಮವಾಗಿ, ತಾಳ್ಮೆಯಿಂದ ಕುಳಿತು ಸಿನಿಮಾವನ್ನು ಆನಂದಿಸುತ್ತಾರೋ ಅವರಿಗೆ ಇದು ಖಂಡಿತವಾಗಿಯೂ ಇಷ್ಟವಾಗಲಿದೆ.

### ಕೈಯಲ್ಲಿರುವ ಪ್ರಾಜೆಕ್ಟ್‌ಗಳು...

ಶಿವರಾಜ್‌ಕುಮಾರ್ ಅವರ ಜೊತೆಗೆ 'ಶಿವಣ್ಣ-131' ಸಿನಿಮಾ ಮಾಡುತ್ತಿದ್ದು, ಇದರ ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ಖಳನಟರಲ್ಲಿ ಒಬ್ಬನಾಗಿ ಇಲ್ಲಿ ಇದ್ದೇನೆ. ಇನ್ನೊಂದು ತಿಂಗಳಲ್ಲಿ ಇದರ ಶೂಟಿಂಗ್ ಪುನರಾರಂಭವಾಗಲಿದೆ. ಜನಾರ್ಧನ್ ಚಿಕ್ಕಣ್ಣ ಅವರ ಜೊತೆಗೊಂದು ಸಿನಿಮಾ ಮಾಡಲಿದ್ದು, ಇದು ಬರವಣಿಗೆಯ ಹಂತದಲ್ಲಿದೆ. 'ಸಲಾರ್-2' ತಂಡದಿಂದ ಇನ್ನೂ ಶೂಟಿಂಗ್‌ಗೆ ಕರೆ ಬಂದಿಲ್ಲ. ಸುಮನ್ ಕುಮಾರ್ ನಿರ್ದೇಶನದ 'ಕಿರಿಕೆಟ್-11' ಸದ್ಯಕ್ಕೆ ಸ್ಥಗಿತವಾಗಿದೆ. ಉತ್ತರ ಕರ್ನಾಟಕದ ವಿಷಯವನ್ನು ಹೊತ್ತ ಇನ್ನೊಂದು ಸಿನಿಮಾದ ಚರ್ಚೆ ನಡೆಯುತ್ತಿದೆ. 'ಸಲಾರ್' ಬಳಿಕ ತಮಿಳು ಹಾಗೂ ತೆಲುಗಿನಿಂದ ಆಫರ್‌ಗಳು ಬಂದಿವೆ. ಆದರೆ ಯಾವುದೂ ಇಷ್ಟವಾಗದ ಕಾರಣ ಒಪ್ಪಿಕೊಳ್ಳಲಿಲ್ಲ. ನನಗೆ ಕನ್ನಡವೇ ಆದ್ಯತೆ.

# ಬಲರಾಮನ ದಿನಗಳು ಚಿತ್ರದಲ್ಲಿ ಆಶಿಶ್ ವಿದ್ಯಾರ್ಥಿ

**ನಟ ವಿನೋದ್ ಪ್ರಭಾಕರ್** ನಟನೆಯ 'ಬಲರಾಮನ ದಿನಗಳು' ಚಿತ್ರದ ಚಿತ್ರೀಕರಣ ಪ್ರಸ್ತುತ ಮೈಸೂರಿನಲ್ಲಿ ನಡೆಯುತ್ತಿದೆ. ಬಹುಭಾಷಾ ನಟ ಆಶಿಶ್ ವಿದ್ಯಾರ್ಥಿ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದು, ಚಿತ್ರತಂಡ ಸೇರಿಕೊಂಡಿದ್ದಾರೆ.

ಹಲವು ವರ್ಷಗಳ ಬಳಿಕ ಕನ್ನಡ ಚಿತ್ರವೊಂದರಲ್ಲಿ ಆಶಿಶ್ ವಿದ್ಯಾರ್ಥಿ ಕಾಣಿಸಿಕೊಳ್ಳುತ್ತಿದ್ದು, ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಅವರನ್ನು ಸ್ವಾಗತಿಸಿದೆ. ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಅವರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರವನ್ನು 'ಆ ದಿನಗಳು' ಸಿನಿಮಾ ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶಿಸುತ್ತಿದ್ದಾರೆ. ವಿನೋದ್ ಪ್ರಭಾಕರ್ ಅವರಿಗೆ ನಾಯಕಿಯಾಗಿ ಪ್ರಿಯಾ ಆನಂದ್ ಅಭಿನಯಿಸುತ್ತಿದ್ದಾರೆ. ನಟ ಅತುಲ್ ಕುಲಕರ್ಣಿ ಅವರು ತಾರಾಬಳಗದಲ್ಲಿದ್ದಾರೆ. 1980ರ ಕಾಲಘಟ್ಟದಲ್ಲಿ ನಡೆಯುವ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಸಂತೋಷ್ ನಾರಾಯಣನ್ ಸಂಗೀತ ನಿರ್ದೇಶನವಿದೆ.




ಆಶಿಶ್ ವಿದ್ಯಾರ್ಥಿ

# 'ಗಜರಾಮ' ಟ್ರೇಲರ್ ರಿಲೀಸ್

**ಸುದೀಪ್** ನಟನೆಯ 'ಪೈಲ್ವಾನ್', ಯೋಗರಾಜ್ ಭಟ್ ನಿರ್ದೇಶನದ 'ಗರಡಿ' ಸಿನಿಮಾದಲ್ಲಿ ಕುಸ್ತಿಯ ಕಥೆ ಇತ್ತು. ಇದೀಗ ಇದೇ ಎಳೆಯ ಮತ್ತೊಂದು ಸಿನಿಮಾ ತೆರೆಗೆ ಬರುತ್ತಿದೆ.

'ಬಿಚ್ಚುಗತ್ತಿ' ಖ್ಯಾತಿಯ ನಟ ರಾಜವರ್ಧನ್ ನಟನೆಯ, ಸುನಿಲ್ ಕುಮಾರ್ ನಿರ್ದೇಶನದ 'ಗಜರಾಮ' ಸಿನಿಮಾ ಫೆ.7ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು.

ಚಿತ್ರದಲ್ಲಿ ರಾಜವರ್ಧನ್‌ಗೆ ಜೋಡಿಯಾಗಿ 'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ತಪಸ್ವಿನಿ ಪೂಣಚ್ಚ ನಟಿಸಿದ್ದಾರೆ. ಟ್ರೇಲರ್‌ನಲ್ಲಿ ಆ್ಯಕ್ಷನ್, ಭಾವನಾತ್ಮಕ ಹಾಗೂ ಪ್ರೀತಿಯ ಅಂಶಗಳು ಮುಖ್ಯವಾಗಿವೆ. ರಾಜವರ್ಧನ್ ಕುಸ್ತಿಕಣದಲ್ಲಿ ಪೈಲ್ವಾನ್ ಆಗಿ ತೊಡೆ ತಟ್ಟಿದ್ದಾರೆ. ಕಬೀರ್ ಸಿಂಗ್ ಖಳನಾಯಕನಾಗಿ ಅಬ್ಬರಿಸಿದ್ದಾರೆ. ಪೊಲೀಸ್ ಪಾತ್ರದಲ್ಲಿ ದೀಪಕ್ ಖದರ್ ತೋರಿಸಿದ್ದಾರೆ. ಈಗಾಗಲೇ ನಟಿ ರಾಗಿಣಿ ದ್ವಿವೇದಿ ಹೆಜ್ಜೆ ಹಾಕಿರುವ ಚಿತ್ರದ 'ಸಾರಾಯಿ ಶಾಂತಮ್ಮ' ಎಂಬ ಹಾಡು ಬಿಡುಗಡೆಯಾಗಿದೆ. ಚಿತ್ರಕ್ಕೆ ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಜ್ಞಾನೇಶ್ ಬಿ. ಮಠದ್ ಸಂಕಲನ, ಧನಂಜಯ್ ಅವರ ನೃತ್ಯ ನಿರ್ದೇಶನವಿದೆ. ಮನೋಮೂರ್ತಿ ಸಂಗೀತ ಚಿತ್ರಕ್ಕಿದೆ. 'ಬಾಂಡ್ ರವಿ' ಸಿನಿಮಾವನ್ನು ನಿರ್ಮಾಣ ಮಾಡಿದ್ದ ಲೈಫ್ ಲೈನ್ ಫಿಲ್ಮ್ ಪ್ರೊಡಕ್ಷನ್ ಅಡಿಯಲ್ಲಿ ನರಸಿಂಹಮೂರ್ತಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.



ರಾಜವರ್ಧನ್





'ಲಕ್ಷ್ಮೀಪುತ್ರ' ಚಿತ್ರದ ಮುಹೂರ್ತ ಕಾರ್ಯಕ್ರಮದಲ್ಲಿ ಚಿತ್ರತಂಡ

# 'ಲಕ್ಷ್ಮೀಪುತ್ರ'ನಾದ ಚಿಕ್ಕಣ್ಣ

**ನಿರ್ದೇಶಕ** ಎ.ಪಿ.ಅರ್ಜುನ್ ತಮ್ಮದೇ ಎ.ಪಿ. ಅರ್ಜುನ್ ಫಿಲ್ಮ್ಸ್‌ನಡಿ ನಿರ್ಮಾಣ ಮಾಡುತ್ತಿರುವ, ಚಿಕ್ಕಣ್ಣ ಮುಖ್ಯಭೂಮಿಕೆಯಲ್ಲಿರುವ 'ಲಕ್ಷ್ಮೀಪುತ್ರ' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆಯಿತು.

ಚಿತ್ರಕ್ಕೆ ಅರ್ಜುನ್ ಕಥೆ ಹಾಗೂ ಸಾಹಿತ್ಯ ಬರೆದಿದ್ದು, ಅವರ ಜೊತೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದ ವಿಜಯ್ ಎಸ್. ಸ್ವಾಮಿ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. 'ಲಕ್ಷ್ಮೀಪುತ್ರ ಕೋವಿಡ್ ಸಮಯದಲ್ಲಿ ಮಾಡಿದ ಕಥೆ. ತಾಯಿ ಮಗನಿಗೆ ಸಂಬಂಧಿಸಿದ ಕಥೆ' ಎನ್ನುತ್ತಾರೆ ಎ.ಪಿ.ಅರ್ಜುನ್.

'ಕಳೆದ ವರ್ಷದ ಜನವರಿಯಲ್ಲಿ 'ಉಪಾಧ್ಯಕ್ಷ' ರಿಲೀಸ್ ಆಗಿತ್ತು. ಈ ವರ್ಷದ ಜನವರಿಯಲ್ಲಿ 'ಲಕ್ಷ್ಮೀಪುತ್ರ' ಮುಹೂರ್ತ ಆಗಿದೆ. ಒಂದು ಚಿತ್ರದಿಂದ ಇನ್ನೊಂದು ಚಿತ್ರಕ್ಕೆ ವರ್ಷವೇ ಆಯಿತು. 'ಉಪಾಧ್ಯಕ್ಷ' ಚಿತ್ರ ನೋಡಲು ಹೆಚ್ಚಿನವರು ಕುಟುಂಬ ಸಹಿತವಾಗಿ ಬಂದಿದ್ದರು. ಆಗ ನನ್ನ ಸಿನಿಮಾಗೆ ಇವರೇ ಪ್ರಮುಖವಾದ ಪ್ರೇಕ್ಷಕರು ಎಂದು ತಿಳಿದುಕೊಂಡೆ. ಹೀಗಾಗಿ ಮುಂದಿನ ಚಿತ್ರ ಒಳ್ಳೆಯ ಕೌಟುಂಬಿಕ ಚಿತ್ರವಾಗಿರಬೇಕು ಎಂದುಕೊಂಡೆ. ಆಗ ಸಿಕ್ಕಿದ್ದು 'ಲಕ್ಷ್ಮೀಪುತ್ರ'. ಯುವಜನತೆ ಹಾಗೂ ಇಡೀ ಕುಟುಂಬವೇ ನೋಡುವ ಸಿನಿಮಾ ಇದಾಗಿದೆ' ಎಂದರು ಚಿಕ್ಕಣ್ಣ.

ಚಿತ್ರಕ್ಕೆ ಗಿರೀಶ್ ಆರ್. ಗೌಡ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ, ಕೆ.ರವಿವರ್ಮಾ ಸಾಹಸ ನಿರ್ದೇಶನವಿದೆ. ಎ.ಪಿ.ಅರ್ಜುನ್ ಪತ್ನಿ ಅನ್ನಪೂರ್ಣ ಅರ್ಜುನ್ ಅವರು ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ತಾರಾ ಅನುರಾಧ, ಧರ್ಮಣ್ಣ ಕಡೂರು ಹಾಗೂ ಕುರಿ ಪ್ರತಾಪ್ ಚಿತ್ರದ ತಾರಾಬಳಗದಲ್ಲಿದ್ದಾರೆ.

# ರಾಮರಸದಲ್ಲಿ ಬಾಲಾಜಿ ಮನೋಹರ್

**'ಜಟ್ಟ'**, 'ಮೈತ್ರಿ' ಚಿತ್ರದ ನಿರ್ದೇಶಕ ಬಿ.ಎಂ. ಗಿರಿರಾಜ್ ನಿರ್ದೇಶನದ 'ರಾಮರಸ' ಸಿನಿಮಾದಲ್ಲಿ ಭಿನ್ನವಾದ ಪಾತ್ರವೊಂದನ್ನು ಬಾಲಾಜಿ ಮನೋಹರ್ ನಿಭಾಯಿಸಿದ್ದಾರೆ.

'ಬಿಗ್‌ಬಾಸ್' ವಿಜೇತ ಕಾರ್ತಿಕ್ ಹಾಗೂ 'ಅಧ್ಯಕ್ಷ' ಖ್ಯಾತಿಯ ಹೆಬಾ ಪಟೇಲ್ ನಟಿಸುತ್ತಿರುವ ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಚಿತ್ರ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. 'ಕಡಿಮೆ ಪಾತ್ರಗಳನ್ನು ಮಾಡಿದ್ದರೂ ತಮ್ಮ ವಿಭಿನ್ನ ನಟನೆಯ ಮೂಲಕ ವಿಶೇಷ ಛಾಪನ್ನು ಮೂಡಿಸಿರುವ ಬಾಲಾಜಿ ಮನೋಹರ್, ಈಗ 'ರಾಮರಸ' ಚಿತ್ರದ ಮೂಲಕ ಮೂರು ಬೇರೆ ತರಹದ ಪಾತ್ರಗಳಿಗೆ ಜೀವ ತುಂಬಿದ್ದಾರೆ' ಎಂದಿದೆ ಚಿತ್ರತಂಡ. 'ಈ ಪಾತ್ರವನ್ನು ನಿಭಾಯಿಸುವುದು ಬೇರೆ ನಟರಿಂದ ಸಾಧ್ಯವೇ ಇರಲಿಲ್ಲ. ಡಬ್ಬಿಂಗ್ ಸಂದರ್ಭದಲ್ಲಿ ಕ್ಲೈಮ್ಯಾಕ್ಸ್‌ಗೆ ಬೇಕಾದ ಒಂದು ಬೇರೆಯೇ ತರಹದ ಧ್ವನಿಗೆ ನಿರ್ದೇಶಕರು ಸೌಂಡ್ ಎಂಜಿನಿಯರ್ ಜೊತೆ ತಿಂಗಳಿಂದ ಚರ್ಚಿಸುತ್ತಿದ್ದಾಗ, ಬಾಲಾಜಿಯವರು ಡಬ್ಬಿಂಗ್‌ನಲ್ಲಿ ತಮ್ಮ ಧ್ವನಿಯನ್ನೇ ಬದಲಿಸಿ ಈ ಸಮಸ್ಯೆಯನ್ನು ಬಗೆಹರಿಸಿದ್ದರು' ಎನ್ನುವುದನ್ನು ನೆನಪಿಸಿಕೊಳ್ಳುತ್ತಾರೆ ನಿರ್ದೇಶಕ ಗುರು ದೇಶಪಾಂಡೆ.

ಹಾರರ್ ಕಾಮಿಡಿ ಜಾನರ್‌ನ ಈ ಚಿತ್ರವನ್ನು ಗುರು ದೇಶಪಾಂಡೆ ತಮ್ಮ ಜಿ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣ ಮಾಡಿದ್ದಾರೆ.



ಬಾಲಾಜಿ ಮನೋಹರ್

# ಚಂದನವನದ ತೆರೆಗಳಲ್ಲಿ ಸಿನಿ ಹಬ್ಬ

ಇಂದು(ಜ.31) ಚಂದನವನದ ತೆರೆಗಳಲ್ಲಿ ಎಂಟು ಸಿನಿಮಾಗಳು ತೆರೆಕಾಣುತ್ತಿವೆ.

## ಗಣ

ಪ್ರಜ್ವಲ್ ದೇವರಾಜ್ ನಟನೆ ಈ ಸಿನಿಮಾ ಎರಡು ಕಾಲಘಟ್ಟದಲ್ಲಿ ನಡೆಯುವ ಕಥೆ ಹೊಂದಿದೆ. ಆ ಎರಡು ಕಾಲಘಟ್ಟಕ್ಕೆ ಸೇತುವೆ ಆಗಿರುವುದು ಲ್ಯಾಂಡ್‌ಲೈನ್ ಫೋನ್. ಒಮ್ಮೆ 1993ರ ಕಾಲಘಟ್ಟಕ್ಕೆ ಕಥೆ ಸಾಗಿದರೆ, ಇನ್ನೊಮ್ಮೆ ಪ್ರಸ್ತುತ ಸಂದರ್ಭದಲ್ಲಿ ಕಥೆ ಹೊರಳುತ್ತದೆ. ಹೀಗೆ ಟೈಮ್ ಟ್ರಾವೆಲಿಂಗ್ ಹಿನ್ನೆಲೆಯಲ್ಲಿ ಚಿತ್ರದ ಕಥಾಹಂದರವಿದೆ. ಪ್ರಜ್ವಲ್‌ಗೆ ಯಶಾ ಶಿವಕುಮಾರ್, ವೇದಿಕಾ ನಾಯಕಿಯರಾಗಿ ನಟಿಸಿದ್ದಾರೆ. ಪಾರ್ಥು ತಮ್ಮ ಚೆರಿ ಕ್ರಿಯೇಷನ್ಸ್ ಬ್ಯಾನರ್ ಮೂಲಕ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಹರಿಪ್ರಸಾದ್ ಜಕ್ಕ ಚಿತ್ರದ ನಿರ್ದೇಶಕರು. ಅನೂಪ್ ಸೀಳಿನ್ ಸಂಗೀತ, ಜೈ ಆನಂದ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸತೀಶ್ ಎ. ಕಲಾ ನಿರ್ದೇಶನ ಚಿತ್ರಕ್ಕಿದೆ. ಕೃಷಿ ತಾಪಂಡ, ವಿಶಾಲ್ ಹೆಗಡೆ, ರವಿ ಕಾಳೆ, ಸಂಪತ್ ರಾಜ್, ಶಿವರಾಜ್ ಕೆ.ಆರ್ ಪೇಟೆ, ರಮೇಶ್ ಭಟ್ ತಾರಾಬಳಗದಲ್ಲಿದ್ದಾರೆ.




ಯಶಾ ಶಿವಕುಮಾರ್

## ಅಲ್ಲೇ ಡ್ರಾ, ಅಲ್ಲೇ ಬಹುಮಾನ

ಹಾರರ್, ಥ್ರಿಲ್ಲರ್ ಜಾನರ್‌ನಲ್ಲಿರುವ ಈ ಚಿತ್ರವನ್ನು ರತ್ನತೀರ್ಥ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಜನನಿ ಫಿಲಂಸ್ ಮೂಲಕ ಪ್ರಶಾಂತ್ ಬಿ.ಜೆ. ಈ ಚಿತ್ರವನ್ನು ನಿರ್ಮಿಸಿದ್ದಾರೆ. 'ಟಗರು' ಖ್ಯಾತಿಯ ರಷಿಕಾ ರಾಜ್, ಶೌರ್ಯ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಹಾಡೊಂದಕ್ಕೆ ಪುನೀತ್ ರಾಜ್‌ಕುಮಾರ್ ಧ್ವನಿಯಾಗಿದ್ದಾರೆ. ಉಪೇಂದ್ರ ಅವರೂ ಒಂದು ಹಾಡು ಹಾಡಿದ್ದಾರೆ. ವೆಂಕಟ್ ಭಾರದ್ವಾಜ್ ನಿರ್ದೇಶನದ **'ಹೈನಾ'** ಕೂಡಾ ಇಂದು ಬಿಡುಗಡೆಯಾಗುತ್ತಿದೆ.

## ಪಾರು ಪಾರ್ವತಿ

'ಬಿಗ್‌ಬಾಸ್' ಖ್ಯಾತಿಯ ದೀಪಿಕಾ ದಾಸ್ ಅಭಿನಯದ ಈ ಚಿತ್ರವನ್ನು ರೋಹಿತ್ ಕೀರ್ತಿ ನಿರ್ದೇಶಿಸಿದ್ದಾರೆ. Eighteen Thirty Six ಪಿಕ್ಚರ್ಸ್ ಲಾಂಛನದಲ್ಲಿ ಪಿ.ಬಿ. ಪ್ರೇಂನಾಥ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ದೀಪಿಕಾ ದಾಸ್, ಪೂನಂ ಸರ್‌ನಾಯಕ್ ಹಾಗೂ ಫವಾಜ್ ಅಶ್ರಫ್ ಪ್ರಮುಖಪಾತ್ರದಲ್ಲಿ ನಟಿಸಿದ್ದಾರೆ. ಪಯಣ–ಜೀವನದ ಪಾಠವನ್ನು ಚಿತ್ರ ಹೊಂದಿದೆ. ಅಡ್ವೆಂಚರ್ ಕಾಮಿಡಿ ಜಾನರ್‌ನಲ್ಲಿ ಈ ಚಿತ್ರದ ಕಥಾಹಂದರವಿದ್ದು, ಬೆಂಗಳೂರು, ಗೋವಾ, ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಉತ್ತರಾಖಂಡ್‌ನಲ್ಲಿ ಚಿತ್ರೀಕರಣ ನಡೆದಿದೆ. ಅಬಿನ್ ರಾಜೇಶ್ ಛಾಯಾಚಿತ್ರಗ್ರಹಣ, ಆರ್. ಹರಿ ಸಂಗೀತ ನಿರ್ದೇಶನ ಹಾಗೂ ಸಿ.ಕೆ.ಕುಮಾರ ಸಂಕಲನ ಚಿತ್ರಕ್ಕಿದೆ.



ದೀಪಿಕಾದಾಸ್

## ರಾವುತ

ರಾಜ್ ಪ್ರವೀಣ್, ಭವಾನಿ ಪುರೋಹಿತ್ ನಟನೆಯ ಈ ಸಿನಿಮಾವನ್ನು ಸಿದ್ದು ವಜ್ರಪ್ಪ ನಿರ್ದೇಶಿಸಿದ್ದಾರೆ. ಶ್ರೀ ವಿಶ್ವಕರ್ಮ ಸಿನಿಮಾಸ್ ಬ್ಯಾನರ್‌ನಡಿ ಈ ಚಿತ್ರವನ್ನು ಈರಣ್ಣ ಶುಭಾಷ್ ಬಡಿಗೇರ ನಿರ್ಮಾಣ ಮಾಡಿದ್ದಾರೆ. ನಿರ್ಮಾಪಕ ಜಾಕ್ ಮಂಜು ಅವರ ಶಾಲಿನಿ ಆರ್ಟ್ಸ್ ಸಂಸ್ಥೆಯ ಮುಖಾಂತರ ರಾಜ್ಯದಾದ್ಯಂತ ಚಿತ್ರ ಬಿಡುಗಡೆಗೊಳ್ಳುತ್ತಿದೆ.




ಅಪೂರ್ವ ಭಾರದ್ವಾಜ್

## ನೋಡಿದವರು ಏನಂತಾರೆ

ನವೀನ್ ಶಂಕರ್ ನಟನೆಯ, ಕುಲದೀಪ್ ಕಾರಿಯಪ್ಪ ನಿರ್ದೇಶನದ ಚಿತ್ರವಿದು. ಸಿನಿಮಾದಲ್ಲಿ 'ಸಿದ್ಧಾರ್ಥ್ ದೇವಯ್ಯ' ಎಂಬ ಪಾತ್ರದ ಮುಖಾಂತರ ನವೀನ್ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. ಭಿನ್ನವಾದ ಭಾವನಾತ್ಮಕ ಕಥೆಯೊಂದು ಚಿತ್ರದಲ್ಲಿದೆ. ಚಿತ್ರವನ್ನು ನಾಗೇಶ್ ಗೋಪಾಲ್ ನಿರ್ಮಾಣ ಮಾಡಿದ್ದಾರೆ. ಅಪೂರ್ವ ಭಾರದ್ವಾಜ್ ನಾಯಕಿಯಾಗಿ ನಟಿಸಿದ್ದಾರೆ. ಮಯೂರೇಶ್ ಅಧಿಕಾರಿ ಸಂಗೀತ ಸಂಯೋಜನೆ, ಅಶ್ವಿನ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಕುಲದೀಪ್ ಬರೆದ ಕಥೆ ಮತ್ತು ಚಿತ್ರಕಥೆಗೆ ಸಾಯಿ ಶ್ರೀನಿಧಿ, ಪ್ರಜ್ವಲ್ ರಾಜ್ ಮತ್ತು ಸುನಿಲ್ ವೆಂಕಟೇಶ್ ಸಂಭಾಷಣೆ ಬರೆದಿದ್ದಾರೆ.

## ಕಾಡುಮಳೆ

ಕಾಸ್ಮೋಸ್ ಮೂವೀಸ್ ನಿರ್ಮಾಣದ, ಸಮರ್ಥ ನಿರ್ದೇಶನದ ಚಿತ್ರ ಇದಾಗಿದೆ. ಹರ್ಷನ್, ಸಂಗೀತ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. ಭ್ರಮೆ ಮತ್ತು ವಾಸ್ತವದ ಹೋರಾಟವೇ ಈ 'ಕಾಡುಮಳೆ'. ಭೂಮಿ ಮೇಲೆ ಖಂಡಗಳು, ಸಮುದ್ರಗಳು, ಸ್ವರಗಳು, ವಾರ ಎಲ್ಲವೂ ಏಳು. ಇದನ್ನೇ ಆಧಾರವಾಗಿಟ್ಟುಕೊಂಡು ಮಾಡಿರುವ ಸಿನಿಮಾವಿದು ಎಂದಿದೆ ಚಿತ್ರತಂಡ. ಕೆಆರ್‌ಜಿ ಈ ಸಿನಿಮಾದ ವಿತರಣೆ ಮಾಡುತ್ತಿದೆ. ರಾಜು ಎನ್. ಎಂ. ಅವರ ಛಾಯಾಚಿತ್ರಗ್ರಹಣ, ಮಹಾರಾಜ ಸಂಗೀತ ಚಿತ್ರಕ್ಕಿದೆ.



ಹರ್ಷನ್

## ಬೇಗೂರು ಕಾಲೋನಿ

'ಬಿಗ್‌ಬಾಸ್' ಖ್ಯಾತಿಯ ರಾಜೀವ ಹನು ಅಭಿನಯದ ಚಿತ್ರವಿದು. ಫ್ಲೈಯಿಂಗ್ ಕಿಂಗ್ ಮಂಜು ನಿರ್ದೇಶನದ ಈ ಚಿತ್ರ ಹೋರಾಟದ ಕಥೆಯಾಗಿದೆ. ಕಾಲೋನಿಯಲ್ಲಿರುವ ಮಧ್ಯಮವರ್ಗದ ಜನರ ಕಥೆಯೂ ಆಗಿದೆ. ಹೋರಾಟ ನಡೆಯುವುದು ಆಟದ ಮೈದಾನಕ್ಕಾಗಿ. ಮೈದಾನದ ಜಾಗದಲ್ಲಿ ಮನೆಗಳಾಗುತ್ತಿವೆ. ಮಕ್ಕಳಿಗೆ ಆಡಲು ಜಾಗವಿಲ್ಲ. ಈ ಅಂಶವನ್ನು ಪ್ರಮುಖವಾಗಿಟ್ಟುಕೊಂಡು ಕಥೆ ಹೆಣೆಯಲಾಗಿದೆ ಎಂದಿದೆ ಚಿತ್ರತಂಡ. 'ರಾಘವ' ಎಂಬ ಪಾತ್ರದಲ್ಲಿ ರಾಜೀವ ನಟಿಸಿದ್ದಾರೆ. ಶ್ರೀಮಾ ಸಿನಿಮಾಸ್ ಲಾಂಛನದಲ್ಲಿ ಎಂ. ಶ್ರೀನಿವಾಸ್ ಬಾಬು ಚಿತ್ರ ನಿರ್ಮಿಸಿದ್ದಾರೆ.



ರಾಜೀವ್ ಹನು

# ಮಾಹಿತಿ ಆಯೋಗಕ್ಕೆ ಆಯುಕ್ತರ ನೇಮಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತ ಹಾಗೂ ಏಳು ಮಂದಿ ಆಯುಕ್ತರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮುಖ್ಯ ಆಯುಕ್ತರಾಗಿ ನಿವೃತ್ತ ಐಎಎಸ್ ಅಧಿಕಾರಿ ಎ.ಎಂ. ಪ್ರಸಾದ್, ಆಯುಕ್ತರಾಗಿ ಕೆ. ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ. ಚನ್ನಲ್, ಎಸ್. ರಾಜಶೇಖರ್, ಕೆ. ಬದ್ರುದ್ದೀನ್, ಬಿ.ಆರ್. ಮಮತಾ ನೇಮಕಗೊಂಡಿದ್ದಾರೆ.

ಮುಖ್ಯ ಆಯುಕ್ತ, ಮಾಹಿತಿ ಆಯುಕ್ತರ ಏಳು ಹುದ್ದೆಗಳಿಗೆ 500ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದ್ದ ಕಾರಣ ವರ್ಷದ ಹಿಂದೆಯೇ ಆರಂಭವಾಗಿದ್ದ ಆಯ್ಕೆ ಪ್ರಕ್ರಿಯೆ ವಿಳಂಬವಾಗಿತ್ತು. ಮಾಹಿತಿ ಆಯುಕ್ತರ ಅವಧಿ ಮೂರು ವರ್ಷ ಅಥವಾ ನೇಮಕವಾದವರ ವಯಸ್ಸು 65 ಆಗುವವರಿಗೆ ಇರುತ್ತದೆ. ಎರಡರಲ್ಲಿ ಯಾವುದು ಮೊದಲೋ ಆಗ ಅವರ ಅಧಿಕಾರಾವಧಿ ಮುಗಿಯುತ್ತದೆ.

# ಫೆ.7ರಿಂದ ಕನ್ನಡ ಸಾಹಿತ್ಯ ಪರೀಕ್ಷೆಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು 2024–25ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಫೆ.7ರಿಂದ ಫೆ.9ರವರೆಗೆ ಹಮ್ಮಿಕೊಂಡಿದೆ.

ಪರೀಕ್ಷೆಗಳು ರಾಜ್ಯದ 18 ಕೇಂದ್ರಗಳಲ್ಲಿ ನಡೆಯಲಿವೆ. ಪರೀಕ್ಷಾ ಪ್ರವೇಶ ಪತ್ರಗಳನ್ನು ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಕಳುಹಿಸಲಾಗಿದೆ. ಫೆ.1ರ ಒಳಗೆ ಪ್ರವೇಶ ಪತ್ರ ತಲುಪದಿದ್ದಲ್ಲಿ ಪರಿಷತ್ತಿನ ಕೇಂದ್ರ ಕಚೇರಿಯಲ್ಲಿ ವಿಚಾರಿಸಬಹುದು. ಇಲ್ಲವಾದಲ್ಲಿ, ದೂರವಾಣಿ ಸಂಖ್ಯೆ 080 26612991 ಅಥವಾ 26623584ಕ್ಕೆಸಂಪರ್ಕಿಸಬಹುದು.

ಪರಿಷತ್ತಿನ ಅಂತರ್ಜಾಲ ತಾಣ www.kasapa.inನಲ್ಲಿ ಕೂಡ ಪರೀಕ್ಷಾ ಕೇಂದ್ರಗಳು ಸೇರಿದಂತೆ ವಿವಿಧ ಮಾಹಿತಿಗಳು ಲಭ್ಯ ಇವೆ.

# ಮಾಧ್ವ ತತ್ವಜ್ಞಾನ ಸಮ್ಮೇಳನ ಏ. 9ರಿಂದ

ಪ್ರಜಾವಾಣಿ ವಾರ್ತೆ

**ಉಡುಪಿ:** ಮಾಧ್ವ ತತ್ವಜ್ಞಾನ 30ನೇ ಸಮ್ಮೇಳನವನ್ನು ಜಿಲ್ಲೆಯ ಪೆರ್ಣಂಕಿಲ ಕ್ಷೇತ್ರದಲ್ಲಿ ಏಪ್ರಿಲ್ 9ರಿಂದ 13ರವರೆಗೆ ಆಯೋಜಿಸಲಾಗುವುದು ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಪೆರ್ಣಂಕಿಲಮಹಾಲಿಂಗೇಶ್ವರಮತ್ತು ಮಹಾಗಣಪತಿ ದೇವಸ್ಥಾನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಪೇಜಾವರ ಮಠ, ಅಖಿಲ ಭಾರತ ಮಾಧ್ವ ಮಹಾಮಂಡಲ, ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ ಹಾಗೂ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಇದನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಮ್ಮೇಳನದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಭಕ್ತಿ ಸಿದ್ಧಾಂತ ಜಾಗೃತಗೊಳಿಸುವ ನಿಟ್ಟಿನಲ್ಲಿ ಹಾಗೂ ನಾಡಿನಲ್ಲಿ ಅರಾಜಕತೆ ದೂರವಾಗಿ ಗೋವುಗಳು ಕ್ಷೇಮವಾಗಿರಬೇಕು ಎಂಬುದು ಸೇರಿದಂತೆ ವಿವಿಧ ಆಶಯಗಳನ್ನಿಟ್ಟುಕೊಂಡು ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದರು.

---

## ರಾಮನ್ ಸಂಶೋಧನಾ ಸಂಸ್ಥೆ
ಬೆಂಗಳೂರು - 560 080.

**ADVT. No. Ph.D ADMISSION / 2025 / 01**

ರಾಮನ್ ಸಂಶೋಧನಾ ಸಂಸ್ಥೆಯು ಭಾರತ ಸರ್ಕಾರದಿಂದ ಅನುದಾನಿತಗೊಂಡು ಮೂಲಭೂತ ವಿಜ್ಞಾನ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ಒಂದು ಪ್ರಧಾನ ಸ್ವಾಯತ್ತ ಸಂಸ್ಥೆಯಾಗಿದೆ. ಈ ಸಂಸ್ಥೆಯು ಭೌತಶಾಸ್ತ್ರ ವಿಭಾಗದ ವಿವಿಧ ಶಾಖೆಗಳಲ್ಲಿ ಸ್ನಾತಕೋತ್ತರ (ಪಿ.ಹೆಚ್‌ಡಿ.) ಪದವಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ವೀಕ್ಷಿಸಿ :

https://www.rri.res.in/careers/phd-programme

---

## ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

**ಮುಂದೂಡಿದ ಪ್ರಕಟಣೆ ನಂ. 01**

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/5054/2024–25/3961/ದಿನಾಂಕ: 21–01–2025ರಲ್ಲಿನ ಕಾಮಗಾರಿಗಳ ಕ್ರಸಂ.1 (ನಂ.17295), ಕ್ರಸಂ.2 (ನಂ.17434), ಕ್ರಸಂ.3 (ನಂ. 17436), ಕ್ರಸಂ. 4 (ನಂ. 17181), ಕ್ರಸಂ.6 (ನಂ. 17362), ಕ್ರಸಂ.10 (ನಂ. 17376), ಕ್ರಸಂ.13 (ನಂ.17415), ಕ್ರಸಂ. 14 (ನಂ.17313), ಕ್ರಸಂ.23 (ನಂ.17514), ಕ್ರಸಂ.24 (ನಂ.17451), ಕ್ರಸಂ.25 (ನಂ. 17473), ಕ್ರ ಸಂ. 26 (ನಂ.17452), ಕ್ರ ಸಂ.27 (ನಂ.17420) ಮತ್ತು ಕ್ರಸಂ. 36 (ನಂ. 17371)ಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ದಿನಾಂಕಗಳನ್ನು ಮರು ನಿಗದಿಪಡಿಸಲಾಗಿದೆ.

| | |
|---|---|
| 1) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ವೇಳೆ | ದಿನಾಂಕ: 06–02–2025ರ ಸಾಯಂಕಾಲ 04–00 ಗಂಟೆಯವರೆಗೆ |
| 2) ಗುತ್ತಿಗೆ ಪತ್ರಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ ಹಾಗೂ ವೇಳೆ | ದಿನಾಂಕ: 07–02–2025ರ ಸಾಯಂಕಾಲ 04–30 ಗಂಟೆಗೆ |
| 3) ಹಣಕಾಸು ಬಿಡ್ ತೆರೆಯುವ ದಿನಾಂಕ ಹಾಗೂ ವೇಳೆ | ದಿನಾಂಕ: 10–02–2025ರ ಬೆಳಿಗ್ಗೆ 11.00 ಗಂಟೆಗೆ |

ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

dipr/hvr/dipo/509/2024-25

---

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

## ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

No:SABVMCRI/E-TENDER/LAP/27/2024-25, Date:30.01.2025

**ಟೆಂಡರ್ ಅಧಿಸೂಚನೆ**

ವಿಷಯ: ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಯ ಅಧೀನದಲ್ಲಿರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಯುರಾಲಜಿ ವಿಭಾಗಕ್ಕೆ ಅಗತ್ಯವಿರುವ **LAPAROSCOPIC SET** ನ್ನು ಸರಬರಾಜು ಮಾಡಲು ಮತ್ತು ಅಳವಡಿಸಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ

1. ಟೆಂಡರ್‌ಗಳನ್ನು ಅಪ್ ಲೋಡ್ ಮಾಡಲು ಪ್ರಾರಂಭದ ದಿನಾಂಕ: 30.01.2025 ರಿಂದ. 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: 01.02.2025 ರ ಸಂಜೆ 05.30 ಗಂಟೆ. 3. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 05.02.2025 ರ ಸಂಜೆ 05.30 ಗಂಟೆ. 4. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ : 07.02.2025 ರ ಬೆಳಗ್ಗೆ 10.30 ಗಂಟೆ.

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ, ಬೆಂಗಳೂರು

DIPR/CP/4691/Zen/2024-25

---

## ನಗರಸಭಾ ಕಾರ್ಯಾಲಯ, ಚಳ್ಳಕೆರೆ.(ಚಿತ್ರದುರ್ಗ ಜಿಲ್ಲೆ)

ಫೋ ನಂ. 08195–250094 ka.challakere.cmc@gmail.com

ಸಂಖ್ಯೆ: ಚ.ನ/ತಾಂತ್ರಿಕ/2024–25 ನಗರಸಭಾ ನಿಧಿ/ಟೆಂಡರ್/ಸಿ.ಆರ್ 07/2024–25 ದಿನಾಂಕ: 30/01/2025

**ಟೆಂಡರ್ ಪ್ರಕಟಣೆ**

2024–25ನೇ ಸಾಲಿನ ನಗರಸಭಾ ನಿಧಿ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ, ಶೇ 5, ಶೇ 7.25ರ ಅನುದಾನದಡಿಯಲ್ಲಿ ಮಂಜೂರಾಗಿರುವ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ–2000, ಹಾಗೂ ಆರ್ಥಿಕ ಇಲಾಖೆಯ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-1 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆ/ಅಧಿಕೃತ ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಿಸಲಾಗಿರುತ್ತದೆ ಹಾಗೂ ದಿನಾಂಕ:18/02/2025 ರ ಸಂಜೆ 5:00 ಗಂಟೆವರೆಗೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿರುತ್ತದೆ.

www.challakerecity.mrc.gov.in ಮತ್ತು http://kppp.karnataka.gov.in ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಹಾಕಲಾಗಿರುರುತ್ತದೆ. ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದು.

**INDENT NUMBER :- (1)** DMA/2024-25/RD/WORK_INDENT25707. Reserved Category:-ST, ESTIMATED AMOUNT (in lakhs):-14.30 **(2)** DMA/2024-25/RD/WORK_INDENT25698.Reserved Category:-SC, ESTIMATED AMOUNT (in lakhs):-8.37 **(3)** DMA/2024-25/BD/WORK_INDENT25737. Reserved Category:-CAT-1, ESTIMATED AMOUNT (in lakhs):-12.50 **(4)** DMA/2024-25/OW/WORK_INDENT25704. Reserved Category:-Others, ESTIMATED AMOUNT (in lakhs):-1.50 **(5)** DMA/2024-25/OW/WORK_INDENT25884. Reserved Category:-Others, ESTIMATED AMOUNT (in lakhs):-6.70

RO.No.530:DIPR/CTA/KSMCA/2024-25

ಸಹಿ/– **ಪೌರಾಯುಕ್ತರು,**
ನಗರಸಭೆ, ಚಳ್ಳಕೆರೆ

---

ಕರ್ನಾಟಕ ಸರ್ಕಾರ

## ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.

ಸಂಖ್ಯೆ:23: ಕಾಇಂ:ಲೋಇ:ಹಾವಿ:ಸ.ಇಂ–2:2024–25

ದಿನಾಂಕ: 28.01.2025.

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2 ಹಾಗೂ ಕೆ.ಡಬ್ಲ್ಯೂ–3 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗ ವ್ಯಾಪ್ತಿಯ ಒಟ್ಟು 25 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಅವುಗಳಲ್ಲಿ 04 ಸಂಖ್ಯೆ ಕಾಮಗಾರಿಯನ್ನು ಪರಿಶಿಷ್ಟ ಜಾತಿ, 02 ಸಂಖ್ಯೆ ಕಾಮಗಾರಿಯನ್ನು ಪರಿಶಿಷ್ಟ ಪಂಗಡ, 01 ಸಂಖ್ಯೆ ಕಾಮಗಾರಿಯನ್ನು ಪ್ರವರ್ಗ–1 ಮತ್ತು 04 ಸಂಖ್ಯೆ ಕಾಮಗಾರಿಯನ್ನು ಪ್ರವರ್ಗ–2ಎ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ.100.00ಲಕ್ಷ ಹಾಗೂ ಕನಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ.10.00ಲಕ್ಷ. ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದ ಮೊತ್ತವು ಮಂಜೂರಾದ ಅಂದಾಜು ಮೊತ್ತವಾಗಿದ್ದು, ಜಿ.ಎಸ್.ಟಿ ಹಾಗೂ ಇತರೆಗಳನ್ನು ಹೊರತುಪಡಿಸಿ ಇ–ಪ್ರೊಕ್‌ನಡಿಯಲ್ಲಿ ಬರುವ ಟೆಂಡರ್‌ಗಿಟ್ಟ ಮೊತ್ತವನ್ನು ಪರಿಗಣಿಸಿ ಅದಕ್ಕನುಗುಣವಾಗಿ ಇ.ಎಂ.ಡಿ ಮತ್ತು ಗುತ್ತಿಗೆದಾರರ ದರ್ಜೆಯನ್ನು ಪರಿಗಣಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 10.02.2025, ಸಂಜೆ 4.00 ಗಂಟೆ ವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜನಿಯರ್, ಲೋಇ
ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/884/ಕೆಎಸ್‌ಎಂಸಿಎ/2024–25

---

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560023. ದೂರವಾಣಿ : 080–29557021
ಇ–ಮೇಲ್ : pdksaps@gmail.com

ಸಂಖ್ಯೆ. ಜೆಎಸ್‌ಎಪಿಎಸ್/ಪಿಆರ್‌ಸಿ/12/2024–25 ದಿನಾಂಕ: 30/01/2025

**ಇ–ಸಂಗ್ರಹಣ ವೇದಿಕೆ ಮೂಲಕ ಅಲ್ಪಾವಧಿ ಮರು ಟೆಂಡರ್ (ದ್ವಿ ಲಕೋಟೆ) (ಕಾಲ್–3) ಆಹ್ವಾನ ಪ್ರಕಟಣೆ**

ಐ.ಸಿ.ಟಿ.ಸಿ ಕೇಂದ್ರಗಳಿಗೆ ಅವಶ್ಯಕತೆ ಇರುವ ನ್ಯಾಕೋ ಸಿಬಿಇ/ಮೆಲ್ಟ್/ಬಿಎಂಡಬ್ಲ್ಯೂ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಟೆಂಡರ್ (ದ್ವಿ ಲಕೋಟೆ) (ಕಾಲ್–3) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10/02/2025. ಸಮಯ ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kpp.karnataka.gov.in

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/4687/ಆಕಾರ್/2024–25

---

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ

## ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/LIFT/26/2024-25 ದಿನಾಂಕ: 30–01–2025

**ಅಲ್ಪಾವಧಿ ಟೆಂಡರ್ ಅಧಿಸೂಚನೆ**

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ಅವಶ್ಯವಿರುವ **5 STOP LIFT** ನ್ನು ಪೂರೈಕೆ ಮತ್ತು ಸ್ಥಾಪನೆ ಮಾಡಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ: **30–01–2025** ರಿಂದ. 2) ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **04–02–2025 ರ ಸಂಜೆ 5.30 ಗಂಟೆವರೆಗೆ.** 3) ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **06–02–2025 ರ ಸಂಜೆ 5.30 ಗಂಟೆವರೆಗೆ.** 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: **10–02–2025 ರ ಬೆಳಿಗ್ಗೆ 10.30 ಗಂಟೆಗೆ.** ವಿವರವಾದ ಮಾಹಿತಿಗಾಗಿ ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿನೀಡಿ. ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ವಾಸಾಸಂಇ/ವಾ.ಪ್ರ/4694/ಅಡ್ವರ್ಟೋರ್/2024–25

---

## ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

Ref: No:EE/UTP/PB-3/2024-25/2459,24602461&2462
Dated:29-01-2025

**(KPPP ಪೋರ್ಟಲ್ ಮುಖಾಂತರ) ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPP–ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರರನ್ವಯ ಒಟ್ಟು ರೂ 1098.06 (ಜಿಎಸ್‌ಟಿ ರಹಿತ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ 03 ಕಾಮಗಾರಿಗಳ (ಇಂಡೆಂಟ್ ಸಂ: 2181 & 2183 3ನೇಕರೆ (1459 5ನೇಕರೆ) & ಒಟ್ಟು ರೂ 62.81 (ಜಿಎಸ್‌ಟಿ ರಹಿತ) ಲಕ್ಷ ಮೊತ್ತದ 2701 ಲೆಕ್ಕ ಶೀರ್ಷಿಕೆಯ 01 ಕಾಮಗಾಯ ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ ಸಂ: (2324 2ನೇಕರೆ)

ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 29–01–2025 to 06–02–2025ರ ಬೆಳಿಗ್ಗೆ 11.00 ರವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 03–02–2025 ಸಂಜೆ 04.00ರ ವರೆಗೆ ಇರುತ್ತದೆ. ದಿನಾಂಕ: 07–02–2025 ರಂದು ಬೆಳಿಗ್ಗೆ 11.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPP–ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು. ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆಪಿಪಿ– ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು(ಪ್ರ),
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

1534

---

## ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001. ದೂರವಾಣಿ: 080–22032034
ಇ–ಮೇಲ್: us2rr.rev.dept@gmail.com

ಸಂಖ್ಯೆ: ಕಂಇ 06 ಸಿಆರ್‌ಆರ್ 2024/Call-2 ದಿನಾಂಕ: 27/01/2025

**ಇ–ಟೆಂಡರ್ ಪ್ರಕಟಣೆ**

ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಈ ಕಛೇರಿಗೆ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ **ದಲಾಯತ್–04, ವಾಹನ ಚಾಲಕರು–01, ಡಾಟಾ ಎಂಟ್ರಿ ಆಪರೇಟರ್–02** ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಸಂಸ್ಥೆಯ ಮುಖಾಂತರ ಪಡೆಯಲು ಇ–ಟೆಂಡರನ್ನು e-Procurement Portal ಮುಖಾಂತರ ಸ್ಪರ್ಧಾತ್ಮಕ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರನ್ನು ಆಸಕ್ತ ನೋಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಆಹ್ವಾನಿಸಲಾಗಿರುತ್ತದೆ.

ಆಸಕ್ತ ಸಂಸ್ಥೆಯವರು ಇ–ಟೆಂಡರ್ ವಿವರಗಳನ್ನು https://KPPP.karnataka.gov.in ನಲ್ಲಿ ಪಡೆಯಬಹುದು ಹಾಗೂ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು https://KPPP.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಿ, ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಈ ಕೆಳಗೆ ಸಹಿ ಮಾಡಿರುವ ಸಹಿದಾರರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

**01) ಮಾನವ ಸಂಪನ್ಮೂಲ ಸೇವೆಯನ್ನು ಬಳಸುವ ಕಛೇರಿಯ ಹೆಸರು ಮತ್ತು ಇ–ಟೆಂಡರ್ ಸಂಖ್ಯೆ:** ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಈ ಕಛೇರಿಗೆ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್–02 ದಲಾಯತ್–04, ವಾಹನ ಚಾಲಕರು–01, ಹುದ್ದೆಗಳ ಸೇವೆಯನ್ನು ಒದಗಿಸುವುದು. https://KPPP.karnataka.gov.in

**02) ಹೊರಗುತ್ತಿಗೆ ಸೇವಾ ಅವಧಿ:** ಗುತ್ತಿಗೆ ಅವಧಿಯು ಆದೇಶ ಹೊರಡಿಸಿದ ದಿನಾಂಕದಿಂದ ಒಂದು (01) ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ ಮತ್ತು ಅವಶ್ಯಕತೆ ಇದ್ದಲ್ಲಿ ಮತ್ತೆ ಮುಂದುವರೆಸುವುದಕ್ಕೆ ಒಳಪಟ್ಟಿರುತ್ತದೆ.

**03) ಅರ್ಜಿ ನಮೂನೆ ಶುಲ್ಕ:** https://KPPP.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಬೇಕು.

**04) E.M.D (ಇ.ಎಂ.ಡಿ): ರೂ.1,00,000/–** (ಒಂದು ಲಕ್ಷ ರೂಪಾಯಿಗಳು ಮಾತ್ರ) ಸದರಿ ಮೊತ್ತವನ್ನು https://KPPP.karnataka.gov.in ನಲ್ಲಿ ಇ.ಎಂ.ಡಿ ಜಮೆಗೆ ಕ್ರಮ ವಹಿಸುವುದು.

05) ಇ–ಟೆಂಡರ್ ದಸ್ತಾವೇಜುಗಳನ್ನು ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಪಡೆಯಬಹುದಾದ ದಿನಾಂಕ: **28/01/2025 ರಿಂದ ದಿನಾಂಕ: 07/02/2025 ರವರೆಗೆ.**

06) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಮತ್ತು ವೇಳೆ: **07/02/2025 ರಂದು ಸಂಜೆ 4.00 ಗಂಟೆಯೊಳಗೆ.**

07) ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ತಾಂತ್ರಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **10/02/2025 ರಂದು ಅಪರಾಹ್ನ 04.01 ಗಂಟೆಗೆ.**

08) ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಆರ್ಥಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **24/02/2025 ರಂದು ಅಪರಾಹ್ನ 12.00 ಗಂಟೆಗೆ.**

ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಪುನರ್ವಸತಿ ಮತ್ತು ಪುನರ್‌ನಿರ್ಮಾಣ),
ಬಹುಮಹಡಿಗಳ ಕಟ್ಟಡ, ಬೆಂಗಳೂರು.

ವಾಸಾಸಂಇ/ವಾ.ಪ್ರ/4642/ಎಂಎಎ/24–25

---

## ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ 79 ಯುಕೆವಿ 2024 ದಿನಾಂಕ: 30.01.2025

**ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕುಲಪತಿ ಹುದ್ದೆಯ ನೇಮಕಾತಿ**

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ,
(ವಿಶ್ವವಿದ್ಯಾಲಯಗಳು) ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/4664/2024–25

---

## ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ 154 ಯುಜಿವಿ 2024 ದಿನಾಂಕ: 30.01.2025

**ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ, ಕುಲಪತಿ ಹುದ್ದೆಯ ನೇಮಕಾತಿ**

ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ,
(ವಿಶ್ವವಿದ್ಯಾಲಯಗಳು) ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/4665/2024–25

---

## ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ 148 ಯುಜಿವಿ 2024 ದಿನಾಂಕ: 30.01.2025

**ರಾಯಚೂರು ವಿಶ್ವವಿದ್ಯಾಲಯ ರಾಯಚೂರು, ಕುಲಪತಿಗಳ ಹುದ್ದೆಯ ನೇಮಕಾತಿ**

ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ರಾಯಚೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ,
(ವಿಶ್ವವಿದ್ಯಾಲಯಗಳು) ಉನ್ನತ ಶಿಕ್ಷಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/4666/2024–25

---

## ಉನ್ನತ ಶಿಕ್ಷಣ ಇಲಾಖೆ

6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು–560 001.

ಸಂಖ್ಯೆ: ಇಡಿ 41 ಎಂವಿವಿ 2024 ದಿನಾಂಕ: 30.01.2025

**ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ, ಕುಲಪತಿಗಳ ಹುದ್ದೆಯ ನೇಮಕಾತಿ**

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ **https://hed.karnataka.gov.in** ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ,
ವಿಶ್ವವಿದ್ಯಾಲಯಗಳು ಮತ್ತು ಸಮನ್ವಯ

ವಾಸಾಸಂಇ/ವಾಪ್ರ/ಜಿಎ/4663/2024–25

---

## ಕೆ.ಎಂ.ಎಫ್ ನಂದಿನಿ ವೀರ್ಯಾಣು ಕೇಂದ್ರ

(ಕೆ.ಎಂ.ಎಫ್‌ನ ಒಂದು ಘಟಕ)
ಕಾಕೋಳು ಅಂಚೆ, ಹೆಸರಘಟ್ಟ ಲೇಕ್, ಬೆಂಗಳೂರು–560 089.

ಸಂಖ್ಯೆ: ನಂ.ವೀ.ಕೇಂ/ಖರೀದಿ/ಹುಣಸೆ ಫಸಲು/66/2024–25/686 ದಿನಾಂಕ: 29.01.2025

**ಹುಣಸೆ ಫಸಲಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ**

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ (ಕೆ.ಎಂ.ಎಫ್) ಘಟಕವಾದ **ನಂದಿನಿ ವೀರ್ಯಾಣು ಕೇಂದ್ರ, ಕಾಕೋಳು ಅಂಚೆ, ಹೆಸರಘಟ್ಟ, ಬೆಂಗಳೂರು–560089** ಫಾರಂ ಹಾಗೂ ಇದರ ಉಪವಿಭಾಗವಾದ ಬುಲ್ ಮದರ್ ಫಾರಂನಲ್ಲಿರುವ **ಒಟ್ಟು 80 ಸಂಖ್ಯೆ ಹುಣಸೆ ಮರಗಳ ಹುಣಸೆ ಫಸಲನ್ನು** 2024–25 ನೇ ಸಾಲಿಗೆ ವಿಲೇವಾರಿ ಮಾಡುವ ಸಂಬಂಧ ಟೆಂಡರ್ ಕಂ ಬಹಿರಂಗ ಹರಾಜನ್ನು ಘಟಕದ ಕಚೇರಿ ಆವರಣದಲ್ಲಿ **ದಿನಾಂಕ: 18.02.2025 ರ ಮಂಗಳವಾರ ಮಧ್ಯಾಹ್ನ 12:00 ಗಂಟೆಗೆ** ಏರ್ಪಡಿಸಿದ್ದು, ಆಸಕ್ತರು ರೂ.150/– ಮೊತ್ತದ ಟೆಂಡರ್ ಫಾರಂ ಅರ್ಜಿ ಹಾಗೂ ರೂ. 5,000/– ಇ.ಎಂ.ಡಿ ಮೊತ್ತ ಪಾವತಿಸಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, **ಮೊಬೈಲ್ ಸಂಖ್ಯೆ: 9916676639/8861288418/9739593140** ಗಳನ್ನು ಸಂಪರ್ಕಿಸಬಹುದಾಗಿದೆ.

ನಂದಿನಿ ವೀರ್ಯಾಣು ಕೇಂದ್ರ
ಸಹಿ/– ನಿರ್ದೇಶಕರು (ಫಾರಂ)

---

ಕರ್ನಾಟಕ ಸರ್ಕಾರ

## ಕಾರ್ಯಪಾಲಕ ಇಂಜನಿಯರರ ಕಛೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ

ಸಂಖ್ಯೆ:ಕಾ.ಇಂ.ಗ್ರಾಕುನೀ&ನೈವಿ:ಮಂ:JJMTENDER21–22:2024–25/2341 ದಿ: 29.01.2025

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:23/2021–22 (ದ್ವಿ–ಲಕೋಟೆ ಪದ್ಧತಿ) 5ನೇ ಕರೆ (Kppp portal)**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.59.72ಲಕ್ಷಗಳು, ಪೂರ್ವಭಾವಿ ಸಭೆ ದಿನಾಂಕ:04.02.2025 ಬೆಳಿಗ್ಗೆ 11:00 ಗಂಟೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:06.02.2025 ಸಂಜೆ: 5:00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:07.02.2025 ಸಂಜೆ: 05:05 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.02.2025 ಬೆಳಿಗ್ಗೆ 11.00 ಗಂಟೆಗೆ ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ.ಗ್ರಾ.ಕು.ನೀ&ನೈ.ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232–222363.

ಸಹಿ/–ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/609/2024–25

---

## ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು – 560 104. ದೂರವಾಣಿ: 080–23209691
ಇ–ಮೇಲ್: westzone_hampinagar@rediffmail.com

ಸಂಖ್ಯೆ: ನಕೇಗ್ರಂ/ಪವ/ಲೆಪವಿ/77/ಪುತಾಕೆ/ಇ–ಟೆಂ/827/2024–25 ದಿನಾಂಕ: 30.01.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿರುವ ಶಾಖಾ/ವಾಚನಾಲಯ/ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳಿಗೆ ಹಾಗೂ 04 ಹೊರ ಜಿಲ್ಲೆಗಳಿಗೆ ಸರಬರಾಜು ಮಾಡಲು ಖರೀದಿಸಿದ ಪುಸ್ತಕಗಳಿಗೆ 2024–25ನೇ ಸಾಲಿಗೆ ಒಂದು ವರ್ಷಗಳ ರೇಟ್ ಕಾಂಟ್ರಾಕ್ಟ್ ಆಧಾರದ ಮೇಲೆ **"ಪುಸ್ತಕ ತಾಂತ್ರಿಕ ಕೆಲಸ ನಿರ್ವಹಣೆ"** ಸೇವೆಯನ್ನು ಪಡೆಯಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಮೂರು ವರ್ಷಗಳ ಅನುಭವವುಳ್ಳ ನೋಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತ ರೂ. 1,80,000/– (ರೂಪಾಯಿ ಒಂದು ಲಕ್ಷದ ಎಂಭತ್ತು ಸಾವಿರ ಮಾತ್ರ). ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು https://kppp.karnataka.gov.in ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **06.02.2025 ಸಮಯ ಸಾಯಂಕಾಲ 04:00 ಗಂಟೆಗೆ.** ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: **07.02.2025ರ ಸಮಯ ಸಾಯಂಕಾಲ 04:00 ಗಂಟೆಗೆ** ತೆರೆಯಲಾಗುವುದು.

ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕಛೇರಿ ದೂರವಾಣಿ ಸಂಖ್ಯೆ: 080–23209691

ಸಹಿ/–
ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ,
ಹಂಪಿನಗರ, ಬೆಂಗಳೂರು.

ವಾಸಾಸಂಇ/ವಾಪ್ರ/4682/ಎಂಎಎ/24–25

---

## KARNATAKA STATE DENTAL COUNCIL

No.143, 5th Main Road, Rajagopalnagar, Chamrajpet, Bengaluru, Karnataka 560018

**NOTICE**

This is to inform all the Registered Dental Practitioners to follow the standards of professional conduct and etiquettes as per Revised Dentists (Code of Ethics) Regulations, 2014.

The Karnataka State Dental Council has come to know that some of the Dental Practitioners are not following the Ethical Rules which are mandatory leading to Unethical Practices such as indulging in demeaning solicitation and false promises through advertisements in Social Media, Direct Marketing, Being associated with corporate bodies, Displaying unregistered/unrecognized Degree, Dispensation of Drugs, Conducting Dental Courses/Worksop/ Training without registering nor obtaining the prior permission from the State Registration Body or any other body as stipulated.

**Performing Facial Aesthetic treatment and Hair Transplants which should only be done by post graduates with specialization in Oral & Maxillofacial Surgery with any additional training as stipulated by DCI.**

**Also please ensure that a valid registration certificate issued by the Karnataka State Dental Council is displayed in the clinic/hospital.**

**Contraventions to the Code of Ethics attracts suspension of Registration as well as penalization as per rules of the Dentist Act 1948.**

**The undersigned requests the general public to consult only Registered Dentists and get Facial Aesthetics treatment/hair transplants from Oral & Maxillofacial Surgeons only.**

Date : 31/01/2025
Place : Bengaluru

Dr Ranganath V
President
KSDC

---

## ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ.ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ: 080–22133370, ವೆಬ್‌ಸೈಟ್: www.kpwd.karnataka.gov.in

**ಟೆಂಡರ್ ಪ್ರಕಟಣೆ ಸಂಖ್ಯೆ: 32/2024–25**
**ದಿನಾಂಕ: 29.01.2025**

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ. ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ಆನೇಕಲ್ ಉಪವಿಭಾಗಕ್ಕೆ** ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 700.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

**ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಕೆ.ಪಿ.ಪಿ.ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **06.02.2025 ಸಂಜೆ 5.00 ಗಂಟೆಯವರೆಗೆ.**
2. ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್ ಮೂಲಕ ತೆರೆಯುವ ದಿನಾಂಕ **07.02.2025 ಸಂಜೆ 5.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು

ವಾಸಸಂಇ/ಉನಿ–ಸಿ.ಪಿ/4670/ಕೆಎಸ್‌ಎಂಸಿಎ/2024–25

---

ಜಿಲ್ಲಾ ಪಂಚಾಯತ ಬಾಗಲಕೋಟೆ

## ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–1/ಟೆಂಡರ್/2024–25/4406
ದಿನಾಂಕ : 27–01–2025

**ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಏಕ & ದ್ವಿ-ಲಕೋಟೆ) ಕೆ.ಡಬ್ಲ್ಯೂ. 2, 3 & 4 ಬಿಡ್ ಡಾಕ್ಯೂಮೆಂಟ್**

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ **2023–24 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ : 5054 ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳ ರೂ. 7.50 ಕೋಟಿ ಅನುದಾನದಡಿ ಹಾಗೂ 2022–23 ನೇ ಸಾಲಿನ ಲೆಕ್ಕ ಶೀರ್ಷಿಕೆ : 5054 ರೂ. 21.50 ಕೋಟಿ ಅನುದಾನದ ಪೈಕಿ ರೂ. 12.50 ಕೋಟಿಗಳ ಮೊತ್ತದ ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆ ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳ ಅನುದಾನದ ಯೋಜನೆಯಡಿ ಅನುದಾನದ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ಉಪವಿಭಾಗ ವ್ಯಾಪ್ತಿಯ** ಈ ಕೆಳಗಿನ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. 1, 2 & 3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಕಾಮಗಾರಿಗಳ ಇಂಡೆಂಟ್ ನಂ. : **RDPR/2024-25/RD/WORK_INDENT11422, RDPR/2024-25/RD/WORK_INDENT11307, RDPR/2024-25/RD/WORK_INDENT12261,** ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಕಾಮಗಾರಿಯ ಇಂಡೆಂಟ್ ನಂ. : **RDPR/2024-25/RD/WORK_INDENT12305** ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 50.00 ದಿಂದ 120.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 11–02–2025 ರ ಸಂಜೆ 5.30 ಗಂಟೆವರೆಗೆ. 2) ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : 07–02–2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ. 3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 13–02–2025 ರ ಬೆಳಿಗ್ಗೆ 11.00 ಗಂಟೆಯ ನಂತರ. 4) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : **https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/458/ಮಣಿಪಾಲ್/2024–25

ಮರಗಳ ಬೇರುಗಳಿಂದ ಸ್ಮಾರಕದ ಸದೃಢತೆಗೆ ಧಕ್ಕೆ • ನಿರ್ವಹಣೆಯಲ್ಲಿ ಪುರಾತತ್ವ ಸರ್ವೇಕ್ಷಣಾ ಇಲಾಖೆ ವೈಫಲ್ಯ

# ಕಾನನವಾಗುತ್ತಿದೆ ದುರ್ಗದ ಕಲ್ಲಿನ ಕೋಟೆ

• ಎಂ.ಎನ್.ಯೋಗೇಶ್

**ಚಿತ್ರದುರ್ಗ:** ನಗರದಲ್ಲಿರುವ ಐತಿಹಾಸಿಕ ಕಲ್ಲಿನಕೋಟೆ ಗಟ್ಟಿತನಕ್ಕೆ ಹೆಸರುವಾಸಿ. ಆದರೆ, ಸದ್ಯ ಕಲ್ಲಿನಕೋಟೆ ಕಾನನವಾಗಿ ಪರಿವರ್ತನೆಗೊಂಡಿದ್ದು ಮರಗಿಡಗಳ ಬೇರುಗಳು ಕೋಟೆಯನ್ನು ಶಿಥಿಲಗೊಳಿಸುತ್ತಿವೆ. ಸಮರ್ಪಕ ನಿರ್ವಹಣೆಯ ಕೊರತೆಯಿಂದ ಕೋಟೆಯ ಗೋಡೆ, ಬುರುಜು, ಬತ್ತೇರಿಗಳು ಕುಸಿದಿವೆ.

ಏಳುಸುತ್ತಿನ ಕೋಟೆ ಇಂದಿಗೂ ಸದೃಢತೆಯ ಸಂಕೇತವಾಗಿದೆ. ಆದರೆ ಆವರಣದಲ್ಲಿ ಬೆಳೆದಿರುವ ಮರಗಳ ಬೇರುಗಳು ಕೋಟೆಯ ಗೋಡೆಗಳನ್ನು ಮೀಟುತ್ತಿದ್ದು, ಕೋಟೆಯ ಗಟ್ಟಿತನಕ್ಕೆ ಧಕ್ಕೆಯುಂಟಾಗಿದೆ. ಗಿಡ–ಗಂಟಿ ಹಾವಳಿಯಿಂದ ಕೋಟೆಯ ಸೌಂದರ್ಯಕ್ಕೂ ಕುಂದುಂಟಾಗಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅಧಿಕಾರಿಗಳ ಅಸಮರ್ಪಕ ನಿರ್ವಹಣೆಯಿಂದಾಗಿ ಕೋಟೆ ಹಾಳಾಗುತ್ತಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

ಅಲ, ಅರಳಿ, ಹೆಬ್ಬೇವು, ನೀಲಗಿರಿ ಸೇರಿ ಬೃಹತ್ ಗಿಡ–ಮರಗಳು ಕೋಟೆಯೊಳಗೆ ಬೆಳೆದಿವೆ. ಗೋಡೆಗಳೇ ಮರೆಯಾಗಿದ್ದು, ಅರಣ್ಯದಂತೆ ಕಾಣುತ್ತದೆ. ಪ್ರವೇಶದ್ವಾರ 'ಕಾಮನ ಬಾಗಿಲು' ಸೇರಿ ವಿವಿಧೆಡೆ ಗೋಡೆಯ ಮೇಲೆ ಗಿಡಗಳು ಚಿಗುರಿವೆ. ಒನಕೆ ಓಬವ್ವ ಕಿಂಡಿಯ ಹಿಂಭಾಗ, ಹನುಮನ ಬಾಗಿಲು, ಕೋಟೆಯ ಪಶ್ಚಿಮ ಭಾಗದ ಗೋಡೆಗಳೂ ಕುಸಿದಿವೆ. ಹಂಸ ಬತ್ತೇರಿ ಭಾಗದ ಗೋಡೆ ಕೂಡ ಕುಸಿದಿದ್ದು ದುರಸ್ತಿ ಕಂಡಿಲ್ಲ.


ಹನುಮನ ಬಾಗಿಲು ಬಳಿ ಚಿತ್ರದುರ್ಗದ ಕಲ್ಲಿನ ಕೋಟೆ ಕುಸಿದಿದೆ ಪ್ರಜಾವಾಣಿ ಚಿತ್ರ – ಚಂದ್ರಪ್ಪ.ವಿ

'ಎಲ್ಲಿ ಬೇಕಾದರೂ ಕಾಡು ಬೆಳೆಸಬಹುದು. ಆದರೆ ಕೋಟೆ ಕಟ್ಟಲು ಸಾಧ್ಯವಿಲ್ಲ. ಸಮೀಪದಲ್ಲೇ ಜೋಗಿಮಟ್ಟಿ ಅರಣ್ಯ ಪ್ರದೇಶವಿದ್ದು, ಅಲ್ಲಿ ಅರಣ್ಯ ಅಭಿವೃದ್ಧಿಪಡಿಸಬಹುದು. ಮುಂದಿನ ಪೀಳಿಗೆಗೆ ಕೋಟೆ ರಕ್ಷಿಸಬೇಕು. ಸಂರಕ್ಷಣೆ ಆಗದಿದ್ದರೆ ಕೋಟೆಯೇ ನಾಶವಾಗುವ ಅಪಾಯವಿದೆ' ಎಂದು ಇತಿಹಾಸ ಸಂಶೋಧಕ ಮಹಾಂತೇಶ್ ಹೇಳಿದರು.

ಒಂಟಿಕಲ್ಲು ಬಸವಣ್ಣ, ಬನಶಂಕರಿ ಗುಡಿ ಮುಂಭಾಗದ ಬತ್ತೇರಿ, ಮದ್ದು ಬೀಸುವ ಕಲ್ಲಿನ ಬಳಿಯ ಬತ್ತೇರಿ ಕೂಡ ಕುಸಿಯುವ ಸ್ಥಿತಿ ತಲುಪಿವೆ. ಬೇರು ಹೊರ ಚಾಚಿರುವ ಕಾರಣ ಗೋಡೆ ಬಿರುಕು ಬಿಡುತ್ತಿದೆ. ಗೋಡೆ ಬಿಗಿಗೊಳಿಸಲು ಹಿಂದೆಯೇ ಹಾಕಿರುವ ಸುಣ್ಣದ ಗಾರೆ ಕೂಡ ಕಿತ್ತು ಹೋಗಿದೆ.

ಪ್ರವಾಸಿಗರಿಗೆ ಹಾಕಲಾಗಿರುವ ಕಲ್ಲು ಬೆಂಚುಗಳು ಗಿಡಗಳ ನಡುವೆ ಮುಳುಗಿ ಹೋಗಿವೆ. ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಾಟಲಿಗಳು ಚೆಲ್ಲಾಡುತ್ತಿವೆ. ಶೌಚಾಲಯಗಳು ಇದ್ದರೂ ಅವುಗಳ ಬೀಗ ತೆಗೆದಿಲ್ಲ. ಕೋಟೆ ಆವರಣದಲ್ಲಿ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳು ಕೂಡ ಹಾಳಾಗಿವೆ. 3 ವರ್ಷಗಳ ಹಿಂದೆ ನಿರ್ಮಿಸಿರುವ ಮಾಹಿತಿ ಕೇಂದ್ರ, ಗ್ರಂಥಾಲಯ, ಟಿಕೆಟ್ ಕೌಂಟರ್ ಕಟ್ಟಡಗಳಿಗೆ ಬಿಡುಗಡೆ ಭಾಗ್ಯ ಬಂದಿಲ್ಲ.

'ನಾವು ಮೊದಲು ಕಹಳೆ ಬತ್ತೇರಿ, ನೆಲ್ಲಿಕಾಯಿ ಸಿದ್ದಪ್ಪನ ಬತ್ತೇರಿವರೆಗೂ ಚಾರಣ ಮಾಡುತ್ತಿದ್ದೆವು. ಆದರೆ ಈಗ ಗಿಡ–ಗಂಟಿಯಿಂದಾಗಿ ಚಾರಣದ ಹಾದಿಯೇ ಮಾಯವಾಗಿದೆ. ಕ್ರಿಮಿಕೀಟಗಳ ಹಾವಳಿ ಹೆಚ್ಚಾಗಿದ್ದು ಚಾರಣ ಸ್ಥಗಿತಗೊಳಿಸಿದ್ದೇವೆ' ಎಂದು ಚಾರಣಪ್ರಿಯ ಸಿ.ರಾಘವ್ ಹೇಳಿದರು.

## ಹಾವು, ಚೇಳು ಭಯ

ಕೋಟೆಯ ಆವರಣದಲ್ಲಿ ಸ್ಥಳೀಯರು ಬೆಳಿಗ್ಗೆ ಮತ್ತು ಸಂಜೆ ವಿಹಾರ ನಡೆಸುತ್ತಾರೆ. 'ಕೋಟೆ ವಾಯು ವಿಹಾರಿಗಳ ಸಂಘ' ರಚಿಸಲಾಗಿದೆ. ವಿಹಾರ ಮಾರ್ಗದಲ್ಲಿ ಗಿಡಗಂಟಿ ಬೆಳೆದಿದ್ದು ಹಾವು, ಚೇಳುಗಳು ಕಾಣಿಸಿಕೊಳ್ಳುತ್ತಿವೆ. ಈಚೆಗೆ ಹೆಬ್ಬಾವು ಕಾಣಿಸಿದ ನಂತರ ವಿಹಾರಿಗಳ ಸಂಖ್ಯೆ ತಗ್ಗಿದೆ.

'ವಿಹಾರಿಗಳ ಸಂಘದಿಂದಲೇ ಹಲವು ಬಾರಿ ಗಿಡಗಂಟಿ ತೆರವು-ಗೊಳಿಸಿದ್ದೇವೆ. ಪ್ರವಾಸಿಗರು ಹಾಗೂ ವಿಹಾರಿಗಳ ಸುರಕ್ಷತೆಗಾಗಿ ಎಎಸ್‌ಐ ಅಧಿಕಾರಿಗಳು ಆಗಿಂದಾಗ್ಗೆ ಕೋಟೆ ಆವರಣ ಸ್ವಚ್ಛಗೊಳಿಸಬೇಕು' ಎಂದು ವಾಯುವಿಹಾರಿಗಳ ಸಂಘದ ಅಧ್ಯಕ್ಷ ಸತ್ಯಪ್ಪ ಒತ್ತಾಯಿಸಿದರು.

**ಕುಸಿದಿರುವ ಕೋಟೆ ದುರಸ್ತಿ ಮಾಡಲಾಗುವುದು. ಆವರಣದಲ್ಲಿ ಬೆಳೆದಿರುವ ಗಿಡಗಳ ತೆರವು ಕಾರ್ಯಾಚರಣೆ ಈಗಾಗಲೇ ಆರಂಭವಾಗಿದೆ**

**ಪಿ.ಸುಧೀರ್**
ಸಂರಕ್ಷಣಾಧಿಕಾರಿ, ಎಎಸ್‌ಐ

## ಸುಗ್ರೀವಾಜ್ಞೆ: ಅಧಿಕಾರಿಗಳಿಗೆ ಹೊಣೆ

ಒಂದನೇ ಪುಟದಿಂದ...

'ಶುಕ್ರವಾರ (ಜ. 31) ಮಧ್ಯಾಹ್ನದ ವೇಳೆಗೆ ಮಸೂದೆಗೆ ಒಂದು ಸ್ವರೂಪ ಬರಬಹುದು. ಸುಗ್ರೀವಾಜ್ಞೆಯ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ಮುಖ್ಯಮಂತ್ರಿಗೆ ಸಚಿವ ಸಂಪುಟ ಸಭೆ ಅಧಿಕಾರ ನೀಡಿದೆ. ಹೀಗಾಗಿ, ಮತ್ತೊಮ್ಮೆ ಸಚಿವ ಸಂಪುಟಕ್ಕೆ ಮಂಡಿಸುವ ಪ್ರಮೇಯ ಬರುವುದಿಲ್ಲ' ಎಂದರು.

ಗೃಹ ಸಚಿವ ಜಿ. ಪರಮೇಶ್ವರ, ಸಹಕಾರ ಸಚಿವ ಕೆ.ಎನ್. ರಾಜಣ್ಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿ ಇದ್ದರು.

**ಸಂಪುಟ ಸಭೆಯಲ್ಲಿ ಚರ್ಚೆ:** ಸುಗ್ರೀವಾಜ್ಞೆ ಜಾರಿ ಕುರಿತಂತೆ ಗುರುವಾರ ಬೆಳಿಗ್ಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದರೂ ಕೆಲವು ತಾಂತ್ರಿಕ ಸಮಸ್ಯೆಗಳು ಪ್ರಸ್ತಾಪವಾದ ಕಾರಣ ಯಾವುದೇ ತೀರ್ಮಾನ ಆಗಿರಲಿಲ್ಲ. ಸಭೆಯ ಬಳಿಕ ಈ ಬಗ್ಗೆ ವಿವರಿಸಿದ ಎಚ್.ಕೆ. ಪಾಟೀಲ, 'ಸುಗ್ರೀವಾಜ್ಞೆಯಲ್ಲಿರುವ ಅಂಶಗಳಿಗೆ ಕೆಲವು ಕಾನೂನುಗಳು ಅಡ್ಡಿ ಆಗಬಹುದೇ ಎಂಬ ಬಗ್ಗೆ ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಮುಖ್ಯಮಂತ್ರಿಗೆ ಅಧಿಕಾರ ನೀಡಲಾಯಿತು' ಎಂದಿದ್ದರು.

# ಕಟ್ಟಿದ ಹಣ ಬಡ್ಡಿಗೆ ಹೋಯ್ತು; ಅಸಲು ಉಳೀತು

### ಬೀಗ ಹಾಕಲು ಬಂದ ಸಿಬ್ಬಂದಿ ತಡೆದ ಗ್ರಾಮಸ್ಥರು; ಮನೆ ಗೋಡೆ ಮೇಲೆ ಅಡಮಾನ ಬರಹ

ಪ್ರಜಾವಾಣಿ ವಾರ್ತೆ

**ತೋವಿನಕೆರೆ (ತುಮಕೂರು):** ಸಮಯಕ್ಕೆ ಸರಿಯಾಗಿ ಸಾಲದ ಕಂತು ಪಾವತಿಸಿಲ್ಲ ಎಂದು ಕೋರಾ ಹೋಬಳಿ ಗೌರಗೊಂಡನಹಳ್ಳಿಯ ವರಲಕ್ಷ್ಮಮ್ಮ ಎಂಬ ವೃದ್ಧೆಯ ಮನೆಗೆ ವಾರದ ಹಿಂದೆ ಬೀಗ ಜಡಿಯಲು ಹೋಗಿದ್ದ ಮೈಕ್ರೊ ಫೈನಾನ್ಸ್ ಸಿಬ್ಬಂದಿಯನ್ನು ಗ್ರಾಮಸ್ಥರೇ ತಡೆದು ವಾಪಸ್ ಕಳುಹಿಸಿದ್ದಾರೆ.

'ಕಟ್ಟಿದ ದುಡ್ಡು ಬಡ್ಡಿಗೆ ಹೋಯ್ತು; ಅಸಲು ಸಾಲ ಇನ್ನೂ ಬಾಕಿ ಉಳಿದಿದೆ' ಎಂದು ಫೈನಾನ್ಸ್ ಸಿಬ್ಬಂದಿ ಕಿರುಕುಳ ಕೊಡುತ್ತಿದ್ದಾರೆ ಎಂದು ವಾರದ ಹಿಂದೆ ನಡೆದ ಈ ಘಟನೆಯನ್ನು ವರಲಕ್ಷ್ಮಮ್ಮ ನೆನಪಿಸಿಕೊಂಡರು.

ವರಲಕ್ಷ್ಮಮ್ಮ ಅವರ ಮನೆ ಮುಂಭಾಗದ ಹೊರಗೋಡೆಗಳ ಮೇಲೆ ಮೈಕ್ರೊ ಫೈನಾನ್ಸ್ ಕಂಪನಿ ಸಿಬ್ಬಂದಿ ಗಾಢ ಕೆಂಪು ಬಣ್ಣದಲ್ಲಿ ಬರೆದ 'ಈ ಸ್ವತ್ತು AVIOM ಬ್ಯಾಂಕ್ ಅಧೀನದಲ್ಲಿದೆ ಎಚ್ ಎಲ್72458' ಎಂಬ ಬರಹ ಕಣ್ಣಿಗೆ ರಾಚುತ್ತದೆ. ಮನೆ ಮುಂಭಾಗದ ಕಬ್ಬಿಣದ ಗೇಟ್, ಮೆಟ್ಟಿಲು ಗೋಡೆಗಳ ಮೇಲೂ ಬ್ಯಾಂಕ್ ಹೆಸರು ಬರೆಯಲಾಗಿದೆ.


ತುಮಕೂರು ತಾಲ್ಲೂಕು ಕೋರಾ ಹೋಬಳಿಯ ಗೌರಗೊಂಡನಹಳ್ಳಿಯ ತಮ್ಮ ಮನೆಯ ಮುಂದೆ ವರಲಕ್ಷ್ಮಮ್ಮ. ಫೈನಾನ್ಸ್ ಸಿಬ್ಬಂದಿ ಬರೆದ ಬರಹ

'ಹೇಳಿದ ಸಮಯದಲ್ಲಿ ಹಣ ಕಟ್ಟಿರಲಿಲ್ಲ ಎಂದು ಫೈನಾನ್ಸ್ ಸಿಬ್ಬಂದಿ ಮನೆಯ ಗೋಡೆಯ ಮೇಲೆ 'ಮನೆ ನಮ್ಮ ಅಧೀನದಲ್ಲಿದೆ' ಎಂದು ಬರೆಸಿದ್ದರು. ಅದರ ಮೇಲೆ ಬಣ್ಣ ಹೊಡೆಸಿದರೂ ಮತ್ತೆ ಬಂದು ಬರೆದು ಹೋಗಿದ್ದಾರೆ ನೋಡಿ' ಎಂದು ವರಲಕ್ಷ್ಮಮ್ಮ ಮನೆ ಗೋಡೆಗಳನ್ನು ತೋರಿಸಿದರು.

'ಫೈನಾನ್ಸ್‌ನಿಂದ ₹2.62 ಲಕ್ಷ ಸಾಲ ಪಡೆದಿದ್ದೆ. ಈವರೆಗೆ ಪ್ರತಿ ತಿಂಗಳು ₹6,630ರಂತೆ 21 ಕಂತು ಪಾವತಿಸಿದ್ದೇನೆ. ಸಾಲ ವಸೂಲಿಗೆ ಬರುವವರು ಇನ್ನೂ ₹3.75 ಲಕ್ಷ ಬಾಕಿ ಇದೆ ಎಂದು ಹೇಳುತ್ತಿದ್ದಾರೆ. ಅದು ಹೇಗೆ ಎಂದು ಕೇಳಿದರೆ, ಈವರೆಗೆ ನೀವು ಪಾವತಿಸಿದ ಹಣ ಬಡ್ಡಿಗೆ ಹೊಂದಾಣಿಕೆಯಾಗಿದೆ. ಇನ್ನೂ ಅಸಲು ಬಾಕಿ ಉಳಿದುಕೊಂಡಿದೆ ಎನ್ನುತ್ತಿದ್ದಾರೆ' ಎಂದು ಅಳಲು ತೋಡಿಕೊಂಡರು.

ತೋವಿನಕೆರೆಗೆ ಸಮೀಪದ ಕುರಂಕೋಟೆ ಗ್ರಾಮದ ಒಂಟಿ ಮಹಿಳೆಯೊಬ್ಬರ ಮನೆ ಮೇಲೆ ಮೈಕ್ರೊ ಫೈನಾನ್ಸ್ ಕಂಪನಿಯವರು ಈ ಸ್ವತ್ತು ತಮ್ಮ ಅಡಮಾನದಲ್ಲಿದೆ ಎಂದು ಬರೆದಿದ್ದರು. ಫೈನಾನ್ಸ್ ಸಿಬ್ಬಂದಿ ಕಾಟಕ್ಕೆ ಬೇಸತ್ತ ಮಹಿಳೆ ಮಕ್ಕಳೊಂದಿಗೆ ಊರು ತೊರೆದಿದ್ದರು.

## ಫೈನಾನ್ಸ್ ಕಂಪನಿ ಕಿರುಕುಳ: ಆತ್ಮಹತ್ಯೆ

**ಹುಬ್ಬಳ್ಳಿ:** ಸಾಲಗಾರರ ಕಿರುಕುಳ ತಾಳಲಾರದೇ ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ನಿವಾಸಿ ರಫೀಕ್ ಬಾಬುಸಾಬ ತಿಗಡಿ (38) ಎಂಬುವರು ಸರಕುಸಾಗಣೆ ವಾಹನಕ್ಕೆ ನೇಣು ಹಾಕಿಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಖಾಸಗಿ ವ್ಯಕ್ತಿಗಳಿಂದ ₹ 6 ಲಕ್ಷ ಸಾಲ ಪಡೆದಿದ್ದ ರಫೀಕ್ ಮನೆಗೆ, ಸಾಲಗಾರರು ಪದೇ ಪದೇ ಬಂದು ಕಿರುಕುಳ ನೀಡುತ್ತಿದ್ದರು ಎಂದು ಬೈಲಹೊಂಗಲ ಠಾಣೆ ಪೊಲೀಸರು ತಿಳಿಸಿದ್ದಾರೆ.

**ಆತ್ಮಹತ್ಯೆಗೆ ಯತ್ನ:** ಸಾಲದ ಕಂತು ಕಟ್ಟಲು ತಡವಾಗಿದ್ದಕ್ಕೆ ಫೈನಾನ್ಸ್ ಕಂಪನಿಗಳು ನೀಡಿದ ಕಿರುಕುಳದಿಂದ ಬೇಸತ್ತು ಕಮರಿಪೇಟೆಯ ಕುಂಬಾರ ಓಣಿ ನಿವಾಸಿ ಮಾಹಬೂಬಅಲಿ ಬಕಾಲ (54) ಅವರು ಬುಧವಾರ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರನ್ನು ಕೆಎಂಸಿ–ಆರ್‌ಐ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನವನಗರದ ಶ್ರೀಫಿನ್ ಕ್ರೆಡಿಟ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕರಾದ ವಿನೋದ ದಾಸ್ತಿಕೊಪ್ಪ, ಸುಚಿತ್ ಪಾಟೀಲ, ಬಿಡನಾಳದ ಕ್ರೆಡಿಟ್ ಆಕ್ಸೆಸ್ ಗ್ರಾಮೀಣ ಲಿಮಿಟೆಡ್‌ನ ರವಿ ಪೂಜಾರ, ಉಣಕಲ್‌ನ ಇಕ್ವಿಟಾಸ್ ಫೈನಾನ್ಸ್ ಕಂಪನಿಯ ಸಿಬ್ಬಂದಿ ಸುನೀಲ್ ಸೋರಾಳೆ ಎಂಬುವರನ್ನು ಬಂಧಿಸಲಾಗಿದೆ' ಎಂದು ಕಮರಿಪೇಟೆ ಠಾಣೆ ಪೊಲೀಸರು ತಿಳಿಸಿದ್ದಾರೆ.

**ದೂರು ದಾಖಲು:** ಫೈನಾನ್ಸ್ ಕಂಪನಿಗಳಿಂದ ಕಿರುಕುಳದ ವಿರುದ್ಧ ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಮಾಡಬಾಳ ಗ್ರಾಮದ ನಿಂಬೆವ್ವ ದ್ಯಾವಪ್ಪ ದಿವಟಗಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಅಂಥದ್ದೇ ದೂರನ್ನು ಅನ್ನಪೂರ್ಣ ಸಬಕಾಳೆ ಎಂಬುವರು ಬಾಗಲಕೋಟೆ ಜಿಲ್ಲೆಯ ಜಮಖಂಡಿ ಪೊಲೀಸ್ ಠಾಣೆಯಲ್ಲಿ ನೀಡಿದ್ದಾರೆ.

# 'ಆಕಾಶ' ತೋರಿಸಿದ ಚಿನ್ನದಂಗಡಿ ಮಾಲೀಕ

ಪ್ರಜಾವಾಣಿ ವಾರ್ತೆ

**ತುಮಕೂರು:** ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಚಿನ್ನ ಖರೀದಿಸಿ ಬೆಲೆ ಹೆಚ್ಚಾದಾಗ ಮಾರಾಟ ಮಾಡಿ ದುಪ್ಪಟ್ಟು ಲಾಭ ಕೊಡುವುದಾಗಿ ಜನರನ್ನು ನಂಬಿಸಿ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪದ ಮೇರೆಗೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರಿನ ಆಕಾಶ್ ಜ್ಯುವೆಲರ್ಸ್ ಮಾಲೀಕ ಶಿವಾನಂದಮೂರ್ತಿ ಮತ್ತು ಕುಟುಂಬಸ್ಥರ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬುಧವಾರ ರಾತ್ರಿಯಿಂದ ಗುರುವಾರದ ಸಂಜೆ ವರೆಗೆ 50ಕ್ಕೂ ಹೆಚ್ಚು ಮಂದಿ ನಗರ ಠಾಣೆಯಲ್ಲಿ ದೂರು ನೀಡಿದ್ದಾರೆ. ಈವರೆಗೆ ಸುಮಾರು ₹12.50 ಕೋಟಿಗೂ ಹೆಚ್ಚು ವಂಚಿಸಿರುವುದು ಪತ್ತೆಯಾಗಿದೆ. ವಂಚನೆ ಮೊತ್ತ ಮತ್ತಷ್ಟು ಹೆಚ್ಚಾಗಬಹುದು. ಸದ್ಯ ಆರೋಪಿ ತಲೆಮರಿಸಿಕೊಂಡಿ-ದ್ದಾರೆ. ದೂರು ಸಲ್ಲಿಸುವವರ ಸಂಖ್ಯೆ ಹೆಚ್ಚಾಗಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಲ್. ಸಿದ್ಧಲಿಂಗಪ್ಪ ಎಂಬುವರು ನೀಡಿದ ದೂರಿನ ಮೇರೆಗೆ ಶಿವಾನಂದಮೂರ್ತಿ, ಪತ್ನಿ ಅನ್ನಪೂರ್ಣ, ಪುತ್ರ ಆಕಾಶ್, ನಾದಿನಿ ಉಮಾದೇವಿ, ಆಕೆಯ ಗಂಡ ನಟರಾಜು ಎಂಬುವರ ವಿರುದ್ಧ ಕರ್ನಾಟಕ ಹಣಕಾಸು ಸಂಸ್ಥೆಗೆ ಠೇವಣಿದಾರರ ಹಿತರಕ್ಷಣಾ ಅಧಿನಿಯಮ ಹಾಗೂ ಕಲಂ 4, 5, 6 ಬಹುಮಾನ ಚೀಟಿಗಳು ಮತ್ತು ಹಣ ಚಲಾವಣೆ ಯೋಜನೆಗಳ (ನಿಷೇಧ) ನಿಯಮ-1980 ಅನ್ವಯ ಪ್ರಕರಣ ದಾಖಲಾಗಿದೆ.

'ಹಣ ಹೂಡಿಕೆ ಅಥವಾ ಠೇವಣಿ ಇರಿಸಿದರೆ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆಯಾದಾಗ ಚಿನ್ನ ಖರೀದಿಸಿ ದರ ಹೆಚ್ಚಾದಾಗ ಮಾರಾಟ ಮಾಡಿ ಅಧಿಕ ಲಾಭ ನೀಡುವುದಾಗಿ ನಂಬಿಸಿದ್ದರು. ಹಣಕ್ಕೆ ಪ್ರತಿಯಾಗಿ ಆಕಾಶ್ ಜ್ಯುವೆಲರ್ಸ್‌ಗೆ ಸಂಬಂಧಿಸಿದ ಠೇವಣಿ ಪ್ರಮಾಣ ಪತ್ರ ನೀಡುವುದಾಗಿ ತಿಳಿಸಿದ್ದರು. ಇದನ್ನು ನಂಬಿ ಹಣ ಹೂಡಿಕೆ ಮಾಡಿದೆ' ಎಂದು ಸಿದ್ಧಲಿಂಗಪ್ಪ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

# 'ಅಪ್ಪ–ಮಕ್ಕಳಿಂದ ಉಸ್ತುವಾರಿಗಳಿಗೆ ಲಾಭ'

ಒಂದನೇ ಪುಟದಿಂದ...

'ವಿಜಯೇಂದ್ರ ಚಡ್ಡಿ ಹಾಕುವ ಮೊದಲು ನಾವು ಪಕ್ಷದಲ್ಲಿ ಇದ್ದೆವು. ಈಗ ಪಕ್ಷ ಯಾವ ದಿಕ್ಕಿನಲ್ಲಿ ಹೋಗುತ್ತಿದೆ. ಹೀಗೆ ಆದರೆ ಕೊನೆಗೆ ಅಪ್ಪ–ಮಕ್ಕಳಷ್ಟೇ ಉಳಿಯುತ್ತಾರೆ. ಅವರ ಹಣ ಈಗ ಮಾತನಾಡುತ್ತಿದೆ. ಮತ್ತೊಂದು ಕಡೆ ಪಕ್ಷ ಬೆಳೆಸುವ ಗುಂಪು ದೊಡ್ಡದಾಗು-ತ್ತಿದೆ. ಏನೇ ಆದರೂ, ವಿಜಯೇಂದ್ರ ಅವರ ಸರ್ವಾಧಿಕಾರ ಒಪ್ಪಲು ಸಾಧ್ಯವೇ ಇಲ್ಲ. ವಿಜಯೇಂದ್ರ ಕೈಬಿಟ್ಟು ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡುವ ಕುರಿತು ಎಲ್ಲರೂ ಸೇರಿ ವರಿಷ್ಠರಿಗೆ ಮನವಿ ಮಾಡುತ್ತೇವೆ' ಎಂದರು.

ವಿಜಯೇಂದ್ರ ಅಧ್ಯಕ್ಷರಾದ ದಿನದಿಂದಲೂ ಬೀದಿ ಜಗಳವಾಗಿರುವ ಪಕ್ಷದ ಆಂತರಿಕ ಕಲಹ, ಜಿಲ್ಲಾ ಘಟಕದ ಅಧ್ಯಕ್ಷರ ಮೊದಲ ಪಟ್ಟಿ ಬಿಡುಗಡೆಯ ನಂತರ ತಾರಕಕ್ಕೇರಿದೆ.

23 ಜಿಲ್ಲಾ ಘಟಕಗಳ ಅಧ್ಯಕ್ಷರ ಪಟ್ಟಿ ಬುಧವಾರ ಬಿಡುಗಡೆಯಾಗುತ್ತಿದ್ದಂತೆ-ಯೇ ವಿಜಯೇಂದ್ರ ವಿರುದ್ಧ ಆಕ್ರೋಶ ಹೊರಹಾಕಿದ್ದ ಚಿಕ್ಕಬಳ್ಳಾಪುರ ಸಂಸದ ಕೆ. ಸುಧಾಕರ್, ಅವರ ಮೇಲೆ ಯುದ್ಧ ಸಾರುವುದಾಗಿ ಘೋಷಿಸಿದ್ದರು.

**ವಿಲಾಸಿ ರಾಜಕಾರಣಿ–ಕಿಡಿ:** ಕಾಂಗ್ರೆಸ್‌ನಿಂದ ವಲಸೆ ಬಂದಿರುವ ಕೆ. ಸುಧಾಕರ್ ಒಬ್ಬ ಬ್ಲ್ಯಾಕ್‌ಮೇಲ್ ಮತ್ತು ವಿಲಾಸಿ ರಾಜಕಾರಣಿ. ಪಕ್ಷದ ನಾಯಕರ ವಿರುದ್ಧ ಟೀಕೆ ಮುಂದುವರಿಸಿದರೆ ಅವರ ಬಂಡವಾಳ ಬಿಚ್ಚಿಡಲಾಗುವುದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

'ಸುಧಾಕರ್ ತಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಬೇಕು. ರಾಜಕಾರಣದಲ್ಲಿ ತಾಳ್ಮೆ ಮುಖ್ಯ. ತಮ್ಮ ತಾಳಕ್ಕೆ ತಕ್ಕಂತೆ ಆಗಲಿಲ್ಲ ಎಂದು ಬಹಿರಂಗವಾಗಿ ಟೀಕೆ ಮಾಡುವುದು ಸರಿಯಲ್ಲ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಹೇಳಿದರು.

## ಇಂದು ಯತ್ನಾಳ ಬಣದ ಸಭೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಆಯ್ಕೆ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರ ಪಟ್ಟಿ ಕುರಿತು ಚರ್ಚೆ ನಡೆಸಲು ಜ.31ರಂದು ಸಭೆ ಕರೆಯಲಾಗಿದೆ ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ಚುನಾವಣೆಗೆ ಸ್ಪರ್ಧಿಸುವ ಕುರಿತು ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು. ಯಾರು ಅಭ್ಯರ್ಥಿಯಾಗುತ್ತಾರೆ ಎನ್ನುವುದು ಖಚಿತವಾಗಿಲ್ಲ. ಈಗ ಬಿಡುಗಡೆಯಾಗಿರುವ ಜಿಲ್ಲಾ ಘಟಕಗಳ ಅಧ್ಯಕ್ಷರ ಪಟ್ಟಿ ಕುರಿತು ಚರ್ಚಿಸಲಾಗುವುದು. ನಂತರ ಪಕ್ಷದ ತಟಸ್ಥ ಬಣ ಹಾಗೂ ಹಿರಿಯ ನಾಯಕರ ಜತೆ ಚರ್ಚೆ ನಡೆಸಲಾಗುವುದು ಎಂದರು.

## 'ಸುಧಾಕರ್ ಹೇಳಿಕೆ ಶೋಭೆ ತರದು'

ಒಂದನೇ ಪುಟದಿಂದ...

'ನಾನು ಮುಖ್ಯಮಂತ್ರಿ ಆಗಲು ಪಕ್ಷ ಸಂಘಟನೆ ಮಾಡುತ್ತಿಲ್ಲ. ಪಕ್ಷ ಬಲಪಡಿಸಲು ಹಗಲು, ರಾತ್ರಿ ಶ್ರಮಿಸುತ್ತಿದ್ದೇನೆ. ಅಷ್ಟಕ್ಕೂ ಚಿಕ್ಕಬಳ್ಳಾಪುರ-ದಲ್ಲಿ ಆಯ್ಕೆ ಆಗಿರುವುದು ಸುಧಾಕರ್ ಸಂಬಂಧಿಯೇ. ಬೇರೆ ಆಕಾಂಕ್ಷಿಗಳು ಒಳ್ಳೆಯ ಕೆಲಸ ಮಾಡಿದರೆ ಮುಂದೆ ಅವಕಾಶ ಸಿಗುತ್ತದೆ. ತಾಳ್ಮೆ ಇರಬೇಕು' ಎಂದು ಹೇಳಿದರು.

'ಸುಧಾಕರ್ ನನಗೆ ಫೋನ್ ಕರೆ ಮಾಡಿಲ್ಲ. ನಾಲ್ಕು ದಿನಗಳ ಹಿಂದೆ, ಮಾತನಾಡಬೇಕಿದೆ ಎಂದು ಸಂದೇಶ ಕಳುಹಿಸಿದ್ದರು. ನಾನು ದೆಹಲಿಗೆ ಹೋಗಿದ್ದ ಕಾರಣ ಭೇಟಿಯಾಗಿರಲಿಲ್ಲ. ಅಂತಹ ನಾಯಕರ ಕರೆ ಸ್ವೀಕರಿಸ-ಲಾಗದಷ್ಟು ದೊಡ್ಡವನೇನಲ್ಲ' ಎಂದರು.

## 'ಸುಧಾಕರ್ ಮರಳಿ ಕಾಂಗ್ರೆಸ್ ಸೇರಲಿ'

ಒಂದನೇ ಪುಟದಿಂದ...

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು 40 ವರ್ಷ ರಾಜಕಾರಣ ಮಾಡಿದ್ದೇನೆ. ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸಿಲ್ಲ. ಬಾಯಿಮುಚ್ಚಿಕೊಂಡು ಇದ್ದೇನೆ. 2019ರಲ್ಲಿ ಕಾಂಗ್ರೆಸ್, ಜೆಡಿಎಸ್ ಶಾಸಕರ ರಾಜೀನಾಮೆ ನಂತರ ಸ್ಪಷ್ಟ ಬಹುಮತ ಸಿಗುತ್ತದೆ ಎನ್ನುವುದು ಖಚಿತ ಪಡಿಸಿಕೊಂಡೇ ಕೊನೆಯಲ್ಲಿ ಬಿಜೆಪಿ ಸೇರಿದ್ದ ಸುಧಾಕರ್, ಎರಡು ಪ್ರಮುಖ ಖಾತೆ ಪಡೆದರು. ಸಚಿವರಾಗಿದ್ದರೂ 2023ರ ಚುನಾವಣೆಯಲ್ಲಿ ಸೋಲು ಕಂಡರು. ಈಗ ಪಕ್ಷದ ಅಧ್ಯಕ್ಷರ ವಿರುದ್ಧ ಬಹಿರಂಗ ಟೀಕೆ ಮಾಡುತ್ತಿದ್ದಾರೆ' ಎಂದರು.

'ಹೊಸಕೋಟೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡುವ ಮೂಲಕ ಪಕ್ಷದ ಅಭ್ಯರ್ಥಿ ಸೋಲಿಗೆ ಕಾರಣರಾಗಿದ್ದ ಸುಧಾಕರ್. ಈಗ ಬಿಜೆಪಿಗೆ ಧಕ್ಕೆ ಮಾಡಲು ಹೊರಟಿದ್ದಾರೆ. ಬಿಜೆಪಿ ಸೇರಿ ಮತ್ತೆ ಹೊರಹೋದವರು ಯಾರೂ ರಾಜಕೀಯ ಏಳಿಗೆ ಕಂಡಿಲ್ಲ' ಎಂದು ಹೇಳಿದರು.

# ಮದುವೆಗೆ ನಿರಾಕರಣೆ ವಿದ್ಯಾರ್ಥಿನಿ ಕೊಲೆ

ಪ್ರಜಾವಾಣಿ ವಾರ್ತೆ

**ಸಿಂಧನೂರು (ರಾಯಚೂರು ಜಿಲ್ಲೆ):** ಮದುವೆ ಮಾಡಿಕೊಳ್ಳಲು ನಿರಾಕರಿಸಿದ್ದರಿಂದ ಸಿಟ್ಟಿಗೆದ್ದ ಯುವಕನೊಬ್ಬ, ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎಂ.ಎಸ್ಸಿ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿನಿಯನ್ನು ನಗರದ ಹೊರವಲಯದ ಗೌತಮ ಲೇಔಟ್‌ನಲ್ಲಿ ಚಾಕುವಿನಿಂದ ಕತ್ತುಕೊಯ್ದು ಕೊಲೆ ಮಾಡಿದ್ದಾನೆ.

ಲಿಂಗಸುಗೂರು ಪಟ್ಟಣದ ಶಿಫಾ ಅಬ್ದುಲ್ ವಾಹೀದ್ (24) ಕೊಲೆಯಾದ ವಿದ್ಯಾರ್ಥಿನಿ. ಟೈಲ್ಸ್ ಜೋಡಿಸುವ ಕೆಲಸ ಮಾಡುತ್ತಿದ್ದ ಮುಬಿನ್, ಕೊಲೆ ಮಾಡಿದ ಬಳಿಕ ಲಿಂಗಸುಗೂರು ಠಾಣೆಗೆ ತೆರಳಿ ಶರಣಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುರುವಾರ ಬೆಳಿಗ್ಗೆ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಲಿಂಗಸುಗೂರಿನಿಂದ ಸಿಂಧನೂರಿನ ಕಾಲೇಜಿಗೆ ಶಿಫಾ ಬಂದಿದ್ದಳು. ಮುಬಿನ್ ಬೈಕ್‌ನಲ್ಲಿ ಶಿಫಾಳನ್ನು ಹಿಂಬಾಲಿಸಿದ್ದ. ಮಹತ್ವದ ವಿಚಾರ ಮಾತನಾಡುವುದಿದೆ ಎಂದು ಹೇಳಿ ಗೌತಮ ಲೇಔಟ್‌ಗೆ ಕರೆಸಿಕೊಂಡಿದ್ದ ಆತ, ಚಾಕುವಿನಿಂದ ವಿದ್ಯಾರ್ಥಿನಿಯ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ.

'ನಾನು ಶಿಫಾಳನ್ನು ಪ್ರೀತಿಸುತ್ತಿದ್ದೆ. ತನ್ನ ಮನೆಯವರು ಒಪ್ಪಿದರೆ ಮಾತ್ರ ನಿನ್ನನ್ನು ಮದುವೆಯಾಗುವೆ ಎಂದು ಆಕೆ ಆಕ್ಷೇಪಿಸಿದ್ದಕ್ಕೆ ಕೊಲೆ ಮಾಡಿದ್ದೇನೆ' ಎಂದು ಆರೋಪಿ ವಿಚಾರಣೆ ವೇಳೆ ಹೇಳಿಕೆ ನೀಡಿದ್ದಾನೆ ಎಂದು ಸಿಂಧನೂರು ಪೊಲೀಸರು ತಿಳಿಸಿದ್ದಾರೆ.


ಶಿಫಾ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ, ಡಿವೈಎಸ್‌ಪಿ ಬಿ.ಎಸ್. ತಳವಾರ, ಗ್ರಾಮೀಣ ಠಾಣೆಯ ಸಿಪಿಐ ವೀರಾರೆಡ್ಡಿ, ಬಳಗಾನೂರು ಪಿಎಸ್‌ಐ ಯರಿಯಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

'ಕಾಲೇಜಿಗೆ ಹೋಗುತ್ತಿದ್ದಾಗ ಯುವಕ ನಿತ್ಯ ಪೀಡಿಸುತ್ತಿದ್ದ ಬಗ್ಗೆ ಮಗಳು ತಿಳಿಸಿದ್ದಳು. ಆತನನ್ನು ಹುಡುಕಿ ಬುದ್ಧಿ ಕಲಿಸುತ್ತೇವೆ. ಅಲ್ಲಿಯವರೆಗೂ ಮನೆಯಲ್ಲೇ ಇರುವಂತೆ ತಿಳಿಸಿದ್ದೆ. ಹೀಗಿದ್ದರೂ ಬೆಳಿಗ್ಗೆ 7 ಗಂಟೆಗೆ ಮಗಳು ಕಾಲೇಜಿಗೆ ಹೋಗಿದ್ದಳು' ಎಂದು ಕಣ್ಣೀರು ಹಾಕಿದ ವಿದ್ಯಾರ್ಥಿನಿಯ ತಂದೆ ಅಬ್ದುಲ್ ವಾಹೀದ್, 'ಕಾಲೇಜಿಗೆ ಬರುವ ಹೆಣ್ಣುಮಕ್ಕಳಿಗೆ ಕಿರುಕುಳ ಕೊಡುವ ಹಾಗೂ ಕೊಲೆ ಮಾಡುವ ವ್ಯಕ್ತಿಗಳನ್ನು ಗುಂಡಿಕ್ಕಿ ಕೊಲ್ಲಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು. 9 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

ಜೈಪುರ ಸಾಹಿತ್ಯ ಉತ್ಸವದಲ್ಲಿ ಜನರ ಹುಮ್ಮಸ್ಸು; ಸಂಗೀತ–ಜನಪದ ಕಲಾಮೇಳದ ರಂಗು

# ವಿಜ್ಞಾನ–ಮಾನವೀಯತೆಗೆ ಸಾಹಿತ್ಯ ಸೇತು

• ವಿಕ್ರಂ ಕಾಂತಿಕೆರೆ

**ಜೈಪುರ:** ಭಾರತದ ನಾನಾ ಭಾಗ ಮತ್ತು ವಿಶ್ವದ ಅನೇಕ ಕಡೆಗಳ ಸಾಹಿತ್ಯಾಸಕ್ತರು, ವಿಚಾರ ಪ್ರಿಯರ ಕುತೂಹಲ, ಹುಮ್ಮಸ್ಸಿನಲ್ಲಿ ಜೈಪುರ ಸಾಹಿತ್ಯ ಉತ್ಸವದ (ಜೈಪುರ್ ಲಿಟ್‌ಫೆಸ್ಟ್) 18ನೇ ಆವೃತ್ತಿ ಗುರುವಾರ ಆರಂಭಗೊಂಡಿತು.

ಡಂಕನ್ ಚಾಪ್ಲೆನ್ ಅವರ ಸೌಂಡ್‌ಸ್ಕೇಪ್ ಸೃಷ್ಟಿಸಿದ ಧ್ಯಾನಯೋಗ್ಯ ವಾತಾವರಣದಲ್ಲಿ ತ್ಯಾಗರಾಜರ ಕೀರ್ತನೆ ಮತ್ತು ಮೀರಾ ಭಜನ್ ಒಳಗೊಂಡ ಸುಪ್ರಿಯಾ ನಾಗರಾಜ್ ಅವರ ಸಂಗೀತ ಸುಧೆ, ನಾತುಲಾಲ್ ಸೋಳಂಕಿ ತಂಡದ ನಗಾರದ ನಾದಮಾಧುರ್ಯ, ರಾಜಸ್ಥಾನದ ಜಾನಪದದ ತುಣುಕು ಹೊತ್ತ ಪುಟಾಣಿ ಮೆರವಣಿಗೆ ಉದ್ಘಾಟನಾ ಸಮಾರಂಭಕ್ಕೆ ರಂಗು ತುಂಬಿತು.

ತೆರೆದ ಅಂಗಣದಲ್ಲಿರುವ ಮುಖ್ಯ ವೇದಿಕೆ 'ಫ್ರಂಟ್ ಲಾನ್'ನಲ್ಲಿ ನಡೆದ ಪ್ರಮುಖ ಗೋಷ್ಠಿಗಳಲ್ಲಿ ಸಹೃದಯರು ಜಾಗ ಸಾಲದೆ ನಿಂತುಕೊಂಡೇ ಭಾಗವಹಿಸಿದರು. ಗೋಷ್ಠಿಗಳು ಮುಗಿದ ಮೇಲೆ ಲೇಖಕರು, ಚಿಂತಕರ ಹಸ್ತಾಕ್ಷರ ಪಡೆಯಲು ಮುಗಿಬಿದ್ದವರು ನೂರಿನ್ನೂರು ಮೀಟರ್ ಉದ್ದದ ಸಾಲಿನಲ್ಲಿ ಸರದಿಗಾಗಿ ಕಾದರು.


ಸಂವಾದದಲ್ಲಿ ಮಾತನಾಡಿದ ಸುಧಾಮೂರ್ತಿ

ಮೊದಲ ದಿನದ ವಿಚಾರ ಮಂಥನದಲ್ಲಿ ವಿಜ್ಞಾನ–ತಂತ್ರಜ್ಞಾನ ಮತ್ತು ಮಾನವಿಕ–ಸಾಹಿತ್ಯದ ವಿಷಯಗಳು ಚರ್ಚೆಗೆ ಬಂದವು. ದಿಕ್ಸೂಚಿ ಭಾಷಣ ಮಾಡಿದ ನೊಬೆಲ್ ಪ್ರಶಸ್ತಿ ಪುರಸ್ಕೃತ ವೆಂಕಿ ರಾಮಕೃಷ್ಣನ್, ವಿಜ್ಞಾನ ಮತ್ತು ಮಾನವೀಯ ವಿಷಯಗಳ ನಡುವಿನ ಕಂದಕ ಇಲ್ಲವಾಗಿಸಲು ಭಾವಲೋಕ ಸೇತುವೆ-ಯಾಗಬೇಕಾಗಿದೆ ಎಂದರು.

'ಎಐ ಮತ್ತು ಜೆನೆಟಿಕ್ ಎಂಜಿನಿ-ಯರಿಂಗ್‌ನಂಥ ತಂತ್ರಜ್ಞಾನ ಭರವಸೆ ಮೂಡಿಸಿದೆ. ಆದರೆ ಅದರ ಬಳಕೆಯಲ್ಲಿ ಎಚ್ಚರ ತಪ್ಪಿದರೆ ಅನಾಹುತ ತಪ್ಪಿದ್ದಲ್ಲ. ಪರಿಸರ, ಆಹಾರ ಭದ್ರತೆ, ಭವಿಷ್ಯದ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಕಾಣಬೇಕಾದ ಮಹತ್ತರ ಜವಾಬ್ದಾರಿ ವಿಜ್ಞಾನ ಲೋಕಕ್ಕೆ ಇರುವುದರಿಂದ ಎಚ್ಚರಿಕೆಯ ಹೆಜ್ಜೆ ಇರಿಸಬೇಕಾಗಿದೆ' ಎಂದರು.

'ವಿಜ್ಞಾನಿಗಳು ಅವರಷ್ಟಕ್ಕೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಸಾಹಿತ್ಯ, ತತ್ವಶಾಸ್ತ್ರ, ಇತಿಹಾಸ ಮುಂತಾದವುಗಳ ಗಟ್ಟಿ ಕೋಟೆಯ ಕಾವಲಿದ್ದರೆ ಕಾರ್ಯಯೋಜನೆಗಳು ಯಶಸ್ವಿಯಾಗ-ಬಲ್ಲವು' ಎಂದು ವೆಂಕಿ ಹೇಳಿದರು.

'ಅಂತರಂಗದ ಮಗುವಿನ ಲೋಕ' ಎಂಬ ವಿಷಯದಲ್ಲಿ ಪ್ರಕಾಶಕಿ ಮೇರು ಗೋಖಲೆ ನಡೆಸಿಕೊಟ್ಟ ಸಂವಾದದಲ್ಲಿ ಮಾತನಾಡಿದ ಲೇಖಕಿ ಸುಧಾ ಮೂರ್ತಿ 'ಕಥಾಲೋಕ ಭಾವನಾತ್ಮಕವಾಗಿದ್ದು ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಅದನ್ನು ಸೃಷ್ಟಿಸಲು ಸಾಧ್ಯವಿಲ್ಲ. ಆದ್ದರಿಂದ ಭಾವಲೋಕಕ್ಕೂ ವಿಜ್ಞಾನಕ್ಕೂ ತಳುಕು ಹಾಕುವ ಪ್ರಯತ್ನ ಮಾಡಬಾರದು' ಎಂದರು.

'ಬರೆಯುವಾಗ ಮಗುವಾಗುವ ನಾನು ಎಂದಿಗೂ ಸಹಜವಾಗಿ ಇರಲು ಬಯಸುತ್ತೇನೆ. ಅದರಲ್ಲಿ ಖುಷಿ ಇದೆ. ಬರೆಯುವ ಮೊದಲು ಅಧ್ಯಯನದಲ್ಲಿ ತೊಡಗುತ್ತೇನೆ. ದುಃಖದ ಪರಿಸ್ಥಿತಿಯ ಕಥೆಗಳನ್ನು ಬರೆಯುವುದಿಲ್ಲ. ನನ್ನ ಕಥೆಗಳೆಲ್ಲವೂ ಶುಭ ಮುಕ್ತಾಯ ಕಾಣುತ್ತವೆ' ಎಂದರು.

'ಸಮಸ್ಯೆಗಳು ಕಾಡಿದಾಗ ನನ್ನ ಅನೇಕ ಕಥೆಗಳು ನನಗೇ ಸಮಾಧಾನ ನೀಡುತ್ತವೆ. ಸಮಸ್ಯೆಗಳು ಬಂದಾಗ ನಾವು ಅದಕ್ಕಿಂತ ದೊಡ್ಡವರಾಗಬೇಕು. ಹಾಗಾದಾಗ ಸಮಸ್ಯೆ ಸಣ್ಣದಾಗಿ ಹೋಗುತ್ತದೆ ಎಂಬುದು ನನ್ನ ಜೀವನ ತತ್ವ' ಎಂದು ಹೇಳಿದರು.

**ಜೈಪುರ ಲಿಟ್‌ಫೆಸ್ಟ್‌ನಲ್ಲಿ ಈ ವರೆಗೆ 8 ಸಾವಿರ ಲೇಖಕರು ಪಾಲ್ಗೊಂಡಿದ್ದು 50 ಲಕ್ಷ ಜನರು ಇಲ್ಲಿಗೆ ಬಂದಿದ್ದಾರೆ. ವಿದೇಶಗಳಲ್ಲಿ ಈ ಉತ್ಸವ ಜನಜನಿತವಾಗಿದೆ**

**ಸಂಜಯ್ ರಾಯ್**
ಜೈಪುರ್ ಲಿಟ್‌ಫೆಸ್ಟ್ ನಿರ್ವಾಹಕ

## ಸುದ್ದಿ 2 ನಿಮಿಷ


### ಪೆರಿಯ ನಂಬಿ ಪಟ್ಟಕ್ಕೆ ಕೊಕ್ಕಡದ ತೋಡ್ತಿಲ್ಲಾಯ ನೇಮಕ

**ಉಪ್ಪಿನಂಗಡಿ:** ದಕ್ಷಿಣ ಕನ್ನಡ ಜಿಲ್ಲೆಯ ಕೊಕ್ಕಡ ಮೂಲದ ಅರ್ಚಕ ಬಡೆಕ್ಕರ ಸತ್ಯನಾರಾಯಣ ತೋಡ್ತಿಲ್ಲಾಯ (ನಾಗೇಶ ತೋಡ್ತಿಲ್ಲಾಯ) ಅವರು ಕೇರಳದ ತಿರುವನಂತಪುರ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನದ ಮಹಾ ಪ್ರಧಾನ ಅರ್ಚಕ, ಪೆರಿಯ ನಂಬಿ ಪಟ್ಟವನ್ನು ಗುರುವಾರ ಸ್ವೀಕರಿಸಿ, ಸೇವೆ ಆರಂಭಿಸಿದ್ದಾರೆ.

ಕೊಕ್ಕಡದ ಸುಬ್ರಾಯ ತೋಡ್ತಿಲ್ಲಾಯ ಅವರ ಪುತ್ರರಾಗಿರುವ 45 ವರ್ಷದ ಬಡೆಕ್ಕರ ಸತ್ಯನಾರಾಯಣ ತೋಡ್ತಿಲ್ಲಾಯ ಅವರಿಗೆ ಅರ್ಚಕರಾಗಿ ಸೇರಿದ 6 ತಿಂಗಳಲ್ಲಿ ಮಹಾ ಪ್ರಧಾನ ಅರ್ಚಕ ಸ್ಥಾನ (ಪೆರಿಯ ನಂಬಿ) ಹಾಗೂ ಛತ್ರಿ ಮರ್ಯಾದೆ ಸಿಕ್ಕಿದೆ.

'ನಾವು ದೇವರೊಂದಿಗಿನ ನಂಬಿಕೆಯನ್ನು ಕೈಬಿಡಬಾರದು. ದೇವರು ನಮಗೆ ಒಂದು ದಿನ ಒಲಿಯುತ್ತಾರೆ. ನನಗೆ ಸಿಕ್ಕಿರುವ ಸೇವೆಯ ಅವಕಾಶ ಪೂರ್ವ ಜನ್ಮದ ಪುಣ್ಯ. ಇದಕ್ಕಾಗಿ ತಿರುವಾಂಕೂರ್ ಮಹಾರಾಜ ರಾಜವಂಶದ ಕುಟುಂಬಕ್ಕೆ ನಾನು ಆಭಾರಿ-ಯಾಗಿದ್ದೇನೆ. ಕರ್ನಾಟಕದಿಂದ ಭಕ್ತರು ಬೇರೆ ಬೇರೆ ಕಡೆಗಳಿಗೆ ದೇವರ ದರ್ಶನಕ್ಕೆ ತೆರಳುತ್ತಾರೆ. ಒಮ್ಮೆಯಾದರೂ ತಿರುವನಂತಪುರ ಅನಂತಪದ್ಮನಾಭ ಸ್ವಾಮಿಯ ದರ್ಶನ ಪಡೆಯಬೇಕು. ಕರ್ನಾಟಕದ ಸರ್ವರ ಒಳಿತಿಗೂ ಪ್ರಾರ್ಥನೆ ಮಾಡುತ್ತೇನೆ' ಎಂದು ಬಡೆಕ್ಕರ ಸತ್ಯನಾರಾಯಣ ತೋಡ್ತಿಲ್ಲಾಯ ತಿಳಿಸಿದರು.

## 'ವೃದ್ಧರಿಗೆ 'ಅನ್ನಪೂರ್ಣ' ಅಕ್ಕಿ : ರಾಜ್ಯ ಸರ್ಕಾರದ ನಿರಾಸಕ್ತಿ'



**ಐದು ಕೆ.ಜಿ. ಅಕ್ಕಿ ಬದಲಿಗೆ ಹಣ ಕೊಟ್ಟರೆ ಅದು 'ಅನ್ನಭಾಗ್ಯ' ಆಗುವುದಿಲ್ಲ. ಅಕ್ಕಿ ಲಭ್ಯವಿದ್ದರೂ ರಾಜ್ಯ ಸರ್ಕಾರ ಖರೀದಿಸುತ್ತಿಲ್ಲವೇಕೆ?**

**ಈರಣ್ಣ ಕಡಾಡಿ**
ಭಾರತೀಯ ಆಹಾರ ನಿಗಮದ ರಾಜ್ಯ ಮಟ್ಟದ ಸಲಹಾ ಸಮಿತಿಯ ಅಧ್ಯಕ್ಷ

**ಮೈಸೂರು:** 'ಕೇಂದ್ರ ಸರ್ಕಾರವು 'ಅನ್ನಪೂರ್ಣ' ಯೋಜನೆಯಡಿ 60 ವರ್ಷ ವಯಸ್ಸು ಮೇಲ್ಪಟ್ಟವರಿಗೆ ಉಚಿತವಾಗಿ ತಲಾ 10 ಕೆ.ಜಿ. ಅಕ್ಕಿ ನೀಡುತ್ತದೆ. ಆದರೆ, ರಾಜ್ಯ ಸರ್ಕಾರದಿಂದ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸದ ಕಾರಣ ಕರ್ನಾಟಕದಲ್ಲಿ ಜಾರಿಯಾಗಿಲ್ಲ' ಎಂದು ರಾಜ್ಯಸಭಾ ಸದಸ್ಯ, ಭಾರತೀಯ ಆಹಾರ ನಿಗಮದ ರಾಜ್ಯ ಮಟ್ಟದ ಸಲಹಾ ಸಮಿತಿಯ (ಎಸ್‌ಎಲ್‌ಸಿಸಿ) ಅಧ್ಯಕ್ಷರೂ ಆಗಿರುವ ಈರಣ್ಣ ಕಡಾಡಿ ದೂರಿದರು.

'ಹಲವು ರಾಜ್ಯಗಳು ಯೋಜನೆಯ ಲಾಭ ಪಡೆದುಕೊಳ್ಳುತ್ತಿದ್ದು, ನಮ್ಮಲ್ಲಿ ಮಾತ್ರ ಹಿರಿಯ ನಾಗರಿಕರಿಗೆ ಸೌಲಭ್ಯ ಕಲ್ಪಿಸುವ ಕಾಳಜಿಯನ್ನು ಕಾಂಗ್ರೆಸ್ ಸರ್ಕಾರ ತೋರಿಲ್ಲ. ಈಗಲೂ ಫಲಾನುಭವಿಗಳ ಪಟ್ಟಿಯನ್ನು ಒದಗಿಸಿದರೆ, ಇಲ್ಲೂ ಯೋಜನೆ ಅನುಷ್ಠಾನಗೊಳ್ಳಲಿದೆ' ಎಂದು ಇಲ್ಲಿ ಗುರುವಾರ ನಡೆದ ಸಲಹಾ ಸಮಿತಿಯ ಸಭೆಯ ನಂತರ ಸುದ್ದಿಗೋಷ್ಠಿ-ಯಲ್ಲಿ ಅವರು ಮಾಹಿತಿ ನೀಡಿದರು.

'ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವರಿಗೆ ತಲಾ 5 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಲು 24 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬೇಕು. 10 ಕೆ.ಜಿ. ಕೊಡುವುದಾದರೆ 48 ಲಕ್ಷ ಮೆಟ್ರಿಕ್ ಟನ್ ಅಗತ್ಯ. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ 10 ಕೆ.ಜಿ. ಉಚಿತವಾಗಿ ನೀಡುವ ಭರವಸೆ ಕೊಟ್ಟಿತ್ತು. ಈಗ, ರಾಜ್ಯದಲ್ಲೇ 50 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಉತ್ಪಾದನೆಯಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಕಾಳಜಿ ಇದ್ದರೆ, ಭತ್ತ ಖರೀದಿಸಿ ಬಿಪಿಎಲ್ ಪಡಿತರ ಚೀಟಿದಾರರಿಗೆ ತಲಾ 10 ಕೆ.ಜಿ. ಅಕ್ಕಿ ಕೊಡಬಹುದು. ರೈತರಿಗೂ ಅನುಕೂಲವಾಗುತ್ತದೆ' ಎಂದರು.

# ಕಿದ್ವಾಯಿ: ನಿರಂತರ ಅಸ್ಥಿಮಜ್ಜೆ ಕಸಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ಯಾನ್ಸರ್ ಪೀಡಿತ ಬಡರೋಗಿಗಳಿಗೆ ನಿರಂತರ ಅಸ್ಥಿಮಜ್ಜೆ ಕಸಿ ನಡೆಸಲಾಗುತ್ತಿದ್ದು, ಹಂತ ಹಂತವಾಗಿ ಏಳು ವಯಸ್ಕರಿಗೆ ಮುಂದಿನ ವಾರ ಅಸ್ಥಿಮಜ್ಜೆ ಕಸಿ ನಡೆಸಲಾಗುತ್ತದೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

'ವಿಶ್ವಮಟ್ಟದಲ್ಲಿ ಪ್ರಖ್ಯಾತಿ ಪಡೆದಿರುವ ಸಂಸ್ಥೆಯು, ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ಹಾಗೂ ಆರೈಕೆಯಲ್ಲಿ ಮುಂಚೂಣಿಯಲ್ಲಿದೆ. ಇತ್ತೀಚೆಗೆ 'ಅಟೋಲೋಗಸ್' ಮತ್ತು 'ಅಲೋಜೆನಿಕ್' ಅಸ್ಥಿಮಜ್ಜೆ ಕಸಿಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ. ಬಡ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿರುವ ಏಕೈಕ ಸರ್ಕಾರಿ ಆಸ್ಪತ್ರೆ ಇದಾಗಿದೆ. ಈವರೆಗೆ 105 ಮಂದಿಗೆ ಯಶಸ್ವಿಯಾಗಿ ಅಸ್ಥಿಮಜ್ಜೆ ಕಸಿ ನಡೆಸಲಾಗಿದೆ. ರೋಗಿಗಳು ಆಸ್ಪತ್ರೆಗೆ ಬರುವ ದಿನದಂದೇ ನೋಂದಣಿ ಮಾಡಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗು-ತ್ತದೆ. ವೈದ್ಯಕೀಯ ಪರೀಕ್ಷೆಗಳು ನಡೆದ ಬಳಿಕ ಅಸ್ಥಿಮಜ್ಜೆ ಕಸಿ ನಡೆಸಲಾಗುತ್ತದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ರವಿ ಅರ್ಜುನ್ ತಿಳಿಸಿದ್ದಾರೆ.


ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

'ಅಸ್ಥಿಮಜ್ಜೆ ಕಸಿ ಚಿಕಿತ್ಸೆಗೆ ಒಳಪಡುವ ರೋಗಿಗಳಿಗೆ ಬೇಕಾದ ಔಷಧಗಳು ಆಸ್ಪತ್ರೆಯ ಆವರ-ಣದಲ್ಲಿರುವ ಕೇಂದ್ರೀಯ ಔಷಧ ಉಗ್ರಾಣ ಹಾಗೂ ಕಿದ್ವಾಯಿ ಡ್ರಗ್ಸ್ ಫೌಂಡೇಶನ್‌ನಲ್ಲಿ ಲಭ್ಯವಿರುತ್ತವೆ. ಎಲ್ಲ ತರಹದ ಔಷಧಗಳನ್ನು ಮುಂಚಿತವಾಗಿ ದಾಸ್ತಾನು ಮಾಡಲಾಗುತ್ತಿದೆ. ರೋಗಿಗಳ ನೋಂದಣಿಯನ್ನು ನಿರಾಕರಿಸುವುದಿಲ್ಲ. ನೋಂದಣಿ ಪ್ರಕ್ರಿಯೆಯನ್ನೂ ಸ್ಥಗಿತಗೊಳಿಸಿಲ್ಲ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಿದ್ವಾಯಿ ಸಂಸ್ಥೆಯಲ್ಲಿ ನಡೆಯುತ್ತಿರುವ ಅಸ್ಥಿಮಜ್ಜೆ ಕಸಿಗೆ ಸಂಬಂಧಿಸಿದಂತೆ 'ಅಸ್ಥಿಮಜ್ಜೆ ಕಸಿಗೂ ತೊಡಕು' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಬುಧವಾರ ವಿಶೇಷ ವರದಿ ಪ್ರಕಟವಾಗಿತ್ತು.

# ಸಾಹಿತ್ಯ ಉತ್ಸವದಲ್ಲಿ ಪಾಲೆಸ್ಟೀನ್ ರಾಯಭಾರಿ ಸಂದರ್ಶನಕ್ಕೆ ಅಡ್ಡಿ

**ಜೈಪುರ (ಪಿಟಿಐ):** ಭಾರತದಲ್ಲಿನ ಪ್ಯಾಲೆಸ್ಟೀನ್ ರಾಯಭಾರಿ ಅಬೆದ್ ಎಲ್ರಾಜೆಗ್ ಅಬು ಜಾಜೆರ್ ಅವರ ಜೊತೆ ಜೈಪುರ ಸಾಹಿತ್ಯೋತ್ಸವ (ಜೆಎಲ್‌ಎಫ್) ನಡೆಯುತ್ತಿರುವ ಸ್ಥಳದಲ್ಲಿ ಪಿಟಿಐ ಸುದ್ದಿಸಂಸ್ಥೆಯ ಪ್ರತಿನಿಧಿಗಳು ಸಂದರ್ಶನ ನಡೆಸುತ್ತಿದ್ದ ಜಾಗಕ್ಕೆ ನುಗ್ಗಿದ ಜೆಎಲ್‌ಎಫ್ ಅಧಿಕಾರಿಯೊಬ್ಬರು, ಒತ್ತಾಯದಿಂದ ಸಂದರ್ಶನ ಸ್ಥಗಿತಗೊಳಿ-ಸಲು ಮುಂದಾದರು, ಪತ್ರಕರ್ತೆಯೊಬ್ಬ-ರನ್ನು ಪಕ್ಕಕ್ಕೆ ತಳ್ಳಿದರು.

ಸಾಹಿತ್ಯೋತ್ಸವದ ಆರಂಭದ ದಿನ ಈ ಘಟನೆ ನಡೆದಿದೆ. ಈ ರೀತಿ ಆಗಿದ್ದರಿಂದಾಗಿ ಅಬು ಜಾಜೆರ್ ಅವರು ಆಘಾತಕ್ಕೆ ಒಳಗಾದಂತೆ ಕಂಡುಬಂತು. ಸುದ್ದಿಸಂಸ್ಥೆಯ ಪ್ರತಿನಿಧಿಗಳ ಜೊತೆ ತಾವು ಮಾತನಾಡುವುದನ್ನು ಜೆಎಲ್‌ಎಫ್ ಅಧಿಕಾರಿಯು ಯಾವ ಅಧಿಕಾರ ಬಳಸಿ ತಡೆಯುತ್ತಿದ್ದಾರೆ ಎಂದು ಪ್ರಶ್ನಿಸಿದರು.

'ನಾನು ಇಲ್ಲಿ ಅತಿಥಿ, ಈ ಸಾಹಿತ್ಯೋತ್ಸವವನ್ನು ನಾನು ಯಾವಾಗಲೂ ಇಷ್ಟಪಡುತ್ತೇನೆ. ಜೆಎಲ್‌ಎಫ್ ಅಧಿಕಾರಿಯು ಬಹಳ ಒರಟಾಗಿ ನಡೆದುಕೊಂಡರು. ರಾಯಭಾರಿಯಾಗಿರುವ ನನಗೆ ಇದರಿಂದ ಏನೂ ಆಗುವುದಿಲ್ಲ. ಆದರೆ ಜೆಎಲ್‌ಎಫ್ ಆಯೋಜಕರು ಮಾಧ್ಯಮ ಪ್ರತಿನಿಧಿಗಳನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಬಗ್ಗೆ ಪ್ರಶ್ನೆಗಳು ಮೂಡುತ್ತವೆ' ಎಂದು ಅಬು ಜಾಜೆರ್ ಅವರು ಹೇಳಿದರು.

ಪಿಟಿಐ ಪತ್ರಕರ್ತರು ಹಾಗೂ ಅಬು ಜಾಜೆರ್ ಅವರ ಜೊತೆ ಬಿರುಸಿನ ಮಾತುಕತೆ ನಡೆಯುತ್ತಿದ್ದ ಹೊತ್ತಿನಲ್ಲಿ ಆ ಜೆಎಲ್‌ಎಫ್ ಅಧಿಕಾರಿಯು, 'ಈ ಸಂದರ್ಶನಕ್ಕೆ ನಮ್ಮ ಪಿಆರ್ (ಸಾರ್ವಜನಿಕ ಸಂಪರ್ಕ) ತಂಡದಿಂದ ಅನುಮತಿ ಇಲ್ಲ' ಎಂದರು. ಅಬು ಜಾಜೆರ್ ಅವರು ಕಾರ್ಯಕ್ರಮದಲ್ಲಿ ಭಾಷಣಕಾರ ಆಗಿ ಭಾಗವಹಿಸುತ್ತಿಲ್ಲ, ಅವರು ಕಾರ್ಯಕ್ರಮದ ಹಿತೈಷಿ ಮಾತ್ರ ಎಂದು ಅಧಿಕಾರಿ ವಾದಿಸಿದರು. ಅಬು ಜಾಜೆರ್ ಅವರು ಮಾತನಾಡುವ ಸಂದರ್ಭದಲ್ಲಿ ಅವರ ಹಿಂದೆ ಜೆಎಲ್‌ಎಫ್‌ನ ಲಾಂಛನ ಇತ್ತು. ಅಬು ಅವರು ಹೇಳುವ ಮಾತುಗಳನ್ನು ಜೆಎಲ್‌ಎಫ್‌ನ ಮಾತುಗಳು ಎಂದು ಪರಿಗಣಿಸಲು ಅವಕಾಶ ಇಲ್ಲ ಎಂದೂ ಅಧಿಕಾರಿ ತಿಳಿಸಿದರು.

ಈ ಘಟನೆ ನಡೆದ ನಂತರ ಜೆಎಲ್‌ಎಫ್‌ನ ಹಿರಿಯ ಪ್ರತಿನಿಧಿಗಳು ರಾಯಭಾರಿಯನ್ನು ಭೇಟಿ ಮಾಡಿದರು. ಮಾಧ್ಯಮ ಜಗಲಿಯ ಹೊರಗೆ ಸಂದರ್ಶನ ನಡೆಸಬಹುದು, ಅಲ್ಲಿ ಜೆಎಲ್‌ಎಫ್‌ನ ಲಾಂಛನ ಅಥವಾ ಹೆಸರು ಇರುವಂತಿಲ್ಲ ಎಂದು ಅಧಿ-ಕಾರಿಯೊಬ್ಬರು ಮಾಹಿತಿ ನೀಡಿದರು. ನಡೆದಿರುವ ಘಟನೆಯ ಬಗ್ಗೆ ಜೆಎಲ್‌ಎಫ್‌ನ ಕೆಲವು ಪ್ರತಿನಿಧಿಗಳು ಕ್ಷಮೆ ಯಾಚಿಸಿದರು.

ಕೋರ್ಟ್ ಸುದ್ದಿ

## ಕೇಂದ್ರ ಸರ್ಕಾರಕ್ಕೆ 'ಸುಪ್ರೀಂ' ತರಾಟೆ



ನವದೆಹಲಿ (ಪಿಟಿಐ): ಸಶಸ್ತ್ರ ಪಡೆಯ ನಿವೃತ್ತ ಸಿಬ್ಬಂದಿ ಕೋರ್ಟ್ ಮೆಟ್ಟಿಲೇರುವಂತೆ ಮಾಡಿದ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ತರಾಟೆಗೆ ತೆಗೆದು ಕೊಂಡಿದೆ.

'ಸಶಸ್ತ್ರ ಪಡೆಗಳ ನ್ಯಾಯಮಂಡಳಿ ಮೂಲಕ ಅಂಗವಿಕಲರ ಪಿಂಚಣಿ ಸೌಲಭ್ಯ ಪಡೆದ ಪ್ರತಿಯೊಬ್ಬರನ್ನೂ ಸುಪ್ರೀಂ ಕೋರ್ಟ್ ಮೆಟ್ಟಿಲೇರುವಂತೆ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರವು ಮೇಲ್ಮನವಿ ಸಲ್ಲಿಸುವಾಗ ವಿವೇಚನೆ ಬಳಸಬೇಕು' ಎಂದು ನ್ಯಾಯಾಮೂರ್ತಿ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

'ಕೆಲವು ವಿಚಾರಗಳನ್ನು ಪ್ರಾಯೋಗಿಕ ದೃಷ್ಟಿಕೋನದಿಂದ ನೋಡಬೇಕು. ಒಬ್ಬ ಯೋಧ 15ರಿಂದ 20 ವರ್ಷ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಒಂದು ವೇಳೆ ಅವರು ಅಂಗವಿಕಲರಾದರೆ ಅವರಿಗೆ ಅಂಗ ವಿಕಲರ ಪಿಂಚಣಿ ನೀಡುವಂತೆ ಸಶಸ್ತ್ರ ಪಡೆಗಳ ನ್ಯಾಯಮಂಡಳಿ ಆದೇಶಿಸಿದೆ. ಆದರೂ ಅವರನ್ನು ಸುಪ್ರೀಂ ಕೋರ್ಟ್‌ಗೆ ಏಕೆ ಎಳೆದುತರಲಾಗುತ್ತಿದೆ' ಎಂದು ಪ್ರಶ್ನಿಸಿದೆ. 'ಈ ಬಗ್ಗೆ ನಿಯಮಗಳನ್ನು ರೂಪಿಸಲು ಸಿದ್ಧರಿರುವುದಾಗಿ ಹೇಳಿದ್ದೀರಿ. ಒಂದು ವೇಳೆ ಇಲ್ಲ ಎಂದಾದರೆ ನಿಮ್ಮ ಮೇಲ್ಮನವಿಯನ್ನು ಕ್ಷುಲ್ಲಕ ಎಂದು ಪರಿಗಣಿಸಿ ಭಾರಿ ಮೊತ್ತದ ದಂಡ ವಿಧಿಸಬೇಕಾಗುತ್ತದೆ' ಎಂದು ಕೇಂದ್ರ ಸರ್ಕಾರಕ್ಕೆ ನ್ಯಾಯಪೀಠ ಎಚ್ಚರಿಕೆ ನೀಡಿದೆ.

## ತಾತ್ಕಾಲಿಕ ಅವಧಿಗೆ ನೇಮಕ: ಷರತ್ತು ಸಡಿಲಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆಯನ್ನು ತಗ್ಗಿಸುವ ಉದ್ದೇಶದಿಂದ, ಹೈಕೋರ್ಟ್‌ನಲ್ಲಿ ತಾತ್ಕಾಲಿಕ ನ್ಯಾಯಮೂರ್ತಿಗಳ ನೇಮಕಕ್ಕೆ ಇದ್ದ ಷರತ್ತನ್ನು ಸುಪ್ರೀಂ ಕೋರ್ಟ್ ಗುರುವಾರ ಸಡಿಲಗೊಳಿಸಿದೆ. ನಿವೃತ್ತ ನ್ಯಾಯಮೂರ್ತಿಗಳು ವಿಭಾಗೀಯ ಪೀಠಗಳಲ್ಲಿ ಹಾಲಿ ನ್ಯಾಯಮೂರ್ತಿಗಳ ಜೊತೆ ಕುಳಿತು ವಿಚಾರಣೆ ನಡೆಸಬಹುದು ಎಂದು ಹೇಳಿದೆ.

ಮಂಜೂರಾದ ನ್ಯಾಯಮೂರ್ತಿಗಳ ಹುದ್ದೆಗಳ ಪೈಕಿ ಖಾಲಿ ಹುದ್ದೆಗಳು ಶೇಕಡ 20ರಷ್ಟಕ್ಕಿಂತ ಹೆಚ್ಚಿದ್ದರೆ ಮಾತ್ರ ತಾತ್ಕಾಲಿಕ ಅವಧಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಬಹುದು ಎಂದು 2021ರ ಏಪ್ರಿಲ್‌ನಲ್ಲಿ ನೀಡಿದ್ದ ತೀರ್ಪೊಂದರಲ್ಲಿ ವಿಧಿಸಿದ್ದ ಷರತ್ತನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ, ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸೂರ್ಯಕಾಂತ್ ಅವರಿದ್ದ ಪೀಠವು ಅಮಾನತಿನಲ್ಲಿ ಇರಿಸಿತು.

ಮೂಲಸೌಕರ್ಯ ಅಭಿವೃದ್ಧಿಗೆ 'ಪಿಪಿಪಿ ಕಾರ್ಯನೀತಿ' ಜಾರಿಗೆ ಸಂಪುಟ ಸಭೆ ಅಸ್ತು

# ಆಸ್ತಿ ನಗದೀಕರಣದತ್ತ ಸರ್ಕಾರದ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಬಂಡವಾಳ ಆಕರ್ಷಿಸುವ ಮೂಲಕ ಮೂಲಸೌಕರ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ 'ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಕಾರ್ಯನೀತಿ-2025' ಜಾರಿಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ನೀತಿಯಲ್ಲಿ, ಆಸ್ತಿ ನಗದೀಕರಣದ ಪ್ರಸ್ತಾವವೂ ಇದೆ. ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗುತ್ತದೆ ಅಥವಾ ಭಾಗಶಃ ವರ್ಗಾವಣೆ ಮಾಡಲಾಗುತ್ತದೆ. ಸಾರ್ವಜನಿಕ ಮೂಲಸೌಕರ್ಯ ಆಸ್ತಿಗಳಾದ ರಸ್ತೆ, ಕಟ್ಟಡ ಮುಂತಾದವುಗಳನ್ನು ಗುತ್ತಿಗೆ ನೀಡಲಾಗುತ್ತದೆ. ಇದರಿಂದ ಆದಾಯ ಸಂಗ್ರಹ ಆಗಲಿದೆ. ಖಾಸಗಿ ಸಂಸ್ಥೆಗಳಿಗೆ ಸಾರ್ವಜನಿಕ ಆಸ್ತಿಗಳ ನಿರ್ವಹಣೆಗೆ ಅವಕಾಶ ಮಾಡಿಕೊಡಲಿದೆ. ಆಸ್ತಿಯ ಮಾಲೀಕತ್ವವನ್ನು ಸರ್ಕಾರ ಹೊಂದಿರಲಿದೆ ಮತ್ತು ಸಂಗ್ರಹವಾಗುವ ಆದಾಯದ ಲಾಭದ ಪಾಲು ಪಡೆಯಲಿದೆ. ಇದು ಸುಸ್ಥಿರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿರ್ವಹಣೆಗೆ ಪೂರಕವಾಗಲಿದೆ ಎಂದೂ ನೀತಿ ಪ್ರತಿಪಾದಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆ ಈ ನೀತಿಗೆ ಅನುಮೋದನೆ ನೀಡಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, 'ಸುಸ್ಥಿರ ಅಭಿವೃದ್ಧಿಯ ಜೊತೆಗೆ ಹೆಚ್ಚಿನ ಬೆಳವಣಿಗೆ ಮತ್ತು ಸಮಾನತೆ ಸಾಧಿಸುವ ಸಾಧನವಾಗಿ ಮೂಲಸೌಕರ್ಯ ಕ್ಷೇತ್ರಕ್ಕೂ ಖಾಸಗಿ ಹೂಡಿಕೆಯನ್ನು ವಿಸ್ತರಿಸುವುದು ಸರ್ಕಾರದ ಗುರಿಯಾಗಿದೆ' ಎಂದರು.

'ವಿವಿಧ ವಲಯಗಳ ಮೂಲಸೌಕರ್ಯ ಯೋಜನೆಗಳ ಅಭಿವೃದ್ಧಿಯಲ್ಲಿ ಖಾಸಗಿ ಹೂಡಿಕೆಗಳನ್ನು ಉತ್ತೇಜಿಸುವ ಉದ್ದೇಶದಿಂದ ಈ ನೀತಿಗೆ ರೂಪು ನೀಡಲಾಗಿದೆ. ಮೂಲಸೌಕರ್ಯ ಯೋಜನೆಗಳಿಗೆ 2018ರಲ್ಲಿ ರೂಪಿಸಿದ್ದ ಪಿಪಿಪಿ ನೀತಿಯಲ್ಲಿ ಕೆಲವು ಪರಿಷ್ಕರಣೆ ಗಳನ್ನು ತಂದು ಹೊಸ ನೀತಿ ರಚಿಸಲಾಗಿದೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಭಾಗೀದಾರರ ಪ್ರತಿಕ್ರಿಯೆಗಳ ಮೌಲ್ಯಮಾಪನ ಆಧರಿಸಿ ಅಗತ್ಯ ಮತ್ತು ಅಪೇಕ್ಷಣೀಯವೆಂದು ಪರಿಗಣಿಸುವ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಶಿಫಾರಸಿಗೂ ಹೊಸ ನೀತಿಯಲ್ಲಿ ಅವಕಾಶವಿದೆ' ಎಂದು ಹೇಳಿದರು.

### ಪೊಲೀಸ್: ಕ್ರೀಡಾ ಮೀಸಲು ಶೇ 3ಕ್ಕೆ ಹೆಚ್ಚಳ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್‌ನಿಂದ ಡಿವೈಎಸ್‌ಪಿ ವರೆಗಿನ ಹುದ್ದೆಗಳಿಗೆ ನಡೆಯುವ ನೇರ ನೇಮಕಾತಿ ಸಂದರ್ಭದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳಿಗೆ ನಿಗದಿಪಡಿಸಿದ್ದ ಮೀಸಲಾತಿ ಪ್ರಮಾಣವನ್ನು ಶೇ 2ರಿಂದ ಶೇ 3ಕ್ಕೆ ಹೆಚ್ಚಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಅಲ್ಲದೆ, ಡಿವೈಎಸ್‌ಪಿ ಹುದ್ದೆಗಳ ನೇಮಕಾತಿಗೆ ಎಸ್‌ಸಿ, ಎಸ್‌ಟಿ (ಕೆಟಗರಿ 1) ಅಭ್ಯರ್ಥಿಗಳಿಗೆ ನಿಗದಿಪಡಿಸಿದ್ದ ಗರಿಷ್ಠ ವಯೋಮಿತಿಯನ್ನು 45 ವರ್ಷಗಳಿಗೆ ಹೆಚ್ಚಿಸಲು ಕೂಡಾ ಅನುಮೋದನೆ ನೀಡಿದೆ.

ಮೀಸಲಾತಿ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು (ಕಾನ್‌ಸ್ಟೆಬಲ್, ಸಬ್ ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್‌ಪಿ ಹುದ್ದೆಗೆ ಪ್ರತಿಭಾವಂತ ಕ್ರೀಡಾಪಟುಗಳ ನೇರ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು-2025ರ ಕರಡು ನಿಯಮಗಳ ಗೆಜೆಟ್ ಹೊರಡಿಸಿ, ಆಕ್ಷೇಪಣೆ ಆಹ್ವಾನಿಸಬೇಕು. ಈ ನಿಯಮ ತಿದ್ದುಪಡಿಗೆ ಸಂಬಂಧಿಸಿದಂತೆ ಬಂದ ಆಕ್ಷೇಪಣೆ, ಸಲಹೆಗಳನ್ನು ಪರಿಶೀಲಿಸಿ, ಕರಡು ನಿಯಮಗಳಲ್ಲಿ ಯಾವುದೇ ಬದಲಾವಣೆ ಮಾಡದೇ ಇದ್ದರೆ ಮತ್ತೊಮ್ಮೆ ಸಚಿವ ಸಂಪುಟ ಸಭೆಗೆ ಮಂಡಿಸದೆ ನಿಯಮ ಅಂತಿಮಗೊಳಿಸಲು ಕೂಡಾ ಸಭೆ ಒಪ್ಪಿಗೆ ನೀಡಿದೆ.

### 'ಮಹಿಳೆ, ಮಕ್ಕಳ ಶೋಷಣೆಗೆ ತಡೆ'

ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಣಕ್ಕಾಗಿ ಕ್ರಮ ವಹಿಸಲು ಸರ್ಕಾರ ಮುಂದಾಗಿದೆ.

ಈ ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದ ಅವಧಿಯಲ್ಲಿ ವಿ.ಎಸ್. ಉಗ್ರಪ್ಪ ನೇತೃತ್ವದ ತಜ್ಞರ ಸಮಿತಿ ನೀಡಿದ್ದ ಅಂತಿಮ ವರದಿಯಲ್ಲಿರುವ 135 ಶಿಫಾರಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆ ಸಮಿತಿ ಪರಿಶೀಲಿಸಿ ಶಿಫಾರಸು ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

ಮೂರು ತಿಂಗಳೊಳಗೆ ವರದಿ ನೀಡಲು ಮುಖ್ಯಕಾರ್ಯದರ್ಶಿಗೆ ಸೂಚಿಸಲಾಗಿದೆ.

### ಸಂಪುಟ ಸಭೆಯ ಇತರ ತೀರ್ಮಾನ

- ಮುಂದಿನ ಐದು ವರ್ಷಗಳಲ್ಲಿ ವಿಶ್ವ ಬ್ಯಾಂಕಿನ ನೆರವಿನಲ್ಲಿ ₹5 ಸಾವಿರ ಕೋಟಿ (ವಿಶ್ವ ಬ್ಯಾಂಕ್ ಸಾಲ ₹3,500 ಕೋಟಿ ಮತ್ತು ರಾಜ್ಯ ಸರ್ಕಾರದ ಕೊಡುಗೆ ₹1,500 ಕೋಟಿ) ವೆಚ್ಚದಲ್ಲಿ 'ಕರ್ನಾಟಕ ಜಲ ಭದ್ರತೆ ಮತ್ತು ವಿಪತ್ತು ನಿರೋಧಕ' ಕಾರ್ಯಕ್ರಮ ಅನುಷ್ಠಾನಗೊಳಿಸಲು ಕಂದಾಯ ಇಲಾಖೆಗೆ (ವಿಪತ್ತು ನಿರ್ವಹಣೆ) ಅಧಿಕಾರ ನೀಡಲು ಒಪ್ಪಿಗೆ
- ರಾಜ್ಯ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ವಲಯದ ಉದ್ಯಮಗಳ ಕಾರ್ಯ-ಕ್ಷಮತೆಯ ಬಲವರ್ಧನೆ ಮತ್ತು ನಿಷ್ಕ್ರಿಯವಾಗಿರುವ ಕೆಲವು ಸಾರ್ವಜನಿಕ ವಲಯದ ಉದ್ಯಮಗಳ ಸ್ಥಗಿತ ಅಥವಾ ವಿಲೀನ ಕುರಿತಂತೆ ತಜ್ಞರ ಸಮಿತಿ ಮೂಲಕ ಅಧ್ಯಯನ ಮಾಡಲು ಒಪ್ಪಿಗೆ
- 19 ಮೊರಾರ್ಜಿ ದೇಸಾಯಿ ವಸತಿ ಶಾಲಾಕಾಲೇಜುಗಳ ಕಟ್ಟಡಗಳನ್ನು ₹304 ಕೋಟಿ ಹಾಗೂ ಪ್ರಧಾನಮಂತ್ರಿ ಜನ ವಿಕಾಸ ಕಾರ್ಯಕ್ರಮ ಯೋಜನೆಯಡಿ 12 ವಸತಿ ಶಾಲೆಗಳನ್ನು ₹191.19 ಕೋಟಿಯಲ್ಲಿ ನಿರ್ಮಿಸಲು ಒಪ್ಪಿಗೆ
- ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿ, ಸಿಬ್ಬಂದಿ ಸೇವಾ ಷರತ್ತು ಮತ್ತು ನೇಮಕಾತಿ ವಿಧಾನ ಬದಲಾಯಿಸಲು ನಿಯಮಗಳಿಗೆ ತಿದ್ದುಪಡಿ
- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಸಂಗ್ರಹಿಸುತ್ತಿರುವ ಮಾರುಕಟ್ಟೆ ಶುಲ್ಕ, ಬಳಕೆದಾರರ ಶುಲ್ಕವನ್ನು ಮರು ನಿಗದಿಪಡಿಸಲು ತೀರ್ಮಾನ
- ಎಲ್‌.ಕೆ. ಅತೀಕ್ ಅವರನ್ನು ಫೆ. 1ರಿಂದ ಮುಂದಿನ ಆದೇಶದವರೆಗೆ ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಗುತ್ತಿಗೆ ಆಧಾರದಲ್ಲಿ ನೇಮಿಸಿ ಫೆ. 20ರಂದು ಹೊರಡಿಸಿದ್ದ ಅಧಿಸೂಚನೆಗೆ ಘಟನೋತ್ತರ ಅನುಮೋದನೆ
- ಸರ್ಕಾರದಿಂದ ನೇಮಕಗೊಂಡಿರುವ ಉದ್ಯೋಗಿಗಳಿಗೆ ಬ್ಯಾಂಕ್ ಖಾತೆ ಮೂಲಕ ಸಾಮಾಜಿಕ ಭದ್ರತಾ ವ್ಯವಸ್ಥೆ ಜಾರಿಗೆ ಒಪ್ಪಿಗೆ
- ಹೊಂಬೆಳಕು ಯೋಜನೆಯಡಿ 50 ಗ್ರಾ.ಪಂ.ಗಳಲ್ಲಿ ಸೌರ ಬೀದಿ ದೀಪಗಳನ್ನು ₹25 ಕೋಟಿ ವೆಚ್ಚದಲ್ಲಿ ಅಳವಡಿಸುವ ಕಾಮಗಾರಿಗೆ ಅನುಮೋದನೆ
- ವೀರಪ್ಪನ್ ಕಾರ್ಯಾಚರಣೆಯ ಎಸ್‌ಟಿಎಫ್ ಕಾರ್ಯಪಡೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಮೂವರು ಆರೋಗ್ಯ ಇಲಾಖೆ ವೈದ್ಯಾಧಿಕಾರಿ, ಸಿಬ್ಬಂದಿಗೆ ಮುಡಾ ವ್ಯಾಪ್ತಿಯಲ್ಲಿ ರಿಯಾಯಿತಿ ದರದಲ್ಲಿ ನಿವೇಶನ

### ಹಳೆ ಮನೆಗಳಿಗೆ 'ಬಿ' ಖಾತಾ ನೀಡಲು ಗಡುವು

'ನಗರ ಪ್ರದೇಶಗಳಲ್ಲಿ ಡ್ರೋನ್ ಮೂಲಕ ಸರ್ವೆ ನಡೆಸಲಾಗುತ್ತಿದೆ. 21 ಜಿಲ್ಲೆಗಳಲ್ಲಿ ಸರ್ವೆ ಕಾರ್ಯ ಕೈಗೊಳ್ಳಲಾಗಿದ್ದು, ಉಳಿದ ಜಿಲ್ಲೆಗಳಲ್ಲೂ ಡ್ರೋನ್ ಸರ್ವೆ ಆರಂಭಿಸಬೇಕು. ನಗರ ಪ್ರದೇಶಗಳ ಸಮಗ್ರ ನೀಲನಕ್ಷೆಯನ್ನು ಕಾಲದಿಂದ ಕಾಲಕ್ಕೆ ನವೀಕರಿಸಬೇಕು'

## ಅನಧಿಕೃತ ಬಡಾವಣೆಗಳ ಸ್ವತ್ತಿಗೆ ಖಾತಾ ಇಲ್ಲ: ಸಿ.ಎಂ

ಬೆಂಗಳೂರು: ಅನಧಿಕೃತ ನಿವೇಶನ, ಮನೆಗಳಿಗೆ 'ಬಿ' ಖಾತಾ ನೀಡುವ ಪ್ರಕ್ರಿಯೆಯನ್ನು ನಿಗದಿತ ಅವಧಿಯ ಒಳಗೆ ಪೂರ್ಣಗೊಳಿಸಬೇಕು. ಹೊಸದಾಗಿ ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡರೆ ಯಾವುದೇ ಖಾತಾ ನೀಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮ್ಯುಟೇಶನ್, ಭೂ ಪರಿವರ್ತನೆ ಪ್ರಕರಣಗಳಲ್ಲಿ ಜನಸಾಮಾನ್ಯರಿಗೆ ಕಿರುಕುಳ, ವಿಳಂಬವಾಗದಂತೆ ಎಚ್ಚರಿಕೆ ವಹಿಸಬೇಕು. ಭೂ ಪರಿವರ್ತನಾ ಪ್ರಕ್ರಿಯೆಯನ್ನು ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ಸಮಗ್ರ ನೀಲನಕ್ಷೆ ಆದ ನಂತರ ಮತ್ತೆ ಭೂ ಪರಿವರ್ತನೆ ಅಗತ್ಯವಿಲ್ಲ ಎಂದು ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು, ಈ ಕುರಿತು ತಕ್ಷಣ ಆದೇಶ ಹೊರಡಿಸಬೇಕು ಎಂದರು.



ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ಒಂದು ದಿನಕ್ಕೆ ಕನಿಷ್ಠ 65 ಪ್ರಕರಣಗಳಲ್ಲಿ ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತಿದೆ. ಆಟೊಮ್ಯುಟೇಶನ್ ಮೂಲಕ ಇದು ಸಾಧ್ಯವಾಗಿದೆ. ತಹಶೀಲ್ದಾರ್‌ಗಳ ನ್ಯಾಯಾಲಯದಲ್ಲಿ ಪ್ರತಿ ಪ್ರಕರಣವನ್ನು ಮೂರು ತಿಂಗಳ ಒಳಗೆ ವಿಲೇವಾರಿ ಮಾಡಬೇಕು. ಅವಧಿ ಮೀರಿದ 10 ಸಾವಿರ ಪ್ರಕರಣಗಳು ಒಂದೂವರೆ ವರ್ಷದಲ್ಲಿ 369ಕ್ಕೆ ಇಳಿದಿವೆ. ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಇರುವ ಪ್ರಕರಣಗಳಿಗೆ ಮತ್ತಷ್ಟು ವೇಗ ನೀಡಬೇಕಿದೆ. ಬೆಂಗಳೂರು ವ್ಯಾಪ್ತಿಯ ಪ್ರಕರಣಗಳ ತ್ವರಿತ ವಿಲೇವಾರಿಗೆ 18 ವಿಶೇಷ ಉಪ ವಿಭಾಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಇದುವರೆಗೆ 2.22 ಕೋಟಿ ಜಮೀನು ಖಾತೆಗಳಿಗೆ ಆಧಾರ ಲಿಂಕ್ ಮಾಡಲಾಗಿದ್ದು, ಇದರಿಂದ ನಕಲಿ ದಾಖಲೆ, ಭೂ ಪರಿವರ್ತನೆಯಾಗದೆ ವಾಣಿಜ್ಯ ಉದ್ದೇಶಗಳಿಗೆ ಜಮೀನು ಬಳಕೆ ಮಾಡುವ ಪ್ರಕರಣಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿದೆ. ಭೂ ದಾಖಲೆಗಳು ವಂಚಕರಿಂದ ದುರುಪಯೋಗ ಆಗದಂತೆ ತಡೆಯಲು 'ಭೂ ಸುರಕ್ಷಾ' ಯೋಜನೆ ಜಾರಿಗೆ ತಂದಿದ್ದು, 8 ಕೋಟಿ ಮೂಲ ದಾಖಲೆಗಳ ಡಿಜಿಟಲೀಕರಣ ಪೂರ್ಣಗೊಂಡಿದೆ ಎಂದರು.

ಲೆ. ಕಮಾಂಡರ್‌ಗಳಾದ ದಿಲ್ನಾ, ರೂಪಾ ಕಡಲಯಾನ

## 'ಪಾಯಿಂಟ್ ನೆಮೊ' ದಾಟಿದ ನೌಕಾಪಡೆ ಮಹಿಳಾ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ನೌಕಾಪಡೆಯ ಅಧಿಕಾರಿಗಳಾದ ಲೆಫ್ಟಿನೆಂಟ್ ಕಮಾಂಡರ್ ದಿಲ್ನಾ ಕೆ. ಹಾಗೂ ರೂಪಾ ಎ. ಅವರು ಪೆಸಿಫಿಕ್ ಸಾಗರದ ದಕ್ಷಿಣದಲ್ಲಿನ 'ಪಾಯಿಂಟ್ ನೆಮೊ' ಅನ್ನು ಗುರುವಾರ ದಾಟುವ ಮೂಲಕ ಗಮನ ಸೆಳೆದಿದ್ದಾರೆ. ಇದು ಭೂಮಿಯ ದಕ್ಷಿಣ ಗೋಳಾರ್ಧದಲ್ಲಿರುವ ಅತ್ಯಂತ ದೂರದ ಸ್ಥಳವಾಗಿದೆ. 'ಪಾಯಿಂಟ್ ನೆಮೊ'ದಿಂದ ಹತ್ತಿರದ ಭೂಪ್ರದೇಶಕ್ಕೆ ಇರುವ ದೂರ 2,688 ಕಿ.ಮೀ.

'ನಾವಿಕ ಸಾಗರ ಪರಿಕ್ರಮ–2' ಭಾಗವಾಗಿ ಈ ಇಬ್ಬರು ಮಹಿಳಾ ಅಧಿಕಾರಿಗಳು ನೌಕೆ 'ಐಎನ್‌ಎಸ್ ತಾರಿಣಿ'ಯಲ್ಲಿ ಪರ್ಯಟನೆ ಕೈಗೊಂಡಿದ್ದಾರೆ. ನ್ಯೂಜಿಲೆಂಡ್‌ನ ಲಿಟೆಲ್ಟನ್‌ನಿಂದ ಫಾಕ್‌ಲ್ಯಾಂಡ್ ದ್ವೀಪಗಳಲ್ಲಿನ ಪೋರ್ಟ್ ಸ್ಟ್ಯಾನ್ಲೆಗೆ ಸಾಗುವ ವೇಳೆ, ಜನವರಿ 30ರಂದು ರಾತ್ರಿ 12.30ಕ್ಕೆ ಇವರು 'ಪಾಯಿಂಟ್ ನೆಮೊ'ವನ್ನು ಯಶಸ್ವಿಯಾಗಿ ದಾಟಿದರು' ಎಂದು ನೌಕಾಪಡೆ ವಕ್ತಾರ ತಿಳಿಸಿದ್ದಾರೆ.




ನೌಕಾಪಡೆ ಲೆಫ್ಟಿನೆಂಟ್ ಕಮಾಂಡರ್‌ಗಳಾದ ದಿಲ್ನಾ ಕೆ., ರೂಪಾ ಎ. 'ಐಎನ್‌ಎಸ್ ತಾರಿಣಿ'ಯಲ್ಲಿ ಕೈಗೊಂಡಿರುವ ಭೂಪ್ರದಕ್ಷಿಣೆ ಭಾಗವಾಗಿ ಪೆಸಿಫಿಕ್ ಸಾಗರದ ದಕ್ಷಿಣದಲ್ಲಿರುವ 'ಪಾಯಿಂಟ್ ನೆಮೊ'ವನ್ನು ಗುರುವಾರ ದಾಟಿದರು –ಪಿಟಿಐ ಚಿತ್ರ

ಇವರು 'ಪಾಯಿಂಟ್ ನೆಮೊ'ದಲ್ಲಿನ ನೀರಿನ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಇವುಗಳನ್ನು ಗೋವಾದಲ್ಲಿರುವ ರಾಷ್ಟ್ರೀಯ ಸಾಗರ ವಿಜ್ಞಾನ ಸಂಸ್ಥೆಯಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ.

ಕಡಲಲ್ಲಿರುವ ಜೀವವೈವಿಧ್ಯ, ಪಾಯಿಂಟ್ ನೆಮೊ ಪ್ರದೇಶದಲ್ಲಿನ ರಾಸಾಯನಿಕ ಸಂಯೋಜನೆ ಸೇರಿದಂತೆ ಸಾಗರ ಪರಿಸರ ಕುರಿತು ಈ ಮಾದರಿಗಳು ಮಹತ್ವದ ಒಳನೋಟ ನೀಡುವ ನಿರೀಕ್ಷೆ ಇದೆ. ದಿಲ್ನಾ ಹಾಗೂ ರೂಪಾ ಅವರು ಕಳೆದ ವರ್ಷ ಅಕ್ಟೋಬರ್ 2ರಂದು ಈ ಪರ್ಯಟನೆ ಆರಂಭಿಸಿದ್ದು, ಮೇ ವೇಳೆಗೆ ಗೋವಾಕ್ಕೆ ಮರಳುವರು.

ಇದು, ಭಾರತೀಯ ನೌಕಾಪಡೆಯು ಮಹಿಳಾ ಅಧಿಕಾರಿಗಳೇ ಇರುವ ತಂಡ ಕೈಗೊಂಡಿರುವ ಎರಡನೇ ಭೂಪ್ರದಕ್ಷಿಣೆ ಯಾಗಿದೆ. ಮೊದಲ ಪರ್ಯಟನೆಗೂ ಐಎನ್‌ಎಸ್ ತಾರಿಣಿ ಬಳಸಲಾಗಿತ್ತು.

### 'ನಿಷ್ಕ್ರಿಯ ಗಗನನೌಕೆಗಳ ಸ್ಮಶಾನ'

'ಪಾಯಿಂಟ್ ನೆಮೊ'ವನ್ನು 'ಭೂಮಿಯ ಅತ್ಯಂತ ದೂರದ ಜಾಗ' ಎಂದು ಕರೆಯಲಾಗುತ್ತದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ಪರಿಭ್ರಮಿಸುವ ವೇಳೆ, 'ಪಾಯಿಂಟ್ ನೆಮೊ' ಹತ್ತಿರದಲ್ಲಿರುತ್ತದೆ. ಹೀಗಾಗಿ, ಐಎಸ್‌ಎಸ್‌ನಲ್ಲಿರುವ ಗಗನಯಾನಿಗಳೇ 'ಪಾಯಿಂಟ್ ನೆಮೊ'ಗೆ ಕೆಲವೊಮ್ಮೆ ಹತ್ತಿರದ ಮಾನವನ ಉಪಸ್ಥಿತಿಗೆ ಸಾಕ್ಷಿಯಾಗುತ್ತಾರೆ.

ನಿಷ್ಕ್ರಿಯಗೊಂಡ ಗಗನನೌಕೆಗಳನ್ನು ಇದೇ ಸ್ಥಳದಲ್ಲಿ ವಿಲೇವಾರಿ ಮಾಡಲಾಗುತ್ತದೆ. ಇದೇ ಕಾರಣಕ್ಕೆ ಈ ಸ್ಥಳವನ್ನು 'ನಿಷ್ಕ್ರಿಯಗೊಂಡ ಗಗನನೌಕೆಗಳ ಸ್ಮಶಾನ' ಎಂದೂ ಕರೆಯಲಾಗುತ್ತದೆ.



# ರವಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ವಿರುದ್ಧ ವಿಧಾನ ಪರಿಷತ್ ಅಧಿವೇಶನದಲ್ಲಿ ಅವಾಚ್ಯ ಪದ ಬಳಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಸಿ.ಟಿ.ರವಿ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಪ್ರಕರಣದಲ್ಲಿ ಸಾಕಷ್ಟು ವಿಚಾರಗಳು ಅಡಗಿರುವುದರಿಂದ ಅವುಗಳನ್ನೆಲ್ಲಾ ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಉತ್ತರಿಸಬೇಕಾಗಿದೆ. ಶೀಘ್ರವೇ ವಿಚಾರಣೆ ಪೂರೈಸಿ ತೀರ್ಮಾನ ಕೈಗೊಳ್ಳಲಾಗದು' ಎಂದು ತಿಳಿಸಿ ವಿಚಾರಣೆಯನ್ನು ಫೆಬ್ರುವರಿ 20ಕ್ಕೆ ಮುಂದೂಡಿತು. ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಹ್ಯಾಂಡ್ ಸಮನ್ಸ್ ಜಾರಿಗೊಳಿಸಲು ನಿರ್ದೇಶಿಸಲಾಗಿದ್ದು ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದೆ. ರವಿ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಹಾಗೂ ಪ್ರಾಸಿಕ್ಯೂಷನ್ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ವಾದ ಮಂಡಿಸಿದರು.

**ವಿನಯ ಕುಲಕರ್ಣಿ ನಿರಾಳ:** ಧಾರವಾಡ ಜಿಲ್ಲಾ ಪಂಚಾಯಿತಿಯ ಹೆಬ್ಬಳ್ಳಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆಗೆ ಸಂಬಂಧಿಸಿದಂತೆ, 'ಶಾಸಕ ವಿನಯ ಕುಲಕರ್ಣಿ ಸಾಕ್ಷಿಗಳಿಗೆ ಬೆದರಿಕೆ ಹಾಕಿದ್ದಾರೆ' ಎಂಬ ಆರೋಪದ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪುರಸ್ಕರಿಸಿದ್ದು, 'ಅಧಿಕಾರ ವ್ಯಾಪ್ತಿ ಇಲ್ಲದ ಕೋರ್ಟ್‌ನಲ್ಲಿ ಈ ಪ್ರಕರಣವನ್ನು ದಾಖಲಿಸಲಾಗಿದೆ. ಹಾಗಾಗಿ, ತಾಂತ್ರಿಕ ಕಾರಣಗಳಿಂದ ಪ್ರಕರಣ ರದ್ದುಪಡಿಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

### ರೇವಣ್ಣ ವಿರುದ್ಧದ ಪ್ರಕರಣ ತಡೆ ಆದೇಶ ವಿಸ್ತರಣೆ

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎನ್ನಲಾದ ಪ್ರಕರಣದಲ್ಲಿ ಮಹಿಳೆಯೊಬ್ಬರನ್ನು ಅಪಹರಿಸಿದ ಆರೋಪದಡಿ ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ದೋಷಾರೋಪ ನಿಗದಿಪಡಿಸುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಪ್ರಕ್ರಿಯೆಗೆ ನೀಡಲಾಗಿದ್ದ ತಡೆ ಆದೇಶವನ್ನು ಹೈಕೋರ್ಟ್ ಫೆಬ್ರುವರಿ 7ರವರೆಗೆ ವಿಸ್ತರಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಎಚ್.ಡಿ.ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದ್ದಾರೆ.

### ಯತ್ನಾಳ ವಿರುದ್ಧದ ಪ್ರಕರಣ ರದ್ದು

'ರೇಷನ್ ಕಾರ್ಡ್ ಹಂಚಿಕೆ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ' ಎಂಬ ಹಿನ್ನೆಲೆಯಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ ಭಾಷಣ ಮಾಡಿದ ಆರೋಪದಡಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಈ ಕುರಿತಂತೆ ವಿಜಯಪುರದ ಜಲನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಯತ್ನಾಳ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದ್ದಾರೆ.

## ಕಾಂಗ್ರೆಸ್ ಸಂಸದ ಬಂಧನ

ಪ್ರಜಾವಾಣಿ ವಾರ್ತೆ

ಲಖನೌ: ಅತ್ಯಾಚಾರ ಪ್ರಕರಣದ ಆರೋಪಿಯಾಗಿರುವ ಕಾಂಗ್ರೆಸ್ ಸಂಸದ ರಾಕೇಶ್ ರಾಥೋರ್ ಅವರನ್ನು, ಉತ್ತರ ಪ್ರದೇಶದ ಸೀತಾಪುರ ಪಟ್ಟಣದ ತಮ್ಮ ನಿವಾಸದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸುತ್ತಿದ್ದ ಸಂದರ್ಭದಲ್ಲಿ ಪೊಲೀಸರು ಬಂಧಿಸಿದರು.

ಮದುವೆ ಆಗುವುದಾಗಿ ನಂಬಿಸಿ, ರಾಜಕೀಯದಲ್ಲಿ ಮುಂದೆ ಬರಲು ಸಹಾಯ ಮಾಡುವುದಾಗಿ ನಂಬಿಸಿ ರಾಕೇಶ್ ಅವರು ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು 45 ವರ್ಷ ವಯಸ್ಸಿನ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಪೊಲೀಸರು ಈಚೆಗೆ ಎಫ್‌ಐಆರ್ ದಾಖಲಿಸಿದ್ದರು.

ರಾಕೇಶ್ ಅವರು ಸೀತಾಪುರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಆರೋಪದ ಬಗ್ಗೆ ಮಾತನಾಡಲು ರಾಕೇಶ್ ಅವರು ಪತ್ರಿಕಾಗೋಷ್ಠಿ ಕರೆದಿದ್ದರು. ಆಗ ಮನೆಯೊಳಕ್ಕೆ ಬಂದ ಪೊಲೀಸರು, ಸಂಸದರನ್ನು ಬಂಧಿಸಿದರು. ರಾಕೇಶ್ ಅವರು ನಿರೀಕ್ಷಣಾ ಜಾಮೀನು ಕೋರಿ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ವಜಾಗೊಳಿಸಿದ್ದ ಹೈಕೋರ್ಟ್ ನಾಲ್ಕು ವಾರಗಳಲ್ಲಿ ಶರಣಾಗುವಂತೆ ಸೂಚಿಸಿತ್ತು.

ತಮ್ಮ ಮೇಲಿನ ಆರೋಪಗಳು ರಾಜಕೀಯ ಪ್ರೇರಿತ, ಅವು ತಮ್ಮ ಹೆಸರು ಹಾಳುಮಾಡುವ ಉದ್ದೇಶ ಹೊಂದಿವೆ ಎಂದು ರಾಕೇಶ್ ಹೇಳಿದ್ದಾರೆ.



ಸುಭಾಷಿತ

ಸುಲಭವಾಗಿ ಬಂದುದು ಸುಲಭವಾಗಿ ಕಳೆದುಹೋಗುತ್ತದೆ.
- ಪಾಟೀಲ ಪುಟ್ಟಪ್ಪ

# ಮಹಾಕುಂಭಮೇಳದಲ್ಲಿ ಕಾಲ್ತುಳಿತ ಸರ್ಕಾರ ಹೊಣೆ ಹೊತ್ತುಕೊಳ್ಳಬೇಕು

**ಮಹಾಕುಂಭಮೇಳದಲ್ಲಿ** ಕನಿಷ್ಠ 30 ಜನರ ಸಾವಿಗೆ ಕಾರಣವಾದ ಕಾಲ್ತುಳಿತದ ದುರ್ಘಟನೆಯು ಈ ಬೃಹತ್ ಧಾರ್ಮಿಕ ಕಾರ್ಯಕ್ರಮದ ಸಂಭ್ರಮವನ್ನು ಕಿತ್ತುಕೊಳ್ಳುವ ಕೆಲಸ ಮಾಡಿದೆ. ಕೋಟ್ಯಂತರ ಜನ ಸೇರುವ ಈ ಕಾರ್ಯಕ್ರಮಕ್ಕೆ ಅಗತ್ಯವಿರುವ ಸಿದ್ಧತೆಗಳನ್ನು ಆಯೋಜಕರು ಸಮರ್ಪಕವಾಗಿ ಮಾಡಿಕೊಂಡಿದ್ದರೇ ಎಂಬ ಗಂಭೀರ ಪ್ರಶ್ನೆಯನ್ನು ಮೂಡಿಸಿದೆ. ದುರ್ಘಟನೆಯಲ್ಲಿ ಹಲವರಿಗೆ ಗಾಯಗಳಾಗಿವೆ. ಮಹಾಕುಂಭಮೇಳಕ್ಕೆ ಬರುವವರ ಸುರಕ್ಷತೆಗಾಗಿ ಹಾಗೂ ಅವರ ಅನುಕೂಲಕ್ಕಾಗಿ ಎಲ್ಲ ರೀತಿಯಿಂದಲೂ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಉತ್ತರಪ್ರದೇಶ ಸರ್ಕಾರವು ಈ ಮೊದಲು ಹೇಳಿತ್ತು. ಪುಣ್ಯಸ್ನಾನಕ್ಕೆ ಭಕ್ತರು ದೊಡ್ಡ ಸಂಖ್ಯೆಯಲ್ಲಿ ಬಂದರೂ ಅವರನ್ನು ನಿಭಾಯಿಸಲು, ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಹಾಗೂ ಜನರ ಸಂಚಾರವನ್ನು ನಿಯಂತ್ರಿಸಲು ನೆರವಾಗುವ ಉದ್ದೇಶದಿಂದ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆ, ಮೇಳದ ಸ್ಥಳದ ಮೇಲೆ ಆಗಸದಿಂದ ಕಣ್ಗಾವಲು ಇರಿಸಲಾಗುತ್ತದೆ, ಕೃತಕ ಬುದ್ಧಿಮತ್ತೆಯ ನೆರವು ಪಡೆಯಲಾಗುತ್ತದೆ ಎಂದು ಸರ್ಕಾರ ಹೇಳಿತ್ತು. ಕುಂಭಮೇಳದಲ್ಲಿ ಕೋಟ್ಯಂತರ ಮಂದಿ ಪಾಲ್ಗೊಳ್ಳುತ್ತಿದ್ದಾರೆ. ಬಹಳ ಮುಖ್ಯವೆಂದು ಪರಿಗಣಿಸಲಾಗಿರುವ 'ಮೌನಿ ಅಮಾವಾಸ್ಯೆ'ಯ ದಿನವೇ ಕಾಲ್ತುಳಿತ ಸಂಭವಿಸಿದೆ. ಮೇಳದ ಸ್ಥಳದಲ್ಲಿ ಭಕ್ತರಿಗೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸುವಲ್ಲಿ ವೈಫಲ್ಯ ಉಂಟಾಗಿರುವುದು ಸ್ಪಷ್ಟ. ಇತರ ದಿನಗಳಲ್ಲಿ ಭಾರಿ ಸಂಖ್ಯೆಯ ಭಕ್ತರನ್ನು ನಿಭಾಯಿಸಿದ ಪರಿಯು ಮೆಚ್ಚುವಂಥದ್ದೇ ಆದರೂ ಅದು ಬಹಳ ಮುಖ್ಯವಾದ ದಿನ ಸಮರ್ಪಕವಾಗಿ ಆಗಲಿಲ್ಲ.



ಇಂತಹ ದುರ್ಘಟನೆ ನಡೆದಾಗ ಸಾವು– ನೋವಿನ ಬಗ್ಗೆ ಸಾರ್ವಜನಿಕರಿಗೆ ಸರಿಯಾಗಿ ಮಾಹಿತಿ ಒದಗಿಸದೇ ಇರುವುದು ಸರಿಯಲ್ಲ

ಭಕ್ತರು ಭಾರಿ ಸಂಖ್ಯೆಯಲ್ಲಿ ಸೇರುವ ಕಾರ್ಯಕ್ರಮಗಳಲ್ಲಿ ಕಾಲ್ತುಳಿತ ಉಂಟಾಗುವುದು ಬಹಳ ದೊಡ್ಡ ಸಾಧ್ಯತೆಗಳ ಪೈಕಿ ಒಂದು. 2013ರಲ್ಲಿ ನಡೆದ ಕುಂಭಮೇಳದಲ್ಲಿ ಉಂಟಾದ ಕಾಲ್ತುಳಿತವು ಕನಿಷ್ಠ 42 ಜನರ ಪ್ರಾಣ ಕಸಿದುಕೊಂಡಿತ್ತು. ಕುಂಭಮೇಳದ ಅಷ್ಟೂ ದಿನ ಹಗಲು-ರಾತ್ರಿ ಗರಿಷ್ಠ ಪ್ರಮಾಣದ ಎಚ್ಚರವನ್ನು ವಹಿಸಬೇಕು. ಅದರಲ್ಲೂ ಮೇಳದ ಬಹುಮುಖ್ಯ ದಿನಗಳಲ್ಲಿ ಎಚ್ಚರವು ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿರಬೇಕು. ಭದ್ರತೆ ಹಾಗೂ ಇತರ ಸಿದ್ಧತೆಗಳ ವಿಚಾರದಲ್ಲಿ ಆಡಳಿತ ವ್ಯವಸ್ಥೆಯ ಗಮನವು ಅತಿಗಣ್ಯರ ಕಡೆಗೇ ಇತ್ತು ಎನ್ನುವ ಟೀಕೆಗಳು ಇವೆ. ದೇಶದ ವಿವಿಧ ವಲಯಗಳ ಪ್ರಮುಖರು ಮೇಳಕ್ಕೆ ಭೇಟಿ ನೀಡಿದ್ದಾರೆ, ಮುಂದಿನ ದಿನಗಳಲ್ಲಿಯೂ ಇದು ಮುಂದುವರಿಯುವ ನಿರೀಕ್ಷೆ ಇದೆ. ಇಡೀ ಕುಂಭಮೇಳವನ್ನು ರಾಜಕೀಯಕ್ಕೆ ಬಳಸಿಕೊಳ್ಳಲಾಗಿದೆ, ಅದನ್ನು ವಾಣಿಜ್ಯ ಉದ್ದೇಶಗಳಿಗೂ ಬಳಕೆ ಮಾಡಿಕೊಳ್ಳಲಾಗಿದೆ. ಇಂತಹ ಕಾರ್ಯಕ್ರಮಗಳನ್ನು ಸರ್ಕಾರಗಳು ಈ ಬಗೆಯಲ್ಲಿ ಬಳಸಿಕೊಂಡ ನಿದರ್ಶನಗಳು ಹಲವಾರು ಇವೆ. ಆದರೆ, ಭಕ್ತರ ಸುರಕ್ಷತೆ ಹಾಗೂ ಸ್ನಾನದ ಸಂದರ್ಭದಲ್ಲಿ ಯಾವ ಅವಘಡಗಳೂ ನಡೆಯದಂತೆ ನೋಡಿಕೊಳ್ಳುವ ಹೊಣೆ ಕೂಡ ಅವುಗಳ ಮೇಲಿರುತ್ತದೆ. ಕಾಲ್ತುಳಿತದಂತಹ ದುರ್ಘಟನೆಗಳು ಇಂತಹ ಬೃಹತ್ ಕಾರ್ಯಕ್ರಮಗಳಲ್ಲಿ ಸಹಜ ಎನ್ನುವುದು, ಕಾಲ್ತುಳಿತ ತಡೆಯುವಲ್ಲಿ ವ್ಯವಸ್ಥೆ ವಿಫಲವಾಗಿದೆ ಎಂಬ ಟೀಕೆಗಳನ್ನು 'ಸಾವಿನ ರಾಜಕೀಯಕರಣ' ಎನ್ನುವುದು ತಪ್ಪು.

ಕಾಲ್ತುಳಿತ ಸಂಭವಿಸಿದ ನಂತರ ಅದರ ಬಗ್ಗೆ ಕಾಲಕಾಲಕ್ಕೆ ಸರಿಯಾದ ಮಾಹಿತಿ ನೀಡದೇ ಇದ್ದುದು, ಸಾವಿನ ಸಂಖ್ಯೆಯನ್ನು ಸರಿಯಾಗಿ ಸಕಾಲದಲ್ಲಿ ತಿಳಿಸದೇ ಇರುವುದು ಸರ್ಕಾರದ ವೈಫಲ್ಯ. ಇಂತಹ ದುರ್ಘಟನೆ ನಡೆದಾಗ ಸಾವಿನ ಸಂಖ್ಯೆಯ ಬಗ್ಗೆ ಸಾರ್ವಜನಿಕರಿಗೆ ಸರಿಯಾಗಿ ಮಾಹಿತಿ ಒದಗಿಸದೇ ಇರುವುದು ವದಂತಿಗಳು ಹರಡುವುದಕ್ಕೆ ನೇರ ಕಾರಣವಾಗುತ್ತದೆ. ಆರಂಭದಲ್ಲಿ ಸರ್ಕಾರ ಮತ್ತು ಪೊಲೀಸರು ದುರ್ಘಟನೆ ನಡೆದೇ ಇಲ್ಲ ಎಂಬಂತೆ ವರ್ತಿಸಿದ್ದರು, ಕಾಲ್ತುಳಿತ ಎಂಬ ಪದವನ್ನೂ ಅವರು ಬಳಸಿರಲಿಲ್ಲ. ದುರ್ಘಟನೆಯು ದೊಡ್ಡಮಟ್ಟದ್ದಲ್ಲ ಎಂದು ಬಿಂಬಿಸಲು ಸರ್ವ ರೀತಿಯ ಪ್ರಯತ್ನ ನಡೆದಿತ್ತು, ಮಾಹಿತಿಯನ್ನು ತಡೆಹಿಡಿದಿದ್ದು ಉದ್ದೇಶಪೂರ್ವಕವಾಗಿ ಆಗಿತ್ತು ಎಂಬಂತೆ ಕಾಣುತ್ತದೆ. ಸಾವಿನ ಸಂಖ್ಯೆ 30 ಎಂಬುದನ್ನು ಬುಧವಾರ ಸಂಜೆಯ ವೇಳೆಗೆ ತಿಳಿಸಲಾಯಿತು. ಇದು, ಸಾವಿನ ಸಂಖ್ಯೆಯನ್ನು ಸರಿಯಾಗಿ ತಿಳಿಸಲಾಗಿದೆಯೇ ಎನ್ನುವ ಅನುಮಾನ ಮೂಡಲು ಕಾರಣವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಡೆದಿರುವುದು ಏನು ಎಂಬುದನ್ನು ಪಾರದರ್ಶಕವಾಗಿ ತಿಳಿಸುವುದು ಬಹಳ ಮುಖ್ಯ. ಮೇಳದಲ್ಲಿ ಆಗಿರುವುದು ಏನು ಎಂಬುದರ ಬಗ್ಗೆ ಅಲ್ಲಿರುವ ಭಕ್ತರಿಗೆ ಹಾಗೂ ಇತರೆಡೆಗಳಲ್ಲಿರುವ ಅವರ ಸಂಬಂಧಿಕರಿಗೆ ಮಾಹಿತಿ ಸಿಗಬೇಕಿತ್ತು. ಆದರೆ ಆ ಮಾಹಿತಿ ಸಕಾಲದಲ್ಲಿ ಸಿಗಲಿಲ್ಲ. ಕಾಲ್ತುಳಿತಕ್ಕೆ ಕಾರಣ ಏನು ಎಂಬುದನ್ನು ಗುರುತಿಸಲು ಉತ್ತರಪ್ರದೇಶ ಸರ್ಕಾರವು ನ್ಯಾಯಾಂಗ ತನಿಖೆಗೆ ಆದೇಶಿಸಿದೆ. ಪರಿಣಾಮಕಾರಿಯಾಗಿ ನಡೆಸಿದರೆ ಪೊಲೀಸ್ ತನಿಖೆಯೂ ಇದಕ್ಕೆ ಕಾರಣವನ್ನು ಗುರುತಿಸಬಲ್ಲದು. ಕಾಲ್ತುಳಿತಕ್ಕೆ ಕಾರಣರಾದವರನ್ನು ಉತ್ತರದಾಯಿ ಆಗಿಸಬೇಕು. ಆದರೆ, ದುರ್ಘಟನೆಗೆ ಸಂಬಂಧಿಸಿದಂತೆ ಯಾವುದೇ ಅಧಿಕಾರಿಯ ವಿರುದ್ಧ ಕ್ರಮ ಕೈಗೊಂಡ ಬಗ್ಗೆ ಇದುವರೆಗೂ ಮಾಹಿತಿ ಇಲ್ಲ. ಮಹಾಕುಂಭಮೇಳದ ಆಯೋಜನೆಯ ಹೊಣೆಯನ್ನು ಹೊತ್ತುಕೊಂಡಿರುವ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈಗ ಆಗಿರುವುದರ ಹೊಣೆಯಿಂದ ತಪ್ಪಿಸಿಕೊಳ್ಳಲಾಗದು.

## ದಿನದ ಟ್ವೀಟ್

### ವಿಕೇಂದ್ರೀಕರಣಕ್ಕೆ ಒತ್ತು ಸಿಗಲಿ



**ಕರ್ನಾಟಕದಲ್ಲಿ ಬಿಜೆಪಿ ಜಿಲ್ಲಾ ಘಟಕಗಳ ಅಧ್ಯಕ್ಷರ ಆಯ್ಕೆ ಹೈಕಮಾಂಡ್‌ನಿಂದ ಆಗಿದೆ ಅಂತಾರೆ. ಇಂತಹ ದುಃಸ್ಥಿತಿ ಪಕ್ಷಕ್ಕೆ ಬಂದಿದೆ ಎಂದರೆ ಅದು ಅವಮಾನಕರ. ಜಿಲ್ಲಾ ಮಟ್ಟದ ಬಗ್ಗೆ ಹೈಕಮಾಂಡ್‌ಗೆ ಯಾವ ಮಾಹಿತಿ ಇರುತ್ತದೆ? ಇದಕ್ಕೆ ಸಮಯ ಎಲ್ಲಿರುತ್ತದೆ? ಅದಕ್ಕೇ ತಾನೆ ಅದು ರಾಜ್ಯ ಘಟಕವನ್ನು ಮಾಡುವುದು. ಹೀಗೇ ಮುಂದುವರಿದರೆ ತಾಲ್ಲೂಕು, ಗ್ರಾಮಕ್ಕೂ ಅವರೇ ನೇಮಿಸಬಹುದು.**

**ರೋಹಿತ್ ಸಿಂಹ,** ಎಂಜಿನಿಯರ್

## ಕಿಡಿನುಡಿ



**ಇಂತಹದು ನಿರಂತರವಾಗಿ ನಡೆಯುತ್ತದೆ. ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ... ಚಾಲಕರು ಅದರಲ್ಲೂ 'ವಜ್ರ' ಬಸ್‌ಗಳಲ್ಲಿ ಅತ್ಯಂತ ಭಯಾನಕವಾಗಿ ಬ್ರೇಕ್ ಹಾಕುತ್ತಾರೆ...**

(ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ನಲ್ಲಿ ಚಾಲಕ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿದ್ದರಿಂದ, ಬಸ್‌ನ ಒಳಗೆ ಮಹಿಳಾ ಕಂಡಕ್ಟರ್ ಆಯತಪ್ಪಿ ಬಿದ್ದ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

**ಅಮಿತ್ ಎ. ತಿವಾರಿ**

## 25 ವರ್ಷಗಳ ಹಿಂದೆ

ಸೋಮವಾರ, 31-1-2000

**• ಸಂಸತ್ ಸಮಿತಿ ರಚನೆಗೆ ವಿ.ಪಿ. ಸಿಂಗ್ ಸಲಹೆ**

**ಕಾನ್ಪುರ ಜ. 30 (ಯುಎನ್‌ಐ, ಪಿಟಿಐ)**– ಸಂವಿಧಾನವನ್ನು ಪರಾಮರ್ಶಿಸಲು ಆಯೋಗ ರಚಿಸುವ ಬದಲು ಸಂಸತ್ತಿನ ಸಮಿತಿ ರಚಿಸಬೇಕೆಂದು ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅವರು ಪ್ರಧಾನಿ ವಾಜಪೇಯಿ ಅವರಿಗೆ ಕರೆ ನೀಡಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಸಂವಿಧಾನವನ್ನು ದೇಶಕ್ಕೆ ಜನರು ನೀಡಿದ್ದಾರೆ ವಿನಾ ಪರಿಣತರಲ್ಲ. ಆದ್ದರಿಂದ ಸಂವಿಧಾನ ಪರಾಮರ್ಶೆ ಮಾಡುವ ಕೆಲಸವನ್ನು ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ನೀಡಬೇಕು. ಇದು ಪ್ರಜಾಪ್ರಭುತ್ವದ ಧ್ಯೇಯವನ್ನು ಎತ್ತಿ ಹಿಡಿಯುತ್ತದೆ ಎಂದರು.

**• ಬಿಜೆಪಿ ಸರ್ಕಾರದ ವಿರುದ್ಧ ರ‍್ಯಾಲಿ: ಸೋನಿಯಾ ಬಂಧನ**

**ನವದೆಹಲಿ, ಜ. 30 (ಪಿಟಿಐ)**– ವಾಜಪೇಯಿ ನೇತೃತ್ವದ ಸರ್ಕಾರದ ಮತೀಯವಾದ ಮತ್ತು ಗುಜರಾತ್ ಸರ್ಕಾರ ತನ್ನ ನೌಕರರು ಆರ್‌ಎಸ್‌ಎಸ್ ಚಟುವಟಿಕೆಗಳಲ್ಲಿ ಭಾಗವಹಿಸುವುದಕ್ಕೆ ಹಾಕಿದ್ದ ನಿಷೇಧ ರದ್ದುಪಡಿಸಿರುವುದನ್ನು ವಿರೋಧಿಸಿ ಇಂದು ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಹಾಗೂ ಪಕ್ಷದ ಇತರ 17 ಹಿರಿಯ ನಾಯಕರನ್ನು ಬಂಧಿಸಲಾಯಿತು.

## 50 ವರ್ಷಗಳ ಹಿಂದೆ

ಶುಕ್ರವಾರ, 31-1-1975

**• ವಿಚಿತ್ರ ಕಾಯಿಲೆ ಬಗ್ಗೆ ತನಿಖೆಗೆ ತಜ್ಞ ವೈದ್ಯರು**

**ಬೆಂಗಳೂರು, ಜ. 30**– ಸಾಗರದ ಬಳಿ ಇತ್ತೀಚೆಗೆ ಕಾಣಿಸಿಕೊಂಡಿರುವ ವಿಚಿತ್ರ ಅಂಗವಿಕಲ ಕಾಯಿಲೆ ಬಗ್ಗೆ ಆಳವಾಗಿ ಪರಿಶೀಲಿಸಲು ತಜ್ಞ ವೈದ್ಯರ ತಂಡವೊಂದು ಸೋಮವಾರ ತೆರಳಲಿದೆ. ಅದಕ್ಕೆ ಅಗತ್ಯವಾದ ಹಣವನ್ನು ಸರ್ಕಾರ ಮಂಜೂರು ಮಾಡಿದೆ. ನಿನ್ನೆವರೆಗೆ ಒಟ್ಟು 107 ಮಂದಿ ಆ ಕಾಯಿಲೆಗೆ ತುತ್ತಾಗಿದ್ದಾರೆಂದು ಅಧಿಕೃತವಾಗಿ ಗೊತ್ತಾಗಿದೆ.

ರೋಗಪೀಡಿತರೆಲ್ಲಾ ಹರಿಜನರು. ರೋಗದ ಪರಿಣಾಮವಾಗಿ ನಡೆಯುವ ಶಕ್ತಿ ನಾಶವಾಗುತ್ತದೆ. ಸಾವಿನ ಭಯವೇನೂ ಇಲ್ಲ.


**• ಸಾವು– ಬದುಕಿನ ಹೋರಾಟದಲ್ಲಿ ಕಲ್ಬುರ್ಗಿ ನಿರಾಶ್ರಿತರು**

**ಬೆಂಗಳೂರು, ಜ. 30**–ಹಸಿವು– ಕಾಯಿಲೆ – ಸಾವಿನ ನಡುವೆ ಅವಿರತ ಹೋರಾಟ.

ಬರದ ಬೇಗೆಗೆ ಬೆದರಿ ಎರಡು ವರ್ಷಗಳ ಹಿಂದೆ ಕಲ್ಬುರ್ಗಿಯಿಂದ ಓಡಿಬಂದ 130 ಕುಟುಂಬಗಳು ಮತ್ತೆ ಅದೇ ಹಸಿವಿನ ಭೂತಕ್ಕೆ ಬಲಿಯಾಗುವ ಪ್ರಸಂಗ. ಸುಮಾರು 10,000 ಜನ ಬರಗಾಲ ಪ್ರದೇಶದಿಂದ ವಲಸೆ ಬಂದಿದ್ದು ಕೊಳಚೆ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗಾದರೂ ಬಿಸಿಲು, ಗಾಳಿ ತಡೆಯುವ ಗುಡಿಸಲುಗಳಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ 500 ಜನಕ್ಕೆ ಜಕ್ಕರಾಯನ ಕೆರೆ ಅಂಗಳವೇ ನಿವಾಸ.

ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬಂತಿದೆ ಹೈಕಮಾಂಡ್ ಆಟ

# ನಗುವವರ ಮುಂದೆ ಎಡವಿಬಿದ್ದ ಬಿಜೆಪಿ!



ಅನುಸಂಧಾನ

ರವೀಂದ್ರ ಭಟ್ಟ

**'ಮನೆಯೊಂದು** ಮೂರು ಬಾಗಿಲು' ಎಂಬುದು ಒಡೆದ ಮನೆಗೆ ಸಂಬಂಧಿಸಿದಂತೆ ಹೇಳುವ ಮಾತು. ಕರ್ನಾಟಕದಲ್ಲಿ ಬಿಜೆಪಿಯ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ದಿನದಿಂದ ದಿನಕ್ಕೆ ಬಾಗಿಲುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಬಾಗಿಲುಗಳನ್ನು ಮುಚ್ಚಿ ಭಿನ್ನರ ಬಾಯಿಯನ್ನು ಮುಚ್ಚಿಸುವ ಕೆಲಸ ಸಾಧ್ಯವಾಗುತ್ತಿಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬಿ.ವೈ.ವಿಜಯೇಂದ್ರ ಅವರ ನೇಮಕವಾದಾಗ ಬಸನಗೌಡ ಪಾಟೀಲ ಯತ್ನಾಳ ಒಬ್ಬರೇ ಟೀಕೆ ಮಾಡುತ್ತಿದ್ದರು. ಅವರ ಬಾಯಿಯನ್ನು ಬಂದ್ ಮಾಡಲು ಯಾರೂ ಪ್ರಯತ್ನಿಸದೇ ಇದ್ದುದರಿಂದ ಭಿನ್ನರ ಸಂಖ್ಯೆ ನಿಧಾನವಾಗಿ ಹೆಚ್ಚಾಗುತ್ತಾ ಹೋಯಿತು. ಯತ್ನಾಳ ಅವರೊಂದಿಗೆ ರಮೇಶ್ ಜಾರಕಿಹೊಳಿ, ಕುಮಾರ್ ಬಂಗಾರಪ್ಪ, ಪ್ರತಾಪ ಸಿಂಹ, ಅರವಿಂದ ಲಿಂಬಾವಳಿ, ಬಿ.ಪಿ.ಹರೀಶ್ ಮುಂತಾದವರು ಸೇರಿಕೊಂಡರು. ವಿಜಯೇಂದ್ರ ಅವರ ನಾಯಕತ್ವಕ್ಕೆ ಸವಾಲು ಹಾಕಿ ಪ್ರತ್ಯೇಕ ಆಂದೋಲನವನ್ನೇ ನಡೆಸಿದರು.

ವಿಜಯೇಂದ್ರ ಅವರು ಹೈಕಮಾಂಡ್‌ಗೆ ದೂರು ನೀಡಿದರೂ ಯತ್ನಾಳ ಬಣದ ಭಿನ್ನಮತೀಯ ಚಟುವಟಿಕೆ ನಿಲ್ಲಲೇ ಇಲ್ಲ. ನಂತರ ಹಿರಿಯ ನಾಯಕ ಸದಾನಂದ ಗೌಡ ಅವರೂ ರಾಜ್ಯ ಘಟಕದ ಅಧ್ಯಕ್ಷರ ವಿರುದ್ಧ ಅತೃಪ್ತಿ ಹೊರಹಾಕಿದರು. 23 ಜಿಲ್ಲಾಧ್ಯಕ್ಷರ ನೇಮಕಾತಿ ಹೊರಬಿದ್ದ ನಂತರ ಅಸಮಾಧಾನದ ಹೊಗೆ ಇನ್ನಷ್ಟು ಜೋರಾಯಿತು. ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸದಸ್ಯ ಡಾ. ಕೆ.ಸುಧಾಕರ್ ಅವರು ವಿಜಯೇಂದ್ರ ಅವರ ಮೇಲೆ ಮುಗಿಬಿದ್ದರು. ದಿನದಿಂದ ದಿನಕ್ಕೆ ಏರುತ್ತಲೇ ಇರುವ ಭಿನ್ನಮತದ ಗ್ರಾಫ್‌ಗೆ ಕಡಿವಾಣ ಹಾಕಲು ಹೈಕಮಾಂಡ್‌ಗೂ ಸಾಧ್ಯವಾಗುತ್ತಿಲ್ಲ. 'ಉಕ್ಕಿನ ಮನುಷ್ಯ' ಖ್ಯಾತಿಯ ಅಮಿತ್ ಶಾ ಮತ್ತು '56 ಇಂಚಿನ ಎದೆ'ಯ ನರೇಂದ್ರ ಮೋದಿ ಅವರೂ ತಟಸ್ಥರಾಗಿರುವುದರ ಹಿಂದಿನ ಗುಟ್ಟು ಏನೆಂಬುದೇ ಗೊತ್ತಾಗುತ್ತಿಲ್ಲ.

ವಿಜಯೇಂದ್ರ ಅವರು ಚುನಾಯಿತ ಅಧ್ಯಕ್ಷರೇನಲ್ಲ. ಹೈಕಮಾಂಡ್ ನೇಮಕ ಮಾಡಿದ ಅಧ್ಯಕ್ಷರು. ಅಂತಹ ಅಧ್ಯಕ್ಷರ ವಿರುದ್ಧ ಟೀಕೆ ಟಿಪ್ಪಣಿ ಬರುತ್ತಿದೆ ಎಂದರೆ ಹೈಕಮಾಂಡ್ ನಡೆಯನ್ನು ಟೀಕಿಸಲಾಗುತ್ತಿದೆ ಎಂದೇ ಅರ್ಥ. ಜೊತೆಗೆ ಹೈಕಮಾಂಡ್ ಪ್ರತಿನಿಧಿಯಾಗಿ ಬಂದಿದ್ದ ರಾಧಾ ಮೋಹನ್ ದಾಸ್ ಅಗರವಾಲ್ ಅವರಿಗೂ ಇಲ್ಲಿ ಒಳ್ಳೆಯ ಸ್ವಾಗತವೇನೂ ಸಿಗಲಿಲ್ಲ. ಅವರನ್ನೂ ಟೀಕಿಸಿ ಓಡಿಸಲಾಯಿತು. ತರುಣ್ ಚುಗ್ ಅವರ ಮಾತಿಗೂ ಬೆಲೆ ಸಿಗಲಿಲ್ಲ. ಅಂದರೆ ರಾಜ್ಯದಲ್ಲಿನ ಬಿಜೆಪಿಯ ಗುಂಪುಗಳು ಹೈಕಮಾಂಡ್‌ಗೂ ಸವಾಲು ಹಾಕಿದಂತಾಗಿದೆ. ಆದರೂ ಯಾವುದೇ ಕ್ರಮ ಕೈಗೊಳ್ಳಲು ಅದು ಮುಂದಾಗಿಲ್ಲ. ಪಕ್ಷದ ರಾಷ್ಟ್ರ ಘಟಕದ ಅಧ್ಯಕ್ಷ ಜೆ.ಪಿ.ನಡ್ಡಾ ಅಥವಾ ರಾಜ್ಯ ಉಸ್ತುವಾರಿಯ ಮಾತುಗಳನ್ನೂ ಕೇಳಿಸಿಕೊಳ್ಳದ ಮಟ್ಟಕ್ಕೆ ಇಲ್ಲಿನ ಬಿಜೆಪಿ ಭಿನ್ನರು ಬೆಳೆದು ನಿಂತಿದ್ದಾರೆ. ರಾಜ್ಯ ಘಟಕದ ಈ ಗೊಂದಲಗಳನ್ನು ಬಗೆಹರಿಸಲಾಗದ ಹೀನಾಯ ಮಟ್ಟಕ್ಕೆ ಬಂದು ನಿಂತಿದೆಯೇ ಬಿಜೆಪಿ ಹೈಕಮಾಂಡ್ ಎಂಬ ಅನುಮಾನ ಕಾಡುವಂತಾಗಿದೆ.

ಕರ್ನಾಟಕದ ರಾಜಕೀಯ ಈಗ ಸಂಕೀರ್ಣ ಕಾಲಘಟ್ಟದಲ್ಲಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿಯೂ ಎಲ್ಲವೂ ಸರಿಯಾಗಿಲ್ಲ. ಅಲ್ಲಿಯೂ ಮುಖ್ಯಮಂತ್ರಿ ಕುರ್ಚಿಯ ವಿಷಯದಲ್ಲಿ ಹೊಯ್ ಕೈ ನಡೆಯುತ್ತಿದೆ. ಬೆಲೆ ಏರಿಕೆಯ ಬೇಗೆಯಲ್ಲಿ ಜನ ಬೇಯುತ್ತಿದ್ದಾರೆ. ದಿನಕ್ಕೊಂದು ಹಗರಣದ ವಾಸನೆ ಹೊಡೆಯುತ್ತಿದೆ. ಭ್ರಷ್ಟಾಚಾರದ ಆರೋಪಗಳಿಗಂತೂ ಕೊನೆಯೇ ಇಲ್ಲ. ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಿಲ್ಲ. ಔಷಧಗಳ ಕೊರತೆ ಎದ್ದು ಕಾಣುತ್ತಿದೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಕಿರುಕುಳದಿಂದ ಜನ ಸಾಯುತ್ತಿದ್ದಾರೆ. ಮುಡಾ ಹಗರಣವಾಗಲಿ, ವಾಲ್ಮೀಕಿ ನಿಗಮದ ಹಗರಣವಾಗಲಿ ತಾರ್ಕಿಕ ಅಂತ್ಯ ಕಂಡಿಲ್ಲ. ಇಂತಹ ಸಂದರ್ಭದಲ್ಲಿ ರಚನಾತ್ಮಕ ಹೋರಾಟ ನಡೆಸಬೇಕಾದ ವಿರೋಧ ಪಕ್ಷ ಒಡಲೊಳಗೆ ಭಿನ್ನಮತದ ಬೆಂಕಿಯನ್ನು ಇಟ್ಟುಕೊಂಡು ಬೇಯುತ್ತಿದೆ. ತನ್ನನ್ನು ತಾನೇ ಸುಟ್ಟುಕೊಳ್ಳುತ್ತಿದೆ. ನಗುವವರ ಮುಂದೆ ಎಡವಿಬಿದ್ದು ನರಳಾಡುತ್ತಿದೆ.

ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎನ್ನುವ ನೀತಿಯನ್ನು ಬಿಜೆಪಿ ಹೈಕಮಾಂಡ್ ಅನುಸರಿಸುತ್ತಿರುವಂತೆ ಕಾಣುತ್ತಿದೆ. ಕರ್ನಾಟಕದಲ್ಲಿ ಬಿಜೆಪಿಯನ್ನು ಬಲವಾಗಿ ಕಟ್ಟಿದ, ಅಧಿಕಾರಕ್ಕೆ ತಂದ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ, ಲಿಂಗಾಯತ ಸಮುದಾಯದ ನಾಯಕ, ಚುನಾವಣೆಗಳಲ್ಲಿ ಹಣವನ್ನು ಚೆಲ್ಲುವ ಸಾಮರ್ಥ್ಯ ಇರುವ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಿದರೆ ಆಗುವ ನಷ್ಟದ ಬಗ್ಗೆ ಬಿಜೆಪಿ ಹೈಕಮಾಂಡ್‌ಗೆ ಅರಿವು ಇದೆ. ಹಾಗೆಂದು ಅವರನ್ನು ಸ್ವತಂತ್ರವಾಗಿ ಬಿಡಲೂ ಅದಕ್ಕೆ ಮನಸ್ಸು ಇದ್ದಂತಿಲ್ಲ. ಅವರು ಅಧ್ಯಕ್ಷರಾಗಿ ಇರಬೇಕು, ಆದರೆ ಲಗಾಮು ತಮ್ಮ ಕೈಯಲ್ಲಿಯೇ ಇರಬೇಕು ಎನ್ನುವ ನೀತಿಯನ್ನು ಹೈಕಮಾಂಡ್ ಅನುಸರಿಸುತ್ತಿರುವಂತೆ ಕಾಣುತ್ತಿದೆ. ರಾಜ್ಯ ಬಿಜೆಪಿಯಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇದೊಂದು ಹೈಕಮಾಂಡ್ ಪ್ರಾಯೋಜಿತ ಭಿನ್ನಮತ ಇರಬಹುದೇನೋ ಎನ್ನುವ ಅನುಮಾನವೂ ಬರುತ್ತದೆ.

ಕರ್ನಾಟಕವು ಹೀಗೆ ಹೈಕಮಾಂಡ್ ಪ್ರಾಯೋಜಿತ ಭಿನ್ನಮತದ ಪರ್ವಕ್ಕೆ ಸಾಕ್ಷಿಯಾದದ್ದು ಇದೇ ಮೊದಲಲ್ಲ. ಸಾಧಾರಣವಾಗಿ ಇಂತಹ ಪ್ರಯೋಗಗಳು ಆಡಳಿತ ಪಕ್ಷದಲ್ಲಿ ಆಗುತ್ತವೆ. ಈಗ ಅಪರೂಪಕ್ಕೆ ಇದು ವಿರೋಧ ಪಕ್ಷದಲ್ಲಿ ಕಾಣಿಸಿಕೊಂಡಿದೆ. 1956ರಲ್ಲಿ ಪ್ರಧಾನಿ ನೆಹರೂ ಮತ್ತು ಕರ್ನಾಟಕದ ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ನಡುವೆ ವೈಮನಸ್ಸು ಉಂಟಾಗಿ ನೆಹರೂ ಪ್ರಣೀತ ಭಿನ್ನಮತದಿಂದ ಕೆಂಗಲ್ ಅಧಿಕಾರ ಕಳೆದುಕೊಂಡಿದ್ದರು. 1958ರಲ್ಲಿ ಎಸ್.ನಿಜಲಿಂಗಪ್ಪ ಅವರೂ ಹೈಕಮಾಂಡ್ ಪ್ರೇರಿತ ಭಿನ್ನಮತಕ್ಕೆ ಬಲಿಯಾಗಿದ್ದರು. ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡಿದ್ದರು.

ಕೆಂಗಲ್ ಹನುಮಂತಯ್ಯ ಅವರಾಗಲಿ, ನಿಜಲಿಂಗಪ್ಪ ಅವರಾಗಲಿ ಹೈಕಮಾಂಡ್ ಬೆದರಿಕೆಗೆ ಸೊಪ್ಪು ಹಾಕಿರಲಿಲ್ಲ. ಕೆಂಗಲ್ ಹನುಮಂತಯ್ಯ ಅವರ ವಿರುದ್ಧದ ದೂರು ಪ್ರಧಾನಿ ನೆಹರೂ ಅವರನ್ನು ತಲುಪಿದಾಗ, ಅವರು ಕೆಂಗಲ್ ಅವರಿಗೆ ದೆಹಲಿಗೆ ಬರುವಂತೆ ಸೂಚಿಸಿದರು. ಕೆಂಗಲ್ ದೆಹಲಿಗೆ ಹೋದಾಗ ನೆಹರೂ 'ನಿಮ್ಮ ಆಡಳಿತ ವೈಖರಿ ಬಗ್ಗೆ ಬಹಳಷ್ಟು ದೂರುಗಳು ಬಂದಿವೆ. ನೀವು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದೀರಿ. ನಿಮ್ಮ ಮೇಲೆ ಭ್ರಷ್ಟಾಚಾರದ ಆರೋಪವೂ ಇದೆ' ಎಂದಾಗ ಕೆಂಗಲ್ 'ಮಿಸ್ಟರ್ ನೆಹರೂ, ನಿಮ್ಮ ಆಡಳಿತದ ಬಗ್ಗೆಯೂ ದೂರುಗಳು ಇವೆ. ನಿಮ್ಮ ಮಗಳು ಇಂದಿರಾ ಗಾಂಧಿ ಸಂವಿಧಾನೇತರ ಶಕ್ತಿಯಾಗಿ ದರ್ಬಾರು ನಡೆಸುತ್ತಿರುವ ಬಗ್ಗೆ ಕಾಂಗ್ರೆಸ್‌ನಲ್ಲಿ ಅತೃಪ್ತಿ ಇದೆ. ನೀವೇನು ಪ್ರಶ್ನಾತೀತ ನಾಯಕರಲ್ಲ. ನಿಮ್ಮ ಮುಂದೆ ನಾವು ಕೈಕಟ್ಟಿ ಗುಲಾಮರಂತೆ ನಿಲ್ಲಬೇಕೇನು?' ಎಂದು ಪ್ರಶ್ನಿಸಿದ್ದರು.

ತಮಿಳುನಾಡಿನ ಆವಡಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ನೆಹರೂ ಅವರು ಸಮಾಜವಾದಿ ಆರ್ಥಿಕ ಸಿದ್ಧಾಂತವನ್ನು ಮಂಡಿಸಿದರು. ಅದಕ್ಕೆ ನಿಜಲಿಂಗಪ್ಪ ವಿರೋಧ ವ್ಯಕ್ತಪಡಿಸಿದರು. ಆಗ ನೆಹರೂ 'ನೀನು ಹಳ್ಳಿಗ, ನಿನಗೆ ಭಾರತವನ್ನು ಹೇಗೆ ಪುನರ್‌ನಿರ್ಮಾಣ ಮಾಡಬೇಕು ಎನ್ನುವ ಪರಿಕಲ್ಪನೆಯೇ ಇಲ್ಲ' ಎಂದು ನಿಜಲಿಂಗಪ್ಪ ಅವರನ್ನು ಟೀಕಿಸಿದರು. ಇದಕ್ಕೆ ಸಿಟ್ಟಾದ ನಿಜಲಿಂಗಪ್ಪ 'ಗ್ರಾಮೀಣಾಭಿವೃದ್ಧಿಯ ಬಗ್ಗೆ ನನಗೆ ಇರುವಷ್ಟು ಕಾಳಜಿಯ ಹತ್ತನೇ ಒಂದು ಭಾಗ ನಿಮಗೆ ಇದ್ದಿದ್ದರೆ ಭಾರತದ ಆರ್ಥಿಕ ಚಿತ್ರಣವೇ ಬೇರೆಯಾಗುತ್ತಿತ್ತು' ಎಂದು ತಿರುಗೇಟು ನೀಡಿದ್ದರು. ಆದರೆ ಇವೇ ಮಾತುಗಳು ನಂತರ ಹೈಕಮಾಂಡ್ ಪ್ರೇರಿತ ಭಿನ್ನಮತವಾಗಿ ಅವರು ಅಧಿಕಾರ ಕಳೆದುಕೊಂಡರು.

ವಿಜಯೇಂದ್ರ ಅವರು ಕೆಂಗಲ್ ಹನುಮಂತಯ್ಯ ಅವರೂ ಅಲ್ಲ, ನಿಜಲಿಂಗಪ್ಪ ಅವರ ತರಹದವರೂ ಅಲ್ಲ. ಅಮಿತ್ ಶಾ ಅಥವಾ ಮೋದಿಯವರ ಮುಂದೆ ನಿಂತು ಈ ರೀತಿಯ ಪ್ರತಿಭಟನೆಯ ಮಾತುಗಳನ್ನು ಹೇಳುವ ಧೈರ್ಯವೂ ಅವರಿಗೆ ಇಲ್ಲ. ಆದರೆ ಬಿಜೆಪಿ ಹೈಕಮಾಂಡ್‌ಗೆ ಯಡಿಯೂರಪ್ಪ ಅವರ ಕುರಿತು ಭಯ ಅಂತೂ ಇದ್ದೇ ಇದೆ. ಈ ತೊಳಲಾಟದಲ್ಲಿ ಬಳಲುತ್ತಿರುವವರು ಕರ್ನಾಟಕದ ಜನ. ಇದು ಹೀಗೆಯೇ ಮುಂದುವರಿದರೆ ಮುಂದೊಂದು ದಿನ ರಾಜ್ಯದ ಮತದಾರರು 'ಸಕ್ರಿಯ ವಿರೋಧ ಪಕ್ಷ ಬೇಕು' ಎಂದು ಜಾಹೀರಾತು ನೀಡಬೇಕಾದೀತು. ವಿರೋಧ ಪಕ್ಷ ಅಷ್ಟೇ ಅಲ್ಲ ಈಗ ಸಕ್ರಿಯ ಆಡಳಿತ ಪಕ್ಷವೂ ಬೇಕೇಬೇಕಾಗಿದೆ.



## ಚುರುಮುರಿ



### ಪಾಪ– ಪುಣ್ಯ!

• ಬಿ.ಎನ್.ಮಲ್ಲೇಶ್

'ಏನೋ ತೆಪರ, ನಾಳಿನ ನಿರ್ಮಲಮ್ಮನ ಸೆಂಟ್ರಲ್ ಬಜೆಟ್ಟು ಏನಂತತಿ? ನಮಗೇನರೆ ಅನುಕೂಲ ಅದಾವ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ನಿರ್ಮಲಮ್ಮನ ಬಜೆಟ್ಟು ಬಿಜೆಪಿಯೋರ ಪಾಲಿಗೆ ಸರ್ವಸ್ಪರ್ಶಿ, ಸಮೃದ್ಧ! ಕಾಂಗ್ರೆಸ್‌ನೋರ ಪಾಲಿಗೆ ಖಾಲಿ ಡಬ್ಬಾ ಅಂತತಿ' ತೆಪರೇಸಿ ನಕ್ಕ.

'ಆಹಾ... ಬಜೆಟ್‌ಗೂ ಮೊದ್ಲೇ ಭವಿಷ್ಯ ನುಡಿದೆಲ್ಲೋ ತೆಪರ' ಎಂದ ಗುಡ್ಡೆ.

'ಮತ್ತಿನ್ನೇನು? ಎಂಥ ದರಿದ್ರ ಬಜೆಟ್ ಆದ್ರೂ ಬಿಜೆಪಿಯೋರು 'ಆಹಾ ಅದ್ಭುತ' ಅಂದೇ ಅಂತಾರೆ. ಎಂಥ ಒಳ್ಳೇ ಬಜೆಟ್ ಆದ್ರೂ ಕಾಂಗ್ರೆಸ್‌ನೋರು 'ಬಜೆಟ್‌ನಲ್ಲಿ ಏನೂ ಇಲ್ಲ, ಖಾಲಿ ಡಬ್ಬಾ' ಅಂತಾರೆ. ಅದು ಕಾಮನ್'.

'ಅದಿರ್ಲಿ, ಏನೇನು ಸೋವಿ, ಏನೇನು ದುಬಾರಿ ಆಗಬೋದು?'

'ಮಾಮೂಲಿ... ಸಿಗರೇಟು, ಕಾರು, ಎಲೆಕ್ಟ್ರಾನಿಕ್ ವಸ್ತು ದುಬಾರಿ. ಪಾದರಕ್ಷೆ, ಛತ್ರಿ, ಟವೆಲ್ಲು, ದನ ಕಟ್ಟೋ ಹಗ್ಗ ಸೋವಿ'.

'ಅದೇನು ಟವೆಲ್ಲು, ಹಗ್ಗ ಸೋವಿ?'

'ತೆರಿಗೆ ಕಟ್ಟಿ ಕಟ್ಟಿ ಬೆವರು ಒರೆಸಿಕೊಳ್ಳಾಕೆ ಟವೆಲ್ಲು, ಸಾಲ ತೀರಿಸಕಾಗದೇ ಇದ್ರೆ ನೇಣು ಹಾಕ್ಕಳ್ಳಾಕೆ ಹಗ್ಗ'.

'ಏಯ್, ಅದೇನೋ ಹದಿನೈದು ಲಕ್ಷದವರೆಗೆ ಇನ್‌ಕಂ ಟ್ಯಾಕ್ಸ್ ಇಲ್ಲ ಅಂತಿದ್ರಲ್ಲೋ' ಮಂಜಮ್ಮ ಕೇಳಿದಳು.

'ತಗಂಡು ಏನ್ ಮಾಡಾಣ? ನಮಗೆ ಹದಿನೈದು ಲಕ್ಷ ಇನ್‌ಕಂ ಇದ್ರೆ ತಾನೆ? ಎದ್ರೆ ಹೆಗಲ ಮೇಲೆ ಟವೆಲ್ಲು, ಕುಂತ್ರೆ ನಿನ್ ಚಾದಂಗಡಿ ಉದ್ರಿ ಬಾಕಿ'.

'ಹ್ಞಾ... ಎಲ್ರೂ ಮೊದ್ಲು ನನ್ ಬಾಕಿ ತೀರಿಸ್ರಿ, ಇಲ್ಲಾಂದ್ರೆ ಪಾಪ ಸುತ್ಕೊಳ್ಳುತ್ತೆ ನೋಡ್ರಿ' ಮಂಜಮ್ಮ ಗರಂ ಆದಳು.

'ಪಾಪ ಸುತ್ಕೊಂಡ್ರೆ ಕುಂಭಮೇಳಕ್ಕೋಗಿ ಪುಣ್ಯಸ್ನಾನ ಮಾಡ್ತೀವಿ' ಗುಡ್ಡೆ ನಕ್ಕ.

'ಅಲ್ಲಿ ಸ್ನಾನ ಮಾಡಿದ್ರೆ ಪಾಪ ಕಳೆಯುತ್ತೋ ಇಲ್ಲೋ ಗೊತ್ತಿಲ್ಲ, ಆದ್ರೆ ನಿಮ್ಮಂಥ ಕೊಳಕರು ಅಲ್ಲಿ ಹೋಗಿ ಸ್ನಾನ ಮಾಡೋದ್ರಿಂದ ನದಿಗಳೆಲ್ಲ ಗಬ್ಬು ನಾರೋದಂತೂ ಗ್ಯಾರಂಟಿ' ಎಂದಳು ಮಂಜಮ್ಮ, ಎಲ್ಲರೂ ಗೊಳ್ಳಂತ ನಕ್ಕರು.

## ಸಂಗತ

# ಪ್ರಶ್ನೆಪತ್ರಿಕೆ ಅನುವಾದ: ಏಕೀ ಅಧ್ವಾನ?

### ಅನುವಾದದಲ್ಲಿನ ಪ್ರಮಾದಗಳು ಕೆಪಿಎಸ್‌ಸಿಯ ಅತೀವ ನಿರ್ಲಕ್ಷ್ಯಕ್ಕೆ ನಿದರ್ಶನ

• ನಾಗೇಶ ಡೂಗನವರ

**ಕರ್ನಾಟಕ** ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ವಿವಿಧ ಹುದ್ದೆಗಳ ನೇಮಕಾತಿಗಾಗಿ ಆಯೋಜಿಸುವ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಭ್ರಷ್ಟಾಚಾರದಂತಹ ಕಾರಣಗಳಿಂದ ಈ ಹಿಂದೆ ಮರುಪರೀಕ್ಷೆ ನಡೆಸಿದ ಉದಾಹರಣೆಗಳಿವೆ. ಆದರೆ ಬರೀ ಅನುವಾದದ ಲೋಪದಿಂದ ಆದ ಪ್ರಮಾದಗಳಿಗಾಗಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಮರುಪರೀಕ್ಷೆ (2024ರ ಡಿ. 29) ನಡೆದಿರುವುದು ಇದೇ ಮೊದಲು. ಆದರೆ ಮರುಪರೀಕ್ಷೆಯಲ್ಲೂಮತ್ತೆಅದೇರೀತಿಯತೊಂದರೆಗಳಾಗಿರುವುದು ಅತ್ಯಂತ ಶೋಚನೀಯ.

ಈ ಹಿಂದೆ ಪ್ರಶ್ನೆಪತ್ರಿಕೆಗಳಲ್ಲಿ ಕ್ವಚಿತ್ತಾಗಿ ಅನುವಾದ ದೋಷಗಳಾದಾಗ ಕೃಪಾಂಕ ಕೊಡುವ ಮೂಲಕ ನ್ಯಾಯ ಒದಗಿಸಲಾಗುತ್ತಿತ್ತು. ಆದರೆ ಈ ಬಾರಿ ನಡೆದ ಪರೀಕ್ಷೆಯಲ್ಲಿ ಆದ ಅನುವಾದದ ಪ್ರಮಾದಗಳು ಕೃಪಾಂಕ ಕೊಡುವುದರ ಮೂಲಕ ಸರಿದೂಗಿಸಲು ಸಾಧ್ಯವಿಲ್ಲದಂತಿವೆ. ಏಕೆಂದರೆ ಈ ಪ್ರಶ್ನೆಪತ್ರಿಕೆಗಳಲ್ಲಿ ಶೇಕಡ 45ರಿಂದ 50ರಷ್ಟು ಲೋಪದೋಷಗಳು ಇರುವುದನ್ನು ಗುರುತಿಸಲಾಗಿದೆ.

ಈ ಬೆಳವಣಿಗೆಯು ಆಯೋಗವು ಮೌಲ್ಯಮಾಪನವನ್ನು ನ್ಯಾಯಸಮ್ಮತವಾಗಿ, ಪಾರದರ್ಶಕವಾಗಿ ನಡೆಸುತ್ತದೆಯೇ ಎಂಬ ಬಗ್ಗೆ ಗಂಭೀರವಾದ ಸಂಶಯವನ್ನು ಮೂಡಿಸುತ್ತದೆ. ಪ್ರಶ್ನೆಪತ್ರಿಕೆಗಳೇ ಲೋಪದಿಂದ ಕೂಡಿದ್ದರೆ ನ್ಯಾಯಯುತ ಮೌಲ್ಯಮಾಪನ ಹೇಗೆ ಸಾಧ್ಯ? ಹಾಗಾದಲ್ಲಿ ಈ ಇಡೀ ಪರೀಕ್ಷಾ ವ್ಯವಸ್ಥೆಯೇ ತನ್ನ ಸಮಗ್ರತೆ ಹಾಗೂ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಂತೆ ಆಗುವುದಿಲ್ಲವೇ?

ಪ್ರಶ್ನೆಪತ್ರಿಕೆಗಳನ್ನು ದೋಷರಹಿತವಾಗಿ ರೂಪಿಸದೇ ಇರುವುದು, ಈ ಮೊದಲಿನ ತಪ್ಪುಗಳಿಂದ ಪಾಠ ಕಲಿಯದೇ ಇರುವುದನ್ನು ಸೂಚಿಸುತ್ತದೆ ಹಾಗೂ ಕೆಪಿಎಸ್‌ಸಿ ತನ್ನ ಜವಾಬ್ದಾರಿಯನ್ನು ಎಷ್ಟು ಅಸಡ್ಡೆಯಿಂದ ಮುಗಿಸಿ ಕೈ ತೊಳೆದುಕೊಳ್ಳುತ್ತದೆ ಎಂಬುದನ್ನು ತೋರಿಸುತ್ತದೆ. ಅಷ್ಟೇ ಏಕೆ, ಅನುವಾದದಲ್ಲಿ ಆದ ಈ ಪ್ರಮಾದಗಳು ಕನ್ನಡ ಭಾಷೆಯನ್ನು ತಾಂತ್ರಿಕವಾಗಿ ಅಭಿವೃದ್ಧಿಪಡಿಸುವಲ್ಲಿ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲದಿರುವುದನ್ನು ಎತ್ತಿಹಿಡಿಯುತ್ತವೆ.

ಭಾರತದಂತಹ ಬಹುಭಾಷಾ ಸಂಸ್ಕೃತಿ ಇರುವ ದೇಶದಲ್ಲಿ ಮಾತ್ರವಲ್ಲ ಜಾಗತಿಕವಾಗಿಯೂ ಅನುವಾದ ಇಂದು ಅನಿವಾರ್ಯವಾಗಿದೆ. ಇದಕ್ಕೆ ಬೇಕಾದ ಮಾನವ ಸಂಪನ್ಮೂಲ ಇದ್ದರೂ ಅದನ್ನು ಶೋಧಿಸುವ ತಾಳ್ಮೆ ಇಲ್ಲವಾಗಿದೆ. ಸುಲಭದಲ್ಲಿ ದೊರೆಯುವ ತಂತ್ರಜ್ಞಾನಕ್ಕೆ ಮೊರೆ ಹೋಗಿದೆ ಇಂದಿನ ಸಮಾಜ. ಹೀಗಾಗಿ, ಈಗ ಗೂಗಲ್ ಟ್ರಾನ್ಸ್‌ಲೇಷನ್, ಮಷೀನ್ ಟ್ರಾನ್ಸ್‌ಲೇಷನ್, ಚಾಟ್ ಜಿಪಿಟಿಯಂತಹ ತಂತ್ರಾಂಶಗಳ ಸಹಾಯದಿಂದ ದೊಡ್ಡ ಪ್ರಮಾಣದಲ್ಲಿ ಅನುವಾದ ಕಾರ್ಯ ನಡೆಯುತ್ತಿರುವುದು ಅಘೋಷಿತ ಸತ್ಯ.

ಇಂದು ನಮ್ಮಲ್ಲಿ ಹೆಚ್ಚಿನವರು ಅನುವಾದ ಕೆಲಸಗಳಿಗೆ ಈ ತಂತ್ರಾಂಶಗಳನ್ನು ಬಳಸುತ್ತಿರುವುದು ವಾಸ್ತವ. ಆದರೆ ಈ ರೀತಿಯ ತಂತ್ರಾಂಶವನ್ನು ಬಳಸಿ ಅನುವಾದಿಸಿದ ಬರಹಗಳನ್ನು ಮಾನವನ ಹಸ್ತಕ್ಷೇಪ ಇಲ್ಲದೇ ಪ್ರಕಟಿಸಿದಲ್ಲಿ ಬಹಳಷ್ಟು ಗೊಂದಲಗಳು ಸೃಷ್ಟಿಯಾಗುತ್ತವೆ. ಏಕೆಂದರೆ ಯಾವುದೇ ಒಂದು ಭಾಷೆಯು ಸಾಂಸ್ಕೃತಿಕವಾಗಿ, ಸಂದರ್ಭೋಚಿತವಾಗಿ ವಿವಿಧ ಅರ್ಥಗಳನ್ನು ಸ್ಫುರಿಸುತ್ತದೆ. ಹಾಗೆಯೇ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸಲು ಸುಲಭಸಾಧ್ಯವಲ್ಲದ ಪದಪುಂಜಗಳು ಸಹ ಎಲ್ಲ ಭಾಷೆಗಳಲ್ಲಿ ಇರುತ್ತವೆ. ಇಂತಹ ಪದಗಳ ಅರ್ಥವ್ಯಾಪ್ತಿ ಈ ತಂತ್ರಾಂಶಕ್ಕೆ ಸಮರ್ಥವಾಗಿ ನಿಲುಕದಂತಹದು.

ಎರಡನೆಯದಾಗಿ, ಅನುವಾದ ಪ್ರಕ್ರಿಯೆ ನಡೆದಾಗ ವ್ಯಾಕರಣದಲ್ಲಿ ಆಗುವ ಬದಲಾವಣೆಗಳು ಅರ್ಥಲೋಪಕ್ಕೆ ಕಾರಣವಾಗುವುದುಂಟು. ಮೂರನೆಯದಾಗಿ, ಮಾನವನಿರ್ಮಿತ ಜ್ಞಾನಮಾರ್ಗಗಳಾದ ವಿಜ್ಞಾನ, ಭಾಷೆಯಂತಹವು ಅವುಗಳದ್ದೇ ಆದ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿವೆ. ಹೀಗೆ ಭಿನ್ನ ವಿಷಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳನ್ನು ಅರ್ಥೈಸುವಲ್ಲಿ ತಂತ್ರಾಂಶ ವಿಫಲವಾಗುತ್ತದೆ. ಇಂತಹ ತಂತ್ರಾಂಶವನ್ನು ಅನುವಾದಕ್ಕಾಗಿ ಬಳಸಿಕೊಂಡಿರಬಹುದು ಎಂಬ ಬಲವಾದ ಅನುಮಾನ ಈ ಎರಡೂ ಬಾರಿ ನಡೆದ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ನೋಡಿದರೆ ಮೂಡುತ್ತದೆ. ಪ್ರಶ್ನೆಪತ್ರಿಕೆಯಲ್ಲಿ ಅನುವಾದಗೊಂಡ ಕೆಲವು ಪದಗಳು ಅನರ್ಥಕಾರಿ ಆಗಿರುವುದು ಪ್ರಶ್ನೆಪತ್ರಿಕೆಯ ಉದ್ದಕ್ಕೂ ಕಣ್ಣಿಗೆ ರಾಚುವಂತೆ ಇದೆ.





ಹೀಗಾಗಿ, ಈ ಇಡೀ ಪ್ರಕರಣ ಬರೀ ಒಂದು ಪರೀಕ್ಷೆಯನ್ನು ಸಮರ್ಪಕವಾಗಿ ನಡೆಸುವಲ್ಲಿ ಆದ ಪ್ರಮಾದ ಎಂದು ಹೇಳಲಾಗದು. ಜೊತೆಗೆ ಇದು ಬರೀ ಅನುವಾದದ ಸಮಸ್ಯೆಯೂ ಅಲ್ಲ. ಭಾಷಾ ಸಂಕೀರ್ಣತೆಯನ್ನು ಸಮರ್ಥವಾಗಿ ಅರ್ಥೈಸದ ಅಪಕ್ವ ಅನುವಾದವನ್ನು ನೀಡಿದ್ದು ಏಕೆ? ರಾಜ್ಯದಲ್ಲಿ ಅರ್ಹ ಅನುವಾದಕರ ಕೊರತೆ ಇದೆಯೇ? ಒಂದೊಮ್ಮೆ ತಂತ್ರಾಂಶ ಬಳಸಿದ್ದಲ್ಲಿ, ಅನುವಾದಗೊಂಡ ಪ್ರಶ್ನೆಪತ್ರಿಕೆಗಳನ್ನು ವಿಷಯತಜ್ಞರಿಂದ ತಿದ್ದಿಸಬೇಕು ಎನ್ನುವ ಸಾಮಾನ್ಯ ಜ್ಞಾನವೂ ಆಯೋಗಕ್ಕೆ ಇಲ್ಲವೇ? ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿ ಉನ್ನತ ಹುದ್ದೆ ಪಡೆಯಲೆತ್ನಿಸುವ ಯುವಜನರಿಗೆ ಇದರಿಂದ ಎಂತಹ ಸಂದೇಶ ರವಾನೆಯಾಗುತ್ತದೆ ಎನ್ನುವುದರ ಬಗ್ಗೆ ಕಿಂಚಿತ್ ಕಾಳಜಿಯೂ ಇಲ್ಲದಿರುವುದು ವಿಷಾದನೀಯ.

ಕರ್ನಾಟಕ ನಾಗರಿಕ ಸೇವೆಗಳ ಅತ್ಯುನ್ನತ ಹುದ್ದೆಗಳಿಗಾಗಿ ನಡೆಯುವ ಈ ಪರೀಕ್ಷೆಯ ಗಾಂಭೀರ್ಯವನ್ನು ಅರಿಯಬೇಕಾಗಿದೆ. ಇನ್ನು ಮುಂದಾದರೂ ಈ ರೀತಿಯ ತಪ್ಪುಗಳು ಮರುಕಳಿಸದಂತೆ ಪರೀಕ್ಷೆಗಳನ್ನು ನಡೆಸಲು ಆಯೋಗ ಪ್ರಯತ್ನಿಸುವುದೇ? ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ದೊರೆಯಬಹುದೇ? ಕಾದು ನೋಡೋಣ.

ಲೇಖಕ: ಸಹಾಯಕ ಪ್ರಾಧ್ಯಾಪಕ, ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ, ಮಂಡ್ಯ ಜಿಲ್ಲೆ

## ವಾಚಕರ ವಾಣಿ

### ಸಾವು– ನೋವಿನ ಜಾಗೃತಿಗೆ ಅಭಿಯಾನ

ರಾಜ್ಯದ ಉಗ್ರಾಣದಲ್ಲೇ ಔಷಧಿಗಳು ಅಲಭ್ಯವಾಗಿವೆ ಎಂಬ ಸುದ್ದಿ ಪ್ರಕಟವಾಗಿದೆ (ಪ್ರ.ವಾ., ಜ. 29). ಹಲವಾರು ಜಿಲ್ಲೆಗಳ ಉಗ್ರಾಣಗಳಲ್ಲಿ ಔಷಧಿಗಳ ತೀವ್ರ ಕೊರತೆ ಇರುವುದು ನಾಚಿಕೆಗೇಡಿನ ವಿಷಯವಾಗಿದೆ. ಈ ಸ್ಥಿತಿಯು ಔಷಧಿಗಳನ್ನು ಹೊರಗಿನಿಂದ ತರುವಂತೆ ಶಿಫಾರಸು ಮಾಡಲು ಸರ್ಕಾರಿ ಆಸ್ಪತ್ರೆಗಳ ವೈದ್ಯರನ್ನು ಒತ್ತಾಯಿಸುತ್ತದೆ. ಅದರ ಪರಿಣಾಮವಾಗಿ ರೋಗಿಗಳು ತಮ್ಮ ಜೇಬಿನಿಂದ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಔಷಧಿಗಳನ್ನು ಸಂಗ್ರಹಿಸಲು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತವನ್ನು (ಕೆಎಸ್‌ಎಂಎಸ್‌ಸಿಎಲ್) ರಾಜ್ಯ ಸರ್ಕಾರವೇ ಸ್ಥಾಪಿಸಿದೆ. ಇದು, ತನ್ನ ಕಾರ್ಯನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಡ್ರಗ್ ಆ್ಯಕ್ಷನ್ ಫೋರಂ- ಕರ್ನಾಟಕ (ಡಿಎಎಫ್-ಕೆ), ತರ್ಕಬದ್ಧ ಔಷಧ ನೀತಿಗಾಗಿ ಪ್ರಚಾರ ಮಾಡುವ ನೋಂದಾಯಿತಮತ್ತುಸ್ವತಂತ್ರಸಂಸ್ಥೆಯಾಗಿದ್ದು,ಹದಿನೈದುವರ್ಷಗಳಿಂದಕೆಎಸ್‌ಎಂಎಸ್‌ಸಿಎಲ್‌ಕಾರ್ಯವೈಖರಿಯನ್ನು ಗಮನಿಸುತ್ತಿದೆ. ಆದರೆ ದುರದೃಷ್ಟವಶಾತ್, ಬಳ್ಳಾರಿ ಒಳಗೊಂಡಂತೆ ಕೆಲವು ಜಿಲ್ಲೆಗಳಲ್ಲಿ ತಾಯಂದಿರ ಸಾವುಗಳನ್ನು ನಾವು ಕಂಡಿದ್ದೇವೆ. ಇದಕ್ಕೆ ಪ್ರತಿಕ್ರಿಯೆಯಾಗಿ ಡಿಎಎಫ್-ಕೆ ಮತ್ತು ಸಾರ್ವತ್ರಿಕ ಆರೋಗ್ಯ ಆಂದೋಲನ್– ಕರ್ನಾಟಕ (ಎಸ್‌ಎಎ-ಕೆ) ಸೇರಿದಂತೆ ಹಲವಾರು ಸಂಸ್ಥೆಗಳು ಜಾಥಾ– ಸಾರ್ವಜನಿಕ ಜಾಗೃತಿ ಅಭಿಯಾನವನ್ನು ಪ್ರಾರಂಭಿಸಿವೆ. ಇದು ಫೆಬ್ರುವರಿ 3ರಂದು ಬೀದರ್‌ನಿಂದ ಪ್ರಾರಂಭವಾಗುತ್ತದೆ ಮತ್ತು ನಂತರ ಕಲಬುರಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ದಾವಣಗೆರೆ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರದ ಮೂಲಕ ಹಾದು 14ರಂದು ಬೆಂಗಳೂರಿನಲ್ಲಿ ಕೊನೆಗೊಳ್ಳುತ್ತದೆ. ಈ ಪತ್ರದ ಮೂಲಕ ನಾನು ಈ ಜಿಲ್ಲೆಗಳ ಸಾರ್ವಜನಿಕರಿಗೆ ಜಾಥಾವನ್ನು ಬೆಂಬಲಿಸುವಂತೆ ಮನವಿ ಮಾಡುತ್ತೇನೆ. ಹೆಚ್ಚಿನ ಮಾಹಿತಿಗೆ ಬ್ಲಾಗ್ ನೋಡಿ: https://daf-k.blogspot.com/

**ಡಾ. ಗೋಪಾಲ್ ದಾಬಡೆ,** ಅಧ್ಯಕ್ಷ, ಡ್ರಗ್ ಆ್ಯಕ್ಷನ್ ಫೋರಂ– ಕರ್ನಾಟಕ

### ಆಡಳಿತಶಾಹಿಯ ಅದಕ್ಷತೆಗೆ ಕೈಗನ್ನಡಿ

ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ, ಅವರ ಸಂಬಂಧಿ ಡಿ.ಸಿ.ತಮ್ಮಣ್ಣ ಮತ್ತಿತರರ ಮೇಲಿನ ಜಮೀನು ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನೀಡಿರುವ ಆದೇಶ ಜಾರಿಯಲ್ಲಿ ಸರ್ಕಾರ ವಿಫಲ ಆಗಿರುವುದನ್ನು ಆಕ್ಷೇಪಿಸಿ ಸಲ್ಲಿಕೆಯಾಗಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ವೇಳೆ ಹೈಕೋರ್ಟ್ ಹೇಳಿರುವ ಮಾತುಗಳು (ಪ್ರ.ವಾ., ಜ. 30) ಗಮನಾರ್ಹ. '...ನಿಮ್ಮನ್ನು ಎಲ್ಲಿಗೆ ಕಳಿಸಬೇಕೊ ಅಲ್ಲಿಗೇ ಕಳಿಸುತ್ತೇನೆ. ಹದಿನೈದು ದಿನ ಜೈಲಿನಲ್ಲಿ ಇದ್ದುಬಂದರೆ ಸರಿಹೋಗ್ತೀರಿ...' ಎಂದು ನ್ಯಾಯಾಲಯವು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಠಾರಿಯಾ ಅವರನ್ನು ಕಟುವಾಗಿಯೇ ಕುಟುಕಿದೆ.

ಬಡಬಗ್ಗರು ಮಾಡಿಕೊಳ್ಳುವ ಒತ್ತುವರಿಯ ವಿಷಯದಲ್ಲಿಯೂ ಅಧಿಕಾರಿಗಳು ಈ ರೀತಿ ವಿಳಂಬ ಧೋರಣೆ ಅನುಸರಿಸುತ್ತಾರೆಯೇ ಎಂಬುದು ಕೇಳಲೇಬೇಕಾದ ಪ್ರಶ್ನೆ. 'ಸರ್, ವ್ಯವಸ್ಥೆ ತುಂಬಾ ಕೆಟ್ಟದಾಗಿದೆ...' ಎಂದು ಪ್ರಧಾನ ಕಾರ್ಯದರ್ಶಿಯವರು ನ್ಯಾಯಮೂರ್ತಿಯವರಲ್ಲಿ ಅರಿಕೆ ಮಾಡಿಕೊಂಡಿರುವುದು ಅವರ ಅಸಹಾಯಕತೆಯನ್ನು ತೋರುತ್ತದೆ. ಅಲ್ಲದೆ, ಕ್ರಮ ಕೈಗೊಳ್ಳದಿರಲು ಅವರ ಮೇಲೆ ರಾಜಕೀಯ ಒತ್ತಡ ಇದ್ದಿರಬಹುದು ಎಂಬ ಅನುಮಾನಕ್ಕೆ ಪುಷ್ಟಿ ನೀಡುತ್ತದೆ.

ಈ ಹಿಂದೆ, ಬೆಂಗಳೂರಿನಲ್ಲಿ ರಾಜಕಾಲುವೆಯ ಮೇಲೆ ಕಟ್ಟಡ ನಿರ್ಮಿಸಿದ್ದರೆಂಬ ಕಾರಣಕ್ಕೆ ಆವನಿ ಶೃಂಗೇರಿ ನಗರ ಪ್ರದೇಶದ ಬಡಬಗ್ಗರ ಒತ್ತುವರಿಯನ್ನು ಬಿಬಿಎಂಪಿ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಿದ್ದರು. ಆದರೆ, ರಾಜರಾಜೇಶ್ವರಿ ನಗರದಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಪ್ರಮುಖ ರಾಜಕಾರಣಿಯೊಬ್ಬರು ನಿರ್ಮಿಸಿರುವ ಆಸ್ಪತ್ರೆಯನ್ನಾಗಲೀ ಚಿತ್ರನಟರೊಬ್ಬರು ನಿರ್ಮಿಸಿರುವ ಮನೆಯನ್ನಾಗಲೀ ಮುಟ್ಟುವ ಧೈರ್ಯ ಮಾಡದೆ, ನ್ಯಾಯಾಲಯದಿಂದ ತಪರಾಕಿ ಬರುವವರೆಗೂ ಮೂಕವಾಗಿ ಕೈಕಟ್ಟಿ ಕುಳಿತಿದ್ದರು. ಹೀಗಾಗಿ, ನ್ಯಾಯಾಲಯದ ವಾಸ್ತವದ ನುಡಿಗಳು ಆಡಳಿತಶಾಹಿಯ ಅದಕ್ಷತೆಗೆ ಹಿಡಿದ ಕೈಗನ್ನಡಿಯಂತಿವೆ.

**ತಿಪ್ಪೂರು ಪುಟ್ಟೇಗೌಡ,** ಬೆಂಗಳೂರು

### 'ಮಾತು, ಆಡಿದರೆ ಹೋಯ್ತು...'

'ಹಿಂದೂಗಳ ನಂಬಿಕೆಗಳಿಗೆ ಗಾಸಿ ಮಾಡುವುದೇ ಕಾಂಗ್ರೆಸ್‌ನ ಉದ್ದೇಶ. ಏಕೆಂದರೆ, ನಾವು ತಾಲಿಬಾನೀಯರ ರೀತಿ ಅವರಿಗೆ ತಿರುಗೇಟು ಕೊಡುವುದಿಲ್ಲ. ಅವರಂತೆ ಪ್ರತಿಕ್ರಿಯಿಸಿದರೆ ಹಿಂದೆ-ಮುಂದೆ ಮುಚ್ಚಿಕೊಂಡಿರುತ್ತಾರೆ'. ಇದು, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಆಡಿರುವ ಮಾತು. 'ಹಿಂದೆ-ಮುಂದೆ ಮುಚ್ಚಿಕೊಂಡಿರುತ್ತಾರೆ' ಎಂಬ ನುಡಿಗಟ್ಟಿನ ಅರ್ಥ ಇಂದು ಸಣ್ಣ ಹುಡುಗರಿಗೂ ಗೊತ್ತು. ಅತ್ಯಂತ ಅಸಭ್ಯ ನುಡಿಗಟ್ಟು ಇದು. ತಾವು ದೈವಭಕ್ತ, ಗೌರವಾನ್ವಿತ, ತಮ್ಮ ಪಕ್ಷವು ಅತ್ಯಂತ ಉನ್ನತ ಆದರ್ಶಗಳನ್ನು ಹೊಂದಿರುವಂಥದ್ದು, ಅದರ ಮಾತೃ ಸಂಸ್ಥೆಯು ಇನ್ನೂ ಒಂದು ಹೆಜ್ಜೆ ಮುಂದೆ ಎಂದೆಲ್ಲ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪ್ರತಿಪಾದಿಸುವ ರವಿ ಅವರಿಗೆ, ತಾವು ಇಂತಹ ಅಸಭ್ಯ ಮಾತುಗಳನ್ನು ಯಾವ ಕಾರಣಕ್ಕೂ ಆಡಬಾರದು ಎಂಬ ವಿವೇಕದ ಕೊರತೆಯೇ?

ಈ ರೀತಿಯ ಮಾತು ಸಾಮಾನ್ಯ ಜನರಿಗೆ, ಅದರಲ್ಲೂ ಪಡ್ಡೆ ಹುಡುಗರಿಗೆ, ಯುವಕರಿಗೆ ಯಾವ ಸಂದೇಶವನ್ನು ನೀಡುತ್ತದೆ, ಯಾವ ಹಾದಿಯನ್ನು ತೋರಿಸುತ್ತದೆ ಎಂಬುದರ ಕುರಿತು ಸಾಮಾಜಿಕ ಹೊಣೆಗಾರಿಕೆಯಾದರೂ ಅವರಿಗೆ ಇರಬೇಡವೇ? ಅವರು ಇಂತಹ ಅಸಭ್ಯ ನುಡಿಗಳನ್ನು ಆಡಿರುವುದು ಇದೇ ಮೊದಲೇನಲ್ಲ. ಅಸಭ್ಯ ನುಡಿ, ಮಾರ್ಮಿಕ ನುಡಿ, ಅಹಂಕಾರದ ನುಡಿ, ವ್ಯಂಗ್ಯ ನುಡಿ, ಲೇವಡಿಯ ನುಡಿ, (ಒಣ)ಪ್ರತಿಷ್ಠೆಯ ನುಡಿ, ಸರ್ವಜ್ಞಭಾವದ ನುಡಿ....ಇಂತಹ 'ವಿಶೇಷ' ನುಡಿಗಳು ಅವರ ನಾಲಗೆಯಿಂದ ಸದಾ ಹೊರಹೊಮ್ಮುತ್ತಿರುತ್ತವಷ್ಟೆ. ಚಾ ದುಕಾನೊಂದರಲ್ಲಿ ಚಾ ಕುಡಿಯುತ್ತಿದ್ದ ಮೂವರು ಯುವಕರು ರವಿ ಅವರ ಮೇಲ್ಕಂಡ ನುಡಿಗಟ್ಟನ್ನು ಚಾ ಜೊತೆಗೆ ಚಪ್ಪರಿಸುತ್ತಿದ್ದುದು ನನ್ನ ಗಮನಕ್ಕೆ ಬಂತು! ಸೋಜಿಗದ ಸಂಗತಿ ಎಂದರೆ, ಈ ನುಡಿಗಟ್ಟು ಹೇಳಿಕೊಂಡು ರವಿಯವರನ್ನು ಗೇಲಿ ಮಾಡುತ್ತ ನಗಾಡುತ್ತಿದ್ದ ಆ ಮೂವರೂ ರವಿ ಅವರ ಪಕ್ಷದ ಕಾರ್ಯಕರ್ತರು! 'ಮಾತು, ಆಡಿದರೆ ಹೋಯ್ತು; ಮುತ್ತು, ಒಡೆದರೆ ಹೋಯ್ತು' ಎಂಬ ನಾಣ್ಣುಡಿಯನ್ನು ರವಿ ಅವರು ಸದಾ ಮನಸ್ಸಿನಲ್ಲಿ ಇಟ್ಟುಕೊಂಡು ಮುಂದುವರಿಯಬೇಕಾದದ್ದು ಅವರ ಭವಿಷ್ಯಕ್ಕೂ ಅವರನ್ನು ನಾಯಕನೆಂದು ಪರಿಗಣಿಸುವ ಜನಕೋಟಿಯ ಭವಿಷ್ಯಕ್ಕೂ ಒಳ್ಳೆಯದು.

**ಎಚ್.ಆನಂದರಾಮ ಶಾಸ್ತ್ರೀ,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಡೀಪ್‌ಸೀಕ್ ಎಐ ಸಂಚಲನ
# ದತ್ತಾಂಶ ಎಷ್ಟು ಸುರಕ್ಷಿತ?




ಚೀನಾದ ಎಐ ನವೋದ್ಯಮ ಡೀಪ್‌ಸೀಕ್ ರೂಪಿಸಿರುವ ಜನರೇಟಿವ್ ಎಐ ಮಾದರಿಯು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದೆ. ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಅಮೆರಿಕದಲ್ಲಿ ದಿಗಿಲು ಹುಟ್ಟಿಸಿದೆ. ಚಾಟ್‌ಜಿಪಿಟಿ ರೂಪಿಸಿರುವ ಓಪನ್ ಎಐ ಸೇರಿದಂತೆ ಅಲ್ಲಿನ ಬೃಹತ್ ತಂತ್ರಜ್ಞಾನ ಕಂಪನಿಗಳಿಗೆ ಇದು ಸವಾಲೆಸೆದಿದೆ. ಇದೇ ವೇಳೆ ಡೀಪ್‌ಸೀಕ್‌ನಿಂದ ಬಳಕೆದಾರರ ದತ್ತಾಂಶ ಸುರಕ್ಷತೆ ಬಗ್ಗೆ ಅನುಮಾನಗಳು ಹುಟ್ಟಿಕೊಂಡಿವೆ. ಅದರ ಖಾಸಗಿತನ ನೀತಿಯಲ್ಲಿ ಪ್ರಸ್ತಾಪಿಸಿರುವ ವಿಚಾರಗಳ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಚಲನ ಸೃಷ್ಟಿಸಿರುವ ಚೀನಾದ ಡೀಪ್‌ಸೀಕ್ ಸ್ಟಾರ್ಟ್‌ಅಪ್, ಇಡೀ ಜಗತ್ತೇ ತನ್ನತ್ತ ನೋಡುವಂತೆ ಮಾಡಿದೆ. ಅದು ಅಭಿವೃದ್ಧಿಪಡಿಸಿರುವ 'ಡೀಪ್‌ಸೀಕ್ ಆರ್‌1' ಎಂಬ ಜನರೇಟಿವ್ ಎಐ ಮಾದರಿಯು (ಮಾಡೆಲ್) ಅಮೆರಿಕದ ಓಪನ್ ಎಐನ ಚಾಟ್‌ಜಿಪಿಟಿ ಸೇರಿದಂತೆ ದೊಡ್ಡದೊಡ್ಡ ತಂತ್ರಜ್ಞಾನ ಕಂಪನಿಗಳು ರೂಪಿಸಿರುವ ಜನರೇಟಿವ್ ಎಐ ಮಾದರಿಗಳಿಗೆ ಸವಾಲೊಡ್ಡಿದೆ. ಓಪನ್ ಎಐ, ಮೆಟಾ, ಗೂಗಲ್, ಅಮೆಜಾನ್ ಸೇರಿದಂತೆ ಅಮೆರಿಕದ ಕಂಪನಿಗಳು ಎಐ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ತೊಡಗಿಕೊಂಡಿದ್ದು, ಭಾರಿ ಮೊತ್ತದ ಬಂಡವಾಳ ಹೂಡಿವೆ. ಆದರೆ, ಡೀಪ್‌ಸೀಕ್ ಕಂಪನಿಯು ಒಂದು ವರ್ಷದ ಹಿಂದೆಯಷ್ಟೇ ಸ್ಥಾಪನೆಯಾಗಿದ್ದು, ಅತ್ಯಂತ ಕಡಿಮೆ ಅವಧಿ ಮತ್ತು ಕಡಿಮೆ ವೆಚ್ಚದಲ್ಲಿ ಈಗ ಬಳಕೆಯಲ್ಲಿರುವಂತಹ ಜನರೇಟಿವ್ ಎಐ ಮಾದರಿಗಳಿಗಿಂತ ಹೆಚ್ಚು ಸುಧಾರಿತವಾದ ಮಾದರಿಯನ್ನು ಅಭಿವೃದ್ಧಿ ಪಡಿಸಿರುವುದು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ತೊಡಗಿರುವ ಘಟನಾನುಘಟಿ ಕಂಪನಿಗಳು ಮತ್ತು ತಂತ್ರಜ್ಞರನ್ನು ಅಚ್ಚರಿ ಹಾಗೂ ಆತಂಕಕ್ಕೆ ಕೆಡವಿದೆ.

## ಡೀಪ್‌ಸೀಕ್ ಏನು? ಎತ್ತ?

ಚೀನಾದ ಪುಟ್ಟ ತಂತ್ರಜ್ಞಾನ ನವೋದ್ಯಮ ಡೀಪ್‌ಸೀಕ್. 2023ರ ವರ್ಷಾಂತ್ಯದಲ್ಲಿ ಇದು ಸ್ಥಾಪನೆಗೊಂಡಿತು. 'ಹೈ ಫ್ಲಯರ್' ಎಂಬ ಹೆಜ್ ಫಂಡ್ (ವಿವಿಧ ಹೂಡಿಕೆದಾರರಿಂದ ಬಂಡವಾಳ ಸಂಗ್ರಹಿಸಿ ಅದನ್ನು ಮತ್ತೆ ಹೂಡಿಕೆ ಮಾಡುವ ಸಂಸ್ಥೆ) ಸ್ಥಾಪಿಸಿರುವ ಕೃತಕ ಬುದ್ಧಿಮತ್ತೆ ಕಂಪನಿ ಇದು. ಲಿಯಾಂಗ್ ವೆನ್‌ಫೆಂಗ್ ಇದರ ರೂವಾರಿ. ಈ ಹೈ ಫ್ಲಯರ್ ಸಂಸ್ಥೆಯು 2021ರಿಂದ ಷೇರು ಮಾರುಕಟ್ಟೆಯಲ್ಲಿ ಮಾಡುವ ವ್ಯವಹಾರದಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸುತ್ತಿದೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ಡೀಪ್‌ಸೀಕ್ ಕಂಪನಿಯು ತನ್ನ ವಿ3 ಜನರೇಟಿವ್ ಎಐ ಮಾದರಿಯನ್ನು ಬಿಡುಗಡೆ ಮಾಡಿತ್ತು. ಇದು ಅದರ ಎಐ ಮೂಲ ಮಾದರಿಯಾಗಿತ್ತು. ಓಪನ್ ಎಐನ ಜಿಪಿಟಿ–4 ಹಾಗೂ ಇನ್ನಿತರ ಜನರೇಟಿವ್ ಎಐ ಮಾದರಿಗಳಂತೆ ಕಾರ್ಯನಿರ್ವಹಿಸುತ್ತಿತ್ತು. ಈ ಮಾದರಿಯನ್ನು ಅಭಿವೃದ್ಧಿ ಪಡಿಸಲು 55.8 ಲಕ್ಷ ಡಾಲರ್ (ಸುಮಾರು ₹48.18 ಕೋಟಿ) ವೆಚ್ಚ ಮಾಡಿರುವುದಾಗಿ ಕಂಪನಿ ಹೇಳಿದೆ. ಚಾಟ್ ಜಿಪಿಟಿ–4 ಮಾದರಿಗೆ ಹೋಲಿಸಿದರೆ ಇದು ತುಂಬಾ ಅಗ್ಗ. ಓಪನ್ ಎಐಯು ಜಿಪಿಟಿ–4 ಚಾಟ್‌ಬಾಟ್ ಅಭಿವೃದ್ಧಿ ಪಡಿಸಲು 10 ಕೋಟಿ ಡಾಲರ್‌ಗೂ (ಸುಮಾರು ₹863 ಕೋಟಿ) ಹೆಚ್ಚು ವೆಚ್ಚ ಮಾಡಿದೆ.

ವಿ3 ಮಾದರಿಯನ್ನು 2,000ದಷ್ಟು ವಿಶೇಷ ಕಂಪ್ಯೂಟರ್ ಚಿಪ್‌ಗಳನ್ನು (ಎನ್‌ವಿಡಿಯಾದ ಎಚ್‌800 ಜಿಪಿಯು ಚಿಪ್‌ಗಳು) ಬಳಸಿ ಅಭಿವೃದ್ಧಿಪಡಿಸಲಾಗಿದೆ ಎಂದು ಡೀಪ್‌ಸೀಕ್ ಹೇಳಿಕೊಂಡಿದ್ದು, ಬೇರೆ ಕಂಪನಿಗಳು ಇದೇ ರೀತಿಯ ಜನರೇಟಿವ್ ಎಐ ಮಾದರಿಗಳಿಗೆ 16 ಸಾವಿರದಷ್ಟು, ಹೆಚ್ಚು ಸಾಮರ್ಥ್ಯದ ಎಚ್‌100 ಚಿಪ್‌ಗಳನ್ನು ಬಳಸಿವೆ.

### ಜನರೇಟಿವ್ ಎಐ ಎಂದರೆ...

ಜನರೇಟಿವ್ ಎಐ ಎಂದರೆ, ಕೃತಕ ಬುದ್ಧಿಮತ್ತೆಯ ಇನ್ನೊಂದು ರೂಪ. ಇದು ಲೇಖನ, ಚಿತ್ರಗಳು, ಸಂಗೀತ, ಧ್ವನಿ, ಮತ್ತು ವಿಡಿಯೊಗಳಂತಹ ಹೊಸ ವಿಷಯಗಳನ್ನು (ಕಂಟೆಂಟ್) ಸೃಷ್ಟಿಸುತ್ತದೆ. ಬಳಕೆದಾರರು ಯಾವುದೇ ಪ್ರಶ್ನೆ ಅಥವಾ ಮಾಹಿತಿಗಳನ್ನು ಕೇಳಿದಾಗ ಇಂಟರ್‌ನೆಟ್‌ನ ದತ್ತಾಂಶಗಳ ಸಾಗರದಲ್ಲಿ ಅಗಾಧ ಪ್ರಮಾಣದಲ್ಲಿರುವ ಮಾಹಿತಿಗಳನ್ನು ಹೆಕ್ಕಿ ತೆಗೆದು, ಅದನ್ನು ಅತ್ಯಂತ ವ್ಯವಸ್ಥಿತ ಮತ್ತು ಸಮಗ್ರವಾಗಿ ಕಟ್ಟಿಕೊಡುತ್ತದೆ.

## ದಿಗ್ಗಜ ಕಂಪನಿಗಳು ಬೆಚ್ಚಿದ್ದೇಕೆ?

ಜನವರಿ 20ರಂದು ಡೀಪ್‌ಸೀಕ್, ಆರ್‌1 ಜನರೇಟಿವ್ ಎಐ ಮಾದರಿಯನ್ನು (ಆರ್‌1 ಚಾಟ್‌ಬಾಟ್) ಬಿಡುಗಡೆ ಮಾಡಿತು. ವಿ3 ಮಾದರಿಗೆ ಹೋಲಿಸಿದರೆ ಈ ಆವೃತ್ತಿಯ ಕಾರ್ಯನಿರ್ವಹಣೆಯಲ್ಲಿ ಬಹಳಷ್ಟು ಸುಧಾರಣೆಗಳಾಗಿವೆ. ಚಾಟ್ ಜಿಪಿಟಿ, ಗೂಗಲ್‌ನ ಜೆಮಿನಿ ಸೇರಿದಂತೆ ಸದ್ಯ ಚಾಲ್ತಿಯಲ್ಲಿರುವ ಜನರೇಟಿವ್ ಎಐ ಮಾದರಿಗಳು ಮತ್ತು ಎಐ ಜನರೇಟಿವ್ ತಂತ್ರಜ್ಞಾನದಲ್ಲಿ ಬಳಕೆಯಾಗುವಂತಹ ಲಾರ್ಜ್ ಲಾಂಗ್ವೇಜ್ ಮಾಡೆಲ್ (ಎಲ್‌ಎಲ್‌ಎಂ) ವ್ಯವಸ್ಥೆಯನ್ನೇ ಆರ್‌1 ಚಾಟ್‌ಬಾಟ್ ಕೂಡ ಹೊಂದಿದೆ. ಆದರೆ, ಈ ಆವೃತ್ತಿಯು ಅವುಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಅತಂತ್ಯ ಸಂಕೀರ್ಣವಾದ ಸಮಸ್ಯೆಗಳು, ವಿಚಾರಗಳನ್ನು ಹಂತ ಹಂತವಾಗಿ ವಿವರಿಸಲು ಇದು ಯತ್ನಿಸುತ್ತದೆ.

ಆಂಡ್ರಾಯ್ಡ್ ಮತ್ತು ಐಒಎಸ್ (ಆ್ಯಪಲ್) ಮೊಬೈಲ್ ಬಳಕೆದಾರರು ಪೈಪೋಟಿಗೆ ಬಿದ್ದವರಂತೆ ಡೀಪ್‌ಸೀಕ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದು, ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಆ್ಯಪ್ ಸ್ಟೋರ್‌ಗಳಲ್ಲಿ ಇದು ಮುಂಚೂಣಿ ಸ್ಥಾನಗಳಿಸಿದೆ. ಬುಧವಾರದ ಹೊತ್ತಿಗೆ ಅಮೆರಿಕ ಮತ್ತು ಇಂಗ್ಲೆಂಡ್ ಎರಡು ರಾಷ್ಟ್ರಗಳಲ್ಲಿಯೇ 30 ಲಕ್ಷ ಮಂದಿ ಡೀಪ್‌ಸೀಕ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಈ ಎಐ ತಂತ್ರಜ್ಞಾನ ಅಭಿವೃದ್ಧಿ ವೆಚ್ಚ ಕಡಿಮೆ, ಕಾರ್ಯನಿರ್ವಹಣೆಯೂ ಉತ್ತಮವಾಗಿದೆ ಎಂಬ ಅಭಿಪ್ರಾಯ ಷೇರು ಮಾರುಕಟ್ಟೆಯಲ್ಲೂ ಸದ್ದುಮಾಡಿತು. ಡೀಪ್‌ಸೀಕ್ ಅಮೆರಿಕದ ಚಿಪ್ ತಯಾರಿಕಾ ಕಂಪನಿ ಎನ್‌ವಿಡಿಯಾ, ಚಾಟ್ ಜಿಪಿಟಿ ನಿರ್ಮಾತೃ ಓಪನ್‌ಎಐ, ಎಐ ಕ್ಷೇತ್ರದಲ್ಲಿ ಭಾರಿ ಪ್ರಮಾಣದಲ್ಲಿ ಬಂಡವಾಳ ಹೂಡಿರುವ ಮೆಟಾ, ಗೂಗಲ್, ಅಮೆಜಾನ್ ನಂತಹ ತಂತ್ರಜ್ಞಾನ ಕಂಪನಿಗಳಿಗೆ ಸವಾಲೊಡ್ಡಬಹುದು ಎಂಬ ಭಾವನೆ ಷೇರುದಾರರಲ್ಲಿ ಮೂಡಿದ್ದು ಎನ್‌ವಿಡಿಯಾ ಸೇರಿದಂತೆ ಹಲವು ಕಂಪನಿಗಳ ಷೇರು ಮೌಲ್ಯದಲ್ಲಿ ಭಾರಿ ಕುಸಿತಕ್ಕೆ ಕಾರಣವಾಯಿತು.

### ಭಾರತದ ಸರ್ವರ್‌ಗೆ ಶೀಘ್ರ

ಡೀಪ್‌ಸೀಕ್ ವಿಚಾರದಲ್ಲಿ ದತ್ತಾಂಶ ಸುರಕ್ಷತೆ ಮತ್ತು ಖಾಸಗಿತನದ ಧಕ್ಕೆಗೆ ಸಂಬಂಧಿಸಿದ ಆತಂಕಗಳನ್ನು ನಿವಾರಿಸುವುದಕ್ಕಾಗಿ ಡೀಪ್‌ಸೀಕ್ ಆರ್‌1 ಮಾದರಿಯ ದತ್ತಾಂಶಗಳನ್ನು ಶೀಘ್ರದಲ್ಲಿ ಭಾರತದ ಸರ್ವರ್‌ಗಳಲ್ಲಿ ಶೇಖರಣೆ ಮಾಡಲು ಕ್ರಮ ವಹಿಸಲಾಗುವುದು ಎಂದು ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

## ಓಪನ್ ಸೋರ್ಸ್ ಮಾದರಿ

ಡೀಪ್‌ಸೀಕ್‌ನ ಮಾದರಿಗಳು ಮತ್ತು ಕಾರ್ಯವಿಧಾನಗಳನ್ನು (ಕೋಡ್‌ಗಳನ್ನು) ಉಚಿತ ಎಂಐಟಿ ಪರವಾನಗಿ ಅಡಿಯಲ್ಲಿ (ಓಪನ್ ಸೋರ್ಸ್) ಬಿಡುಗಡೆ ಮಾಡಲಾಗಿದೆ. ಅಂದರೆ, ಈ ಮಾದರಿಗಳನ್ನು ಯಾರು ಬೇಕಾದರೂ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ತಮಗೆ ಬೇಕಾದಂತೆ ಬದಲಾಯಿಸಲೂ ಬಹುದು. ಚಾಟ್‌ಜಿಪಿಟಿ ಸೇರಿದಂತೆ ಬೇರೆ ಚಾಟ್‌ಬಾಟ್‌ಗಳಲ್ಲಿ ಇದಕ್ಕೆ ಅವಕಾಶ ಇಲ್ಲ.

ಡೀಪ್‌ಸೀಕ್‌ನ ಈ ನಿರ್ಧಾರವು, ಲಾಭದ ಉದ್ದೇಶ ಹೊಂದಿರುವ ಕಂಪನಿಗಳಿಗೆ ನಷ್ಟ ಉಂಟು ಮಾಡಲಿದೆ. ಆದರೆ, ಎಐ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆ ನಡೆಸುವವರಿಗೆ, ಮೊಬೈಲ್, ಕಂಪ್ಯೂಟರ್ ಬಳಸುವವರಿಗೆ ಎಐ ತಂತ್ರಜ್ಞಾನ ಅಗ್ಗವಾಗಿ ಲಭ್ಯವಾಗಲಿದೆ.

ಡೀಪ್‌ಸೀಕ್ ಸದ್ದು ಮಾಡುತ್ತಿರುವ ಬೆನ್ನಿಗೇ, ಚೀನಾದ ಮತ್ತೊಂದು ದೊಡ್ಡ ಕಂಪನಿ ಅಲಿಬಾಬಾ ಕೂಡ ಡೀಪ್‌ಸೀಕ್‌ಗಿಂತಲೂ ಸುಧಾರಿತವಾದ ಜನರೇಟಿವ್ ಎಐ ಮಾದರಿಯನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ.

ಆಧಾರ: ಪಿಟಿಐ, ಎಪಿ, ಬಿಬಿಸಿ, ಸಿಎನ್‌ಎನ್


## ಭಾರತದಿಂದಲೂ ಅಭಿವೃದ್ಧಿ

ಜಾಗತಿಕ ಮಟ್ಟದಲ್ಲಿ ಚೀನಾದ ಡೀಪ್‌ಸೀಕ್ ಜನರೇಟಿವ್ ಎಐ ಮಾದರಿ ಸದ್ದು ಮಾಡುತ್ತಿರುವುದರ ನಡುವೆಯೇ, ಭಾರತ ಕೂಡ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ತನ್ನ ಮಹತ್ವಾಕಾಂಕ್ಷೆಗಳನ್ನು ಜಗತ್ತಿನ ಮುಂದಿಟ್ಟಿದ್ದು, ತನ್ನದೇ ಆದ ಜನರೇಟಿವ್ ಎಐ ಮಾದರಿಯನ್ನು ಅಭಿವೃದ್ಧಿಪಡಿಸುವುದಾಗಿ ಘೋಷಿಸಿದೆ.

ಚಾಟ್‌ಜಿಟಿಪಿ, ಡೀಪ್‌ಸೀಕ್ ಆರ್‌1 ಸೇರಿದಂತೆ ಇತರ ಜನರೇಟಿವ್ ಎಐ ಮಾದರಿಗಳಿಗೆ ಪೈಪೋಟಿ ನೀಡುವಂತಹ ಜನರೇಟಿವ್ ಎಐ ಮಾದರಿಗಳನ್ನು ಅಭಿವೃದ್ಧಿಪಡಿಸುವ ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧಕರು ಕೈಗೆಟುಕುವ ಶುಲ್ಕ ನೀಡಿ ಬಳಸಬಹುದಾದ,18,693 ಜಿಪಿಯು (ಕಂಪ್ಯೂಟರ್ ಚಿಪ್‌ಗಳು) ಸಾಮರ್ಥ್ಯದ ಬೃಹತ್ 'ಕಂಪ್ಯೂಟ್ ಸೌಲಭ್ಯ' (ಸರ್ವರ್‌ಗಳು, ಕಂಪ್ಯೂಟರ್‌ಗಳು ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಹೊಂದಿರುವ ವ್ಯವಸ್ಥೆ) ಕಲ್ಪಿಸುವುದಾಗಿ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಗುರುವಾರ ಭಾರತವು ಎಐ ನೀಲನಕ್ಷೆಯಲ್ಲಿ ತನ್ನ ಮುಂದಿನ ಕ್ರಮಗಳನ್ನು ಘೋಷಣೆ ಮಾಡಿದ್ದು ಇದರ ಅಡಿಯಲ್ಲಿ ಎಂಟು ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಅದರಲ್ಲಿ 18,693 ಜಿಪಿಯುಗಳ ಕಂಪ್ಯೂಟ್ ಸೌಲಭ್ಯ ಮತ್ತು ಎಐ ಸುರಕ್ಷತಾ ಸಂಸ್ಥೆಯ ಸ್ಥಾಪನೆ ಮಾಡುವುದೂ ಸೇರಿವೆ.

ಇದರೊಂದಿಗೆ ತನ್ನದೇ ಆದ ಜನರೇಟಿವ್ ಎಐ ಮಾದರಿ ಅಭಿವೃದ್ಧಿಪಡಿಸಲು ಆಸಕ್ತರಿಂದ ಪ್ರಸ್ತಾವಗಳನ್ನೂ ಸರ್ಕಾರ ಆಹ್ವಾನಿಸಿದೆ. ಭಾರತವು ವಿಶ್ವದರ್ಜೆಯ ಮತ್ತು ಜಗತ್ತಿನಲ್ಲಿ ಬಳಕೆಯಲ್ಲಿರುವ ಎಲ್ಲ ಅತ್ಯುತ್ತಮ ಎಐ ಮಾದರಿಗಳೊಂದಿಗೆ ಪೈಪೋಟಿ ನೀಡಬಲ್ಲ ಮಾದರಿಗಳನ್ನು ಎಂಟರಿಂದ ಹತ್ತು ತಿಂಗಳಲ್ಲಿ ಅಭಿವೃದ್ಧಿಪಡಿಸಲಿದೆ ಎಂದು ವೈಷ್ಣವ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



## ಯಾವ ರೀತಿಯ ಮಾಹಿತಿ ಸಂಗ್ರಹಿಸುತ್ತದೆ?

ಡೀಪ್‌ಸೀಕ್ ತನ್ನ ಬಳಕೆದಾರರಿಂದ ದೊಡ್ಡ ಪ್ರಮಾಣದ ಖಾಸಗಿ ಮಾಹಿತಿಯನ್ನು ಸಂಗ್ರಹಿಸುತ್ತದೆ ಮತ್ತು ಅವನ್ನು ಚೀನಾದಲ್ಲಿರುವ ತನ್ನ ಸರ್ವರ್‌ಗಳಲ್ಲಿ ಸಂಗ್ರಹಿಸುತ್ತದೆ ಎಂದು ಡೀಪ್‌ಸೀಕ್‌ನ ಖಾಸಗಿ ನಿಯಮ ಹೇಳುತ್ತದೆ. ಖಾತೆಯನ್ನು ತೆರೆಯುವಾಗ, ಬಳಕೆದಾರರ ಇ–ಮೇಲ್ ವಿಳಾಸ, ಹುಟ್ಟಿದ ದಿನಾಂಕ, ಬಳಕೆದಾರರು ಟೈಪ್ ಮಾಡುವ ಅಕ್ಷರ ಮತ್ತು ಆಡಿಯೊ ಮಾಹಿತಿ ಪರಿಶೀಲಿತ ಶಬ್ದ ಮತ್ತು ಚಾಟ್ ಹಿಸ್ಟರಿ, ಬಳಕೆದಾರರ ಫೋನ್‌ನ ಮಾಡೆಲ್ ಅಥವಾ ಕಂಪ್ಯೂಟರ್ ಐಪಿ ಅಡ್ರೆಸ್ ಮೂಲಕ ಅದರ ಆಪರೇಟಿಂಗ್ ಸಿಸ್ಟಮ್ ಹಾಗೂ ಕೀಗಳ ಬಳಕೆಯ ವಿಧಾನಗಳನ್ನು ಸಂಗ್ರಹಿಸುತ್ತದೆ.

'ಇವೆಲ್ಲವನ್ನು ಸುರಕ್ಷತೆ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತಮಪಡಿಸುವ ಸಲುವಾಗಿ ಸಂಗ್ರಹಿಸಲಾಗುತ್ತದೆ' ಎಂದು ಡೀಪ್‌ಸೀಕ್ ತಿಳಿಸಿದೆ. ನಂತರ ಈ ಎಲ್ಲ ಮಾಹಿತಿಯನ್ನು ಸೇವಾ ಪೂರೈಕೆದಾರರು, ಜಾಹೀರಾತು ಪಾಲುದಾರರು ಮತ್ತು ತನ್ನ ಕಾರ್ಪೊರೇಟ್ ಗುಂಪಿನೊಂದಿಗೆ ಹಂಚಿಕೊಳ್ಳಲಾಗುತ್ತದೆ. ಅದರ ಮಾಹಿತಿಯನ್ನು ಎಲ್ಲಿಯವರೆಗೆ ಅಗತ್ಯವೋ ಅಲ್ಲಿಯವರೆಗೆ ಉಳಿಸಿಕೊಳ್ಳುತ್ತಾರೆ ಎಂದು ಅದು ಹೇಳಿದೆ.

ಡೀಪ್‌ಸೀಕ್‌ನ ಖಾಸಗಿತನ ನೀತಿಯನ್ನು ನೋಡಿದರೆ, ಅದರ ತಾಂತ್ರಿಕ ಸಾಮರ್ಥ್ಯದ ಬಗ್ಗೆ ಗಂಭೀರವಾದ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. 'ನಿಮಗೆ ಮತ್ತು ನಿಮ್ಮ ಚಟುವಟಿಕೆಗಳಿಗೆ ಸೂಕ್ತವೆನಿಸುವಂತಹ ರೀತಿಯಲ್ಲಿ ನಮ್ಮ ಸೇವೆಯ ಆಚೆಗೂ ಮಾಹಿತಿಯನ್ನು ಬಳಸಿಕೊಳ್ಳಲಾಗುತ್ತದೆ' ಎಂದು ಖಾಸಗಿತನ ನೀತಿಯಲ್ಲಿರುವುದರ ಬಗ್ಗೆಯೂ ಆಕ್ಷೇಪ ವ್ಯಕ್ತವಾಗಿದೆ.

ಆದರೆ, ಈಗಾಗಲೇ ಬಳಕೆಯಲ್ಲಿರುವ ಚಾಟ್‌ಜಿಪಿಟಿ, ಜೆಮಿನಿ ಮತ್ತು ಸಾಮಾಜಿಕ ಜಾಲತಾಣಗಳ ನಿಯಮಗಳೂ ಇದೇ ರೀತಿ ಇವೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಡೀಪ್‌ಸೀಕ್ ಎಷ್ಟು ಸುರಕ್ಷಿತ ಎನ್ನುವುದರ ಬಗ್ಗೆ ಕೆಲವರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜನರೇಟಿವ್ ಎಐಗೆ ಸಂಬಂಧಿಸಿದಂತೆ ಡೀಪ್‌ಸೀಕ್ ಅಥವಾ ಅಮೆರಿಕ ಮೂಲದ ಯಾವುದೇ ಆ್ಯಪ್ ಅಥವಾ ಎಐ ಮಾದರಿ ಇರಲಿ, ಅಲ್ಲಿ ಕೇಳಲಾದ ಪ್ರಶ್ನೆ ಮತ್ತು ಉತ್ತರಗಳು ಅದನ್ನು ರೂಪಿಸಿದವರಿಗೆ ಸಿಕ್ಕೇ ಸಿಗುತ್ತದೆ. ಹೀಗಾಗಿ ರಾಷ್ಟ್ರೀಯ ಭದ್ರತೆಯೂ ಸೇರಿದಂತೆ ಗುಪ್ತ ವಿಚಾರಗಳ ಸಂವಹನ ಅಥವಾ ಹುಡುಕಾಟಕ್ಕೆ ತೊಡಗುವವರು ಇವುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎನ್ನುವುದು ಅವರ ವಾದ.

ಜನಪ್ರಿಯವಾದ, ಹೆಚ್ಚು ಮಂದಿ ಬಳಸುವ ಆ್ಯಪ್‌ಗಳ ವಿಚಾರದಲ್ಲಂತೂ ಮತ್ತಷ್ಟು ಜಾಗ್ರತೆಯಿಂದ ಇರಬೇಕಾಗುತ್ತದೆ. ಎಐ ಮಾದರಿಗಳಿಗೆ ತರಬೇತಿ ನೀಡಲು ಬಳಸುವ ಮಾಹಿತಿಯ ಬಗ್ಗೆ ಎಚ್ಚರಿಕೆ ಅಗತ್ಯ ಎಂದು ಇಂಗ್ಲೆಂಡ್‌ನ ಮಾಹಿತಿ ಆಯುಕ್ತರ ಅಡಿಯಲ್ಲಿ ಬರುವ ದತ್ತಾಂಶ ನಿಯಂತ್ರಕರು ಸೂಚಿಸಿದ್ದಾರೆ.

## ದತ್ತಾಂಶ ಸುರಕ್ಷತೆ, ಖಾಸಗಿತನಕ್ಕೆ ಧಕ್ಕೆ ಆತಂಕ

ಅಮೆರಿಕ ಮತ್ತು ಚೀನಾ ನಡುವೆ ಹಲವು ವಿಷಯಗಳಲ್ಲಿರುವಂತೆ ಎಐ ತಂತ್ರಜ್ಞಾನದ ಸಾಧನಗಳ ಸಂಶೋಧನೆ ಮತ್ತು ಬಳಕೆಯ ವಿಚಾರದಲ್ಲಿಯೂ ಪೈಪೋಟಿ ಇದೆ. ಜನರೇಟಿವ್ ಎಐ ತಂತ್ರಜ್ಞಾನ ರೂಪಿಸಿ, ಅದನ್ನು ಸರ್ವರ್‌ಗಳಲ್ಲಿ ಸಂಗ್ರಹಿಸಲು ಚಿಪ್‌ಗಳ ಅಗತ್ಯವಿರುತ್ತದೆ. ಅಮೆರಿಕದ ಎನ್‌ವಿಡಿಯಾ ಕಂಪನಿಯು ಕಂಪ್ಯೂಟರ್ ಚಿಪ್‌ಗಳ ತಯಾರಿಕೆಯಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿದೆ.




ಎಐ ಕ್ಷೇತ್ರದಲ್ಲಿ ಚೀನಾದ ಬೆಳವಣಿಗೆಯನ್ನು ತಡೆಯಲೆಂದೇ ಚೀನಾಕ್ಕೆ ಚಿಪ್‌ಗಳ ರಫ್ತಿನ ಮೇಲೆ ಅಮೆರಿಕ ನಿರ್ಬಂಧಗಳನ್ನು ವಿಧಿಸಿದೆ. ಇಷ್ಟಾದರೂ, ಚೀನಾ ಕಡಿಮೆ ಚಿಪ್‌ಗಳನ್ನು ಬಳಸಿಕೊಂಡು ಪರಿಣಾಮಕಾರಿ ಜನರೇಟಿವ್ ಎಐ ಮಾದರಿ ರೂಪಿಸಿರುವುದು ತಂತ್ರಜ್ಞಾನ ಲೋಕದಲ್ಲಿ ಬೆರಗು ಮೂಡಿಸಿದೆ. ಡೀಪ್‌ಸೀಕ್‌ನಿಂದಾಗಿ ಎಐ ಕ್ಷೇತ್ರದಲ್ಲಿ ಚೀನಾ ಕೈ ಮೇಲಾಗಬಹುದು ಎಂದೂ ಹೇಳಲಾಗುತ್ತಿದೆ.

ಕಡಿಮೆ ಬೆಲೆಯ ಡೀಪ್‌ಸೀಕ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎನ್ನುವ ಕಾರಣಕ್ಕೆ ಇದರ ಬಗ್ಗೆ ತಂತ್ರಜ್ಞಾನ ವಲಯದಲ್ಲಿ ಭಾರಿ ನಿರೀಕ್ಷೆ ಮೂಡಿದೆ. ಆದರೆ, ಇದೇ ವೇಳೆ, ಇದರಲ್ಲಿ ದತ್ತಾಂಶದ ಸುರಕ್ಷತೆಯ ಬಗ್ಗೆಯೂ ಹಲವು ಪ್ರಶ್ನೆಗಳು, ಅನುಮಾನಗಳು ಹುಟ್ಟಿಕೊಂಡಿವೆ. ಹ್ವಾವೆ, ಟಿಕ್ ಟಾಕ್‌ವರೆಗೆ ಚೀನಾದ ಆ್ಯಪ್‌ಗಳ ಬಗ್ಗೆ ದತ್ತಾಂಶ ಸುರಕ್ಷತೆಗೆ ಸಂಬಂಧಿಸಿದಂತೆ ಅನೇಕ ಆರೋಪಗಳು ವ್ಯಕ್ತವಾಗಿದ್ದವು. ಅದೇ ರೀತಿ ಈಗ ಡೀಪ್‌ಸೀಕ್ ಬಗ್ಗೆಯೂ ಕಳವಳ ವ್ಯಕ್ತವಾಗಿದೆ. ಚೀನಾದ ತಂತ್ರಜ್ಞಾನಗಳು, ಕಂಪನಿಗಳ ಮೇಲೆಯೂ ಸರ್ಕಾರ ಹಿಡಿತ ಹೊಂದಿದೆ. ಹೀಗಾಗಿ ಡೀಪ್‌ಸೀಕ್ ಎಐ ಮಾದರಿಗಳ ಬಳಕೆದಾರರ ಖಾಸಗಿ ಮಾಹಿತಿ ಎಷ್ಟು ಸುರಕ್ಷಿತ ಎನ್ನುವ ಪ್ರಶ್ನೆ ಹುಟ್ಟಿಕೊಂಡಿದೆ. ಗುಪ್ತಚರ ಉದ್ದೇಶಗಳಿಗಾಗಿ ಚೀನಾ ಸರ್ಕಾರವು ಮಾಹಿತಿ ಕದಿಯುವ ಸಂಭವ ಇದೆ ಎನ್ನುವ ಅನುಮಾನಗಳನ್ನು ಕೆಲವರು ವ್ಯಕ್ತಪಡಿಸಿದ್ದಾರೆ.


ಡೀಪ್‌ಸೀಕ್‌ನಿಂದ ಖಾಸಗಿತನದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಮೊದಲು ಪ್ರಶ್ನೆ ಎತ್ತಿದವರು ಆಸ್ಟ್ರೇಲಿಯಾದ ವಿಜ್ಞಾನ ಸಚಿವ ಎಡ್ ಹುಸಿಕ್. ಚೀನಾದ ಎಐ ಮಾದರಿಯ ಬಗ್ಗೆ ತಾವು ಜಾಗರೂಕರಾಗಿದ್ದು, ಎಚ್ಚರಿಕೆಯಿಂದ ಪರಿಶೀಲಿಸಬೇಕಿದೆ; ದತ್ತಾಂಶ ಮತ್ತು ಖಾಸಗಿತನದ ನಿರ್ವಹಣೆಯ ಬಗ್ಗೆ ಅನೇಕ ಪ್ರಶ್ನೆಗಳಿಗೆ ಉತ್ತರ ಬೇಕಿದೆ ಎಂದು ಹೇಳಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಡೀಪ್‌ಸೀಕ್ ಬಗ್ಗೆ ಅಮೆರಿಕ ಎಚ್ಚರಿಕೆಯಿಂದ ಇರಬೇಕು ಎಂದಿದ್ದಾರೆ. ಆದರೆ, ಇದರಿಂದ ಬೆಲೆ ಕಡಿಮೆಯಾಗುವುದಾದರೆ ಅದು ಒಳ್ಳೆಯದು ಎನ್ನುವುದು ಅವರ ಅಭಿಪ್ರಾಯ. ಅಮೆರಿಕದ ಅಧಿಕಾರಿಗಳು ಡೀಪ್‌ಸೀಕ್‌ನಿಂದ ರಾಷ್ಟ್ರೀಯ ಭದ್ರತೆಯ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ರಾಷ್ಟ್ರೀಯ ಭದ್ರತಾ ಸಂಸ್ಥೆಯ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕರೋಲಿನ್ ಲೀವಿಟ್ ಹೇಳಿದ್ದಾರೆ. ಅಮೆರಿಕದ ನೌಕಾಪಡೆಯು, ಸಂಭವನೀಯ ಅಪಾಯ ಮತ್ತು ನೀತಿಸಂಹಿತೆಯ ಕಾರಣಕ್ಕೆ ತನ್ನ ಸಿಬ್ಬಂದಿ ಡೀಪ್‌ಸೀಕ್ ಬಳಸಬಾರದೆಂದು ನಿಷೇಧ ಹೇರಿದೆ ಎಂದು ಸಿಎನ್‌ಬಿಸಿ ವರದಿ ಮಾಡಿದೆ.

**ಚೀನಾ ಪರ ನಿಲುವು:** ಈವರೆಗೆ ಡೀಪ್‌ಸೀಕ್ ಆ್ಯಪ್ ಬಳಸಿದವರು, ಜನರೇಟಿವ್ ಎಐ ಮಾದರಿಯ ನಿಲುವು ಚೀನಾ ಪರವಾಗಿದೆ ಎಂದು ಹೇಳಿಕೊಂಡಿದ್ದಾರೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
**9606038256**

ಹಿಂದಿಯ ಖ್ಯಾತ ನಟ ಶಾರುಖ್ ಖಾನ್ ಅವರ ಪುತ್ರಿ ಸುಹಾನ ಖಾನ್ ಮತ್ತು ಕ್ರಿಕೆಟ್ ಆಟಗಾರ ರಿಂಕು ಸಿಂಗ್ ಅವರ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಇಬ್ಬರೂ ಪ್ರೇಮಿಗಳಾಗಿದ್ದು, ಲಂಡನ್‌ನ ಹೋಟೆಲ್‌ವೊಂದರಲ್ಲಿ ಜೊತೆಗಿರುವ ಚಿತ್ರ ಇದು ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಗೂಗಲ್ ಲೆನ್ಸ್ ಮೂಲಕ ಚಿತ್ರಗಳನ್ನು ಪರಿಶೀಲಿಸಿದಾಗ, ಅವನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ಪೋಸ್ಟ್‌ಗಳ ಕೆಳಗೆ ಇವು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದೊಂದಿಗೆ ರೂಪಿಸಿದ ಚಿತ್ರಗಳು ಎಂದು ಕೆಲವರು ಪ್ರತಿಕ್ರಿಯಿಸಿದ್ದಾರೆ. ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಅವುಗಳಲ್ಲಿ ಒಂದಷ್ಟು ವ್ಯತ್ಯಾಸಗಳಿರುವುದು ಕಂಡುಬಂತು. ಜತೆಗೆ, ಚಿತ್ರದ ಒಂದು ಮೂಲೆಯಲ್ಲಿ ಎಐ ಚಾಟ್‌ಬಾಟ್‌ನ ಲೋಗೋ ಕಾಣಿಸಿತು. ಎಐ ಪತ್ತೆ ಸಾಧನಗಳಿಂದ ಪರೀಕ್ಷಿಸಿದಾಗ ಚಿತ್ರಗಳಲ್ಲಿ ಎಐನ ಅಂಶಗಳು ಪ್ರಧಾನವಾಗಿರುವುದು ಕಂಡುಬಂತು. ಎಐನಿಂದ ರೂಪಿಸಿದ ಚಿತ್ರಗಳನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

## ಗುಂಡಣ್ಣ




# ಬದುಕು ಅನ್ನೋದು ಸಮುದ್ರದ ತೆರೆ ಇದ್ದಂತೆ

ನುಡಿ ಬೆಳಗು
ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
122



**ಒಂದು** ಸಮುದ್ರ ಇದೆ. ಅಲ್ಲಿ ತೆರೆಗಳು ಏಳುತ್ತಿರುತ್ತವೆ. ಸಾಗರ ಶಾಶ್ವತ. ಆದರೆ ತೆರೆ ಶಾಶ್ವತ ಅಲ್ಲ. ಸಾಗರ ಇಲ್ಲದೆ ತೆರೆ ಇಲ್ಲ. ಸಾಗರ ತುಂಬಾ ತೆರೆ ಐತಿ. ತೆರೆ ಇಳಿದ ಮೇಲೆ ಏನು ಉಳೀತೈತಲ್ಲ ಅದು ಸಾಗರ. ತೆರೆ ಸುಮ್ಮನೆ ಹಾಗೆ ತೋರಿ ಮರೆಯಾಗುತ್ತವೆ ಅಷ್ಟೆ. ಹಾಗೆಯೇ ನಮ್ಮ ಜೀವನ ಏನೈತಲ್ಲ, ಅದು ಸಾಗರದ ತೆರೆ ಇದ್ದಂತೆ. ತೆರೆಗಳು ಏರುತ್ತಿರುತ್ತವೆ, ಇಳಿಯುತ್ತಿರುತ್ತವೆ. ಅವು ಯಾವತ್ತಾದರೂ ಕಾಯಂ ಉಳಿದಾವೇನು? ನಮ್ಮ ದೇಹ ಅನ್ನುವುದೂ ಒಂದು ತೆರೆ. 50–60 ವರ್ಷ ಇಲ್ಲಿ ಇರತೈತಿ. ಆಮೇಲೆ ಮರೆಯಾಗತೈತಿ. ನಾವು ಏನು ಮಾಡಿದರೂ ಅದನ್ನು ಕಾಯಂಗೊಳಿಸಲು ಆಗುವುದಿಲ್ಲ. ನೀವು ಎಷ್ಟಾದರೂ ವಿಟಮಿನ್‌ಗಳು ತೆಗೆದುಕೊಳ್ಳಿ, ಎಷ್ಟಾದರೂ ಕಾರ್ಬೋಹೈಡ್ರೇಟ್‌ಗಳು ತೆಗೆದುಕೊಳ್ಳಿ. ದೇಹವನ್ನು ಕಾಯಂಗೊಳಿಸಲು ಸಾಧ್ಯವಿಲ್ಲ. ನೀವು ಎಷ್ಟಾದರೂ ಸ್ನೋ ಹಚ್ಚಿ, ಪೌಡರ್ ಹಚ್ಚಿ ಬ್ಯೂಟಿ ಪಾರ್ಲರ್ ಹೋಗಿ ಫೇಸಿಯಲ್ ಮಾಡಿಸಿಕೊಂಡು ಬಂದರೂ ನಮ್ಮ ಚರ್ಮ ಸುಕ್ಕುಗಟ್ಟುವುದನ್ನು ತಡೆಯಲಾಗದು. ನಾವು ಹೊರಗೆ ಮಾಡಿದ್ದು ಒಳಕ್ಕೆ ತಾಗೋದಿಲ್ಲ. ಒಳಕ್ಕೆ ಮುಪ್ಪು ಮಾಡೋ ಶಕ್ತಿ ತನ್ನ ಕೆಲಸ ತಾನು ಮಾಡುತ್ತಲೇ ಇರತೈತಿ. ನಾವು ಎಷ್ಟೇ ಬಣ್ಣ ಬದಲು ಮಾಡಿಕೊಂಡರೂ ಅದು ಉಳಿಯೋದಿಲ್ಲ.

ಮನುಷ್ಯನ ದೇಹ ಇರಲಿ, ಕೀರ್ತಿ ಇರಲಿ, ಸಂಪತ್ತು ಇರಲಿ ಯಾವುದೂ ಶಾಶ್ವತ ಅಲ್ಲ. ಅವೆಲ್ಲ ತಾತ್ಪೂರ್ತಿಕ ಸತ್ಯ. ಅವುಗಳೂ ತೆರೆಗಳು ಅಷ್ಟೆ. ಹೀಗೆ ಬಂದು ಹಾಗೆ ಹೋಗುತ್ತವೆ. ಈಗ ನಮಗೆ ಅಧಿಕಾರ ಬರತೈತಿ. ನಾವು ಹೋದಲ್ಲಿ ಬಂದಲ್ಲಿ ಗೌರವ ಸಿಗತೈತಿ. ನಾವೂ ನಾನು ಚೇರ್ ಮನ್ ಅಂತಾ ಹೇಳಕೋತೇವಿ. ಆಗ ಹಾರ ಹಾಕುವವರು ಬರ್ತಾರ. ಆದರೆ, ಆಗಲೇ ನಾವು ತಿಳ್ಕೋಬೇಕು. ಹೀಗೆ ಹಾರ ಹಾಕುವವರೇ ನಮ್ಮನ್ನು ಕೆಳಕ್ಕೆ ಇಳಿಸ್ತಾರೆ ಅಂತ. ಕೈಯಾಗ ಸರ ಇರ್ತದೆ. ಆದರೆ, ನಾಲಿಗೆ ಮೇಲೆ ಸರಿ ಅತ್ತ ಸರಿ ಅಂತ ಇರತೈತಿ. ಅಧಿಕಾರದಲ್ಲಿ ಕೂಡಬಾರದು ಅಂತಲ್ಲ. ನಾವು ಚೇರ್ ಮೇಲೆ ಕುಳಿತುಕೊಳ್ಳಬೇಕು. ಚೇರ್ ನಮ್ಮ ತಲೆಯ ಮೇಲೆ ಕುಳಿತುಕೊಳ್ಳಬಾರದು. ಇದು ತತ್ವಜ್ಞಾನ.

ಗಣಪತಿ ನೋಡ್ರಿ ಎಷ್ಟು ಸಂತೋಷವಾಗಿ ಇರ್ತಾನೆ. ಯಾರೋ ಗಣಪತಿಗೆ ಕೇಳಿದರಂತೆ. 'ನೀನು ಇಷ್ಟು ಸಂತೋಷ ಇರ್ತೀಯಲ್ಲ ಹೇಗೆ?' ಅಂತ. ಅದಕ್ಕೆ ಗಣಪತಿ 'ಇವತ್ತು ಯಾರು ನನ್ನ ಇಲ್ಲಿ ಕುಳ್ಳಿರಿಸಿ ಸಂಭ್ರಮ ಪಡುತ್ತಿದ್ದಾರೋ ಅವರೇ ಒಂದು ದಿನ ನನ್ನ ಎತ್ತಿ ಒಗೀತಾರೆ ಎನ್ನುವುದು ನನಗೆ ಗೊತ್ತೈತಿ. ಅದಕ್ಕೆ ನಾನು ಆರಾಂ ಇದ್ದೀನಿ' ಅಂದನಂತೆ. ವಧು ಇರ್ತಾಳೆ. ಅವಳಿಗೆ ಎಲ್ಲರೂ ಸಹಕರಿಸುತ್ತಾರೆ. ಒಬ್ಬರು ಸೀರೆ ಉಡಿಸುತ್ತಾರೆ. ಇನ್ನೊಬ್ಬರು ಮೇಕಪ್ ಮಾಡ್ತಾರೆ. ಆದರೆ ಆಕಿಗೆ ಗೊತ್ತಿರಬೇಕು ಈ ಅಲಂಕಾರ, ಸಹಾಯಕ್ಕೆ ಬರುವವರು ಶಾಶ್ವತ ಅಲ್ಲ ಅಂತ. ಅದನ್ನೇ ತಲೆಯಲ್ಲಿ ಇಟ್ಟುಕೊಂಡರೆ ತೊಂದರೆ ಆಗತೈತಿ. ನಾಲ್ಕು ದಿನ ಕಳೆದ ಮೇಲೆ ಅತ್ತೆ 'ಬಾ ಅಡುಗೆ ಮಾಡು' ಅಂತಾಳೆ ಅನ್ನೋದನ್ನು ತಿಳಕೊಂಡಿರಬೇಕು. ಎಲ್ಲವೂ ಬದಲಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಬದುಕಬೇಕು. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜನವರಿ 31, 2025

**ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಮಾಘ ಶುಕ್ಲ ದ್ವಿತೀಯ ಗಂ. 14-00 ನಕ್ಷತ್ರ: ಶತಭಿಷ ಗಂ. 28-15 ಯೋಗ: ವರಿಯಾನ್ ಗಂ. 15-33 ಕರಣ: ಕೌಲವ ಗಂ. 14-00, ಮಕರ ಮಾಸದ 17 ನೇ ದಿನ, ಮಳೆನಕ್ಷತ್ರ: ಶ್ರವಣ 3.
**ರಾಹುಕಾಲ:** ಬೆಳಿಗ್ಗೆ 10-30 – 12-00
ಸೂರ್ಯೋದಯ : 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 01 ಶಬನ್
**ಅದೃಷ್ಟ ಸಂಖ್ಯೆ :** 6, 4

**ಮೇಷ:** ಒಬ್ಬ ವ್ಯಕ್ತಿಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಬದಲಾಗಿ ಜವಾಬ್ದಾರಿಯಲ್ಲಿರುವ ಎಲ್ಲಾ ಕಾರ್ಯಗಳ ಮೇಲೂ ಗಮನ ಹರಿಸುವುದು ಸೂಕ್ತ. ವೈವಾಹಿಕ ಸಂಬಂಧಿ ಮಾತುಕತೆಗಳು ಫಲ ನೀಡಲಿವೆ.

**ವೃಷಭ:** ವಿದೇಶದಲ್ಲಿ ಶಿಕ್ಷಣಾವಕಾಶ ಪಡೆದುಕೊಳ್ಳುವ ಸಾಧ್ಯತೆ ಇದೆ. ಕೆಲಸ ಕಾರ್ಯಗಳಲ್ಲಿ ಕಷ್ಟಗಳು ಎದುರಾಗಬಹುದು. ಕರ್ತವ್ಯ ನಿರ್ಲಕ್ಷಿಸಬೇಡಿ. ಕಾಗದಪತ್ರ ನಿರ್ವಹಣೆಯಲ್ಲಿ ಎಚ್ಚರವಹಿಸಿ.

**ಮಿಥುನ:** ಸಿಕ್ಕಂಥ ಬಿಡುವಿನ ಸಮಯವನ್ನು ಅತ್ಯಂತ ಪ್ರಯೋಜನಕರವಾಗಿ ಬಳಸುವಿರಿ. ಸಂಜೆಯ ಸಮಯದಲ್ಲಿ ಶುಭ ಸಮಾಚಾರ ಕೇಳುವಿರಿ. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ, ಕಾರ್ಯ ಸಿದ್ಧಿ.

**ಕರ್ಕಾಟಕ:** ಮುಖ್ಯ ವಿಚಾರಗಳನ್ನು ಹೆಂಡತಿಯೊಂದಿಗೆ ಚರ್ಚಿಸುವುದಕ್ಕೆ ಸಮಯವನ್ನು ನೋಡುವುದು ಸೂಕ್ತ. ಆದಾಯದಲ್ಲಿ ವೃದ್ಧಿ ಕಂಡರೂ ನೆಮ್ಮದಿಯ ಕೊರತೆ ಎದ್ದುಕಾಣಲಿದೆ. ವೈದ್ಯಕೀಯ ಖರ್ಚು ಹೆಚ್ಚಲಿದೆ.

**ಸಿಂಹ:** ವಿದೇಶಿ ವ್ಯಾಪಾರದಲ್ಲಿ ಜಾಸ್ತಿ ಬಂಡವಾಳವನ್ನು ಹೂಡುವುದು ಸರಿಯಲ್ಲ. ಮಾಡುವ ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು, ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ನಡೆಸುವುದು ಅಗತ್ಯವಿದೆ.

**ಕನ್ಯಾ:** ನಿಶ್ಚಿತ ಯೋಜನೆಗಳಿಗೆ ಸಿದ್ಧತೆಗಳೊಡನೆ ಸನ್ನದ್ಧರಾಗುವ ಬಗ್ಗೆ ಗಮನವಿರಲಿ. ಹೊಸ ಯೋಜನೆಗಳ ಬಗೆಗೆ ಸ್ನೇಹಿತರಲ್ಲಿ ಚರ್ಚಿಸಿ. ಪಶುಸಂಗೋಪನೆ ಮತ್ತು ಹಾಲು ಉತ್ಪನ್ನಗಳಿಂದ ಲಾಭ ಪಡೆಯುವಿರಿ.

**ತುಲಾ:** ಕನಸುಗಳಿಗೆ ಹಿರಿಯರ ಬೆಂಬಲ ಒದಗಿ ಬರಲಿದೆ. ಸಂಗಾತಿಯ ಅಭಿಪ್ರಾಯಗಳಿಗೂ ಗಮನಹರಿಸಿ. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

**ವೃಶ್ಚಿಕ:** ಕುಟುಂಬದಲ್ಲಿ ಹಿರಿಯರ ಆರೋಗ್ಯ ಉತ್ತಮವಾಗುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಅನಗತ್ಯ ಮಧ್ಯಸ್ಥಿಕೆ ವಹಿಸುವುದು ಸಮಸ್ಯೆ ಕೈ ಬೀಸಿ ಕರೆದಂತಾಗುತ್ತದೆ. ಜಾಗರೂಕರಾಗಿ ಇರುವುದು ಕ್ಷೇಮ.

**ಧನು:** ದೇವತಾನುಗ್ರಹದಿಂದ ತುರ್ತು ಕಾರ್ಯಗಳು ನೆರವೇರಲಿವೆ. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಶುಭದಾಯಕವಾದ ದಿನ. ಹಿರಿಯರನ್ನು ಭಕ್ತಿಯಿಂದ ಕಾಣಿ.

**ಮಕರ:** ನಿದ್ರಾಹೀನತೆಯಿಂದಾಗಿ ಈ ದಿನದ ಸಂಭ್ರಮದ ಸಂದರ್ಭಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ನಂಬಿಸಿ ಮೋಸ ಮಾಡುವವರ ಬಲೆಗೆ ನೀವಿಂದು ಬೀಳುವ ಸಾಧ್ಯತೆಗಳಿವೆ. ಎಚ್ಚರಿಕೆಯಿಂದಿರಿ.

**ಕುಂಭ:** ಕೆಲಸದಲ್ಲಿ ಸಾಗುತ್ತಿರುವ ಮಾರ್ಗವು ಸರಿಯಾಗಿದೆ ಎಂಬ ವಿಶ್ವಾಸ ಬರಲಿದೆ. ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತ ಸಮಯ. ಸಾಲ ತೆಗೆದುಕೊಳ್ಳುವ ನಿರ್ಧಾರ ಸರಿಯಲ್ಲ.


**ಮೀನ:** ಕೆಲಸವನ್ನು ಮುಂದೂಡುವ ಅಭ್ಯಾಸವನ್ನು ಕಡಿಮೆ ಮಾಡಿಕೊಳ್ಳಿ. ನದಿತೀರದಲ್ಲಿ ಜಮೀನನ್ನು ಹೊಂದಿದವರಿಗೆ ಕೆಲವು ಸಮಸ್ಯೆಗಳು ಸಂಭವಿಸಬಹುದು. ಹಣಕಾಸಿನ ಹರಿವು ಹೆಚ್ಚಾಗಲಿದೆ.

## ಪದಬಂಧ 5939

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಬಂದೂಕು, ಪಿಸ್ತೂಲುಗಳಲ್ಲಿರುವ ಮದ್ದು ತುಂಬಿದ ಕೊಳವೆ (4)
3.ಕರ ಮೊದಲಿಟ್ಟಾಗ ಕಾಣಿಸಿದ ಉಗುರು (4)
5.ಮೊಸಳೆ ಎಂಬರ್ಥದ ಜ್ಯೋತಿಷ್ಯದ ಹನ್ನೆರಡು ರಾಶಿಗಳಲ್ಲಿ ಒಂದು (3)
8.ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
10.ಕುದುರೆಯನ್ನೇರುವ ಬಳೆ (3)
11.ಹೆಸರಿಡುವ ಶಾಸ್ತ್ರವಿದು (5)
12.ವಿದ್ಯೆಯೊಡನೆ ಇರಬೇಕಾದ ನಮ್ರತೆ (3)
13.ಗಿರೀಶ್‌ಕಾರ್ನಾಡ್‌ರವರು ರಚಿಸಿದ ಮೊದಲ ನಾಟಕ (3)
15.ಪೆದ್ದ ಇಲ್ಲಿದ್ದಾನೆ (3)
17.ಲಲಿತ ಕಲೆಗಳನ್ನು ಬಲ್ಲವನು (4)
18.ದಮಯಂತಿ ಪತಿಯ ರುಚಿಕಟ್ಟಾದ ಅಡುಗೆ! (4)

**ಮೇಲಿಂದ ಕೆಳಕ್ಕೆ**
1.ಕವಿಯು ಕಾವ್ಯ ರಚಿಸುವಾಗ ಇಟ್ಟುಕೊಳ್ಳುವ ಹೆಸರು (4)
2.ಸುಗಮವಾಗಿ ಕಿತ್ತಿರುವ ಹೂವು (2)
3.ಕಮ್ಮಾರನ ಕೈ! (2)
4.ಕನ್ನಡಿಗನ ಹೆಲ್ಮೆಟ್! (4)
6.ಇತ್ತೀಚೆಗೆ ಹೈದ್ರಾಬಾದ್ ಕರ್ನಾಟಕವನ್ನು ಹೀಗೆಂದು ಮರುನಾಮಕರಣ ಮಾಡಲಾಗಿದೆ (7)
7.ಈ ಪರಿಯಾಗಿ ನಡೆದ ಮದುವೆ (4)
9.ಗಣಪತಿಯ ಇನ್ನೊಂದು ಹೆಸರು (4)
12.ಆಸ್ಥಾನಗಳಲ್ಲಿ ನಗಿಸಲೆಂದು ಇರುವವನು (4)
14.ಎಳ್ಳು ನೀರು ಬಿಡುವಿಕೆ (4)
15.ಕಲಾವಿದ ತೆರೆದ ಬಾಗಿಲು (2)
16.ಯೌವ್ವನದಲ್ಲಿ ನೋಡಿರುವ ಕಾಡು! (2)



### 5938ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಮೈಸೂರು 2.ದಳಪತಿ
4.ಗಲಸ 7.ಸಭಿಕ
8.ಬಡನಡು 9.ಜಲ
10.ಕಾಕ 11.ಯಜಮಾನ
13.ಗಂಜಲ 14.ನಸರಿ
16.ಜಾತವೇದ 17.ಕಲ್ಯಾಣ

**ಮೇಲಿಂದ ಕೆಳಕ್ಕೆ:**
1.ಮೈಲಿಗಲ್ಲು 2.ದಡ
3.ಪಟ್ಟಾಭಿಷೇಕ
5.ಸಬಲ 6.ವನಭೋಜನ
9.ಜನಜನಿತ 10.ಕಾನನ
12.ಹರಿವಾಣ 15.ಕದ

## ಸುಡೊಕು 6324

| | | | | | | | | |
|---|---|---|---|---|---|---|---|---|
| | | | | 5 | | 7 | | 2 |
| | | 3 | 6 | | 7 | | | |
| | | 7 | | 3 | | 6 | | 9 |
| | 6 | | | 1 | | 8 | | 7 |
| 7 | | 9 | 5 | | | | 1 | |
| | 8 | | | 9 | | 3 | | 5 |
| | 7 | | 3 | | 1 | | | |
| 5 | | | | | | | 7 | 3 |
| | 3 | | 9 | | 5 | | 6 | 8 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6323 ಸುಡೊಕು

| | | | | | | | | |
|---|---|---|---|---|---|---|---|---|
| 5 | 6 | 1 | 8 | 7 | 4 | 2 | 9 | 3 |
| 3 | 7 | 2 | 6 | 1 | 9 | 8 | 5 | 4 |
| 9 | 8 | 4 | 5 | 2 | 3 | 1 | 6 | 7 |
| 1 | 2 | 5 | 7 | 3 | 6 | 4 | 8 | 9 |
| 4 | 3 | 8 | 2 | 9 | 5 | 6 | 7 | 1 |
| 6 | 9 | 7 | 4 | 8 | 1 | 3 | 2 | 5 |
| 8 | 1 | 9 | 3 | 5 | 2 | 7 | 4 | 6 |
| 7 | 4 | 3 | 9 | 6 | 8 | 5 | 1 | 2 |
| 2 | 5 | 6 | 1 | 4 | 7 | 9 | 3 | 8 |

ಸಂಕ್ಷಿಪ್ತ ಸುದ್ದಿ

## ರೂಪಾಯಿ ಮೌಲ್ಯ 7 ಪೈಸೆ ಇಳಿಕೆ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತವು ಮುಂದುವರಿದಿದ್ದು, ಗುರುವಾರದ ವಹಿವಾಟಿನಲ್ಲೂ 7 ಪೈಸೆ ಇಳಿಕೆಯಾಗಿದೆ.

ಪ್ರತೀ ಡಾಲರ್ ಮೌಲ್ಯ ₹86.62ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಬಲಗೊಂಡಿದೆ. ಚಿಲ್ಲರೆ ಹಣದುಬ್ಬರವನ್ನು ನಿಯಂತ್ರಿಸುವ ಉದ್ದೇಶದಿಂದ ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಇದರಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ದೇಶೀಯ ಷೇರುಪೇಟೆಯಲ್ಲಿ ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣವೂ ಮುಂದುವರಿದಿರುವುದರಿಂದ ರೂಪಾಯಿಯು ಒತ್ತಡಕ್ಕೆ ಸಿಲುಕಿದೆ ಎಂದು ಹೇಳಿದ್ದಾರೆ.

## 3ನೇ ದಿನವೂ ಗೂಳಿ ಓಟ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿಯಿತು.

ರಿಲಯನ್ಸ್ ಇಂಡಸ್ಟ್ರೀಸ್, ಭಾರ್ತಿ ಏರ್‌ಟೆಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳ ಖರೀದಿ ಹೆಚ್ಚಳದಿಂದ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 226 ಅಂಶ ಏರಿಕೆ ಕಂಡು, 76,759 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 86 ಅಂಶ ಹೆಚ್ಚಳಗೊಂಡು, 23,249 ಅಂಶಗಳಲ್ಲಿ ಮುಕ್ತಾಯಗೊಂಡಿತು.

ಬಜಾಜ್ ಫೈನಾನ್ಸ್ ಷೇರಿನ ಮೌಲ್ಯದಲ್ಲಿ ಶೇ 2ರಷ್ಟು ಏರಿಕೆಯಾಗಿದೆ. ಟಾಟಾ ಮೋಟರ್ಸ್ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಇಳಿಕೆಯಾಗಿದೆ.

ಬುಧವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹2,586 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

## ಅಮೆರಿಕ: ಬಡ್ಡಿದರ ಯಥಾಸ್ಥಿತಿ



ವಾಷಿಂಗ್ಟನ್ (ಎಪಿ): ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಕಳೆದ ವರ್ಷ ಮೂರು ಬಾರಿ ಬಡ್ಡಿದರವನ್ನು ಕಡಿತಗೊಳಿಸಿತ್ತು. ಈ ವರ್ಷವೂ ಬಡ್ಡಿದರ ಕಡಿತಗೊಳಿಸುವ ಸುಳಿವು ನೀಡಿತ್ತು.

ಆದರೆ, ದೇಶದಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆಯಾಗುತ್ತಿದೆ. ಇದರ ನಿಯಂತ್ರಣದ ದೃಷ್ಟಿಯಿಂದ ಈ ಕ್ರಮ ಕೈಗೊಂಡಿದೆ ಎಂದು ಹೇಳಲಾಗಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ಏರಿಕೆ ಸೇರಿ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳುತ್ತಿರುವ ನೀತಿಗಳಿಂದ ಬ್ಯಾಂಕ್ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ.

ಕಳೆದ ವರ್ಷ ಶೇ 5.3ರಷ್ಟಿದ್ದ ಬಡ್ಡಿದರವನ್ನು, ಶೇ 4.3ಕ್ಕೆ ಇಳಿಕೆ ಮಾಡಿತ್ತು.



ಫೆಬ್ರುವರಿ 1ಕ್ಕೆ ಕೇಂದ್ರ ಬಜೆಟ್ ಮಂಡನೆ • ಇಂದು ಸಂಸತ್‌ನಲ್ಲಿ ಆರ್ಥಿಕ ಸಮೀಕ್ಷೆ ಪ್ರಕಟ

# ನಿರ್ಮಲಾಗೆ ಸವಾಲಿನ ಸರಮಾಲೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು 2025–26ನೇ ಸಾಲಿನ ಬಜೆಟ್ ಮಂಡಿಸಲಿದ್ದು, ಅವರ ಮುಂದೆ ಸವಾಲುಗಳ ಮೂಟೆಯೇ ಇದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಕೇಂದ್ರ ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಸೇರಿ ಹಿರಿಯ ಅಧಿಕಾರಿಗಳೊಟ್ಟಿಗೆ ನಿರ್ಮಲಾ ಬಜೆಟ್ ತಯಾರಿ ನಡೆಸಿದ್ದಾರೆ. ಈ ಬಾರಿಯ ಆಯವ್ಯಯದ ಗಾತ್ರವು ₹50 ಲಕ್ಷ ಕೋಟಿಗೆ ಮುಟ್ಟಲಿದೆ ಎಂದು ಅಂದಾಜಿಸಲಾಗಿದೆ. ಆದರೆ, ದೇಶದ ಆರ್ಥಿಕ ಬೆಳವಣಿಗೆ ದರವು ಇಳಿಕೆಯ ಪಥದಲ್ಲಿ ಸಾಗುತ್ತಿರುವುದು ಅವರಿಗೆ ಸವಾಲೊಡ್ಡಿದೆ ಎಂದು ಹೇಳಿದ್ದಾರೆ.

2024-25ನೇ ಆರ್ಥಿಕ ಸಾಲಿನ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಎರಡು ವರ್ಷದ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ. ಅಲ್ಲದೆ, ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 6.4ರಷ್ಟು ದಾಖಲಾಗಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಅಂದಾಜಿಸಿದೆ. ಇದು 2023-24ನೇ ಸಾಲಿನಲ್ಲಿ ದಾಖಲಾಗಿದ್ದ ಶೇ 8.2ಕ್ಕಿಂತಲೂ ಕಡಿಮೆಯಿದೆ.

ಮತ್ತೊಂದೆಡೆ ಅಗತ್ಯ ವಸ್ತುಗಳ ಬೆಲೆಯಲ್ಲಿ ಏರಿಕೆಯಾಗಿದೆ. ಆದರೆ, ಸಂಬಳ ಹಾಗೂ ಕೂಲಿ ದರದಲ್ಲಿ ಏರಿಕೆಯಾಗಿಲ್ಲ. ಇದರಿಂದ ಮಧ್ಯಮ ವರ್ಗದ ಜನರ ಬದುಕು ಹೈರಾಣಾಗಿದೆ. ಹಾಗಾಗಿ, ಎಲ್ಲಾ ವರ್ಗದ ಜನರ ಜೀವನಮಟ್ಟದ ಸುಧಾರಣೆಯನ್ನು ಗಮನದಲ್ಲಿಟ್ಟುಕೊಂಡು ನಿರ್ಮಲಾ ಅವರು ದೂರದೃಷ್ಟಿಯುಳ್ಳ ಬಜೆಟ್ ಮಂಡಿಸುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

ಸದ್ಯ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತವು ಮುಂದುವರಿದಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಮಧ್ಯಪ್ರವೇಶದ ಹೊರತಾಗಿಯೂ ರೂಪಾಯಿಯು ಚೇತರಿಕೆಯ ಹಳಿಗೆ ಮರಳಿಲ್ಲ. ಇದು ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆ ಹೆಚ್ಚಳಕ್ಕೆ ಎಡೆಮಾಡಿಕೊಟ್ಟಿದೆ. 2025-26ನೇ ಸಾಲಿನಲ್ಲಿ ವಿತ್ತೀಯ ಕೊರತೆಯನ್ನು ಶೇ 4.5ಕ್ಕೆ ತಗ್ಗಿಸುವ ಸರ್ಕಾರದ ಗುರಿಗೆ ಅಕ್ಷರಶಃ ಸವಾಲೊಡ್ಡಿದೆ ಎಂದು ಹೇಳಿದ್ದಾರೆ.

ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಸರಕು ಮತ್ತು ಸೇವೆಯ ಬೇಡಿಕೆ ಪ್ರಮಾಣ ತಗ್ಗಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಖಾಸಗಿ ಹೂಡಿಕೆ ಪ್ರಮಾಣವು ಸ್ಥಿರವಾಗಿದೆ ಎಂದು ಹೇಳಿದ್ದಾರೆ.

ನಿರ್ಮಲಾ ನೇತೃತ್ವದ ಬಜೆಟ್ ಸಿದ್ಧಪಡಿಸುವ ತಂಡದಲ್ಲಿ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಅಜಯ್ ಸೇಟ್, ವೆಚ್ಚ ಕಾರ್ಯದರ್ಶಿ ಮನೋಜ್ ಗೋವಿಲ್, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆಯ ಕಾರ್ಯದರ್ಶಿ ಅರುಣೀಶ್ ಚಾವ್ಲಾ, ಹಣಕಾಸು ಸೇವೆಗಳ ಕಾರ್ಯದರ್ಶಿ ಎಂ. ನಾಗರಾಜು ಹಾಗೂ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಇದ್ದಾರೆ.


**ಇಂದು ಆರ್ಥಿಕ ಸಮೀಕ್ಷೆ ಮಂಡನೆ:** ನಿರ್ಮಲಾ ಅವರು ಸಂಸತ್ತಿನಲ್ಲಿ ಶುಕ್ರವಾರ 2024–25ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಿದ್ದಾರೆ.

### ಚಾರಿತ್ರಿಕ ದಾಖಲೆಗೆ ಸಜ್ಜು

ನಿರ್ಮಲಾ ಅವರು ಸತತ ಎಂಟು ಬಾರಿ ಕೇಂದ್ರ ಬಜೆಟ್ ಮಂಡಿಸಿದ ಚಾರಿತ್ರಿಕ ಶ್ರೇಯಕ್ಕೆ ಭಾಜನರಾಗಲು ಸಜ್ಜಾಗಿದ್ದಾರೆ.

ದೇಶದಲ್ಲಿ ವಿವಿಧ ಅವಧಿಯಲ್ಲಿ 10 ಬಾರಿ ಕೇಂದ್ರ ಬಜೆಟ್ ಮಂಡಿಸಿರುವ ಶ್ರೇಯ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿ ಅವರಿಗೆ ಸಲ್ಲುತ್ತದೆ. ಮೊರಾರ್ಜಿ ಅವರು 1959–1964ರ ನಡುವೆ ಆರು ಬಾರಿ ಹಾಗೂ 1967–1969ರ ನಡುವೆ ನಾಲ್ಕು ಸಲ ಬಜೆಟ್ ಮಂಡಿಸಿದ್ದಾರೆ.

ಮಾಜಿ ಹಣಕಾಸು ಸಚಿವರಾದ ಪಿ. ಚಿದಂಬರಂ, ಪ್ರಣಬ್ ಮುಖರ್ಜಿ ಅವರು ಕ್ರಮವಾಗಿ ಒಂಬತ್ತು ಹಾಗೂ ಎಂಟು ಬಾರಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಹೊಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ನಿರ್ಮಲಾ ಅವರು ಸತತವಾಗಿ ಎಂಟು ಬಾರಿ ಬಜೆಟ್ ಮಂಡಿಸುವುದು ದಾಖಲೆ ಎನಿಸಿಕೊಳ್ಳಲಿದೆ.



2019ರಲ್ಲಿ ನಿರ್ಮಲಾಗೆ ಪೂರ್ಣಾವಧಿಯ ಹಣಕಾಸು ಸಚಿವೆಯಾಗಿ ಜವಾಬ್ದಾರಿ ನೀಡಲಾಯಿತು. ಕಳೆದ ವರ್ಷ ಮೂರನೇ ಅವಧಿಗೆ ಮೋದಿ ಅವರು ಅಧಿಕಾರದ ಗದ್ದುಗೆ ಹಿಡಿದಾಗಲೂ ಅವರನ್ನು ಹಣಕಾಸು ಸಚಿವೆಯಾಗಿ ಮುಂದುವರಿಸಲಾಯಿತು. ಕಳೆದ ವರ್ಷದ ಫೆಬ್ರುವರಿಯಲ್ಲಿ ಮಂಡಿಸಿದ ಮಧ್ಯಂತರ ಬಜೆಟ್ ಸೇರಿ ಇಲ್ಲಿಯವರೆಗೆ ಅವರು ಏಳು ಬಾರಿ ಕೇಂದ್ರ ಬಜೆಟ್ ಮಂಡಿಸಿದ ಹೆಗ್ಗಳಿಕೆ ಪಡೆದಿದ್ದಾರೆ.

### ಉದ್ಯೋಗ ಸೃಷ್ಟಿ ಮರೀಚಿಕೆ: ‘ಕೈ’ ತರಾಟೆ

ದೇಶದ ಆರ್ಥಿಕ ಬೆಳವಣಿಗೆಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಂಪೂರ್ಣ ವೈಫಲ್ಯ ಕಂಡಿದೆ ಎಂದು ಕಾಂಗ್ರೆಸ್ ತರಾಟೆಗೆ ತೆಗೆದುಕೊಂಡಿದೆ.



ಪಿ. ಚಿದಂಬರಂ

ಪಕ್ಷದ ಮಾಜಿ ಸಂಸದ ರಾಜೀವ್ ಗೌಡ ನೇತೃತ್ವದ ತಂಡವು ಸಿದ್ಧಪಡಿಸಿರುವ ‘ಭಾರತದ ನೈಜ ಆರ್ಥಿಕತೆ 2025’ ವರದಿಯನ್ನು ಗುರುವಾರ ಬಿಡುಗಡೆಗೊಳಿಸಿದ ಬಳಿಕ ಮಾತನಾಡಿದ ಪಕ್ಷದ ಹಿರಿಯ ಮುಖಂಡ ಹಾಗೂ ಕೇಂದ್ರದ ಮಾಜಿ ಹಣಕಾಸು ಸಚಿವ ಪಿ. ಚಿದಂಬರಂ, ‘ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 2ರಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ’ ಎಂದರು.

ಆರ್ಥಿಕ ಬೆಳವಣಿಗೆ ದರ ನಿಧಾನಗತಿಯಲ್ಲಿದೆ. ಹೊಸ ಉದ್ಯೋಗ ಸೃಷ್ಟಿಗೆ ಒತ್ತು ನೀಡಿಲ್ಲ. ಚಿಲ್ಲರೆ ಹಣದುಬ್ಬರವು ಏರಿಕೆಯಾಗುತ್ತಿದ್ದು, ನಿಯಂತ್ರಣಕ್ಕೆ ಕ್ರಮಕೈಗೊಂಡಿಲ್ಲ. ಆದಾಯದ ಅಸಮಾನತೆಯ ಅಂತರ ಹೆಚ್ಚುತ್ತಿದೆ ಎಂದು ಹೇಳಿದರು.

‘ದೇಶದಲ್ಲಿ ಯುವಜನರ ನಿರುದ್ಯೋಗದ ಪ್ರಮಾಣ ಶೇ 40ರಷ್ಟಿದೆ’ ಎಂದರು. ಕಳೆದ ನಾಲ್ಕೈದು ವರ್ಷಗಳಿಂದ ಉದ್ಯೋಗಿಗಳ ಸಂಬಳದಲ್ಲಿ ಏರಿಕೆಯಾಗಿಲ್ಲ. ಶಿಕ್ಷಣ ಮತ್ತು ಆರೋಗ್ಯದ ವೆಚ್ಚವು ಎರಡಂಕಿ ದಾಟಿದೆ. ಕಳೆದ ಮೂರ್ನಾಲ್ಕು ವರ್ಷಗಳಿಂದ ಚಿಲ್ಲರೆ ಹಣದುಬ್ಬರ ಏರಿಕೆಯಾಗುತ್ತಿದೆ ಎಂದು ಟೀಕಿಸಿದರು. ದೇಶದ ಶೇ 20ರಿಂದ 30ರಷ್ಟು ಜನರ ಆದಾಯದ ಸ್ಥಿತಿ ಉತ್ತಮವಾಗಿದೆ. ಉಳಿದ ಶೇ 70ರಷ್ಟು ಜನರ ಸ್ಥಿತಿ ಕೆಳಮಟ್ಟದಲ್ಲಿದೆ. ದಿನವೊಂದಕ್ಕೆ ₹100ರಿಂದ ₹150 ದುಡಿಮೆಯಲ್ಲಿ ಬದುಕುತ್ತಿದ್ದಾರೆ ಎಂದರು.


### ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹461-860

ದ್ವಿತಳಿ (ಬಿ.ವಿ) ₹563-682

### ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹188

ಆರ್‌ಎಸ್‌ಎಸ್-5 ₹183

ಗುಡ್ ಲಾಟ್ ₹178

(ಪ್ರತಿ ಕೆ.ಜಿಗೆ)

### ಅಡಿಕೆ ಧಾರಣೆ (₹ಗಳಲ್ಲಿ)

| ಮಾರುಕಟ್ಟೆ / ವಿಧ | ದರ |
|---|---|
| **ಬಂಟ್ವಾಳ** | |
| ಕೋಕ | 20000-27500 |
| ಹೊಸತು | 30000-36000 |
| ಹಳತು | 45500-49500 |
| **ಕಾರ್ಕಳ** | |
| ಹೊಸತು | 25000-36500 |
| ಹಳತು | 30000-45500 |
| **ಕುಮಟ** | |
| ಹೊಸಚಾಲಿ | 25100-32206 |
| ಚಾಲಿ | 32669-37239 |
| ಚಿಪ್ಪು | 12111-27669 |
| ಕೋಕ | 4700-23899 |
| **ಸಾಗರ** | |
| ಬಿಳಿಗೋಟು | 7099-25899 |
| ಚಾಲಿ | 20199-34209 |
| ಕೋಕ | 6299-20299 |
| ಕೆಂಪುಗೋಟು | 11089-31899 |
| ರಾಶಿ | 25899-51700 |
| ಸಿಪ್ಪೆಗೋಟು | 10599-17199 |
| **ಶಿವಮೊಗ್ಗ** | |
| ಬೆಟ್ಟೆ | 45109-55700 |
| ಗೊರಬಲು | 16089-28009 |
| ರಾಶಿ | 30369-52259 |
| ಸರಕು | 45029-86630 |
| **ಸಿದ್ದಾಪುರ** | |
| ಬಿಳಿಗೋಟು | 22489-24199 |
| ಚಾಲಿ | 32489-37899 |
| ಕೋಕ | 14239-22309 |
| ಹೊಸಚಾಲಿ | 23839-32509 |
| ಕೆಂಪುಗೋಟು | 19109-24909 |
| ರಾಶಿ | 43099-49799 |
| ತಟ್ಟಿಬೆಟ್ಟೆ | 27619-41089 |
| **ಶಿರಸಿ** | |
| ಬೆಟ್ಟೆ | 28518-43061 |
| ಬಿಳಿಗೋಟು | 15199-30519 |
| ಚಾಲಿ | 36099-40309 |
| ಕೆಂಪುಗೋಟು | 12799-23500 |
| ರಾಶಿ | 42609-46618 |
| **ಯಲ್ಲಾಪುರ** | |
| ಅಪಿ | 60379-72199 |
| ಬಿಳಿಗೋಟು | 12019-26119 |
| ಚಾಲಿ | 28419-39009 |
| ಕೋಕ | 4601-17657 |
| ಕೆಂಪುಗೋಟು | 12009-28661 |
| ರಾಶಿ | 39509-59599 |
| ತಟ್ಟಿಬೆಟ್ಟೆ | 29090-38799 |

## ಬಿಒಬಿಗೆ ₹4,837 ಕೋಟಿ ಲಾಭ


ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ), ₹4,837 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹4,579 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 5.6ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್, ಗುರುವಾರ ಷೇರುಪೇಟೆಗೆ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ವರಮಾನವು ₹31,416 ಕೋಟಿ ಸಂಗ್ರಹವಾಗಿತ್ತು. ಈ ಬಾರಿ ₹34,676 ಕೋಟಿಯಾಗಿದೆ. ಬಡ್ಡಿ ವರಮಾನ ₹30,908 ಕೋಟಿ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 3.08ರಿಂದ ಶೇ 2.43ಕ್ಕೆ ಇಳಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 0.70ರಿಂದ ಶೇ 0.59ಕ್ಕೆ ಕಡಿಮೆಯಾಗಿದೆ. ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 15.96ರಿಂದ ಶೇ 14.72ಕ್ಕೆ ಇಳಿದಿದೆ.


### ಷೇರುಪೇಟೆ ವಹಿವಾಟು




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 23,163 |
| ಇಂದಿನ ಅಂತ್ಯ | 23,249 |
| ▲ | 86 |
| ದಿನದ ಗರಿಷ್ಠ | 23,322 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



| | |
|---|---|
| **ಬೆಂಗಳೂರು** | |
| 100ಕ್ಕೆ | ₹535 |
| 12 ಕ್ಕೆ | ₹70 |
| **ಮೈಸೂರು** | |
| 100ಕ್ಕೆ | ₹535 |

### ಮುದ್ರೆಮನೆ ಕಾಫಿ



(50 ಕೆಜಿಗೆ)

| | |
|---|---|
| ಎಪಿ | ₹24900 |
| ಎಸಿ | ₹14000 |
| ಆರ್‌ಪಿ | ₹20500 |
| ಆರ್‌ಸಿ | ₹12365 |

ಗೃಹಬಳಕೆ ವೆಚ್ಚ: ಕರ್ನಾಟಕದಲ್ಲಿ ಶೇ 5ರಷ್ಟು ಏರಿಕೆ

## ಒಡಿಶಾ, ಪಂಜಾಬ್‌ನಲ್ಲಿ ಗರಿಷ್ಠ

ನವದೆಹಲಿ (ಪಿಟಿಐ): ಒಡಿಶಾದ ಗ್ರಾಮೀಣ ಪ್ರದೇಶ ಹಾಗೂ ಪಂಜಾಬ್‌ನ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಮಾಸಿಕ ಗೃಹಬಳಕೆ ವೆಚ್ಚದ (ಎಂಪಿಸಿಇ) ಪ್ರಮಾಣದಲ್ಲಿ ಗರಿಷ್ಠ ಏರಿಕೆಯಾಗಿದೆ ಎಂದು ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ ಹೇಳಿದೆ.



2023ರ ಆಗಸ್ಟ್‌ನಿಂದ 2024ರ ಜುಲೈವರೆಗೆ ಈ ಸಮೀಕ್ಷೆ ನಡೆಸಲಾಗಿದೆ. 2023–24ರಲ್ಲಿ ದೇಶದ ಪ್ರಮುಖ 18 ರಾಜ್ಯಗಳಲ್ಲಿ ಗೃಹಬಳಕೆಯ ಸರಾಸರಿ ವೆಚ್ಚದಲ್ಲಿ ಹೆಚ್ಚಳವಾಗಿದೆ.

ಒಡಿಶಾದ ಗ್ರಾಮೀಣ ಪ್ರದೇಶದಲ್ಲಿ ಶೇ 14ರಷ್ಟು ಹಾಗೂ ಪಂಜಾಬ್‌ನ ನಗರ ಪ್ರದೇಶ ಗಳಲ್ಲಿ ಶೇ 13ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಗುರುವಾರ ತಿಳಿಸಿದೆ.

ಮಹಾರಾಷ್ಟ್ರದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಸರಾಸರಿ ಶೇ 3ರಷ್ಟು ಹಾಗೂ ಕರ್ನಾಟಕದಲ್ಲಿ ಶೇ 5ರಷ್ಟು ಏರಿಕೆಯಾಗಿದೆ ಎಂದು ಹೇಳಿದೆ.

18 ರಾಜ್ಯಗಳ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಗೃಹಬಳಕೆ ವೆಚ್ಚದಲ್ಲಿ ಅಗಾಧ ವ್ಯತ್ಯಾಸವಿದೆ. 2022–23ನೇ ಸಾಲಿಗೆ ಹೋಲಿಸಿದರೆ 2023–24ರಲ್ಲಿ 11 ರಾಜ್ಯಗಳ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಗೃಹಬಳಕೆಯ ಅಂತರ ಕಡಿಮೆಯಾಗಿದೆ ಎಂದು ವಿವರಿಸಿದೆ.



ಯೋಗೇಂದ್ರ ಯಾದವ್

ಲೇಖನ

ಗಣರಾಜ್ಯ ವಿಧಿ ವಿಧಾನ ಮೀರಲಿ

prajavani.net
rb.gy/ityvf0

## ಜನ್ಮದತ್ತ ಪೌರತ್ವ ಹಕ್ಕು ರದ್ದತಿಗೆ ಮಸೂದೆ

ವಾಷಿಂಗ್ಟನ್ (ಪಿಟಿಐ): ಅಕ್ರಮ ವಲಸಿಗರ ಮಕ್ಕಳಿಗೆ ಜನ್ಮದತ್ತವಾಗಿ ಅಮೆರಿಕ ಪೌರತ್ವ ಸಿಗುವುದನ್ನು ನಿರ್ಬಂಧಿಸುವ ಮಸೂದೆಯನ್ನು ರಿಪಬ್ಲಿಕನ್ ಪಕ್ಷದ ಕೆಲವು ಸೆನೆಟರ್‌ಗಳು ಸೆನೆಟ್‌ನಲ್ಲಿ ಮಂಡಿಸಿದರು.

‘ಜನ್ಮದತ್ತವಾಗಿ ಪೌರತ್ವ ಹಕ್ಕು ಲಭಿಸುವುದರಿಂದಲೇ ಅಕ್ರಮ ವಲಸಿಗರ ಸಂಖ್ಯೆ ಹೆಚ್ಚಲು ಕಾರಣವಾಗಿದೆ ಮತ್ತು ಇದರಿಂದ ರಾಷ್ಟ್ರೀಯ ಭದ್ರತೆಗೆ ಅಪಾಯ ಎದುರಾಗಿದೆ’ ಎಂದು ಈ ಮಸೂದೆಯನ್ನು ಮಂಡಿಸಿದ ಸೆನೆಟರ್‌ಗಳಾದ ಲಿಂಡ್ಸೆ ಗ್ರಹಾಂ, ಟೆಡ್ ಕ್ರೂಜ್ ಮತ್ತು ಕೇಟಿ ಬ್ರಿಟ್ ಅವರು ಹೇಳಿದ್ದಾರೆ.

## ‘ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇಲ್ಲ’

ಒಟ್ಟಾವ (ಪಿಟಿಐ): ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ವಿದೇಶಿ ಕೈವಾಡದ ಬಗ್ಗೆ ಯಾವುದೇ ಖಚಿತವಾದ ಸಾಕ್ಷ್ಯ ದೊರೆತಿಲ್ಲ ಎಂದು ಕೆನಡಾದ ಆಯೋಗವೊಂದು ತನ್ನ ವರದಿಯಲ್ಲಿ ತಿಳಿಸಿದೆ. ಈ ಮೂಲಕ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಆರೋಪವನ್ನು ತಳ್ಳಿಹಾಕಿದೆ.

ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟರು ಭಾಗಿಯಾಗಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಕೆನಡಾ ಬಳಿ ನಂಬಲರ್ಹವಾದ ಪುರಾವೆಗಳಿವೆ ಎಂದು ಟ್ರುಡೊ ಅವರು 2023ರ ಸೆಪ್ಟೆಂಬರ್‌ನಲ್ಲಿ ಹೇಳಿದ್ದರು. ಇದರಿಂದಾಗಿ ಉಭಯ ದೇಶಗಳ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ತಲೆದೋರಿತ್ತು.

‘ಚುನಾವಣಾ ಪ್ರಕ್ರಿಯೆಗಳಲ್ಲಿ ಹಾಗೂ ಪ್ರಜಾತಾಂತ್ರಿಕ ಸಂಸ್ಥೆಗಳಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪದ ಕುರಿತ ವಿಚಾರಣೆ’ ಎಂಬ ಶೀರ್ಷಿಕೆಯ ವರದಿಯನ್ನು ಆಯೋಗವು ಮಂಗಳವಾರ ಬಿಡುಗಡೆ ಮಾಡಿದೆ.

‘ನಿಜ್ಜರ್ ಹತ್ಯೆಯಲ್ಲಿ ವಿದೇಶಿ ಕೈವಾಡದ ಬಗ್ಗೆ ಯಾವುದೇ ಖಚಿತವಾದ ಸಾಕ್ಷ್ಯ ಇಲ್ಲ’ ಎಂದು ಕಮಿಷನರ್ ಮೇರಿ ಜೋಸಿ ಹೋಗ್ ಅವರು ತನ್ನ ವರದಿಯಲ್ಲಿ ತಿಳಿಸಿದ್ದಾರೆ. ಆದರೆ ನಿಜ್ಜರ್ ಹತ್ಯೆ ಕುರಿತು ಭಾರತವು ತಪ್ಪು ಮಾಹಿತಿಯನ್ನು ಹರಡಿದೆ ಎಂದು ವರದಿಯಲ್ಲಿ ಆರೋಪಿಸಲಾಗಿದೆ. ‘ನಿಜ್ಜರ್ ಹತ್ಯೆಯಲ್ಲಿ ಭಾರತದ ಏಜೆಂಟರ ಪಾತ್ರದ ಬಗ್ಗೆ ಪ್ರಧಾನಿ ಅವರು ಅನುಮಾನ ವ್ಯಕ್ತಪಡಿಸಿದ ನಂತರ, ಭಾರತದಿಂದ ತಪ್ಪು ಮಾಹಿತಿ ಹರಡುವ ಅಭಿಯಾನ ನಡೆದಿರಬಹುದು’ ಎಂಬ ಅಂಶ 123 ಪುಟಗಳ ವರದಿಯಲ್ಲಿದೆ.

64 ಮಂದಿಯಿದ್ದ ಜೆಟ್ ವಿಮಾನ; 28 ಮೃತದೇಹ ಪತ್ತೆ

## ಹೆಲಿಕಾಪ್ಟರ್‌ಗೆ ಡಿಕ್ಕಿಯಾಗಿ ನದಿಗೆ ಬಿದ್ದ ಜೆಟ್

ಅರ್ಲಿಂಗ್ಟನ್ (ಅಮೆರಿಕ) (ಎಪಿ/ಎಎಫ್‌ಪಿ): ಅಮೆರಿಕನ್ ಏರ್‌ಲೈನ್ಸ್‌ಗೆ ಸೇರಿದ ಪ್ರಯಾಣಿಕರ ಜೆಟ್ ವಿಮಾನವೊಂದು ಸೇನಾ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದು ನದಿಯಲ್ಲಿ ಪತನಗೊಂಡಿದೆ.

60 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ಸೇರಿದಂತೆ ಒಟ್ಟು 64 ಮಂದಿ ಜೆಟ್‌ನಲ್ಲಿದ್ದರು. ತರಬೇತಿ ಹಾರಾಟ ನಡೆಸುತ್ತಿದ್ದ ಸೇನಾ ಹೆಲಿಕಾಪ್ಟರ್‌ನಲ್ಲಿ ಮೂವರು ಯೋಧರು ಪ್ರಯಾಣಿಸುತ್ತಿದ್ದರು. ‘ದುರಂತದಲ್ಲಿ ಯಾರೂ ಬದುಕುಳಿದಿರುವ ಸಾಧ್ಯತೆಯಿಲ್ಲ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ದುರಂತದಲ್ಲಿ ಬದುಕುಳಿದವರು ಇದ್ದಾರೆ ಎಂದು ಈ ಹಂತದಲ್ಲಿ ನಾವು ಭಾವಿಸುವುದಿಲ್ಲ. ಹೆಲಿಕಾಪ್ಟರ್‌ನಲ್ಲಿದ್ದ ಒಬ್ಬರದ್ದು ಸೇರಿದಂತೆ ಒಟ್ಟು 28 ಮೃತದೇಹಗಳನ್ನು ನದಿಯಿಂದ ಹೊರತೆಗೆಯಲಾಗಿದೆ’ ಎಂದು ವಾಷಿಂಗ್ಟನ್‌ನ ಅಗ್ನಿಶಾಮಕ ದಳದ ಮುಖ್ಯಸ್ಥ ಜಾನ್ ಡಾನೆಲಿ ಗುರುವಾರ ಬೆಳಿಗ್ಗೆ ಹೇಳಿದ್ದಾರೆ.



ಮೃತದೇಹಗಳಿಗಾಗಿ ನದಿಯಲ್ಲಿ ಶೋಧ ನಡೆಸಲಾಯಿತು –ಎಎಫ್‌ಪಿ ಚಿತ್ರ

ವಾಷಿಂಗ್ಟನ್ ಸಮೀಪದ ರೊನಾಲ್ಡ್ ರೇಗನ್ ವಿಮಾನ ನಿಲ್ದಾಣದ ಬಳಿ ಸ್ಥಳೀಯ ಕಾಲಮಾನ ಬುಧವಾರ ರಾತ್ರಿ 9ಕ್ಕೆ ಈ ದುರಂತ ನಡೆದಿದೆ. ಇಲ್ಲಿ ತೀವ್ರ ಚಳಿಯ ಕಾರಣ ಪೊಟೋಮೆಕ್ ನದಿಯ ನೀರು ಅಲ್ಲಲ್ಲಿ ಹೆಪ್ಪುಗಟ್ಟಿದೆ. ಇದರಿಂದ ರಕ್ಷಣಾ ತಂಡದ ಸಿಬ್ಬಂದಿಗೆ ಸವಾಲು ಎದುರಾಗಿದೆ.

ರೊನಾಲ್ಡ್ ರೇಗನ್ ನಿಲ್ದಾಣದ ರನ್‌ವೇ 33ರಲ್ಲಿ ಇಳಿಯಲು ಜೆಟ್‌ನ ಪೈಲಟ್‌ಗೆ ಏರ್ ಟ್ರಾಫಿಕ್ ಕಂಟ್ರೋಲರ್ ಅನುಮತಿ ನೀಡಿದ್ದರು. ಇದರಿಂದ ಪೈಲಟ್ ಜೆಟ್ ಅನ್ನು ಇಳಿಸಲು ಮುಂದಾಗಿದ್ದರು. ರನ್‌ವೇ ತಲುಪಲು ಕೇವಲ 2,400 ಅಡಿ ದೂರ ಇರುವಾಗ ಪೊಟೋಮೆಕ್ ನದಿಯ ಮೇಲೆ ಹೆಲಿಕಾಪ್ಟರ್‌ಗೆ ಡಿಕ್ಕಿಯಾಗಿದೆ.

‘ಬೊಂಬಾರ್ಡಿಯೆ ಸಿಆರ್‌ಜೆ-701’ ಎರಡು ಎಂಜಿನ್ ಹೊಂದಿರುವ ಜೆಟ್‌ಅನ್ನು ಕೆನಡಾದಲ್ಲಿ 2004ರಲ್ಲಿ ನಿರ್ಮಿಸಲಾಗಿತ್ತು. ಈ ಜೆಟ್‌ನಲ್ಲಿ ಗರಿಷ್ಠ 70 ಮಂದಿ ಪ್ರಯಾಣಿಸಬಹುದು.

ಅಪಘಾತಕ್ಕೆ 30 ಸೆಕೆಂಡುಗಳ ಮುನ್ನ ಹೆಲಿಕಾಪ್ಟರ್‌ಗೆ ರೇಡಿಯೊ ಕಾಲ್ ಮಾಡಿದ್ದ ಏರ್ ಟ್ರಾಫಿಕ್ ಕಂಟ್ರೋಲರ್, ಲ್ಯಾಂಡಿಂಗ್ ಆಗುತ್ತಿರುವ ವಿಮಾನ ನಿಮಗೆ ಗೋಚರಿಸುತ್ತಿದೆಯೇ ಎಂದು ಕೇಳಿದ್ದರು. ಅದರ ಬೆನ್ನಲ್ಲೇ, ‘ವಿಮಾನ ಸಾಗಿದ ಬಳಿಕ ಆ ಮಾರ್ಗದಲ್ಲಿ ಮುಂದುವರಿಯಿರಿ’ ಎಂಬ ಸಂದೇಶವನ್ನೂ ಕಳುಹಿಸಿದ್ದರು. ಇದಾದ ಕೆಲವೇ ಸೆಕೆಂಡುಗಳಲ್ಲಿ ಡಿಕ್ಕಿ ಸಂಭವಿಸಿದೆ.

ಅಮೆರಿಕದ ಕ್ಯಾನ್ಸಸ್ ರಾಜ್ಯದ ವಿಚಿಟಾದಿಂದ ಪ್ರಯಾಣ ಆರಂಭಿಸಿದ್ದ ಜೆಟ್‌ನಲ್ಲಿದ್ದವರಲ್ಲಿ ಹೆಚ್ಚಿನವರು ಅಮೆರಿಕ ಮತ್ತು ರಷ್ಯಾದ ಫಿಗರ್ ಸ್ಕೇಟಿಂಗ್ ಸ್ಪರ್ಧಿಗಳು ಮತ್ತು ಅವರ ಕೋಚ್‌ಗಳು ಆಗಿದ್ದಾರೆ. 1994ರ ವಿಶ್ವ ಫಿಗರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದಿದ್ದ ರಷ್ಯಾದ ಎವ್ಗೆನಿಯಾ ಶಿಶ್ಕೊವಾ ಮತ್ತು ವಾದಿಮ್ ನೌಮೊವ್ ದಂಪತಿ ಕೂಡಾ ವಿಮಾನದಲ್ಲಿದ್ದರು.

ವಿಚಿಟಾದಲ್ಲಿ ನಡೆದ ಯುಎಸ್ ಫಿಗರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್ ಮತ್ತು ಆ ಬಳಿಕದ ತರಬೇತಿ ಶಿಬಿರದಲ್ಲಿ ಪಾಲ್ಗೊಂಡು ಅವರು ವಾಪಸಾಗುತ್ತಿದ್ದರು.

# ಕಾಣೆಯಾದವರಿಗೆ ಇನ್ನೂ ಹುಡುಕಾಟ



ಪ್ರಯಾಗರಾಜ್‌ನ ಮೋತಿಲಾಲ್ ನೆಹರೂ ವೈದ್ಯಕೀಯ ಕಾಲೇಜಿನ ಶವಾಗಾರದ ಗೋಡೆಯ ಮೇಲೆ ಅಂಟಿಸಲಾಗಿರುವ ಕಾಣೆಯಾದವರ ಪಟ್ಟಿಯ ಫೋಟೊವನ್ನು ತೆಗೆದುಕೊಂಡ ಜನ – ಪಿಟಿಐ ಚಿತ್ರ

ಕಾಣೆಯಾದ ತಮ್ಮವರ ಫೋಟೊಗಳನ್ನು ತೋರಿಸುತ್ತಾ ಶವಾಗಾರದ ಎದುರು ಕುಟುಂಬಸ್ಥರು ಪ್ರೀತಿಪಾತ್ರರಿಗಾಗಿ ಹುಡುಕಾಟ ನಡೆಸಿದರು – ಎಎಫ್‌ಪಿ ಚಿತ್ರ

**ಕಾಲ್ತುಳಿತದ ಕುರಿತು ತಿಳಿಯಿತು. ಆದರೆ, ಇಲ್ಲಿಗೆ ಬರುವುದು ಪವಿತ್ರ ಹಾಗೂ ಧಾರ್ಮಿಕ ವಿಚಾರ. ಹಿಂದೂಗಳಾಗಿ ಹುಟ್ಟಿದವರು ಇದನ್ನು ಮಾಡಲೇಬೇಕು. ಏನೇ ಆದರೂ ಇದನ್ನು ತಪ್ಪಿಸಿಕೊಳ್ಳಲಾಗದು**
**ನವೀದ್ ಪ್ರಧಾನ್,** ಒಡಿಶಾ

**ರೈಲಿನಲ್ಲಿ ನೂಕುನುಗ್ಗಲು ಇತ್ತು. ಪ್ರಯಾಣ ಬಹಳ ತ್ರಾಸದಾಯಕವಾಗಿತ್ತು. ಆದರೆ, ಪವಿತ್ರ ಸ್ನಾನದ ಬಳಿಕ ನಮ್ಮೆಲ್ಲ ಸುಸ್ತು ನೀಗಿತು. ಸಂತೋಷಗೊಂಡೆವು**
**ಪದ್ಮಾವತಿ ದಾಮ್,** ಇಂದೋರ್

**ಮೇಳದ ಬಗ್ಗೆ ಒಳ್ಳೆಯದು ಕೆಟ್ಟದ್ದು ಕೇಳುತ್ತಲೇ ಇರುತ್ತೇವೆ. ಆದರೆ, ಅವುಗಳು ನಮಗೆ ಮುಖ್ಯವಲ್ಲ. ಬಹಳ ವರ್ಷಗಳಿಂದ ಕುಂಭಮೇಳಕ್ಕೆ ಬರಬೇಕು ಎಂದು ಆಸೆಪಟ್ಟಿದ್ದೆವು. ಮೋದಿ, ಯೋಗಿ ಹಾಗೂ ದೇವರಿಗೆ ಧನ್ಯವಾದ**
**ಆಶಾ ಪಟೇಲ್,** ದೆಹಲಿ

ಪಿಟಿಐ/ಎಎಫ್‌ಪಿ

**ಮಹಾಕುಂಭ ನಗರ:** ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದ ತ್ರಿವೇಣಿ ಸಂಗಮದಲ್ಲಿ ಕಾಲ್ತುಳಿತದ ಘಟನೆ ಸಂಭವಿಸಿ ಒಂದು ದಿನ ಕಳೆದಿದೆ. ಈ ಘಟನೆಯು ಭಕ್ತರ ಉತ್ಸಾಹವನ್ನು ಕುಂದಿಸಿಲ್ಲ. ಆದರೆ, ಬುಧವಾರ 1 ಗಂಟೆಯಿಂದ 2 ಗಂಟೆಯವರೆಗೆ ಸಂಭವಿಸಿದ ಕಾಲ್ತುಳಿತದ ಘಟನೆಯಿಂದ ತಮ್ಮವರನ್ನು ಕಳೆದುಕೊಂಡವರ ಅಳಲು ಮಾತ್ರ ಹೇಳತೀರದು.

ತಾಯಿ, ಹೆಂಡತಿ, ತಂಗಿ, ಅತ್ತೆ, ಚಿಕ್ಕಮ್ಮ... ಹೀಗೆ ಕಾಲ್ತುಳಿತ ಘಟನೆಯ ಬಳಿಕ ಕಾಣೆಯಾದವರ ಪಟ್ಟಿಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮೇಳದ ಸೆಕ್ಟರ್ 3ರಲ್ಲಿ ಕಾಣೆಯಾದವರ ಕುರಿತು ನೋಂದಣಿ ಮಾಡಿಸಲು ಕೇಂದ್ರವೊಂದನ್ನು ತೆರೆಯಲಾಗಿದೆ. ಈ ಕೇಂದ್ರದ ಮುಂದೆ ಉದ್ದದ ಸಾಲು ನಿರ್ಮಾಣವಾಗಿದೆ.

‘ದೇಶದ ವಿವಿಧ ಭಾಗಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಬಂದಿದ್ದಾರೆ. ಧ್ವನಿವರ್ಧಕಗಳ ಮೂಲಕ ನೀಡುತ್ತಿರುವ ಸೂಚನೆಗಳು ಅರ್ಥವಾಗುತ್ತಿಲ್ಲ. ಸೂಚನಾ ಫಲಕಗಳನ್ನು ಓದಲು ಬರುತ್ತಿಲ್ಲ. ಇದರಿಂದಾಗಿ ಕಾಣೆಯಾದವರಿಗೆ ಎಲ್ಲಿಗೆ ಹೇಗೆ ಹೋಗಬೇಕು ಎಂಬುದು ತಿಳಿಯುತ್ತಿಲ್ಲ’ ಎನ್ನುತ್ತಾ ಸಮಸ್ಯೆಗಳನ್ನು ತೆರದಿಟ್ಟರು ಅಸ್ಸಾಂನ ಗೀತಾ ಅಗರ್ವಾಲ್.

ಕಾಣೆಯಾದವರ ಪೈಕಿ ವೃದ್ಧರ ಸಂಖ್ಯೆಯೇ ಅಧಿಕವಿದೆ. ವಿವಿಧ ರಾಜ್ಯಗಳಿಂದ ತಂಡವಾಗಿ ಬಂದಿದ್ದ ವೃದ್ಧರು, ತಮ್ಮ ತಂಡದಿಂದ ಬೇರ್ಪಟ್ಟಿದ್ದಾರೆ. ಕೆಲವರು ಹೇಗೊ ಮತ್ತೊಮ್ಮೆ ತಮ್ಮ ತಂಡವನ್ನು ಸೇರಿಕೊಂಡಿದ್ದಾರೆ. ಆದರೆ, ಇನ್ನೂ ಹಲವರು ಕಾಣೆಯಾಗಿದ್ದಾರೆ. ಕಾಣೆಯಾದ ತಮ್ಮವರಿಗಾಗಿ ಕುಟುಂಬಸ್ಥರು ಮೇಳದ ತುಂಬೆಲ್ಲಾ ಅಲೆದಾಡುತ್ತಿದ್ದಾರೆ.

‘ನನ್ನ ಅತ್ತೆಗೆ 70 ವರ್ಷ. ಅವರ ಬಳಿ ಮೊಬೈಲ್ ಇತ್ತು. ಕೊರಳಿನಲ್ಲಿ ಗುರುತಿನ ಚೀಟಿ ಕೂಡ ಇತ್ತು. ಆದರೆ, ಕಾಲ್ತುಳಿತ ಸಂಭವಿಸಿದ ನಂತರ ಅವರು ನಮ್ಮ ಸಂಪರ್ಕಕ್ಕೆ ಸಿಗುತ್ತಿಲ್ಲ. ಮುಂದೇನು ಮಾಡಬೇಕು ಎಂದೇ ತಿಳಿಯುತ್ತಿಲ್ಲ’ ಎಂದು ಗದ್ಗದಿತರಾದರು ಮಧ್ಯಪ್ರದೇಶದಿಂದ ಬಂದಿದ್ದ ಜಿತೇಂದ್ರ ಸಾಹು.

‘ಪೊಲೀಸರ ಬಳಿ ಹೋದರೂ, ಕಾಣೆಯಾದವರ ನೋಂದಣಿಗಾಗಿ ತೆರೆದಿರುವ ಕೇಂದ್ರಗಳಿಗೆ ಹೋದರು ಕಾಣೆಯಾದ ನಮ್ಮವರ ಬಗ್ಗೆ ಮಾಹಿತಿ ಸಿಗುತ್ತಿಲ್ಲ’ ಎಂದರು ಬನಾರಸ್‌ನ ಜನಾರ್ದನ್ ಸಿಂಗ್. ‘ತಮ್ಮ ವೃದ್ಧ ಪೋಷಕರು, ಕುಟುಂಬಸ್ಥರನ್ನು ಕುಂಭಮೇಳಕ್ಕೆ ಕಳುಹಿಸಿ, ಊರುಗಳಲ್ಲಿರುವ ಮಕ್ಕಳ ಸಂಕಟ ನಮಗಿಂತ ಎರಡು ಪಟ್ಟು ಹೆಚ್ಚಾಗಿಯೇ ಇರುತ್ತದೆ’ ಎನ್ನುತ್ತಾರೆ ಅವರು.

## ರೈಲು ನಿಲ್ದಾಣಗಳಲ್ಲಿ ವೃದ್ಧರು



ಪ್ರಯಾಗರಾಜ್‌ನ ರೈಲು ನಿಲ್ದಾಣದಲ್ಲಿ ಗುರುವಾರ ಕಂಡ ದೃಶ್ಯ – ಪಿಟಿಐ ಚಿತ್ರ

ತಮ್ಮ ತಂಡದಿಂದ ಬೇರ್ಪಟ್ಟವರು, ಕುಟುಂಬದಿಂದ ಬೇರ್ಪಟ್ಟ ಕೆಲವರು ಒಂಟಿಯಾಗಿಯೇ ಮನೆ ಸೇರುವ ಯತ್ನವನ್ನೂ ನಡೆಸುತ್ತಿದ್ದಾರೆ. ಪ್ರಯಾಗರಾಜ್‌ನ ರೈಲು ನಿಲ್ದಾಣಗಳಲ್ಲಿ ಇಂಥ ದೃಶ್ಯಗಳು ಕಂಡು ಬರುತ್ತಿವೆ. ‘ನಾವು ನಮ್ಮ ತಂಡದಿಂದ ಬೇರ್ಪಟ್ಟಿದ್ದೇವೆ. ನಾವು ಈಗ ಹೇಗಾದರೂ ಮರಳಿ ಊರಿಗೆ ಹೋಗಬೇಕು. ಅದಕ್ಕಾಗಿ ರೈಲು ನಿಲ್ದಾಣಕ್ಕೆ ಬಂದು ನಿಂತಿದ್ದೇವೆ’ ಎಂದರು ರಾಮ್ ಸಹಾನಿ ಹಾಗೂ ಬಿಟ್ಟಾ ದೇವಿ ದಂಪತಿ.

‘ನನ್ನ ತಾಯಿಯ ಸಂಪರ್ಕ ಕಡಿದು ಹೋಗಿತ್ತು. ಎಲ್ಲಿ ಹೋದರು ಎಂದೇ ತಿಳಿಯಲಿಲ್ಲ. ಬಳಿಕ ನಮ್ಮ ಊರಿನ ಕೆಲವರು ಆಕೆಯನ್ನು ಹುಡುಕಿದ್ದಾರೆ. ಈಗ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದೇವೆ. ತಾಯಿ ವಾಪಸಾಗುತ್ತಿದ್ದಾರೆ’ ಎಂದರು ಒಡಿಶಾದ ಅಮರ್ ಕುಮಾರ್ ನಂದಿ.

## ಬಿಹಾರ: ಏಳು ಮಂದಿ ಸಾವು

ಪಟ್ನಾ: ‘ಊಹೆಗೂ ನಿಲುಕದಷ್ಟು ಜನದಟ್ಟಣೆ ಇತ್ತು. ನಿಯಂತ್ರಣವೂ ಸಾಧ್ಯವಿರಲಿಲ್ಲ. ಬುಧವಾರ ನಸುಕಿನಲ್ಲಿ ತ್ರಿವೇಣಿ ಸಂಗಮವನ್ನು ಬೇಗನೇ ತಲುಪಬೇಕು ಎಂಬ ಧಾವಂತದಲ್ಲಿದ್ದ ಕೆಲ ಯಾತ್ರಾರ್ಥಿಗಳು ತಡೆಗೋಡೆ ಹತ್ತಲು ಯತ್ನಿಸಿದಾಗ, ಅದು ಕುಸಿಯಿತು. ಈ ವೇಳೆ ಹಲವರು ಕೆಳಗೆ ಬಿದ್ದರು. ಸಾಗರೋಪಾದಿಯಲ್ಲಿ ನುಗ್ಗಿದ ಜನರು, ಬಿದ್ದವರನ್ನು ತುಳಿಯುತ್ತಾ ಸಾಗಿದರು..’

–ಮಹಾಕುಂಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ತನ್ನ ತಾಯಿಯನ್ನು ಕಳೆದುಕೊಂಡಿರುವ, ಬಿಹಾರದ ಗೋಪಾಲಗಂಜ್ ನಿವಾಸಿ ಸಂಗೀತಾ ಹೇಳುವ ಮಾತುಗಳಿವು. ‘ಮೌನಿ ಅಮಾವಾಸ್ಯೆ’ ನಿಮಿತ್ತ ಪುಣ್ಯಸ್ನಾನಕ್ಕಾಗಿ, ಶಿವಕಾಳಿ ದೇವಿ ಅವರು ತಮ್ಮ ಪುತ್ರಿ ಸಂಗೀತಾ ಅವರೊಂದಿಗೆ ಮಹಾ ಕುಂಭಕ್ಕೆ ತೆರಳಿದ್ದರು. ಅಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಶಿವಕಾಳಿ ದೇವಿ ಮೃತಪಟ್ಟದ್ದಾರೆ. ತಾಯಿಯನ್ನು ರಕ್ಷಿಸಲು ಮುಂದಾದ ಸಂಗೀತಾ ಅವರಿಗೆ ಗಾಯಗಳಾಗಿವೆ.

ಅಂದಿನ ಅವಘಡದಲ್ಲಿ, ಶಿವಕಾಳಿ ದೇವಿ ಒಳಗೊಂಡಂತೆ ಬಿಹಾರದ 7 ಮಂದಿ ಮೃತಪಟ್ಟಿದ್ದಾರೆ. ರಾಜ್ಯದ ಇತರ 11 ಮಂದಿ ಇನ್ನೂ ಪತ್ತೆಯಾಗಿಲ್ಲ.

## ಪ್ರಯಾಣ ದರದಲ್ಲಿ ಸ್ಥಿರತೆ: ಇಂಡಿಗೊ

**ನವದೆಹಲಿ (ಪಿಟಿಐ):** ಮಹಾ ಕುಂಭಕ್ಕಾಗಿ ಪ್ರಯಾಗ್‌ರಾಜ್‌ಗೆ ಸಂಚರಿಸುವ ವಿಮಾನಗಳ ಸಂಖ್ಯೆ ಹೆಚ್ಚಿಸಲಾಗಿದೆ. ಪ್ರಯಾಣ ದರದಲ್ಲಿ ಸ್ಥಿರತೆ ತರಲಾಗಿದೆ ಎಂದು ಇಂಡಿಗೊ ಗುರುವಾರ ಹೇಳಿದೆ.

ಪ್ರಯಾಣ ದರದಲ್ಲಿ ಭಾರಿ ಏರಿಕೆ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬಂದಿದ್ದವು. ಇದೇ ವಿಚಾರವಾಗಿ, ಸಚಿವ ಪ್ರಲ್ಹಾದ ಜೋಷಿ ಅವರು ನಾಗರಿಕ ವಿಮಾನ ಯಾನ ಮಹಾನಿರ್ದೇಶನಾಲಯಕ್ಕೂ (ಡಿಜಿಸಿಎ) ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ, ಇಂಡಿಗೊ ಕ್ರಮ ಕೈಗೊಂಡಿದೆ.

# ಪುಣ್ಯಸ್ನಾನಕ್ಕೆ ಹೋದವರು ಶವವಾದರು

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಪ್ರಯಾಗ್‌ರಾಜ್‌ನಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟ ಬೆಳಗಾವಿಯ ನಾಲ್ವರ ಪೈಕಿ ಇಲ್ಲಿನ ಶಿವಾಜಿ ನಗರದ ಮಹಾದೇವಿ ಬಾವನೂರ (48) ಹಾಗೂ ಶೆಟ್ಟಿಗಲ್ಲಿಯ ಅರುಣ ಕೋಪರ್ಡೆ (61) ಅವರ ಮೃತದೇಹಗಳನ್ನು ನವದೆಹಲಿಯಿಂದ ಬೆಳಗಾವಿಗೆ ಗುರುವಾರ ‘ಏರ್‌ಲಿಫ್ಟ್’ ಮಾಡಲಾಯಿತು.

ಮೃತದೇಹಗಳನ್ನು ಹೊತ್ತ ವಿಮಾನವು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಸಂಜೆ 6.20ಕ್ಕೆ ತಲುಪಿತು. ಸಂಸದರಾದ ಜಗದೀಶ ಶೆಟ್ಟರ್, ಪ್ರಿಯಾಂಕಾ ಜಾರಕಿಹೊಳಿ, ಶಾಸಕರಾದ ಅಭಯ ಪಾಟೀಲ, ಆಸೀಫ್ ಸೇಠ್, ಮಾಜಿ ಶಾಸಕ ಅನಿಲ ಬೆನಕೆ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಡಿಸಿಪಿ ರೋಹನ್ ಜಗದೀಶ್ ಅವರು ಪುಷ್ಪನಮನ ಸಲ್ಲಿಸಿದರು.

ಮೃತದೇಹಗಳನ್ನು ಆಂಬುಲೆನ್ಸ್‌ನಿಂದ ಹೊರಕ್ಕೆ ತರುತ್ತಿದ್ದಂತೆ ಕುಟುಂಬದವರ ದುಃಖ ಕಟ್ಟೆಯೊಡೆಯಿತು. ‘ಸತ್ತವರ ಮುಖ ತೋರಿಸಿ’ ಎಂದು ಸಂಬಂಧಿಕರು ಕೋರಿದರು. ‘ಸರ್ಕಾರಿ ಪ್ರಕ್ರಿಯೆ ಮುಗಿಸಿ, ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಬಳಿಕ ದೇಹಗಳನ್ನು ಹಸ್ತಾಂತರಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದರು. ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮುಗಿಸಿದ ಬಳಿಕ, ದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು.

**ಗಾಯಾಳುಗಳೂ ವಾಪಸ್:** ಕಾಲ್ತುಳಿತದಲ್ಲಿ ಗಾಯಗೊಂಡ ಅರುಣ ಕೋಪರ್ಡೆ ಅವರ ಪತ್ನಿ ಕಾಂಚನ್, ವಡಗಾವಿಯವರೇ ಆದ ಸರೋಜಿನಿ ನಡುವಿನಹಳ್ಳಿ, ಜ್ಯೋತಿ ಹಾಗೂ ಇನ್ನೊಬ್ಬ ಯುವತಿ ಕೂಡ ವಿಮಾನದ ಮೂಲಕ ಬೆಳಗಾವಿಗೆ ಬಂದರು.



ಅರುಣ ಕೋಪರ್ಡೆ ಅವರ ಶವವನ್ನು ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ತಂದಾಗ, ಅವರ ಮಕ್ಕಳು– ಬಂಧುಗಳು ದುಃಖಿಸಿದರು – ಪ್ರಜಾವಾಣಿ ಚಿತ್ರ

**ಏರ್‌ಲಿಫ್ಟ್ ಮಾಡಲು ಶವಗಳ ಮರಣೋತ್ತರ ಪರೀಕ್ಷೆ ಆಗಿರಬೇಕು. ಆದರೆ, ಸಮಯ ಸಾಲಲಿಲ್ಲ. ಉತ್ತರ ಪ್ರದೇಶ, ದೆಹಲಿ ಪೊಲೀಸರ ನೆರವಿನಿಂದ ಶವಗಳನ್ನು ತರಲಾಯಿತು**
**ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ

ಸಂಪರ್ಕ ಕಡಿತಗೊಂಡಿದ್ದ ಎಂಟು ಮಂದಿ ಕೂಡ ಅವರವರ ಕುಟುಂಬದವರ ಸಂಪರ್ಕದಲ್ಲಿದ್ದು, ಸುರಕ್ಷಿತವಾಗಿದ್ದಾರೆ. ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ, ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ ಅವರೂ ದೆಹಲಿಯ ಕರ್ನಾಟಕ ಭವನಕ್ಕೆ ಬಂದು ಎಲ್ಲರನ್ನೂ ಊರಿಗೆ ಕಳುಹಿಸಲು ಸಮನ್ವಯ ಸಾಧಿಸಿದರು.

‘ವಡಗಾವಿಯ ಜ್ಯೋತಿ ಹತ್ತರವಾಟ (44) ಹಾಗೂ ಅವರ ಪುತ್ರಿ ಮೇಘಾ (24) ಅವರ ಶವಗಳನ್ನು ದೆಹಲಿಯಿಂದ ಗೋವಾಗೆ ಏರ್‌ಲಿಫ್ಟ್ ಮಾಡಲಾಗಿದೆ’ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

**ವ್ಯಕ್ತಿ ಹೃದಯಾಘಾತದಿಂದ ಸಾವು:** ಮಹಾಕುಂಭ ಮೇಳದಲ್ಲಿ ಪಾಲ್ಗೊಂಡು ರೈಲಿನಲ್ಲಿ ಮರಳುವಾಗ ಬೆಳಗಾವಿಯ ದೇಶಪಾಂಡೆ ಗಲ್ಲಿಯ ನಿವಾಸಿ ರವಿ ಜಠಾರ (61) ಗುರುವಾರ ಹೃದಯಾಘಾತದಿಂದ ಸಾವನ್ನಪ್ಪಿದರು. ಅವರು ಕಳೆದ ಭಾನುವಾರ ಮೇಳಕ್ಕೆ ತೆರಳಿದ್ದರು.

# ‘ಮಲಗಿದ್ದವರ ಮೇಲೆ ಓಡಿದ್ದೇ ಸಾವಿಗೆ ಕಾರಣ’

ಪ್ರಜಾವಾಣಿ ವಾರ್ತೆ

**ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ):** ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದ ಟೆಂಟ್‌ಗಳಲ್ಲಿ ಮಲಗಿದ್ದವರ ಮೇಲೆ ಬುಧವಾರ ನಸುಕಿನಲ್ಲಿ ಗುಂಪೊಂದು ದಿಢೀರ್ ಓಡಿದ್ದರಿಂದ ಸಾವು, ನೋವು ಸಂಭವಿಸಿದವು’ ಎಂದು ಘಟನೆಯ ಪ್ರತ್ಯಕ್ಷದರ್ಶಿ, ಪಟ್ಟಣದ ಜ್ಯೋತಿಷಿ ವಿ. ಭಾನುಪ್ರಕಾಶ ಶರ್ಮಾ ಹೇಳಿದರು.

ಮೌನಿ ಅಮಾವಾಸ್ಯೆ ಪ್ರಯುಕ್ತ ಪುಣ್ಯ ಸ್ನಾನ ಮಾಡಲು ಬುಧವಾರ ತ್ರಿವೇಣಿ ಸಂಗಮದಲ್ಲೇ ಇದ್ದ ಶರ್ಮಾ, ತಾವು ಕಂಡ ದೃಶ್ಯವನ್ನು ‘ಪ್ರಜಾವಾಣಿ’ಗೆ ವಿವರಿಸಿದರು.

‘ಸಹಸ್ರಾರು ಮಂದಿಯ ಗುಂಪು ತ್ರಿವೇಣಿ ಸಂಗಮದತ್ತ ಏಕಾಏಕಿ ದೌಡಾಯಿಸಿ ಬಂತು. ಅದರ ಬೆನ್ನಲ್ಲೇ ಜನರ ಚೀರಾಟ, ನರಳಾಟಗಳು ಕೇಳಿ ಬಂದವು. ಕೆಲವು ನಿಮಿಷಗಳ ಬಳಿಕ ಅಂಬ್ಯುಲೆನ್ಸ್‌ಗಳು ಸೈರನ್ ಮೊಳಗಿಸುತ್ತಾ ಬಂದವು. ಓಡುತ್ತಿದ್ದವರನ್ನು ರಕ್ಷಣಾ ಸಿಬ್ಬಂದಿ ತಡೆಯುವ ವಿಫಲ ಯತ್ನ ನಡೆಸಿದರು. ಬಿದ್ದಿದ್ದವರನ್ನು ಅಂಬ್ಯುಲೆನ್ಸ್‌ಗೆ ಹಾಕಿ ಸಾಗಿಸಿದರು’ ಎಂದು ಸ್ಮರಿಸಿಕೊಂಡರು.

‘ಶ್ರೀರಂಗಪಟ್ಟಣ, ಮೈಸೂರು ಇತರ ಊರುಗಳ ಏಳೆಂಟು ಮಂದಿ ಇದ್ದ ನಮ್ಮ ತಂಡ ಪುಣ್ಯ ಸ್ನಾನಕ್ಕಾಗಿ ತ್ರಿವೇಣಿ ಸಂಗಮಕ್ಕೆ ಬಂದಿದ್ದು, ಎಲ್ಲರೂ ಸುರಕ್ಷಿತವಾಗಿದ್ದೇವೆ. ನಾವಿದ್ದ ಬ್ಯಾರಕ್‌ಗೆ ಕೂಗಳತೆ ದೂರದ ಮತ್ತೊಂದು ಬ್ಯಾರಕ್‌ನಲ್ಲಿ ಅವಘಡ ಘಟಿಸಿದೆ. ಘಟನೆ ಬಳಿಕ ಬಂದೋಬಸ್ತ್ ಹೆಚ್ಚಿಸಲಾಗಿದೆ. ಗುರುವಾರ ಯಾವುದೇ ಸಮಸ್ಯೆ ಕಂಡು ಬಂದಿಲ್ಲ’ ಎಂದು ಹೇಳಿದರು.



ವಿ. ಭಾನುಪ್ರಕಾಶ್ ಶರ್ಮಾ (ಎಡಬದಿ) ಬುಧವಾರ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದರು

# ‘ಅಮೃತ ಸ್ನಾನ’ಕ್ಕೆ ಇನ್ನು ಸರ್ಪಗಾವಲು

ಒಂದನೇ ಪುಟದಿಂದ...

ಪ್ರಮುಖ ಧಾರ್ಮಿಕ ಸ್ಥಳಗಳಾದ ಅಯೋಧ್ಯೆ, ವಾರಾಣಸಿ ಹಾಗೂ ಚಿತ್ರಕೂಟಗಳಿಗೆ ಭೇಟಿ ನೀಡುವ ಭಕ್ತರ ಸಂಖ್ಯೆ ಹೆಚ್ಚುತ್ತಿದೆ. ಹೀಗಾಗಿ, ಈ ಸ್ಥಳಗಳಲ್ಲಿ ಕೂಡ ಅಧಿಕಾರಿಗಳು ಹೆಚ್ಚು ಜಾಗ್ರತೆ ವಹಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಎಲ್ಲ ಹೊಸ ವ್ಯವಸ್ಥೆಗಳು ವಸಂತ ಪಂಚಮಿ ದಿನವಾದ ಫೆ.3ರ ವರೆಗೆ ಜಾರಿಯಲ್ಲಿ ಇರಲಿವೆ. ವಸಂತ ಪಂಚಮಿಯಂದು ಮೂರನೇ ಪ್ರಮುಖ ಸ್ನಾನ (ಅಮೃತ ಸ್ನಾನ) ನಡೆಯಲಿದೆ.

‘ವಸಂತ ಪಂಚಮಿಯಂದು ನಡೆಯುವ ‘ಅಮೃತ ಸ್ನಾನ’ಕ್ಕಾಗಿ ಭಾರಿ ಸಂಖ್ಯೆಯಲ್ಲಿ ಭಕ್ತರು ಬರುವ ನಿರೀಕ್ಷೆ ಇದ್ದು, ವ್ಯಾಪಕ ಭದ್ರತಾ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದು ಮಹಾ ಕುಂಭದ ಡಿಐಜಿ ವೈಭವ ಕೃಷ್ಣ ತಿಳಿಸಿದ್ದಾರೆ.

‘ಗುರುವಾರ ದಟ್ಟಣೆ ಕಡಿಮೆ ಇತ್ತು. ಎಲ್ಲ ಸೇತುವೆಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ’ ಎಂದೂ ತಿಳಿಸಿದ್ದಾರೆ.

**ಪರಿಶೀಲನೆ:** ಉತ್ತರ ಪ್ರದೇಶ ಮುಖ್ಯ ಕಾರ್ಯದರ್ಶಿ ಮನೋಜ್ ಕುಮಾರ್ ಸಿಂಗ್ ಹಾಗೂ ಡಿಜಿಪಿ ಪ್ರಶಾಂತಕುಮಾರ್ ಅವರು ಮಹಾ ಕುಂಭ ಮೇಳ ಪ್ರದೇಶಕ್ಕೆ ಗುರುವಾರ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು.

ಮನೋಜ್ ಕುಮಾರ್ ಸಿಂಗ್ ಹಾಗೂ ಪ್ರಶಾಂತಕುಮಾರ್ ಅವರು, ಮೇಳ ಪ್ರದೇಶದಲ್ಲಿ ನಿರ್ಮಿಸಿರುವ ಕಾವಲುಗೋಪುರವೊಂದರಲ್ಲಿ ನಿಂತು, ಪರಿಶೀಲನೆ ನಡೆಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು ಎಂದು ಮೂಲಗಳು ಹೇಳಿವೆ.

## ಘಟನಾ ಸ್ಥಳಕ್ಕೆ ಇಂದು ಆಯೋಗ

ಲಖನೌ: ಕಾಲ್ತುಳಿತ ಕುರಿತು ತನಿಖೆಗಾಗಿ ಉತ್ತರ ಪ್ರದೇಶ ಸರ್ಕಾರ ರಚಿಸಿರುವ ಮೂವರು ಸದಸ್ಯರ ನ್ಯಾಯಾಂಗ ಆಯೋಗವು, ಘಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಲಿದೆ.

‘ಕಾಲ್ತುಳಿತಕ್ಕೆ ಕಾರಣ ಪತ್ತೆಗೆ ಸಂಬಂಧಿಸಿದ ತನಿಖೆ ಪೂರ್ಣಗೊಳಿಸಲು ಆಯೋಗಕ್ಕೆ ಒಂದು ತಿಂಗಳು ಅವಕಾಶ ನೀಡಲಾಗಿದೆ. ಆದರೆ, ಆದಷ್ಟು ತ್ವರಿತವಾಗಿ ತನಿಖೆ ಪೂರ್ಣಗೊಳಿಸಲು ಯತ್ನಿಸಲಾಗುವುದು’ ಎಂದು ಆಯೋಗದ ಅಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಹರ್ಷಕುಮಾರ್ ಹೇಳಿದ್ದಾರೆ.

ನಿವೃತ್ತ ಡಿಜಿಪಿ ವಿ.ಕೆ.ಗುಪ್ತಾ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಡಿ.ಕೆ. ಸಿಂಗ್ ಅವರು ಆಯೋಗದ ಸದಸ್ಯರಾಗಿದ್ದಾರೆ.

### 2.06 ಕೋಟಿ ಭಕ್ತರಿಂದ ಪವಿತ್ರ ಸ್ನಾನ

ಗುರುವಾರ ಸೂರ್ಯೋದಯಕ್ಕೂ ಮುನ್ನ ಲಕ್ಷಾಂತರ ಭಕ್ತರು ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದರು. ಕಾಲ್ತುಳಿತದಂತಹ ಅವಘಡ ನಡೆದಿದ್ದರೂ, ಭಕ್ತರಲ್ಲಿ ಉತ್ಸಾಹ ಕುಂದಿರಲಿಲ್ಲ ಎಂಬಂತಹ ದೃಶ್ಯ ಕಂಡು ಬಂತು. ಗುರುವಾರ ರಾತ್ರಿ 8ರ ವರೆಗೆ 2.06 ಕೋಟಿ ಭಕ್ತರು ಪುಣ್ಯಸ್ನಾನ ಮಾಡಿದ್ದಾರೆ. ಮಹಾ ಕುಂಭ ಆರಂಭಗೊಂಡಾಗಿನಿಂದ ಈವರೆಗೆ 29.64 ಕೋಟಿಗೂ ಅಧಿಕ ಭಕ್ತರು ಪುಣ್ಯಸ್ನಾನ ಮಾಡಿದ್ದಾಗಿ ಉತ್ತರ ಪ್ರದೇಶ ಸರ್ಕಾರ ತಿಳಿಸಿದೆ.

**ಮೋದಿ, ಯೋಗಿ ಆದಿತ್ಯನಾಥ ಅವರು ಅವಘಡದ ನೈತಿಕ ಹೊಣೆ ಹೊತ್ತು, ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು**
**ನಾನಾ ಪಟೋಲೆ,**
ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ



ಕಾಲ್ತುಳಿತದಲ್ಲಿ ಬಲಿಯಾದ ಸಂಬಂಧಿಯ ಮೃತದೇಹದ ಬಳಿ ಯಾತ್ರಿಕರೊಬ್ಬರು ನಿಂತಿದ್ದ ದೃಶ್ಯ ಪ್ರಯಾಗರಾಜ್‌ನ ಶವಾಗಾರದ ಹೊರಭಾಗದಲ್ಲಿ ಗುರುವಾರ ಕಂಡುಬಂತು – ಎಎಫ್‌ಪಿ ಚಿತ್ರ

## ಮಹಾಕುಂಭ: 15 ಟೆಂಟ್ ಭಸ್ಮ

ಮಹಾಕುಂಭ ನಗರ(ಪಿಟಿಐ): ಮಹಾ ಕುಂಭ ಮೇಳ ಪ್ರದೇಶದ ಸೆಕ್ಟರ್ 22ರ ಹೊರವಲಯದಲ್ಲಿರುವ ಚಮನ್‌ಗಂಜ್ ಚೌಕಿಯಲ್ಲಿ ಗುರುವಾರ 15 ಟೆಂಟ್‌ಗಳು ಭಸ್ಮವಾಗಿದ್ದು, ಯಾವುದೇ ಪ್ರಾಣ ಹಾನಿಯಾಗಿಲ್ಲ.

‘ಅವಘಡದ ಮಾಹಿತಿ ಬಂದ ತಕ್ಷಣ ಸ್ಥಳಕ್ಕೆ ತೆರಳಿದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ’ ಎಂದು ಮುಖ್ಯ ಅಗ್ನಿ ಅಧಿಕಾರಿ (ಕುಂಭ) ಪ್ರಮೋದ್ ಶರ್ಮಾ ತಿಳಿಸಿದ್ದಾರೆ.

‘ಜಿಲ್ಲಾಡಳಿತದ ಪ್ರಕಾರ, ಈ ಟೆಂಟ್‌ಗಳನ್ನು ಅಕ್ರಮವಾಗಿ ನಿರ್ಮಾಣ ಮಾಡಲಾಗಿತ್ತು. ಅಗ್ನಿ ಅವಘಡಕ್ಕೆ ಕಾರಣ ಗೊತ್ತಾಗಿಲ್ಲ’ ಎಂದೂ ತಿಳಿಸಿದ್ದಾರೆ.

## ಅಧಿಕೃತ ಮಾಹಿತಿ ಇಲ್ಲ: ಕೃಷ್ಣ ಬೈರೇಗೌಡ

ಬೆಂಗಳೂರು: ಕುಂಭಮೇಳದಲ್ಲಿ ಕಾಲ್ತುಳಿತದಿಂದ ಮೃತರಾದವರು ಹಾಗೂ ಗಾಯಗೊಂಡವರ ಕುರಿತು ಉತ್ತರ ಪ್ರದೇಶ ಸರ್ಕಾರದಿಂದ ಅಧಿಕೃತ ಮಾಹಿತಿ ದೊರೆತಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, ‘ನಮ್ಮ ಸಹಾಯವಾಣಿಗೆ ಬಂದ ಕರೆಗಳು, ಸಂತ್ರಸ್ತರ ಕುಟುಂಬದವರು ನೀಡಿದ ಮಾಹಿತಿ ಆಧಾರದಲ್ಲೇ ನೆರವಿಗೆ ಮುಂದಾಗಿದ್ದೇವೆ. ಅಲ್ಲಿನ ಮಾಹಿತಿ ಸಂಗ್ರಹಿಸಲು ಐಎಎಸ್ ಅಧಿಕಾರಿ ಬೋಯರ್ ಹರ್ಷಲ್ ನಾರಾಯಣ್‌ರಾವ್ ಅವರನ್ನು ಕಳುಹಿಸಿಕೊಡಲಾಗಿದೆ’ ಎಂದರು.

# ಮಹಾಕುಂಭ ದುರಂತ: ಚರ್ಚೆಗೆ ಆಗ್ರಹ

ಪ್ರಜಾವಾಣಿ ವಾರ್ತೆ/ಪಿಟಿಐ



**ನವದೆಹಲಿ:** ಪ್ರಸಕ್ತ ಸಾಲಿನ ಬಜೆಟ್ ಅಧಿವೇಶನ ಶುಕ್ರವಾರದಿಂದ ಆರಂಭವಾಗುತ್ತಿದ್ದು, ಮಹಾಕುಂಭ ದುರಂತ ಸೇರಿ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ.

ಮಹಾಕುಂಭ ಮೇಳದಲ್ಲಿನ ಕಾಲ್ತುಳಿತದ ಬಗ್ಗೆ ವ್ಯಾಪಕ ಚರ್ಚೆ ನಡೆಸುವಂತೆ ಆಗ್ರಹಿಸಿರುವ ಪ್ರತಿಪಕ್ಷಗಳು, ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಯೋಜಿಸಿವೆ.

ಜಂಟಿ ಸದನವನ್ನು ಉದ್ದೇಶಿಸಿ ರಾಷ್ಟ್ರಪತಿ ಅವರು ಮೊದಲ ದಿನ ಭಾಷಣ ಮಾಡಲಿದ್ದು, ಶನಿವಾರ ಬಜೆಟ್ ಮಂಡನೆ ಆಗಲಿದೆ. ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಬಳಿಕ ಅಧಿವೇಶನದ ಮೊದಲ ಹಂತವು ಫೆಬ್ರುವರಿ 13ರಂದು ಕೊನೆಗೊಳ್ಳಲಿದೆ.

**ಸರ್ವ ಪಕ್ಷ ಸಭೆ:** ಅಧಿವೇಶನ ಆರಂಭದ ಹಿಂದಿನ ದಿನವಾದ ಗುರುವಾರ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರು, ಮಹಾಕುಂಭ ದುರಂತ, ಒಕ್ಕೂಟ ವ್ಯವಸ್ಥೆ, ವಿವಾದಾತ್ಮಕ ಯುಜಿಸಿ ಕರಡು ಮಾರ್ಗಸೂಚಿ, ಸಂಸತ್ತಿನ ಪರಿಕರಗಳನ್ನು ಬಳಸಲು ಸಂಸದರಿಗೆ ಇರುವ ಅವಕಾಶಗಳು ಕ್ರಮೇಣ ಕಡಿಮೆ ಆಗಿರುವ ಕುರಿತು ಹಾಗೂ ವಕ್ಫ್ (ತಿದ್ದುಪಡಿ) ಮಸೂದೆ ಬಗ್ಗೆಗಿನ ಸಂಸದೀಯ ಸಮಿತಿಯ ಕಾರ್ಯ ನಿರ್ವಹಣೆ ಕುರಿತ ದೂರುಗಳ ಬಗ್ಗೆ ಚರ್ಚೆಗೆ ಅವಕಾಶ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

**ವಿಐಪಿ ಸಂಸ್ಕೃತಿ ಬಗ್ಗೆ ತರಾಟೆ:** ‘ಆಡಳಿತದಲ್ಲಿ ಇರುವವರಿಗೆ ವಿಐಪಿಗಳೇ ಮುಖ್ಯವಾಗಿದ್ದಾರೆ. ಸಾಮಾನ್ಯ ಯಾತ್ರಿಕರನ್ನು ನಿರ್ಲಕ್ಷಿಸುತ್ತಿದ್ದಾರೆ’ ಎಂದು ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್ ದೂರಿದರು.

## ಸ್ಪೀಕರ್‌ಗೆ ವರದಿ ಸಲ್ಲಿಸಿದ ಜೆಪಿಸಿ

ವಕ್ಫ್ (ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸಿರುವ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನ್ನ ವರದಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಗುರುವಾರ ಸಲ್ಲಿಸಿತು. ಸಮಿತಿಯ ಅಧ್ಯಕ್ಷರಾದ ಜಗದಾಂಬಿಕಾ ಪಾಲ್ ಅವರು ವರದಿಯಲ್ಲಿ ಹಸ್ತಾಂತರಿಸಿದರು. ಜೆಪಿಸಿ 15-11 ಬಹುಮತದಿಂದ ಕರಡು ಶಾಸನದ ವರದಿಯನ್ನು ಬುಧವಾರ ಅಂಗೀಕರಿಸಿತ್ತು.

# ‘ಯಮುನೆಗೆ ವಿಷ’: ಇ.ಸಿ ಕಿಡಿ

ಪ್ರಜಾವಾಣಿ ವಾರ್ತೆ/ಪಿಟಿಐ

**ನವದೆಹಲಿ:** ಯಮುನಾ ನದಿಗೆ ಹರಿಯಾಣ ಸರ್ಕಾರ ವಿಷ ಬೆರೆಸುತ್ತಿದೆ ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮಾಡಿರುವ ಆರೋಪವು ಜನರ ಮನಸಿನಲ್ಲಿ ‘ಶಾಶ್ವತ ಗಾಯ’ವನ್ನುಂಟು ಮಾಡಬಹುದು ಎಂದು ಚುನಾವಣಾ ಆಯೋಗ (ಇಸಿ) ಗುರುವಾರ ಹೇಳಿದೆ. ಈ ಆರೋಪದ ಬಗ್ಗೆ ಸೂಕ್ತ ವಿವರಣೆ ನೀಡಲು ಕೇಜ್ರಿವಾಲ್ ಅವರಿಗೆ ಮತ್ತೊಂದು ನೋಟಿಸ್ ನೀಡಿದೆ.

ಬಿಜೆಪಿ ಆಡಳಿತವಿರುವ ಹರಿಯಾಣ ರಾಜ್ಯದಿಂದ ಇತ್ತೀಚಿನ ದಿನಗಳಲ್ಲಿ ಪಡೆದ ನೀರು ಅತ್ಯಂತ ವಿಷಕಾರಿಯಾಗಿದ್ದು, ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾಗಿದೆ ಎಂದು ಕೇಜ್ರಿವಾಲ್ ಅವರು ಇಸಿಯ ಮೊದಲ ನೋಟಿಸ್‌ಗೆ ನೀಡಿರುವ 14 ಪುಟಗಳ ಉತ್ತರದಲ್ಲಿ ಪ್ರತಿಕ್ರಿಯಿಸಿದ ಮರು ದಿನವೇ ಇಸಿ ಈ ರೀತಿ ಹೇಳಿದೆ.

ಇಸಿಯ ಈ ನಡೆಗೆ ಕಿಡಿಕಾರಿರುವ ಕೇಜ್ರಿವಾಲ್, ‘ಇಸಿ ಮುಖ್ಯಸ್ಥ ರಾಜೀವ್‌ಕುಮಾರ್ ಅವರು ರಾಜಕೀಯ ಆಟ ಆಡುತ್ತಿದ್ದಾರೆ. ಅವರು ಇಸಿಯ ವಿಶ್ವಾಸಾರ್ಹತೆಯನ್ನು ನಾಶ ಪಡಿಸುತ್ತಿದ್ದಾರೆ. ಅಲ್ಲದೆ, ನಿವೃತ್ತಿಯ ನಂತರ ಅಧಿಕಾರ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ’ ಎಂದು ಆರೋಪಿಸಿದರು.

ಇಸಿಯಿಂದ ಎರಡನೇ ನೋಟಿಸ್ ಬರುತ್ತಿದ್ದಂತೆ ಕೇಜ್ರಿವಾಲ್, ‘ಎಎಪಿಯ ಪ್ರತಿಸ್ಪರ್ಧಿ ಅಭ್ಯರ್ಥಿಗಳ ಹಣ ಹಂಚಿಕೆ ಮತ್ತು ಇನ್ನಿತರ ಉಡುಗೊರೆಗಳಿಗೆ ಮತದಾರರರು ಮಾರುಹೋಗುವುದು ಕಾಣಿಸುತ್ತಿಲ್ಲ. ಹಾಗಾಗಿ, ಇಸಿ ಇಂತಹ ರಾಜಕೀಯ ಆಟ ಆಡುತ್ತಿದೆ’ ಎಂದು ಆರೋಪಿಸಿದರು.

**ಕೇಜ್ರಿವಾಲ್ ಉತ್ತರಕ್ಕೆ ಇಸಿ ಅತೃಪ್ತಿ:** ಕೇಜ್ರಿವಾಲ್ ಅವರು ನೋಟಿಸ್‌ಗೆ ನೀಡಿರುವ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಇಸಿ, ‘ನದಿ ನೀರು ವಿಷಮಯವಾಗುತ್ತಿರುವುದು ಮತ್ತು ಹೆಚ್ಚುತ್ತಿರುವ ಅಮೋನಿಯಾ ಬಳಕೆ ಚಾಲ್ತಿಯಲ್ಲಿರುವ, ದೀರ್ಘಕಾಲದ ಹಾಗೂ ಕಾನೂನಾತ್ಮಕವಾದ ಆಡಳಿತ ಸಮಸ್ಯೆಯಾಗಿದೆ. ಇದನ್ನು ಬೆರೆಸುವುದು ಸರಿಯಲ್ಲ’ ಎಂದು ಕೇಜ್ರಿವಾಲ್ ಅವರಿಗೆ ಹೇಳಿದೆ.

ಅಲ್ಲದೆ, ಕೇಜ್ರಿವಾಲ್ ಮಾಡಿರುವ ಆರೋಪಗಳು ಜನರ ನಡುವೆ ದ್ವೇಷವನ್ನು ಪ್ರಚೋದಿಸುತ್ತವೆ. ಸಾರ್ವಜನಿಕ ಶಾಂತಿಗೂ ಭಂಗ ತರಲಿವೆ. ತಮ್ಮ ಆರೋಪಗಳಿಗೆ ಸಂಬಂಧಿಸಿ ಸೂಕ್ತ ಸಾಕ್ಷ್ಯ ಮತ್ತು ವಿವರಣೆಯನ್ನು ಅವರು ನೀಡಬೇಕೆಂದು ಇಸಿ ಎರಡನೇ ನೋಟಿಸ್‌ನಲ್ಲಿ ತಾಕೀತು ಮಾಡಿದೆ.

ಏತನ್ಮಧ್ಯೆ ಕೇಜ್ರಿವಾಲ್ ಅವರ ಹೇಳಿಕೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಕಿಡಿಕಾರಿದ್ದಾರೆ.

- ಚುನಾವಣಾ ಆಯೋಗದ (ಇಸಿ) ಅಧಿಕಾರಿಗಳ ತಂಡವು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ ನಿವಾಸದಲ್ಲಿ ಶೋಧ ನಡೆಸಲು ಹೋಗಿದೆ ಎಂದು ಎಎಪಿ ಆರೋಪಿಸಿದೆ. ‘ಪಂಜಾಬ್ ಸರ್ಕಾರ’ದ ಸ್ಟಿಕ್ಕರ್ ಮತ್ತು ರಾಜ್ಯದ ನೋಂದಣಿಯ ಖಾಸಗಿ ವಾಹನವನ್ನು ದೆಹಲಿ ಪೊಲೀಸರು ವಶಪಡಿಸಿಕೊಂಡ ಒಂದು ದಿನದ ನಂತರ ಈ ಬೆಳವಣಿಗೆ ನಡೆದಿದೆ
- ಅರವಿಂದ ಕೇಜ್ರಿವಾಲ್ ಅವರ ನಿವಾಸದ ಎದುರು ಕಸ ಸುರಿದು ಪ್ರತಿಭಟಿಸಿದ, ಎಎಪಿ ಬಂಡಾಯ ನಾಯಕಿ ಹಾಗೂ ರಾಜ್ಯಸಭೆ ಸದಸ್ಯೆ ಸ್ವಾತಿ ಮಾಲಿವಾಲ್ ಅವರನ್ನು ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ

## ಕೇಜ್ರಿವಾಲ್ ಸಮರ್ಥನೆ

ಆರೋಪ ಸಮರ್ಥಿಸಿಕೊಂಡಿರುವ ಕೇಜ್ರಿವಾಲ್, ಬಿಜೆಪಿ ಮತ್ತು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. ‘ಅತಿ ಹೆಚ್ಚು ಅಮೋನಿಯಾ ಇರುವ ಮತ್ತು ಕ್ಲೋರಿನ್‌ನಿಂದ ಸಂಸ್ಕರಿಸಿರುವ ಈ ನೀರನ್ನು ಬಾಟಲಿಯಲ್ಲಿ ತುಂಬಿ ಗೃಹ ಸಚಿವ ಅಮಿತ್ ಶಾ, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಶೈನಿ, ದೆಹಲಿ ಬಿಜೆಪಿ ಘಟಕದ ಮುಖ್ಯಸ್ಥ ಸಚ್‌ದೇವ್ ಹಾಗೂ ರಾಹುಲ್ ಗಾಂಧಿ ಅವರಿಗೆ ಕಳುಹಿಸುತ್ತೇವೆ. ಇವರೆಲ್ಲರೂ ಸಾರ್ವಜನಿಕರ ಎದುರು ಈ ನೀರನ್ನು ಕುಡಿಯುವ ಧೈರ್ಯ ಮಾಡಲಿ’ ಎಂದು ಸವಾಲು ಹಾಕಿದರು.

**ನಾನು ಜೀವಂತವಾಗಿರುವವರೆಗೂ ದೆಹಲಿಯ ಜನರು ವಿಷಕಾರಿ ನೀರು ಕುಡಿಯಲು ಬಿಡುವುದಿಲ್ಲ. ನನ್ನನ್ನು 2 ದಿನಗಳಲ್ಲಿ ಬಂಧಿಸುತ್ತಾರೆಂಬುದು ಗೊತ್ತು. ಆದರೆ ನಾನು ಹೆದರಲ್ಲ**
**ಅರವಿಂದ ಕೇಜ್ರಿವಾಲ್,** ಎಎಪಿ ಮುಖ್ಯಸ್ಥ

**ಯಮುನೆ ಮಲೀನಕ್ಕೆ ಅವಕಾಶ ಮಾಡಿಕೊಟ್ಟಿದ್ದು ಕೇಜ್ರಿವಾಲ್ ಮತ್ತು ದೆಹಲಿಯ ಜನರು ವಿಷಯುಕ್ತ ನೀರು ಕುಡಿಯುವಂತೆ ಮಾಡಿದ್ದೂ ಅವರೇ**
**ಅಮಿತ್ ಶಾ,** ಕೇಂದ್ರ ಗೃಹ ಸಚಿವ

# ದೆಹಲಿ: ‘ಮೃದು–ಉಗ್ರ ಹಿಂದುತ್ವ’ದ ಹಣಾಹಣಿ

• ಮಂಜುನಾಥ ಹೆಬ್ಬಾರ್

## ಯಾರಿಗೆ ಗೆಲುವಿನ ಹಾರ




**ನವದೆಹಲಿ:** ದೆಹಲಿ ಚುನಾವಣಾ ಅಖಾಡದಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ‘ಮೃದು ಹಿಂದುತ್ವ’ ಹಾಗೂ ಬಿಜೆಪಿಯ ‘ಉಗ್ರ ಹಿಂದುತ್ವ’ದ ಹಣಾಹಣಿ ಏರ್ಪಟ್ಟಿದೆ. ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ಕಿತ್ತಾಟದಿಂದ ತನಗೆ ಲಾಭವಾಗಲಿದೆ ಎಂಬ ನಿರೀಕ್ಷೆಯಲ್ಲಿ ಕಮಲ ಪಾಳಯ ಇದೆ.

ದಶಕದ ಹಿಂದೆ ರಾಜಕಾರಣದಲ್ಲಿ ಹೊಸ ಗಾಳಿ ಹಾಗೂ ನವ ಬೆಳಕಿನ ಅನುಭವ ನೀಡಿದ್ದ ಆಮ್ ಆದ್ಮಿ ಪಕ್ಷವು (ಎಎಪಿ) ಹೊಸ ರಾಜಕಾರಣದ ಪರಿಭಾಷೆಯಿಂದ ದೂರ ಸರಿದು ವರ್ಷಗಳೇ ಕಳೆದಿವೆ. ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲೇ ಪ್ರವರ್ಧಮಾನಕ್ಕೆ ಬಂದ ಪಕ್ಷಕ್ಕೆ ಅಬಕಾರಿ ನೀತಿ ಹಗರಣದ ಕಳಂಕವು ಅಂಟಿಕೊಂಡಿದೆ. ‘ಮದ್ಯದ ನಶೆ’ಯಿಂದಾಗಿ ಕೇಜ್ರಿವಾಲ್, ಮನೀಷ್ ಸಿಸೋಡಿಯಾ, ಸಂಜಯ್ ಸಿಂಗ್ ಮತ್ತಿತರ ನಾಯಕರು ಜೈಲುವಾಸ ಅನುಭವಿಸಿ ಬಂದಿದ್ದಾರೆ. ದೆಹಲಿಯನ್ನು ಒಂದು ದಶಕ ಆಳಿದ್ದ ಕೇಜ್ರಿವಾಲ್ ಪಕ್ಷಕ್ಕೆ ಆಡಳಿತ ವಿರೋಧಿ ಅಲೆಯ ಬಿಸಿಯೂ ಬಲವಾಗಿ ತಟ್ಟಿದೆ. ಇದಕ್ಕಾಗಿ ಮೃದು ಹಿಂದುತ್ವವಾದಕ್ಕೆ ಪಕ್ಷ ಮೊರೆ ಹೋಗಿದೆ.

ದೆಹಲಿಯಲ್ಲಿ ಎಎಪಿಯ ಯಶಸ್ಸಿನ ಭಾರಿ ಅಲೆಗೆ ಬಡವರು, ಹಿಂದುಳಿದವರು ಹಾಗೂ ಮುಸ್ಲಿಮರ ಮತಗಳೇ ಪ್ರಮುಖ ಕಾರಣ. ರಾಜ್ಯದಲ್ಲಿ ಕಾಂಗ್ರೆಸ್‌ಗೆ ಪ್ರಬಲ ನೆಲೆ ಇಲ್ಲ. ಹೀಗಾಗಿ, ವಿಧಾನಸಭಾ ಚುನಾವಣೆಯಲ್ಲಿ ಅನಿವಾರ್ಯವಾಗಿ ಮುಸ್ಲಿಮರು ಎಎಪಿಗೆ ಮತ ಚಲಾಯಿಸುತ್ತಾರೆ ಎಂಬುದನ್ನು ಅಂಕಿ ಅಂಶಗಳು ಬೊಟ್ಟು ಮಾಡುತ್ತವೆ. ಆದರೆ, ಲೋಕಸಭಾ ಚುನಾವಣೆಯಲ್ಲಿ ಅವರ ಒಲವು ‘ಕೈ’ ಕಡೆಗೆ. ಇದರಿಂದಾಗಿ, ಕಾಂಗ್ರೆಸ್ ಮತ ಪ್ರಮಾಣ ಒಂದಂಕಿಯಿಂದ ಶೇ 20ರ ಆಸುಪಾಸಿಗೆ ಜಿಗಿಯುತ್ತದೆ. ಈ ಚುನಾವಣೆಯಲ್ಲೂ ಮುಸ್ಲಿಂ ಮತಗಳು ಖಚಿತ ಎಂಬ ವಿಶ್ವಾಸ ಇಟ್ಟುಕೊಂಡಿರುವ ಕೇಜ್ರಿವಾಲ್ ಪಕ್ಷವು ಹಿಂದೂ ಮತ ಬ್ಯಾಂಕ್ ಅನ್ನು ಭದ್ರಗೊಳಿಸಲು ಹಲವು ಬಗೆಯ ಕಸರತ್ತು ನಡೆಸಿದೆ.

ಎಎಪಿಯು ಮೃದು ಹಿಂದುತ್ವದ ಹಾದಿ ತುಳಿದು ಹಲವು ಸಮಯ ಆಗಿದೆ. ಈ ಪಕ್ಷವನ್ನು ಬಿಜೆಪಿಯ ‘ಬಿ–ಟೀಮ್’ ಎಂದು ಕಾಂಗ್ರೆಸ್ ಮತ್ತಿತರ ಪಕ್ಷಗಳು ಟೀಕಿಸುವುದುಂಟು. ಅಭಿವೃದ್ಧಿ ಚಟುವಟಿಕೆಗೆ ಅನಾದರ, ಮಾಲಿನ್ಯ ನಿಯಂತ್ರಣದಲ್ಲಿ ವಿಫಲ ಮತ್ತಿತರ ಆರೋಪಗಳನ್ನು ಬೆನ್ನಿಗಂಟಿಸಿಕೊಂಡಿರುವ ಎಎಪಿಗೆ ಈಗ ಕೇಜ್ರಿವಾಲ್ ಪ್ರಭಾವಳಿಯೇ ಆಸರೆ. ಕಲ್ಯಾಣ ಕಾರ್ಯಗಳ ‘ಗ್ಯಾರಂಟಿ’ ಮತಗಳಿಂದ ಕಳೆದೆರಡು ಚುನಾವಣೆಗಳಲ್ಲಿ ಸಲೀಸಾಗಿ ಗೆದ್ದಿದ್ದ ಕೇಜ್ರಿವಾಲ್ ತಂಡಕ್ಕೆ ಈ ಸಲ ಗೆಲುವು ಸುಲಭದ ತುತ್ತಲ್ಲ. ಚುನಾವಣಾ ಅಖಾಡದಲ್ಲಿ ಬಿಜೆಪಿಯ ‘ಉಗ್ರ ಹಿಂದುತ್ವ’ದ ಪ್ರಚಾರಕ್ಕೆ ಕೇಜ್ರಿವಾಲ್ ಅವರದ್ದು ಮೃದು ಹಿಂದುತ್ವದ ಅಸ್ತ್ರ. ಅದಕ್ಕೆ ಹೊಚ್ಚ ಹೊಸ ಸೇರ್ಪಡೆ ಯಮುನಾ ನದಿ ಮಾಲಿನ್ಯ ವಿಚಾರ. ಹರಿಯಾಣದ ಬಿಜೆಪಿ ಸರ್ಕಾರವು ಯಮುನಾ ನದಿಗೆ ವಿಷ ಬೆರೆಸುತ್ತಿದೆ ಎಂಬುದು ಅವರ ಗಂಭೀರ ಆರೋಪ.

ದೆಹಲಿಯಲ್ಲಿ ವಿಧಾನಸಭಾ ಚುನಾವಣೆಯ ಬಿಸಿ ಏರುತ್ತಿದ್ದ ಸಮಯವದು. ವಕ್ಫ್ ಮಂಡಳಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಇಮಾಮರು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ನಿವಾಸದ ಬಳಿ ಪ್ರತಿಭಟನೆ ನಡೆಸಿದರು. ಆ ಹೊತ್ತಿನಲ್ಲೇ, ದೇವಸ್ಥಾನದ ಅರ್ಚಕರಿಗೆ ಹಾಗೂ ಗುರುದ್ವಾರದ ಗ್ರಂಥಿಗಳಿಗೆ ತಿಂಗಳಿಗೆ ₹18 ಸಾವಿರ ನೀಡುವುದಾಗಿ ಕೇಜ್ರಿವಾಲ್ ಘೋಷಿಸಿದರು. ಇದರಿಂದ ಕುಪಿತಗೊಂಡ ಕೆಲವು ಇಮಾಮರು, ‘ಎಎಪಿ ನಾಯಕರು ನಮಗೆ ಚಿಕ್ಕಾಸಿನ ಸಹಾಯ ಮಾಡಲಿಲ್ಲ. ನೆರವು ಕೇಳದೇ ಇದ್ದವರಿಗೆ ಭರಪೂರ ಅನುದಾನ ಪ್ರಕಟಿಸಿದರು. ಚುನಾವಣಾ ಲಾಭಕ್ಕಾಗಿ ತುಷ್ಟೀಕರಣದ ರಾಜಕಾರಣ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ‘ನಾವಿರುವುದು ಕೆಲವೇ ಮಂದಿ. ನಮಗೆ ಕೊಡಲು ಸಣ್ಣ ಮೊತ್ತ ಸಾಕಿತ್ತು. ಅಷ್ಟೊಂದು ಔದಾರ್ಯ ತೋರಲಿಲ್ಲ’ ಎಂದೂ ಅಸಮಾಧಾನ ಸೂಚಿಸಿದರು.

**ಪ್ರಜಾ ಮತ ಜನತಂತ್ರದ ಹಬ್ಬ**

ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ರೋಹಿಂಗ್ಯಾ ಸಮುದಾಯದ ನಿರಾಶ್ರಿತರನ್ನು ಗಡಿಪಾರು ಮಾಡಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಅಬ್ಬರಿಸಿದ್ದಾರೆ. ಇದಕ್ಕೆ ಕೇಜ್ರಿವಾಲ್ ಅವರದ್ದು ತಣ್ಣನೆಯ ಪ್ರತಿಕ್ರಿಯೆ. ‘ದೆಹಲಿಯಲ್ಲಿ ರೋಹಿಂಗ್ಯಾ ನಿರಾಶ್ರಿತರು ನೆಲಸಲು ಬಿಜೆಪಿಯೇ ಕಾರಣ. ಚುನಾವಣಾ ಲಾಭಕ್ಕಾಗಿ ಗಡಿಪಾರು ಮಾಡುವ ನಾಟಕ ಆಡುತ್ತಿದೆ’ ಎಂಬುದು ಅವರ ದೂರು. ದೆಹಲಿ ಮುಖ್ಯಮಂತ್ರಿ ಆತಿಶಿ ಅವರು ತಮ್ಮ ನಾಯಕನಿಗಿಂತ ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದಾರೆ. ‘ದೆಹಲಿ ಶಾಲೆಗಳಲ್ಲಿ ಅಕ್ರಮ ವಲಸಿಗರ ಮಕ್ಕಳಿಗೆ ಪ್ರವೇಶ ನೀಡಬಾರದು. ಇದರಿಂದ ದೆಹಲಿ ನಾಗರಿಕರ ಮಕ್ಕಳಿಗೆ ಅನ್ಯಾಯವಾಗಲಿದೆ’ ಎಂಬುದು ಅವರ ವಾದ.

**ಬದಲಾದೀತೇ ‘ದೇಶಕ್ಕೆ ಮೋದಿ, ದೆಹಲಿಗೆ ಕೇಜ್ರಿವಾಲ್’ ಸೂತ್ರ:** 2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ದೆಹಲಿಯ ಎಲ್ಲ ಏಳು ಲೋಕಸಭಾ ಚುನಾವಣೆಗಳನ್ನು ಬಾಚಿಕೊಂಡಿದ್ದ ಬಿಜೆಪಿಗೆ ವಿಧಾನಸಭಾ ಚುನಾವಣೆಗಳಲ್ಲಿ ಚಮತ್ಕಾರ ಮಾಡಲು ಸಾಧ್ಯವಾಗಿಲ್ಲ. 2015ರಲ್ಲಿ ಮೂರು ಹಾಗೂ 2020ರಲ್ಲಿ ಎಂಟು ಸ್ಥಾನಗಳಿಗಷ್ಟೇ ತೃಪ್ತಿಪಟ್ಟುಕೊಂಡಿತ್ತು. ಕಳೆದೊಂದು ದಶಕದಲ್ಲಿ ಇಲ್ಲಿನ ಮತದಾರರು ‘ದೇಶಕ್ಕೆ ಮೋದಿ, ದೆಹಲಿಗೆ ಕೇಜ್ರಿವಾಲ್’ ಎಂಬ ಸೂತ್ರ ಪಾಲಿಸಿಕೊಂಡು ಬಂದವರು. ಬಿಜೆಪಿಯ ಕಟ್ಟರ್ ಮತದಾರರು ಕೂಡಾ ವಿಧಾನಸಭಾ ಚುನಾವಣೆಯಲ್ಲಿ ಅಲ್ಪ ನಿಷ್ಠೆ ಬದಲಿಸುತ್ತಿರುವುದರಿಂದ ಎಎಪಿ ಐತಿಹಾಸಿಕ ವಿಜಯ ಸಾಧಿಸುತ್ತಾ ಬಂದಿದೆ. ಎಎಪಿ ಸರ್ಕಾರದ ‘ಉಚಿತ ಯೋಜನೆ’ಗಳ ಆಕರ್ಷಣೆಯೇ ಅವರನ್ನು ಹಿಡಿದಿಟ್ಟುಕೊಂಡಿದೆ. ಆ ಮತ ಬ್ಯಾಂಕ್ ಕೈತಪ್ಪದಂತೆ ನೋಡಿಕೊಳ್ಳಲು ಕೇಜ್ರಿವಾಲ್ ಅವರು ಈ ಸಲ 15 ಗ್ಯಾರಂಟಿಗಳನ್ನು ಘೋಷಿಸಿದ್ದಾರೆ.

# ಅಗರವಾಲ್ ಆಟ: ರಾಹುಲ್ ನೋಟ

## ರಣಜಿ ಟ್ರೋಫಿ: ಹರಿಯಾಣ ವಿರುದ್ಧ ಕರ್ನಾಟಕ ಎಚ್ಚರಿಕೆಯ ಆಟ • ಅನುಜ್, ಕಾಂಭೋಜ್ ಮಿಂಚು

• ಗಿರೀಶ ದೊಡ್ಡಮನಿ

**ಬೆಂಗಳೂರು:** ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೆ.ಎಲ್. ರಾಹುಲ್ ಆಟ ನೋಡಲು ಬಂದಿದ್ದವರಿಗೆ ಮಯಂಕ್ ಅಗರವಾಲ್ ಚೆಂದದ ಬ್ಯಾಟಿಂಗ್ ಕಣ್ತುಂಬಿಕೊಳ್ಳುವ 'ಬೋನಸ್' ಕೂಡ ಲಭಿಸಿತು.

ಹರಿಯಾಣ ಬೌಲರ್‌ಗಳು ಒಡ್ಡಿದ ಕಠಿಣ ಸವಾಲನ್ನು ಎದುರಿಸಿ ನಿಂತ ನಾಯಕ ಮಯಂಕ್ ಅವರು ಕ್ರಿಕೆಟ್ ಪ್ರಿಯರನ್ನು ಮನರಂಜಿಸಿದರು. ಅವರು ಕೇವಲ 9 ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರೂ 'ಆಕ್ರಮಣಕಾರಿ ಶೈಲಿ'ಯ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ಸಮಾಧಾನಕರ ಮೊತ್ತ ಗಳಿಸುವಲ್ಲಿ ಸಫಲವಾಯಿತು.

ಗುರುವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಟೂರ್ನಿಯ 'ಸಿ' ಗುಂಪಿನ ಕೊನೆಯ ಪಂದ್ಯದ ಮೊದಲ ದಿನದಾಟದಲ್ಲಿ ಹರಿಯಾಣ ಎದುರು ಕರ್ನಾಟಕ 89 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 267 ರನ್ ಗಳಿಸಿತು.

ಬೆಳಿಗ್ಗೆ ಎಳೆಬಿಸಿಲಿನಲ್ಲಿ ಟಾಸ್ ಗೆದ್ದ ಹರಿಯಾಣ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹೋದ ವಾರ ಇಲ್ಲಿಯೇ ನಡೆದಿದ್ದ ರಣಜಿ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ್ದ ಪಂಜಾಬ್ 55 ರನ್‌ಗಳಿಗೆ ಸರ್ವಪತನವಾಗಿತ್ತು. ಹರಿಯಾಣ ಕೂಡ ಕರ್ನಾಟಕವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವ ಯೋಚನೆಯಲ್ಲಿತ್ತು. ಆದರೆ, ಆ ಪಂದ್ಯದಲ್ಲಿ ಪಿಚ್ ಮೇಲೆ ಇದ್ದ ಹಸಿರು ಗರಿಕೆಗಳು ಈ ಪಂದ್ಯದಲ್ಲಿ ಇರಲಿಲ್ಲ!

ಅದರಿಂದಾಗಿ ಮೊದಲ 20 ಓವರ್‌ಗಳಲ್ಲಿ ವಿಕೆಟ್ ಪತನವಾಗದಂತೆ ಮಯಂಕ್ ಮತ್ತು ಕೆ.ವಿ. ಅನೀಶ್ ನೋಡಿಕೊಂಡರು. ಬಹಳ ಎಚ್ಚರಿಕೆಯಿಂದ ಮೊದಲ ವಿಕೆಟ್‌ಗೆ 45 ರನ್ ಸೇರಿಸಿದರು. ಈ ಪಂದ್ಯದಲ್ಲಿ ಜಯಿಸುವುದು ಅತ್ಯಗತ್ಯವಾಗಿರುವುದರಿಂದ ಬ್ಯಾಟರ್‌ಗಳು ಜವಾಬ್ದಾರಿಯುತವಾಗಿ ಆಡಿದರು. ಅನೀಶ್ 67 ಎಸೆತಗಳಲ್ಲಿ 17 ರನ್ ಗಳಿಸಿದರು. ಇನ್ನೊಂದೆಡೆ ಮಯಂಕ್ ಅವರು ಕ್ರೀಸ್‌ನಿಂದ ಹೊರಬಂದು ಎಸೆತಗಳನ್ನು ಬೌಂಡರಿಗೆ ಕಳಿಸುವತ್ತ ಮಗ್ನರಾಗಿದ್ದರು.

ಹರಿಯಾಣದ ವೇಗಿ ಅನ್ಷುಲ್ ಕಾಂಭೋಜ್ ಅವರು 21ನೇ ಓವರ್‌ನಲ್ಲಿ ಅನೀಶ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಚಲನ ಮೂಡಿತು. ಡ್ರೆಸಿಂಗ್ ರೂಮ್‌ನಿಂದ ಹೊರಬಂದ ಕೆ.ಎಲ್. ರಾಹುಲ್ ಪಿಚ್‌ನತ್ತ ಹೆಜ್ಜೆ ಹಾಕಿದ್ದು ಅದಕ್ಕೆ ಕಾರಣ.

**ಮಯಂಕ್ –ರಾಹುಲ್ ಜೊತೆಯಾಟ:** ಬಹಳ ವರ್ಷಗಳ ನಂತರ ಮಿತ್ರರಾದ ಮಯಂಕ್ ಮತ್ತು ರಾಹುಲ್ ಜೊತೆಯಾಟವನ್ನು ನೋಡುವ ಅವಕಾಶ ದೊರೆಯಿತು. ಅವರಿಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಊಟದ ವಿರಾಮಕ್ಕೂ ಮುನ್ನ ರಾಹುಲ್ ಅವರು ಒಂದು ಬಾರಿ ಕೂದಲೆಳೆಯ ಅಂತರದಲ್ಲಿ ಔಟಾಗುವುದನ್ನು ತಪ್ಪಿಸಿಕೊಂಡರು. ಅದರಿಂದಾಗಿ ವಿರಾಮಕ್ಕೆ ಸ್ಕೋರ್ ಬೋರ್ಡ್‌ನಲ್ಲಿ 1 ವಿಕೆಟ್‌ಗೆ 88 ರನ್‌ಗಳಿದ್ದವು.



ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಮತ್ತು ಕೆ.ಎಲ್. ರಾಹುಲ್

ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

> **ಬಹಳ ವರ್ಷಗಳ ನಂತರ ನಾವಿಬ್ಬರೂ ಬ್ಯಾಟಿಂಗ್ ಮಾಡಿದ ಪಂದ್ಯ ಇದು. ಈ ಸಂದರ್ಭದಲ್ಲಿ ಹಳೆಯ ನೆನಪುಗಳು ಮರುಕಳಿಸಿದವು. ಬಹಳಷ್ಟು ಪಂದ್ಯಗಳಲ್ಲಿ ನಾನು ರಾಹುಲ್ ದೊಡ್ಡ ಜೊತೆಯಾಟಗಳನ್ನು ಆಡಿದ್ದೇವೆ. ಇದೂ ಕೂಡ ಖುಷಿ ಕೊಟ್ಟ ಇನಿಂಗ್ಸ್**
> **ಮಯಂಕ್ ಅಗರವಾಲ್** ಕರ್ನಾಟಕ ತಂಡದ ನಾಯಕ

ರಾಹುಲ್ ಅಪಾರ ತಾಳ್ಮೆಯಿಂದ ಆಡಿದರು. ಮಯಂಕ್ ಮಾತ್ರ ಮುನ್ನುಗ್ಗಿ ಹೊಡೆತ ಪ್ರಯೋಗಿಸುವುದನ್ನು ಮುಂದುವರಿಸಿದರು. ಆದರೆ ವಿರಾಮದ ನಂತರದ 3ನೇ ಓವರ್‌ನಲ್ಲಿ ಕಾಂಭೋಜ್ ಎಸೆತದಲ್ಲಿ ರಾಹುಲ್ ಅವರು ರೋಹಿತ್ ಪ್ರಮೋದ್ ಶರ್ಮಾಗೆ ಕ್ಯಾಚಿತ್ತರು.

ಈ ಹಂತದಲ್ಲಿ ಮಯಂಕ್ ಜೊತೆಗೂಡಿದ ದೇವದತ್ತ ಪಡಿಕ್ಕಲ್ (43; 93ಎ) ವಿಶ್ವಾಸ ಮೂಡಿಸಿದರು. ಇಬ್ಬರೂ ಸೇರಿ 45 ರನ್ ಗಳಿಸಿದರು. ಮಯಂಕ್ ಮೂರು ಸಿಕ್ಸರ್ ಕೂಡ ಸಿಡಿಸಿದರು.

ಆದರೆ ಶತಕದ ಸನಿಹದಲ್ಲಿ ಅವರು ಅನುಜ್ ಠಕ್ರಾಲ್ ಎಸೆತವನ್ನು ಆಡಲು ಆಯ್ಕೆ ಮಾಡಿಕೊಂಡ ಹೊಡೆತ ಸೂಕ್ತವಾಗಿರಲಿಲ್ಲ. ಕಾಂಭೋಜ್ ಪಡೆದ ಚೆಂದದ ಕ್ಯಾಚ್‌ಗೆ ಮಯಂಕ್ ಪೆವಿಲಿಯನ್ ಸೇರಬೇಕಾಯಿತು.

ಇನಿಂಗ್ಸ್ ಕಟ್ಟುವ ಹೊಣೆ ಹೊತ್ತ ಎಡಗೈ ಬ್ಯಾಟರ್ ದೇವದತ್ತ ಅವರೊಂದಿಗೆ ಸ್ಮರಣ್ ರವಿಚಂದ್ರನ್ (35; 48ಎ) ಜೊತೆಗೂಡಿದರು. ಕಳೆದ ಪಂದ್ಯದಲ್ಲಿ ಸ್ಮರಣ್ ದ್ವಿಶತಕ ಬಾರಿಸಿದ್ದರು. ಇಲ್ಲಿ ದೇವದತ್ತ ಮತ್ತು ಸ್ಮರಣ್ ಅವರು 4ನೇ ವಿಕೆಟ್ ಜೊತೆಯಾಟದಲ್ಲಿ 76 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡವು 'ದ್ವಿಶತಕ' ದಾಟಿತು.

65ನೇ ಓವರ್‌ನಲ್ಲಿ ದೇವದತ್ತ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಅನುಜ್ ಅವರು ಜೊತೆಯಾಟ ಮುರಿದರು. ನಂತರದ ಓವರ್‌ನಲ್ಲಿ ನಿಶಾಂತ್ ಸಿಂಧು ಎಸೆತದಲ್ಲಿ ಸ್ಮರಣ್ ಕೂಡ ಎಲ್‌ಬಿಬ್ಲ್ಯು ಆದರು. ನಂತರದ 24 ಓವರ್‌ಗಳಲ್ಲಿ ಹರಿಯಾಣ ಬೌಲರ್‌ಗಳು ಕರ್ನಾಟಕದ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದರು. ಅದರಲ್ಲೂ ಎಡಗೈ ಸ್ಪಿನ್ನರ್ ನಿಶಾಂತ್ ಮತ್ತು ಆಫ್‌ಸ್ಪಿನ್ನರ್ ಜಯಂತ್ ಯಾದವ್ ಅವರು ಚುರುಕಿನ ದಾಳಿ ನಡೆಸಿದರು. ಆದರೆ ತಮ್ಮ ಪದಾರ್ಪಣೆಯ ಋತುವಿನಲ್ಲಿ ಆಡುತ್ತಿರುವ ಕೃಷ್ಣನ್ ಶ್ರೀಜಿತ್ (ಬ್ಯಾಟಿಂಗ್ 18; 44ಎ) ಮತ್ತು ಯಶೋವರ್ಧನ್ ಪರಂತಾಪ್ (ಬ್ಯಾಟಿಂಗ್ 27; 98ಎ) ದಿನದಾಟ ಮುಗಿಸಿದರು.

### ಸ್ಕೋರ್ ಕಾರ್ಡ್

**ಮೊದಲ ಇನಿಂಗ್ಸ್: ಕರ್ನಾಟಕ**
**5ಕ್ಕೆ267 (89 ಓವರ್‌ಗಳಲ್ಲಿ)**
ಅನೀಶ್ ಬಿ ಕಾಂಭೋಜ್ 17 (67ಎ, 4X2)
ಮಯಂಕ್ ಸಿ ಕಾಂಭೋಜ್ ಬಿ ಅನುಜ್ 91 (149ಎ, 4X8, 6X3)
ರಾಹುಲ್ ಸಿ ರೋಹಿತ್ ಬಿ ಕಾಂಭೋಜ್ 26 (37ಎ, 4X4)
ದೇವದತ್ತ ಎಲ್‌ಬಿಡಬ್ಲ್ಯು ಬಿ ಅನುಜ್ 43 (93ಎ, 4X4)
ಸ್ಮರಣ್ ಎಲ್‌ಬಿಡಬ್ಲ್ಯು ಬಿ ನಿಶಾಂತ್ 35 (48ಎ, 4X4)
ಶ್ರೀಜಿತ್ ಬ್ಯಾಟಿಂಗ್ 18 (44ಎ)
ಯಶೋವರ್ಧನ್ ಬ್ಯಾಟಿಂಗ್ 27 (98ಎ, 4X1)
**ಇತರೆ:** 10 (ಬೈ 1, ಲೆಗ್‌ಬೈ 4, ವೈಡ್ 3, ನೋಬಾಲ್ 2)
**ವಿಕೆಟ್ ಪತನ:** 1–45 (ಕೆ.ವಿ. ಅನೀಶ್; 20.5), 2–99 (ಕೆ.ಎಲ್. ರಾಹುಲ್; 33.4), 3–144 (ಮಯಂಕ್ ಅಗರವಾಲ್; 47.4), 4–220 (ದೇವದತ್ತ ಪಡಿಕ್ಕಲ್; 64.6), 5–222 (ಸ್ಮರಣ್ ರವಿಚಂದ್ರನ್; 65.5)
**ಬೌಲಿಂಗ್:** ಅನ್ಷುಲ್ ಕಾಂಭೋಜ್ 16–3–25–2, ಅಜಿತ್ ಚಾಹಲ್ 18–4–52–0, ಅನುಜ್ ಠಕ್ರಾಲ್ 18–2–74–2, ನಿಶಾಂತ್ ಸಿಂಧು 19–3–45–1, ಜಯಂತ್ ಯಾದವ್ 18–2–66–0

### ಶ್ರೇಯಸ್‌ಗೆ ವಿಶ್ರಾಂತಿ

ಕರ್ನಾಟಕ ತಂಡದ ಉಪನಾಯಕ–ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಯಿತು. ಅವರಿಗೆ ಸ್ನಾಯುವಿನ ನೋವು ಇದ್ದ ಕಾರಣ ವಿಶ್ರಾಂತಿ ನೀಡಲಾಯಿತು. ಅವರ ಬದಲಿಗೆ ಹಾರ್ದಿಕ್ ರಾಜ್ ಸ್ಥಾನ ಪಡೆದರು.

ತಂಡದಲ್ಲಿ ಇನ್ನೂ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಅಭಿನವ್ ಮನೋಹರ್ ಅವರಿಗೆ ವಿಶ್ರಾಂತಿ ನೀಡಿ, ರಾಹುಲ್‌ಗೆ ಸ್ಥಾನ ಕೊಡಲಾಯಿತು. ಎಡಗೈ ವೇಗಿ ಅಭಿಷೇಕ್ ಶೆಟ್ಟಿ ಅವರನ್ನು 11ರ ಬಳಗದಿಂದ ಕೈಬಿಟ್ಟು, ವಿದ್ವತ್ ಕಾವೇರಪ್ಪಗೆ ಅವಕಾಶ ಕೊಡಲಾಯಿತು.

'ವೇಗಿ ವಿದ್ವತ್ ಅವರು ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿದ್ದಾರೆ. ಅವರು ಅತ್ಯಂತ ವಿಶ್ವಾಸಾರ್ಹ ಬೌಲರ್ ಆಗಿದ್ದಾರೆ. ಈ ಪಂದ್ಯದಲ್ಲಿಯೂ ಅವರು ತಮ್ಮ ಸಂಪೂರ್ಣ ಸಾಮರ್ಥ್ಯ ಮೆರೆಯುವ ವಿಶ್ವಾಸ ನಮಗಿದೆ' ಎಂದು ಮಯಂಕ್ ಅಗರವಾಲ್ ತಿಳಿಸಿದರು.

## ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕಕ್ಕೆ ಒಟ್ಟು 12 ಪದಕ

# ಮೆಡ್ಲೆ ರಿಲೆ: ರಾಜ್ಯದ ಪುರುಷರಿಗೆ ಚಿನ್ನ

**ಡೆಹ್ರಾಡೂನ್ (ಪಿಟಿಐ):** ದೆಹಲಿಯ ಕುಶಾಗ್ರ ರಾವತ್ ಅವರು ಉತ್ತರಾಖಂಡದ ಹಲ್ದ್ವಾನಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಗುರುವಾರ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಮೊದಲ ದಿನ ಏಳು ಪದಕ ಗೆದ್ದು ಪಾರಮ್ಯ ಮೆರೆದಿದ್ದ ಕರ್ನಾಟಕ ತಂಡವು ಎರಡನೇ ದಿನ ಐದು ಪದಕಗಳನ್ನು ಜಯಿಸಿ, ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಮಣಿಪುರ ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ನಂತರದ ಸ್ಥಾನದಲ್ಲಿವೆ.

24 ವರ್ಷ ವಯಸ್ಸಿನ ರಾವತ್ ಪುರುಷರ 1500 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 15 ನಿಮಿಷ 37.79 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, 2023ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು (15 ನಿ.38.73ಸೆ) ಸುಧಾರಿಸಿಕೊಂಡರು. ಮಧ್ಯಪ್ರದೇಶದ ಅದ್ವೈತ್ ಪಾಗೆ ಮತ್ತು ಗುಜರಾತ್‌ನ ಆರ್ಯನ್ ನೆಹ್ರಾ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಪುರುಷರ 4x100 ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕದ ಆಕಾಶ್ ಮಣಿ, ವಿದಿತ್ ಶಂಕರ್, ಅನೀಶ್ ಎಸ್.ಗೌಡ ಮತ್ತು ಶ್ರೀಹರಿ ನಟರಾಜ್ ಅವರನ್ನು ಒಳಗೊಂಡ ತಂಡವು ಚಿನ್ನದ ಸಾಧನೆ ಮಾಡಿತು. ಈ ತಂಡ 3 ನಿಮಿಷ 46.86 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿತು. ತಮಿಳುನಾಡು ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ನಂತರದ ಸ್ಥಾನ ಪಡೆದವು.

ಮಹಿಳೆಯರ 4x100 ಮೆಡ್ಲೆ ರಿಲೆ ಸ್ಪರ್ಧೆಯಲ್ಲಿ ಕರ್ನಾಟಕ ತಂಡ ಕಂಚು ಗೆದ್ದಿತ್ತು. ಸಿದ್ಧಿ ಜಿ ಶಾ, ವಿಹಿತಾ ನಯನಾ, ನೈಶಾ ಶೆಟ್ಟಿ ಮತ್ತು ಧಿನಿಧಿ ದೇಸಿಂಗು ಅವರನ್ನು ಒಳಗೊಂಡ ತಂಡವು 4 ನಿಮಿಷ 31.62 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಒಡಿಶಾ ಚಿನ್ನ ಗೆದ್ದರೆ, ಮಹಾರಾಷ್ಟ್ರ ಬೆಳ್ಳಿ ಜಯಿಸಿತು.

ಪುರುಷರ 200 ಮೀ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ಮಣಿಕಂಠ ಎಲ್. ಅವರು 2 ನಿಮಿಷ21.78 ಸೆಕೆಂಡ್‌ನಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಗೆದ್ದರು. ತಮಿಳುನಾಡಿನ ಎಸ್.ಧನುಷ್ ಮತ್ತು ಜಾರ್ಖಂಡ್‌ನ ರಾಣಾ ಪ್ರತಾಪ್ ಕ್ರಮವಾಗಿ ಚಿನ್ನ ಮತ್ತು ಕಂಚು ತಮ್ಮದಾಗಿಸಿಕೊಂಡರು. ಮಹಿಳೆಯರ ವಾಟರ್ ಪೋಲೊ ಸ್ಪರ್ಧೆಯಲ್ಲಿ ಕರ್ನಾಟಕದ ವನಿತೆಯರು 13–1ರಿಂದ ಒಡಿಶಾ ತಂಡವನ್ನು ಮಣಿಸಿದರು. ಆದರೆ, ಪುರುಷರ ತಂಡವು 4–20ರಿಂದ ಪಶ್ಚಿಮ ಬಂಗಾಳ ತಂಡ ಎದುರು ಸೋತಿತು.

### ಸೈಕ್ಲಿಂಗ್: ನವೀನ್‌ಗೆ ಚಿನ್ನ

**ಡೆಹ್ರಾಡೂನ್ (ಪಿಟಿಐ):** ಕರ್ನಾಟಕದ ನವೀನ್ ಥಾಮಸ್ ಜಾನ್ ಮತ್ತು ಮಹಾರಾಷ್ಟ್ರದ ಪೂಜಾ ಬಬನ್ ಧನೋಲೆ ಅವರು ರಾಷ್ಟ್ರೀಯ ಕ್ರೀಡೆಗಳ ರೋಡ್ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನ ಗೆದ್ದುಕೊಂಡರು. ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿ ಪ್ರತಿನಿಧಿಸಿದ ದಿನೇಶ್ ಕುಮಾರ್ ಬೆಳ್ಳಿ ಮತ್ತು ಪಂಜಾಬ್‌ನ ಹರ್ಷವೀರ್ ಸಿಂಗ್ ಶೆಕೊನ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

**ಮೇಘಾಗೆ ಕಂಚು:** ಮಹಿಳೆಯರ ವಿಭಾಗದಲ್ಲಿ ರಾಜಸ್ಥಾನದ ಮೋನಿಕಾ ಜಾಟ್ ಬೆಳ್ಳಿ ಮತ್ತು ಕರ್ನಾಟಕದ ಮೇಘಾ ಗಡಾದ ಕಂಚಿನ ಪದಕ ಗೆದ್ದರು.

**ನರ್ಮದಾ ದಾಖಲೆ:** ಮಾಜಿ ವಿಶ್ವಕಪ್ ವಿಜೇತ ಶೂಟರ್, ತಮಿಳುನಾಡಿನ ನರ್ಮದಾ ನಿತಿನ್ ರಾಜು, ಖ್ಯಾತ ಎದುರಾಳಿಗಳನ್ನು ಹಿಮ್ಮೆಟ್ಟಿಸಿ 10 ಮೀ. ಏರ್ ರೈಫಲ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು. 23 ವರ್ಷ ವಯಸ್ಸಿನ ನರ್ಮದಾ 254.4ರ ಸ್ಕೋರ್ ಸಾಧಿಸಿದರು. ಒಂದು ಪಾಯಿಂಟ್‌ನಿಂದ ವಿಶ್ವದಾಖಲೆ ತಪ್ಪಿಸಿಕೊಂಡರು.

**ಫಲಿತಾಂಶ: ಪುರುಷರು:** 1500 ಮೀ. ಫ್ರೀಸ್ಟೈಲ್: ಕುಶಾಗ್ರ ರಾವತ್ (ದೆಹಲಿ, ಕಾಲ: 15ನಿ.37.79ಸೆ)–1, ಅದ್ವೈತ್ ಪಾಗೆ (ಮಧ್ಯಪ್ರದೇಶ)–2, ಆರ್ಯ ನೆಹ್ರಾ (ಗುಜರಾತ್)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್. ಧನುಷ್ (ತಮಿಳುನಾಡು, ಕಾಲ: 2ನಿ. 19.68ಸೆ)–1; ಮಣಿಕಂಠ ಎಲ್ .(ಕರ್ನಾಟಕ)–2, ರಾಣಾ ಪ್ರತಾಪ್ (ಜಾರ್ಖಂಡ್)–3. 4x100 ಮೀ ಮೆಡ್ಲೆ ರಿಲೆ: ಕರ್ನಾಟಕ (ಆಕಾಶ್ ಮಣಿ, ವಿದಿತ್ ಶಂಕರ್, ಅನೀಶ್ ಎಸ್. ಗೌಡ, ಶ್ರೀಹರಿ ನಟರಾಜ್, ಕಾಲ: 3ನಿ.46.86ಸೆ)– 1, ತಮಿಳುನಾಡು–2, ಮಹಾರಾಷ್ಟ್ರ–3. **ಮಹಿಳೆಯರು:** 400 ಮೀ. ಮೆಡ್ಲೆ: ಸಾನ್ವಿ ದೇಶವಾಲ್ (ಮಹಾರಾಷ್ಟ್ರ, ಕಾಲ: 5ನಿ. 08.49ಸೆ)–1, ಶ್ರೀನೀತಿ ನೇಟೆಸನ್ (ತಮಿಳುನಾಡು)–2, ಭವ್ಯಾ ಸಚದೇವ (ದೆಹಲಿ)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಕೇರಳ, ಕಾಲ: 2ನಿ.42.38ಸೆ)–1, ಶ್ರೀನೀತಿ ನೇಟೆಸನ್ (ತಮಿಳುನಾಡು)–2, ದಿವ್ಯಾಂಕಾ ಪ್ರಧಾನ್ (ಒಡಿಶಾ)–3. 4x100 ಮೀ ಮೆಡ್ಲೆ ರಿಲೆ: ಒಡಿಶಾ (ಕಾಲ: 4ನಿ. 30.09ಸೆ)–1, ಮಹಾರಾಷ್ಟ್ರ–2; ಕರ್ನಾಟಕ– 3.



ಬೆಳ್ಳಿ ಪದಕ ಗೆದ್ದ ಕರ್ನಾಟಕದ ಮಣಿಕಂಠ

**ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ**

| ತಂಡ | ಚಿನ್ನ | ಬೆಳ್ಳಿ | ಕಂಚು | ಒಟ್ಟು |
|---|---|---|---|---|
| ಕರ್ನಾಟಕ | 7 | 3 | 2 | 12 |
| ಮಣಿಪುರ | 6 | 5 | 0 | 11 |
| ಮಹಾರಾಷ್ಟ್ರ | 4 | 11 | 8 | 23 |
| ಸರ್ವಿಸಸ್ | 4 | 4 | 1 | 9 |
| ತಮಿಳುನಾಡು | 3 | 4 | 3 | 10 |

### ಟ್ರಯಥ್ಲಾನ್: ಮಹಾರಾಷ್ಟ್ರ ಪ್ರಾಬಲ್ಯ

ರಾಷ್ಟ್ರೀಯ ಕ್ರೀಡೆಗಳ ಟ್ರಯಥ್ಲಾನ್ ಸ್ಪರ್ಧೆಯಲ್ಲಿ ಮಹಾರಾಷ್ಟ್ರ ಆರು ಪದಕಗಳನ್ನು ಗೆದ್ದು ಪ್ರಾಬಲ್ಯ ಮೆರೆಯಿತು. ಇದರಲ್ಲಿ ತಲಾ ಎರಡು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳು ಒಳಗೊಂಡಿವೆ. ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಡಾಲಿ ದೇವದಾಸ್ ಪಾಟೀಲ್ ಮತ್ತು ಮಾನಸಿ ವಿನೋದ್ ಮೋಹಿತೆ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು. ಮಿಶ್ರ ರಿಲೇ ಸ್ಪರ್ಧೆಯಲ್ಲೂ ಮಹಾರಾಷ್ಟ್ರ ಚಿನ್ನ ಗೆದ್ದಿತು. ವೈಯಕ್ತಿಕ ಟ್ರಯಥ್ಲಾನ್‌ನಲ್ಲಿ ಮಣಿಪುರ ಮೇಲುಗೈ ಸಾಧಿಸಿ 2 ಚಿನ್ನ, ಡುಯಥ್ಲಾನ್ 1 ಚಿನ್ನ ಜಯಿಸಿತು.

# ನವದೆಹಲಿಯಲ್ಲಿ ಕೊಹ್ಲಿ ಮೇನಿಯಾ

**ನವದೆಹಲಿ (ಪಿಟಿಐ):** ದೇಶದ ರಾಜಧಾನಿಯಲ್ಲಿ ಗುರುವಾರ ಕ್ರಿಕೆಟ್ ಪ್ರೇಮಿಗಳು ಮೈಚಳಿ ಬಿಟ್ಟು ಎದ್ದರು. ಅರುಣ್ ಜೇಟ್ಲಿ ಕ್ರೀಡಾಂಗಣದತ್ತ ಧಾವಿಸಿದರು. ದೆಹಲಿ ಮತ್ತು ರೈಲ್ವೇಸ್ ತಂಡಗಳ ನಡುವಣ ರಣಜಿ ಟ್ರೋಫಿ ಟೂರ್ನಿಯ ಡಿ ಗುಂಪಿನ ಕ್ರಿಕೆಟ್ ಪಂದ್ಯವನ್ನು ವೀಕ್ಷಿಸಲು ಕಿಲೋ ಮೀಟರ್‌ಗಟ್ಟಲೇ ಸಾಲುಗಟ್ಟಿದರು.

ಅವರ ಈ ಉತ್ಸುಕತೆಗೆ ಕಾರಣ ಭಾರತ ತಂಡದ 'ಸೂಪರ್‌ಸ್ಟಾರ್' ವಿರಾಟ್ ಕೊಹ್ಲಿ. ಸುಮಾರು 10 ಸಾವಿರಕ್ಕೂ ಹೆಚ್ಚು ಜನರು ಕ್ರೀಡಾಂಗಣದಲ್ಲಿ ಸೇರಿದ್ದರು. 12 ವರ್ಷಗಳ ನಂತರ ವಿರಾಟ್ ರಣಜಿ ಟೂರ್ನಿಯಲ್ಲಿ ಆಡಲು ಬಂದಿರುವುದು ಕ್ರಿಕೆಟ್ ಪ್ರೇಮಿಗಳಷ್ಟೇ ಅಲ್ಲ; ದೆಹಲಿ ಮತ್ತು ರೈಲ್ವೇಸ್ ತಂಡದ ಆಟಗಾರರಲ್ಲಿಯೂ ಸಂಚಲನ ಮೂಡಿಸಿದೆ.

ದೆಹಲಿ ತಂಡದ ಬೌಲರ್ ನವದೀಪ್ ಸೈನಿ ಮತ್ತಿತರ ಆಟಗಾರರು ವಿರಾಟ್ ಅವರ ಅಭಿಮಾನಿಗಳಾಗಿ ಕ್ರಿಕೆಟ್‌ಗೆ ಕಾಲಿಟ್ಟವರು. ಅವರೆಲ್ಲರಿಗೂ ತಮ್ಮ ಹೀರೊ ಜೊತೆಗೆ ಆಡುವ, ಒಡನಾಡುವ ಅವಕಾಶ ಲಭಿಸಿತು.

'ಅವರು ಅಪಾರ ಚೈತನ್ಯಶಾಲಿ ವ್ಯಕ್ತಿ. ಅವರ ಸಾಮಿಪ್ಯದಿಂದಾಗಿ ನಮ್ಮೆಲ್ಲರಲ್ಲೂ ಹುರುಪು ಇಮ್ಮಡಿಸಿದೆ. ಅವರು ಫೀಲ್ಡಿಂಗ್, ಬ್ಯಾಟಿಂಗ್ ಅಥವಾ ಜಿಮ್‌ನಲ್ಲಿ ಮಾಡುವ ಕಸರತ್ತುಗಳು ಯುವ ಆಟಗಾರರಿಗೆ ಅನುಕರಣೀಯ. ಅವೆಲ್ಲವನ್ನೂ ಅಪಾರ ಶ್ರದ್ಧೆಯಿಂದ ಮಾಡುತ್ತಾರೆ' ಎಂದು ನವದೀಪ್ ಸೈನಿ ದಿನದಾಟದ ನಂತರ ಸುದ್ದಿಗಾರರಿಗೆ ತಿಳಿಸಿದರು.

'ನಾವು ಬೆಳಿಗ್ಗೆ ಕ್ರೀಡಾಂಗಣಕ್ಕೆ ಪ್ರವೇಶಿಸುವ ಹಾದಿಯಲ್ಲಿ ಜನರ ದೊಡ್ಡ ಸಾಲು ನೋಡಿದೆವು. ಅದರಿಂದ ಇದೊಂದು ವಿಭಿನ್ನವಾದ ಪಂದ್ಯ. ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಸೇರಲಿದ್ದಾರೆಂದು ಅರ್ಥವಾಯಿತು' ಎಂದು ಸೈನಿ ಹೇಳಿದರು.

'ನಾವು ರಣಜಿ ಪಂದ್ಯ ಆಡುವಾಗ ಇಷ್ಟೊಂದು ಸಂಖ್ಯೆಯಲ್ಲಿ ಜನ ಸೇರುವುದಿಲ್ಲ. ಇದು ನಮಗೆ ಹೊಸ ಅನುಭವ. ಬಹಳ ಖುಷಿಯಾಗುತ್ತಿದೆ' ಎಂದು ರೈಲ್ವೇಸ್ ತಂಡದ ಉಪೇಂದ್ರ ಯಾದವ್ ಸಂತಸ ವ್ಯಕ್ತಪಡಿಸಿದರು.

**ಕ್ರೀಡಾಂಗಣಕ್ಕೆ ನುಗ್ಗಿದ ಅಭಿಮಾನಿ:** ಬಿಗಿ ಭದ್ರತೆಯ ನಡುವೆಯೂ ಅಭಿಮಾನಿಯೊಬ್ಬ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದು ಕ್ರೀಡಾಂಗಣದೊಳಗೆ ನುಗ್ಗಿದ ಘಟನೆ ನಡೆಯಿತು. ಆ ವ್ಯಕ್ತಿಯು ಓಡಿಹೋಗಿ ಫೀಲ್ಡಿಂಗ್ ಮಾಡುತ್ತಿದ್ದ ವಿರಾಟ್ ಕೊಹ್ಲಿಯ ಕಾಲು ಮುಟ್ಟಿ ನಮಸ್ಕರಿಸಿದ. ಭದ್ರತಾ ಸಿಬ್ಬಂದಿ ಓಡಿಬಂದು ಆ ವ್ಯಕ್ತಿಯನ್ನು ಹೊರಗೆ ಕರೆದೊಯ್ದರು.

ಬೆಳಿಗ್ಗೆ ಟಾಸ್ ಗೆದ್ದ ದೆಹಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿಗಳಾದ ನವದೀಪ್ ಸೈನಿ (62ಕ್ಕೆ3), ಸಿದ್ಧಾಂತ್ ಶರ್ಮಾ (35ಕ್ಕೆ2), ಮೋನಿ ಗ್ರೇವಾಲ್ (49ಕ್ಕೆ2) ಮತ್ತು ಸಮಿತ್ ಮಾಥೂರ್ (20ಕ್ಕೆ3) ಅವರ ದಾಳಿಗೆ ರೈಲ್ವೇಸ್ ತಂಡವು 67.4 ಓವರ್‌ಗಳಲ್ಲಿ 241 ರನ್ ಗಳಿಸಿ ಆಲೌಟ್ ಆಯಿತು. ತಂಡದ ಉಪೇಂದ್ರ ಯಾದವ್ (95; 117ಎ) ಮತ್ತು ಕರ್ಣ್ ಶರ್ಮಾ (50; 105ಎ) ಅವರು ಅರ್ಧಶತಕ ಬಾರಿಸಿದರು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ದೆಹಲಿ ತಂಡವು ದಿನದಾಟದ ಮುಕ್ತಾಯಕ್ಕೆ 10 ಓವರ್‌ಗಳಲ್ಲಿ 1 ವಿಕೆಟ್‌ಗೆ 41 ರನ್ ಗಳಿಸಿದೆ.

ಗ್ಯಾಲರಿಯಲ್ಲಿ ಸೇರಿದ್ದ ಯುವಕರು 'ವಿರಾಟ್ ಭಯ್ಯಾ ಬ್ಯಾಟಿಂಗ್ ಕರನೇ ಕೇಲಿಯೇ ಆವೋ' ಎಂದು ಕೂಗುತ್ತಿದ್ದರು.



ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ರಣಜಿ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುತ್ತಿರುವ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

### ಸಲ್ಮಾನ್ ಶತಕ; ಕೇರಳ ಉತ್ತಮ ಮೊತ್ತ

**ತಿರುವನಂತಪುರ:** ಸಲ್ಮಾನ್ ನಿಝಾರ್ (111; 172ಎ, 4X11, 6X1) ಅವರ ಶತಕದ ಬಲದಿಂದ ಕೇರಳ ತಂಡವು ಸಿ ಗುಂಪಿನ ಪಂದ್ಯದಲ್ಲಿ ಬಿಹಾರದ ಎದುರು ಉತ್ತಮ ಮೊತ್ತ ಗಳಿಸಿದೆ. ಗುರುವಾರ ನಡೆದ ಮೊದಲ ದಿನದಾಟದ ಅಂತ್ಯಕ್ಕೆ ಕೇರಳ ತಂಡವು 84 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 302 ರನ್ ಗಳಿಸಿತು.

**ಸಂಕ್ಷಿಪ್ತ ಸ್ಕೋರು:** ಕೇರಳ: 84 ಓವರ್‌ಗಳಲ್ಲಿ 9ಕ್ಕೆ302 (ಶಾನ್ ರೋಜರ್ 59, ಸಲ್ಮಾನ್ ನಿಝಾರ್ ಬ್ಯಾಟಿಂಗ್ 111, ನಿಧೀಶ್ 30,ಹರ್ಷ ಸಿಂಗ್ 40ಕ್ಕೆ2, ಸಚಿನ್ ಕುಮಾರ್ 80ಕ್ಕೆ2)

**ಶಾರ್ದೂಲ್ ಠಾಕೂರ್ ಹ್ಯಾಟ್ರಿಕ್:** ಮುಂಬೈ: ಶಾರ್ದೂಲ್ ಠಾಕೂರ್ (43ಕ್ಕೆ4) ಅವರ ಹ್ಯಾಟ್ರಿಕ್ ಸಾಧನೆಯ ಮುಂದೆ ಮೇಘಾಲಯ ತಂಡವು ಎ ಗುಂಪಿನ ಪಂದ್ಯದಲ್ಲಿ 86 ರನ್‌ಗಳಿಗೆ ಸರ್ವಪತನವಾಯಿತು. ಇದಕ್ಕುತ್ತರವಾಗಿ ಮುಂಬೈ ತಂಡವು ದಿನದಾಟದ ಕೊನೆಗೆ 59 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 213 ರನ್ ಗಳಿಸಿತು.

### ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಶ್ರೀಕಾಂತ್



**ಬ್ಯಾಂಕಾಕ್ (ಪಿಟಿಐ):** ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಶಂಕರ್ ಸುಬ್ರಮಣಿಯನ್ ಅವರು ಥಾಯ್ಲೆಂಡ್ ಮಾಸ್ಟರ್ಸ್ ಬಿಡಬ್ಲ್ಯುಎಫ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಗುರುವಾರ ಎಂಟರ ಘಟ್ಟ ತಲುಪಿದ್ದಾರೆ.

ಶ್ರೀಕಾಂತ್ ಅವರಿಗೆ 16ರ ಸುತ್ತಿನ ಪಂದ್ಯದಲ್ಲಿ 21–19, 21–15 ರಿಂದ 20 ವರ್ಷ ವಯಸ್ಸಿನ ಜೇಸನ್ ಗುನವಾನ್ (ಹಾಂಗ್‌ಕಾಂಗ್) ಅವರನ್ನು ಸೋಲಿಸಲು 42 ನಿಮಿಷ ಹಿಡಿಯಿತು. ಕಳೆದ ವರ್ಷ ಬ್ಯಾಡ್ಮಿಂಟನ್ ಏಷ್ಯಾ ಟೀಂ ಚಾಂಪಿಯನ್‌ಷಿಪ್‌ನಲ್ಲೂ ಶ್ರೀಕಾಂತ್ ಇದೇ ಎದುರಾಳಿಯನ್ನು ಮಣಿಸಿದ್ದರು.

ಸುಬ್ರಮಣಿಯನ್ ಇನ್ನೊಂದು ಪಂದ್ಯದಲ್ಲಿ 9–21, 21–10, 21–17ರಲ್ಲಿ ಇಂಡೊನೇಷ್ಯಾದ ಚಿಕೊ ಆರಾ ದ್ವಿ ವಾರ್ದಯೊ ಅವರನ್ನು ಸೋಲಿಸಲು ಪ್ರಯಾಸಪಡಬೇಕಾಯಿತು.

ಮಿಶ್ರ ಡಬಲ್ಸ್‌ನಲ್ಲಿ ಭಾರತದ ರೋಹನ್ ಕಪೂರ್– ರುತ್ವಿಕಾ ಗದ್ದೆ ಜೋಡಿ 19–21, 15–21 ರಲ್ಲಿ ಥಾಯ್ಲೆಂಡ್‌ನ ರತ್ಚಪೋಲ್ ಮಕ್ಕಸ-ಸಿಥೋರ್ನ್– ನತ್ತಮೊನ್ ಲೈಸುವಾನ್ ಜೋಡಿಗೆ ಮಣಿಯಿತು.

## ನಾಲ್ಕನೇ ಟಿ20 ಪಂದ್ಯ ಇಂದು: ಭಾರತಕ್ಕೆ ಸಂಜು, ರಿಂಕು ಲಯದ ಚಿಂತೆ

# ಸೂರ್ಯ ಪಡೆಗೆ 'ಸರಣಿ ಜಯ'ದ ಛಲ

**ಪುಣೆ (ಪಿಟಿಐ):** ಭಾರತ ತಂಡ, ಶುಕ್ರವಾರ ಇಲ್ಲಿ ನಡೆಯಲಿರುವ ಟಿ20 ಸರಣಿಯ ನಾಲ್ಕನೇ ಪಂದ್ಯದಲ್ಲಿ ಉತ್ಸಾಹಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಶರವೇಗದ ದಾಳಿಯೆದುರು ಸಂಜು ಸ್ಯಾಮ್ಸನ್ ಅವರ ತಾಂತ್ರಿಕ ದೌರ್ಬಲ್ಯ ಮತ್ತು ರಿಂಕು ಸಿಂಗ್ ವಿಫಲರಾಗುತ್ತಿರುವುದು ಆತಿಥೇಯ ತಂಡದಲ್ಲಿ ಚಿಂತೆಗೆ ಕಾರಣವಾಗಿದೆ.

ಐದು ಪಂದ್ಯಗಳ ಸರಣಿಯಲ್ಲಿ 2–1ರಿಂದ ಮುಂದಿರುವ ಭಾರತ ತಂಡಕ್ಕೆ ಶುಕ್ರವಾರದ ಪಂದ್ಯವು ಸರಣಿ ಗೆಲುವು ಖಚಿತಪಡಿಸಲು ಮತ್ತೊಂದು ಅವಕಾಶ ಒದಗಿಸಿದೆ. ಸೂರ್ಯಕುಮಾರ್ ಬಳಗ ಮೊದಲ ಎರಡು ಪಂದ್ಯಗಳನ್ನು (ಕೋಲ್ಕತ್ತ, ಚೆನ್ನೈ) ಗೆದ್ದರೆ, ಇಂಗ್ಲೆಂಡ್ ತಂಡ ಮಂಗಳವಾರ ರಾಜಕೋಟ್‌ನಲ್ಲಿ ನಡೆದ ಪಂದ್ಯ ಗೆದ್ದು ಹಿನ್ನಡೆ ತಗ್ಗಿಸಿದೆ. ಫೆ. 2ರಂದು ಮುಂಬೈನಲ್ಲಿ ಕೊನೆಯ ಪಂದ್ಯ ನಿಗದಿ ಆಗಿದೆ.

ವಿಕೆಟ್ ಕೀಪರ್– ಬ್ಯಾಟರ್ ಸಂಜು ಸ್ಯಾಮ್ಸನ್ ಈ ಸರಣಿಗೆ ಮೊದಲು ಮೂರು ಶತಕಗಳೊಡನೆ ಭರವಸೆ ಮೂಡಿಸಿದ್ದರು. ಆದರೆ ಹಾಲಿ ಸರಣಿಯಲ್ಲಿ ಕೇರಳದ ಆಟಗಾರನ ಗಳಿಕೆ 26, 5 ಮತ್ತು 3. ಬಾಂಗ್ಲಾದೇಶ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಯಲ್ಲಿ ಅಬ್ಬರಿಸಿದ್ದ ಅವರು ಇಲ್ಲಿ ಗಂಟೆಗೆ 145 ಕಿ.ಮೀ. ವೇಗದಲ್ಲಿ ಬೌಲ್ ಮಾಡುವ ಜೋಫ್ರಾ ಆರ್ಚರ್ ಮತ್ತು ಮಾರ್ಕ್ ವುಡ್ ಅವರ ವೇಗಕ್ಕೆ ಹೊಂದಿಕೊಳ್ಳಲು ಪರದಾಡಿದ್ದಾರೆ. ಹೀಗಾಗಿ ಅವರಿಗೆ ಸತ್ವಪರೀಕ್ಷೆ ಎದುರಾಗಿದೆ.

**ತಿಣುಕಾಡಿದ ಜುರೆಲ್:** ರಿಂಕು ಸಿಂಗ್ ಅವರಿಗೆ ಬೆನ್ನುನೋವು ಕಾಡಿದ ಕಾರಣ ಅವಕಾಶ ಪಡೆದ ಧ್ರುವ್ ಜುರೇಲ್ ಏಳನೇ ಕ್ರಮಾಂಕದಲ್ಲಿ ಚುಟುಕು ಕ್ರಿಕೆಟ್‌ಗೆ ಹೊಂದಿಕೊಳ್ಳುವಲ್ಲಿ ಯಶಸ್ಸು ಕಾಣಲಿಲ್ಲ. ಟೆಸ್ಟ್ ಕ್ರಿಕೆಟ್‌ನಲ್ಲಿ ಅವರು ಯಶಸ್ಸು ಕಂಡಿದ್ದರು.

ರಿಂಕು ಈಗ ಫಿಟ್ ಆಗಿದ್ದು ಶುಕ್ರವಾರದ ಪಂದ್ಯಕ್ಕೆ ಲಭ್ಯರಿದ್ದಾರೆ ಎಂದು ಅಸಿಸ್ಟೆಂಟ್ ಕೋಚ್ ರಯಾನ್ ಟೆನ್ ಡೋಷೆ ತಿಳಿಸಿದರು. 'ಫಿನಿಷರ್' ಖ್ಯಾತಿಯ ರಿಂಕು ತಂಡಕ್ಕೆ ಮರಳಿದರೂ ಅವರು ತಂಡಕ್ಕೆ ಬಂದ ಹೊಸದರಲ್ಲಿ ಕಂಡ ಯಶಸ್ಸನ್ನು ಇತ್ತೀಚಿನ ಪಂದ್ಯಗಳಲ್ಲಿ ಕಾಣುತ್ತಿಲ್ಲ. ಇಂಗ್ಲೆಂಡ್ ತಂಡದ ಅಗ್ರ ಸ್ಪಿನ್ನರ್ ಆದಿಲ್ ರಶೀದ್ ಅವರನ್ನು ಭಾರತ ತಂಡದ ಮಧ್ಯಮ ಕ್ರಮಾಂಕದ ಆಟಗಾರರು ವಿಶ್ವಾಸದಿಂದ ಆಡಿಲ್ಲ.

ಮೊಹಮ್ಮದ್ ಶಮಿ ಅವರು ಮೊದಲಿನ ಹದ ಕಂಡುಕೊಳ್ಳಬೇಕಾಗಿದೆ. ಕಳೆದ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ಅರ್ಷದೀಪ್ ಸಿಂಗ್ ಅವರು ಪುನರಾಗಮನ ಮಾಡುವರೇ ಎಂಬ ಕುತೂಹಲವಿದೆ.

**ಪಂದ್ಯ ಆರಂಭ: ರಾತ್ರಿ 7**
**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್**



ತಾಲೀಮುನಿರತ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ

### 'ಐಸಿಸಿ ಚಾಂಪಿಯನ್ಸ್ ಟ್ರೋಫಿ ನಾಯಕರ ಫೋಟೊಶೂಟ್ ಇಲ್ಲ'

**ಕರಾಚಿ (ಪಿಟಿಐ):** ಚಾಂಪಿಯನ್ಸ್ ಟ್ರೋಫಿಗೆ ಪೂರ್ವಭಾವಿಯಾಗಿ ಪಾಕಿಸ್ತಾನದಲ್ಲಿ ವಿವಿಧ ತಂಡಗಳ ನಾಯಕರ ಫೋಟೊಶೂಟ್ ಇರುವುದಿಲ್ಲ ಅಥವಾ ಗೋಷ್ಠಿಯೂ ಇರುವುದಿಲ್ಲ. ಹೀಗಾಗಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಪಾಕಿಸ್ತಾನಕ್ಕೆ ತೆರಳುವ ಸಂಭವಕ್ಕೆ ತೆರೆಯೆಳೆದಂತಾಗಿದೆ.

ಭಾಗವಹಿಸುವ ತಂಡಗಳ ನಾಯಕರ ಬಿಡುವಿಲ್ಲದ ಪ್ರಯಾಣ ಕಾರ್ಯಕ್ರಮದಿಂದಾಗಿ ಟೂರ್ನಿ ಪೂರ್ವದ ಫೋಟೊಶೂಟ್ ರದ್ದುಗೊಳಿಸಬೇಕಾಯಿತು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಮೂಲವೊಂದು ಪಿಟಿಐಗೆ ತಿಳಿಸಿದೆ

ಇಂಗ್ಲೆಂಡ್ ತಂಡ, ಭಾರತದಲ್ಲಿ ಸೀಮಿತ ಓವರುಗಳ ಕ್ರಿಕೆಟ್ ಸರಣಿ ಆಡುತ್ತಿದೆ. ಆಸ್ಟ್ರೇಲಿಯಾ ತಂಡವು, ಶ್ರೀಲಂಕಾದಲ್ಲಿ ಸರಣಿ ಆಡುತ್ತಿದೆ.

ಅಧಿಕೃತ ಉದ್ಘಾಟನಾ ಸಮಾರಂಭದ ಬದಲು ಪಾಕಿಸ್ತಾನವು ಲಾಹೋರ್‌ನ ಹುಝೂರ್ ಬಾಗ್‌ನಲ್ಲಿ ಫೆ. 16ರಂದು ಟೂರ್ನಿಯ ಉದ್ಘಾಟನಾ ಕಾರ್ಯಕ್ರಮವನ್ನು ಪಿಸಿಬಿಯು ಹಮ್ಮಿಕೊಳ್ಳಲಿದೆ ಎಂದು ತಿಳಿಸಿದೆ.

ಐಸಿಸಿ ಟೂರ್ನಿಗೆ ಮೊದಲು ತಂಡಗಳ ನಾಯಕರು ಫೋಟೊಶೂಟ್‌ನಲ್ಲಿ ಭಾಗಿಯಾಗುವುದು ಸಂಪ್ರದಾಯ. ಚಾಂಪಿಯನ್ಸ್ ಟ್ರೋಫಿ ಫೆ. 19ರಿಂದ ಮಾರ್ಚ್ 9 ರವರೆಗೆ ನಡೆಯಲಿದೆ. ಭಾರತ ತಂಡ, ಪಾಕಿಸ್ತಾನಕ್ಕೆ ತೆರಳದೇ ಇರುವ ಕಾರಣ ಅದು ತನ್ನ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಭಾರತ ಫೈನಲ್ ತಲುಪಿದಲ್ಲಿ ದುಬೈನಲ್ಲೇ ಆ ಪಂದ್ಯವೂ ನಡೆಯಲಿದೆ.

# ಖ್ವಾಜಾ ದ್ವಿಶತಕ: ಆಸ್ಟ್ರೇಲಿಯಾ ಬೃಹತ್ ಮೊತ್ತ


**ಗಾಲೆ, ಶ್ರೀಲಂಕಾ (ಎಎಫ್‌ಪಿ):** ಆರಂಭಿಕ ಆಟಗಾರ ಉಸ್ಮಾನ್ ಖ್ವಾಜಾ (232;352ಎ, 4x16, 6x1) ಅವರ ದ್ವಿಶತಕದ ನೆರವಿನಿಂದ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಬೃಹತ್ ಮೊತ್ತ ಕಲೆಹಾಕಿ, ಪಂದ್ಯದ ಮೇಲೆ ಹಿಡಿತ ಸಾಧಿಸಿದೆ.

ಪಂದ್ಯದ ಎರಡನೇ ದಿನವಾದ ಗುರುವಾರ (ಬುಧವಾರ 2 ವಿಕೆಟ್‌ಗೆ 330) ಆಸ್ಟ್ರೇಲಿಯಾ ತಂಡವು 154 ಓವರ್‌ಗಳಲ್ಲಿ 6 ವಿಕೆಟ್‌ಗೆ 654 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿತು. ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು 15 ಓವರ್‌ಗಳಲ್ಲಿ 44 ರನ್‌ಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ. ಮೊದಲ ದಿನ ಶತಕ ದಾಖಲಿಸಿ ಕ್ರೀಸ್‌ನಲ್ಲಿದ್ದ ಸ್ಟೀವ್ ಸ್ಮಿತ್ 141 ರನ್‌ಗೆ ವಿಕೆಟ್ ಒಪ್ಪಿಸಿದರು. 147 ರನ್‌ನೊಂದಿಗೆ ಅಜೇಯವಾಗಿದ್ದ ಖ್ವಾಜಾ ಎರಡನೇ ದಿನವೂ ಲಂಕಾ ಬೌಲರ್‌ಗಳನ್ನು ಕಾಡಿದರು. ಅವರಿಬ್ಬರು ಮೂರನೇ ವಿಕೆಟ್ ಜೊತೆಯಾಟದಲ್ಲಿ 266 ರನ್ (419) ಸೇರಿಸಿದರು.

ಸ್ಮಿತ್ ಔಟಾದ ಬಳಿಕ ಖ್ವಾಜಾ ಅವರನ್ನು ಸೇರಿಕೊಂಡ ಜೋಶ್ ಇಂಗ್ಲಿಸ್ (102;94ಎ, 4x10, 6x1) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 146 ರನ್ (172ಎ) ಸೇರಿಸಿ ತಂಡವನ್ನು 500ರ ಗಡಿ ದಾಟಿಸಿದರು. ನಂತರದಲ್ಲಿ ಅಲೆಕ್ಸ್ ಕ್ಯಾರಿ (ಔಟಾಗದೇ 46) ಮೊತ್ತವನ್ನು ಮತ್ತಷ್ಟು ಹಿಗ್ಗಿಸಿದರು.

**ಸಂಕ್ಷಿಪ್ತ ಸ್ಕೋರ್:** ಆಸ್ಟ್ರೇಲಿಯಾ: 154 ಓವರ್‌ಗಳಲ್ಲಿ 6 ವಿಕೆಟ್‌ಗೆ 654 ಡಿಕ್ಲೇರ್ಡ್ (ಉಸ್ಮಾನ್ ಖ್ವಾಜಾ 232, ಸ್ಟೀವ್ ಸ್ಮಿತ್ 141, ಜೋಶ್ ಇಂಗ್ಲಿಸ್ 102, ಅಲೆಕ್ಸ್ ಕ್ಯಾರಿ ಔಟಾಗದೇ 46; ಪ್ರಭಾತ್ ಜಯಸೂರ್ಯ 193ಕ್ಕೆ 3, ಜೆಫ್ರಿ ವಾಂಡರ್ಸೆ 182ಕ್ಕೆ 3). ಶ್ರೀಲಂಕಾ: 15 ಓವರ್‌ಗಳಲ್ಲಿ 3ಕ್ಕೆ 44 (ಕಮಿಂದು ಮೆಂಡಿಸ್ ಔಟಾಗದೇ 13; ನೇಥನ್ ಲಯನ್ 7ಕ್ಕೆ 1, ಮಿಚೆಲ್ ಸ್ಟಾರ್ಕ್ 10ಕ್ಕೆ 1)

# ಅಗ್ರಸ್ಥಾನದಲ್ಲಿ ಮುಂದುವರಿದ ಗುಕೇಶ್



**ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ):** ಡಚ್ (ನೆದರ್ಲೆಂಡ್ಸ್‌ನ) ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸ್ ವಾರ್ಮೆರ್‌ಡ್ಯಾಮ್ ಅವರನ್ನು ಸೋಲಿಸಿದ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಹತ್ತನೇ ಸುತ್ತಿನ ನಂತರ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ

34 ನಡೆಗಳಲ್ಲಿ ಪಂದ್ಯ ಗೆದ್ದ ಗುಕೇಶ್ 7.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಗುಕೇಶ್ ಈಗ 2800 ರೇಟಿಂಗ್ ಮೈಲಿಗಲ್ಲನ್ನು ಸಮೀಪಿಸುತ್ತಿದ್ದಾರೆ. ಉಜ್ಬೇಕ್ ಆಟಗಾರ ನದಿರ್ಬೆಕ್ ಅಬ್ದುಸತ್ತಾರೋವ್ (7 ಪಾಯಿಂಟ್ಸ್) ಎರಡನೇ ಸ್ಥಾನದಲ್ಲಿದ್ದಾರೆ. ವರ್ಷದ ಈ ಮೊದಲ ಪ್ರಮುಖ ಟೂರ್ನಿಯಲ್ಲಿ ಇನ್ನು 3 ಸುತ್ತುಗಳಷ್ಟೇ ಬಾಕಿಉಳಿದಿವೆ.

ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ (6) ಅವರನ್ನು 48 ನಡೆಗಳಲ್ಲಿ ಸೋಲಿಸಿದ ಆರ್.ಪ್ರಜ್ಞಾನಂದ (6.5) ಒಂಟಿಯಾಗಿ ಮೂರನೇ ಸ್ಥಾನದಲ್ಲಿದ್ದಾರೆ.

ಟೂರ್ನಿಯಲ್ಲಿ ಮೊದಲ ಗೆಲುವಿಗೆ ಶತಪ್ರಯತ್ನ ನಡೆಸುತ್ತಿರುವ ಅರ್ಜುನ್ ಇರಿಗೇಶಿ ಅವರ ಕಾಯುವಿಕೆ ಮುಂದುವರಿಯಿತು. ಸಾಕಷ್ಟು ಓಪನಿಂಗ್ ಸಿದ್ಧತೆ ಮಾಡಿಕೊಂಡಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ ಜೊತೆಗಿನ ಪಂದ್ಯವನ್ನು ಅವರು ಡ್ರಾ ಮಾಡಿಕೊಳ್ಳಬೇಕಾಯಿತು. ಭಾರತದ ಪಿ.ಹರಿಕೃಷ್ಣ 68 ನಡೆಗಳವರೆಗೆ ಬೆಳೆದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ (ಅಮೆರಿಕ, 5.5) ಜೊತೆ ಪಾಯಿಂಟ್ ಹಂಚಿ ಕೊಳ್ಳಬೇಕಾಯಿತು. ಹರಿಕೃಷ್ಣ 4.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಗೋವಾದ ಲಿಯಾನ್ ಲ್ಯೂಕ್ ಮೆಂಡೋನ್ಸ (3) ಹತ್ತನೇ ಸುತ್ತಿನಲ್ಲಿ ಡಚ್ ಗ್ರ್ಯಾಂಡ್ ಮಾಸ್ಟರ್ ಅನಿಶ್ ಗಿರಿ (5) ಜೊತೆ ಡ್ರಾ ಮಾಡಿಕೊಂಡರು. ಚೀನಾದ ವೀ ಯಿ (5.5) ಅವರು ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ (4) ಜೊತೆ ಡ್ರಾ ಮಾಡಿಕೊಂಡರು. ಚಾಲೆಂಜರ್ಸ್ ವಿಭಾಗದಲ್ಲಿ ಆರ್.ವೈಶಾಲಿ (5), ಅಗ್ರಸ್ಥಾನದಲ್ಲಿರುವ ಎನ್ಗುಯೆನ್ ಥಾಯ್ ವಾನ್ ದೈ (ಝೆಕ್ ರಿಪಬ್ಲಿಕ್) ಎದುರು ಸೋತರು. ದಿವ್ಯಾ ದೇಶಮುಖ್ (2), ಜರ್ಮನಿಯ ಫ್ರೆಡ್ರಿಕ್ ಸ್ವೇನ್ (6) ಅವರಿಗೆ ಮಣಿದರು.

# ವಿಶ್ವಕಪ್: ಭಾರತಕ್ಕೆ ಇಂಗ್ಲೆಂಡ್ ಸವಾಲು

**ಕ್ವಾಲಾಲಂಪುರ:** ಭಾರತ ತಂಡ, ಮಹಿಳೆಯರ ಐಸಿಸಿ 19 ವರ್ಷದೊಳಗಿನ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಶುಕ್ರವಾರ ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದು, ಕಳಂಕರಹಿತ ಪ್ರದರ್ಶನವನ್ನು ಮುಂದುವರಿಸುವ ತವಕದಲ್ಲಿದೆ.

ಟೂರ್ನಿಯ ತನ್ನ ಎಲ್ಲ ಪಂದ್ಯಗಳಲ್ಲಿ ಭಾರತದ ಯುವ ಆಟಗಾರ್ತಿಯರು ಸಲೀಸಾಗಿ ಜಯ ಸಾಧಿಸಿದ್ದಾರೆ. ಮಲೇಷ್ಯಾ ಎದುರು 10 ವಿಕೆಟ್ ಗೆಲುವು, ಲಂಕಾ ಎದುರು 60 ರನ್ ಜಯ, ಸೂಪರ್ ಸಿಕ್ಸ್ ಹಂತದಲ್ಲಿ ಬಾಂಗ್ಲಾ ಎದುರು ಎಂಟು ವಿಕೆಟ್ ಜಯ, ಸ್ಕಾಟ್ಲೆಂಡ್ ಎದುರು 150 ರನ್‌ಗಳ ಜಯ– ಇದು ಕನ್ನಡತಿ ನಿಕಿ ಪ್ರಸಾದ್ ನೇತೃತ್ವದ ಭಾರತ ತಂಡದ ಪಾರಮ್ಯ ತೋರಿಸಿದೆ.

ಆರಂಭ ಆಟಗಾರ್ತಿ ಗೊಂಗಡಿ ತ್ರಿಷಾ (76.66 ಸರಾಸರಿಯಲ್ಲಿ 230) ಉತ್ತಮ ಲಯದಲ್ಲಿದ್ದಾರೆ. ಅವರ ಜೊತೆಗಾತಿ– ವಿಕೆಟ್ ಕೀಪರ್ ಜಿ.ಕಮಲಿನಿ ಕೂಡ ಒಳ್ಳೆಯ ಕೊಡುಗೆ ನೀಡಿದ್ದಾರೆ. ಬೌಲರ್‌ಗಳು ಸಾಂಘಿಕ ಪ್ರಯತ್ನ ಮೆರೆದಿದ್ದಾರೆ.

# ಫುಟ್‌ಬಾಲ್: ಕಿಕ್‌ಸ್ಟಾರ್ಟ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಂಘಿಕ ಆಟ ಪ್ರದರ್ಶಿಸಿದ ಕಿಕ್‌ಸ್ಟಾರ್ಟ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0 ಗೋಲುಗಳಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಪರ ಅಭಿಷೇಕ್ ಶಂಕರ್ ಪವಾರ್ (8ನೇ ನಿ), ಎನ್. ಪಚಾ ಸಿಂಗ್ (38ನೇ), ಎಡ್ವಿನ್ ರೊಸಾರಿಯೋ (41ನೇ) ಮತ್ತು ಅಬ್ದುಲ್ ಜಿಯಾದ್ ಕೆ.ಎ (48ನೇ) ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–1ರಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡದೊಂದಿಗೆ ಡ್ರಾ ಸಾಧಿಸಿತು.

ಸ್ಪೋರ್ಟಿಂಗ್ ತಂಡದ ಅಜಿತ್ ಅರಸು (88ನೇ) ಮತ್ತು ರಿಯಲ್ ತಂಡದ ಸಯ್ಯದ್ ಅಹಮ್ಮದ್ (74ನೇ) ತಲಾ ಒಂದು ಗೋಲು ಗಳಿಸಿದರು.



ಗೋಲು ಗಳಿಸಿದ ಸಂಭ್ರಮದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಆಟಗಾರರು –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.